ಗುರುವಾರ, ಮೇ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 129 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಲೋಕಸಭೆ ಚುನಾವಣೆಗೆ ಸಂಬಂಧಿಸಿದ ಮಹತ್ವದ ಅಂಶಗಳು

ಆಳ–ಅಗಲ
ಉಳಿತಾಯವ ಕರಗಿಸುತ್ತಿದೆ ಮನೆವಾರ್ತೆಯ ವೆಚ್ಚ ಹೆಚ್ಚಳ
ಕೋವಿಶೀಲ್ಡ್ ಹಿಂಪಡೆದ ಆಸ್ಟ್ರಾಜೆನೆಕಾ 11
ಸಿಬಿಐ ತನಿಖೆ ಅನಗತ್ಯ–ಜಿ.ಪರಮೇಶ್ವರ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,466	22,302	₹73,960 (ಬೆಂಗಳೂರು)	₹84,300 (ಬೆಂಗಳೂರು)	83.52

ಭಾರತದ ವೈವಿಧ್ಯದ ಕುರಿತು ಹೇಳಿಕೆ • ಅಂತರ ಕಾಯ್ದುಕೊಂಡ ಕಾಂಗ್ರೆಸ್ • ಬಿಜೆಪಿಯಿಂದ ವಾಗ್ದಾಳಿ

ಪಿತ್ರೋಡಾ ಮಾತಿಗೆ ಪ್ರಧಾನಿ ಕಿಡಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕಾಂಗ್ರೆಸ್ ಪಕ್ಷದ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಅವರು ಭಾರತದ ವೈವಿಧ್ಯವನ್ನು ವಿವರಿಸುವಾಗ ನೀಡಿರುವ ಹೇಳಿಕೆ ಬುಧವಾರ ಭಾರಿ ವಾಕ್ಸಮರಕ್ಕೆ ಕಾರಣವಾಗಿದೆ.

‘ದೇಶದ ಪೂರ್ವ ಭಾಗದ ಜನರು ಚೀನಿಯರಂತೆ ಕಾಣುತ್ತಿದ್ದರೆ, ಪಶ್ಚಿಮದ ರಾಜ್ಯಗಳಲ್ಲಿರುವವರು ಅರಬ್ಬರ ಥರ ಕಾಣುತ್ತಾರೆ. ಅದೇ ರೀತಿ, ಉತ್ತರ ಭಾಗಗಳ ಜನರು ಬಹುಶಃ ಬಿಳಿಯರಂತೆ ಕಂಡರೆ ದಕ್ಷಿಣದಲ್ಲಿರುವವರು ಆಫ್ರಿಕಾದವರಂತೆ ಕಾಣುತ್ತಾರೆ. ಈ ವೈವಿಧ್ಯದ ನಡುವೆಯೂ ನಾವು ಏಕತೆಯನ್ನು ಸಾಧಿಸಿದ್ದೇವೆ’ ಎಂದು ಪಿತ್ರೋಡಾ ಹೇಳಿದ್ದು, ವಿವಾದದ ಕಿಡಿ ಹೊತ್ತಿಸಿದೆ.

ಇತ್ತೀಚೆಗೆ ಅವರು ನೀಡಿದ್ದ ‘ಪಿತ್ರಾರ್ಜಿತ ಆಸ್ತಿ ತೆರಿಗೆ’ ಹೇಳಿಕೆಯಿಂದ ಎದ್ದಿದ್ದ ವಿವಾದ ತಣ್ಣಗಾಗುವ ಮುನ್ನವೇ, ಅವರ ಮತ್ತೊಂದು ಹೇಳಿಕೆ ವಿವಾದಕ್ಕೀಡಾಗಿದೆ.

ಪಿತ್ರೋಡಾ ಅವರ ಈ ಹೇಳಿಕೆ ಕುರಿತು ಬಿಜೆಪಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಭಾರಿ ಆಕ್ರೋಶ ವ್ಯಕ್ತಪಡಿಸಿವೆ. ‘ಇಂತಹ ಜನಾಂಗೀಯ ದ್ವೇಷದ ಹೇಳಿಕೆಯಿಂದ ಕಾಂಗ್ರೆಸ್ ಪಕ್ಷದ ವಿಭಜಕ ರಾಜಕಾರಣ ಬಹಿರಂಗಗೊಂಡಿದೆ’ ಎಂದು ಬಿಜೆಪಿ ಟೀಕಿಸಿದೆ.

11ನೇ ಪುಟ ನೋಡಿ

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ



ಸ್ಯಾಮ್ ಪಿತ್ರೋಡಾ

ನವದೆಹಲಿ: ಭಾರತದ ವೈವಿಧ್ಯವನ್ನು ವಿವರಿಸಲು ತಾವು ನೀಡಿದ್ದ ಹೇಳಿಕೆ ತೀವ್ರ ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಕಾಂಗ್ರೆಸ್‌ನ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಯಾಮ್ ಪಿತ್ರೋಡಾ ಬುಧವಾರ ರಾಜೀನಾಮೆ ನೀಡಿದ್ದಾರೆ.

‘ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಿತ್ರೋಡಾ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಲು ಸ್ವತಃ ಸ್ಯಾಮ್ ಪಿತ್ರೋಡಾ ಅವರೇ ನಿರ್ಧರಿಸಿದ್ದಾರೆ. ಅವರ ಈ ನಿರ್ಧಾರಕ್ಕೆ ಪಕ್ಷದ ಅಧ್ಯಕ್ಷರು ಒಪ್ಪಿಗೆ ಸೂಚಿಸಿದ್ದಾರೆ’ ಎಂದೂ ಅವರು ಬರೆದುಕೊಂಡಿದ್ದಾರೆ.

ಅಂಬಾನಿ–ಅದಾನಿ ಜತೆ ಸಖ್ಯ ಮೋದಿ–ರಾಹುಲ್ ಜಟಾಪಟಿ

ರಫೇಲ್ ವಿಚಾರದ ನಂತರ ರಾಹುಲ್ ‘ಐವರು ಉದ್ಯಮಿ’ಗಳ ಬಗ್ಗೆ ಮಾತನಾಡುತ್ತಿದ್ದರು. ಬಳಿಕ ಅವರು ಅಂಬಾನಿ–ಅದಾನಿ ಬಗ್ಗೆ ಪ್ರಸ್ತಾಪಿಸತೊಡಗಿದರು. ಈಗ ಈ ಉದ್ಯಮಿಗಳ ನಿಂದನೆಯನ್ನೂ ಇದ್ದಕ್ಕಿದ್ದಂತೆ ನಿಲ್ಲಿಸಿರುವುದೇಕೆ? ಈ ಸಂಬಂಧ ಏನಾದರೂ ಒಪ್ಪಂದ ಕುದುರಿದೆಯೇ? ಅವರ ಪಕ್ಷವು ಟೆಂಪೊಗಟ್ಟಲೆ ಕಪ್ಪು ಹಣವನ್ನು ಪಡೆದಿದೆಯೇ?

ನರೇಂದ್ರ ಮೋದಿ, ಪ್ರಧಾನಿ

ಸಾಮಾನ್ಯವಾಗಿ ನೀವು ಅದಾನಿ ಮತ್ತು ಅಂಬಾನಿ ಬಗ್ಗೆ ಗುಪ್ತವಾಗಿ ಮಾತನಾಡುತ್ತೀರಿ. ಮೊದಲ ಬಾರಿಗೆ ಅವರ ಹೆಸರನ್ನು ಸಾರ್ವಜನಿಕವಾಗಿ ಪ್ರಸ್ತಾಪಿಸಿದ್ದೀರಿ. ಅವರು (ಕಾಂಗ್ರೆಸ್‌ಗಾಗಿ) ಟೆಂಪೊಗಳಲ್ಲಿ ಹಣ ಒಯ್ಯುತ್ತಾರೆ ಎನ್ನುವುದೂ ನಿಮಗೆ ಗೊತ್ತಿದೆ. ಅದು ನಿಮ್ಮ ವೈಯಕ್ತಿಕ ಅನುಭವವೇ? ಒಂದು ಕೆಲಸ ಮಾಡಿ, ಇ.ಡಿ–ಸಿಬಿಐ ಅನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತನಿಖೆಗೆ ಕಳುಹಿಸಿ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಹೈದರಾಬಾದ್ (ಪಿಟಿಐ): ಉದ್ಯಮಿಗಳಾದ ಗೌತಮ್ ಅದಾನಿ ಮತ್ತು ಮುಕೇಶ್ ಅಂಬಾನಿ ಅವರೊಂದಿಗಿನ ನಂಟಿನ ವಿಷಯವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡುವೆ ಮಾತಿನ ಜಟಾಪಟಿ ತೀವ್ರಗೊಂಡಿದೆ.

‘ಕಳೆದ ಐದು ವರ್ಷಗಳಿಂದ ಅದಾನಿ–ಅಂಬಾನಿ ವಿಷಯ ಪ್ರಸ್ತಾಪಿಸುತ್ತಿದ್ದ ‘ಶಹಜಾದ’ (ರಾಹುಲ್), ಈಗ ಈ ವಿಷಯವಾಗಿ ಮೌನ ತಾಳಿರುವುದೇಕೆ’ ಎಂದು ಮೋದಿ ಪ್ರಶ್ನಿಸಿದರೆ, ‘ಸಿಬಿಐ ಮತ್ತು ಇ.ಡಿಯಿಂದ ಈ ವಿಷಯವನ್ನು ತನಿಖೆಗೆ ಒಳಪಡಿಸಿ’ ಎಂದು ರಾಹುಲ್ ಕುಟುಕಿದ್ದಾರೆ.

ಪ್ರಧಾನಿ ಮೋದಿ ಅವರು ಅಂಬಾನಿ–ಅದಾನಿ ಜತೆಗೆ ನಂಟು ಹೊಂದಿದ್ದಾರೆ ಎಂದು ಇದುವರೆಗೆ ಕಾಂಗ್ರೆಸ್ ಆರೋಪಿಸುತ್ತಿತ್ತು. ಈಗ ಅದೇ ಆರೋಪವನ್ನು ಮೋದಿ ಅವರು ಕಾಂಗ್ರೆಸ್ ವಿರುದ್ಧ ಮಾಡಿದ್ದಾರೆ.

ತೆಲಂಗಾಣದ ವೇಮುಲವಾಡದಲ್ಲಿ ಬುಧವಾರ ಮಾತನಾಡಿದ ಮೋದಿ, ‘ ಚುನಾವಣೆಗಳು ಘೋಷಣೆಯಾದ ಗಳಿಗೆಯಿಂದ ಕಾಂಗ್ರೆಸ್‌ನವರು ಅಂಬಾನಿ–ಅದಾನಿ ಅವರನ್ನು ನಿಂದಿಸುವುದನ್ನು ನಿಲ್ಲಿಸಿದರು’ ಎಂದು ಹೇಳಿದರು.

10ನೇ ಪುಟ ನೋಡಿ

ವಿಡಿಯೊ ಪೋಸ್ಟ್: ನಡ್ಡಾಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಚೋದನಕಾರಿ ವಿಡಿಯೊ ಪೋಸ್ಟ್ ಅಪ್‌ಲೋಡ್ ಮಾಡಿದ್ದ ಆರೋಪದಡಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬಿಜೆಪಿಯ ಮೂವರು ನಾಯಕರಿಗೆ ಹೈಗ್ರೌಂಡ್ಸ್ ಠಾಣೆ ಪೊಲೀಸರು ನೋಟಿಸ್ ನೀಡಿದ್ದಾರೆ.

‘ವಿಡಿಯೊಗೆ ಸಂಬಂಧಪಟ್ಟಂತೆ ಮೇ 5ರಂದು ಪ್ರಕರಣ ದಾಖಲಾಗಿದೆ. ಇದರ ವಿಚಾರಣೆಗೆ ಹಾಜರಾಗುವಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿಯ ಸಾಮಾಜಿಕ ಮಾಧ್ಯಮ ಉಸ್ತುವಾರಿ ಅಮಿತ್ ಮಾಳವೀಯಾ ಅವರಿಗೆ ನೋಟಿಸ್ ನೀಡಲಾಗಿದ್ದು, 7 ದಿನಗಳ ಒಳಗಾಗಿ ಠಾಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಲೋಕಸಭಾ ಚುನಾವಣೆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದೆ. ‘ಎಕ್ಸ್’ನಲ್ಲಿ ಬಿಜೆಪಿಯ ಅಧಿಕೃತ ಖಾತೆಯಿದೆ (@ಬಿಜೆಪಿ4ಕರ್ನಾಟಕ). ಇದರಲ್ಲಿ ವಿಡಿಯೊವೊಂದನ್ನು ಅಪ್‌ಲೋಡ್ ಮಾಡಿ, ‘ಎಚ್ಚರ... ಎಚ್ಚರ... ಎಚ್ಚರ...’ ಎಂದು ಬರೆಯಲಾಗಿತ್ತು. ‘ಸಮಾಜದಲ್ಲಿ ಎರಡು ವರ್ಗಗಳ ನಡುವೆ ದ್ವೇಷವನ್ನುಂಟು ಮಾಡುವ ಹಾಗೂ ವೈಷಮ್ಯ ಮೂಡಿಸುವ ಉದ್ದೇಶದಿಂದ ವಿಡಿಯೊ ಅಪ್‌ಲೋಡ್ ಮಾಡಲಾಗಿದೆ’ ಎಂದು ಆರೋಪಿಸಿ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ದೂರು ನೀಡಿದ್ದರು’ಎಂದು ತಿಳಿಸಿವೆ.

RAMAIAH UNIVERSITY OF APPLIED SCIENCES
WHERE SUCCESS IS A TRADITION
Engineering & Technology | Dental Sciences | Medical | Nursing
Education & Research | Social Sciences | Life & Allied Health Sciences | Law | Pharmacy | Physiotherapy | Mathematical & Physical Sciences | Management & Commerce | Art & Design
Hospitality Management & Catering Technology
Top-Notch Placements
52 LPA Highest National Package
25.5 LPA Highest International Package
Key Recruiters: amazon, Reliance, Infosys, Apollo Munich, Vedantu, wipro
RUAS Accreditation & Recognition: nirf 65th Rank in Pharmacy, 14th Rank in Dental, 43rd Rank in Medical; ARIIA; Accredited A+ Ramaiah Medical College; NBA Hospitality Management & Catering Technology
ADMISSIONS OPEN 2024
Apply Now Through RUAS-AT
8010004444 | admissions@msruas.ac.in | www.msruas.ac.in

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ ಚಿನ್ನದ ದರ
₹6625/gm
ಬೆಳ್ಳಿ ದರ: ₹84/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಲೇಖನಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಜೈಲು ಸೇರಿದ ಜೆಡಿಎಸ್ ಶಾಸಕ ರೇವಣ್ಣ

ಪ್ರಜಾವಾಣಿ ವಾರ್ತೆ

ಎಚ್‌.ಡಿ. ರೇವಣ್ಣ

ಬೆಂಗಳೂರು: ‘ಅತ್ಯಾಚಾರ ಸಂತ್ರಸ್ತೆಯ ಅಪಹರಣ’ ಪ್ರಕರಣದ ಆರೋಪಿಯಾದ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಸದ್ಯ ಅವರು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹ ಸೇರಿದ್ದಾರೆ.

ಮೈಸೂರು ಜಿಲ್ಲೆಯ ಕೆ.ಆರ್. ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದ ಎಸ್‌ಐಟಿ ಅಧಿಕಾರಿಗಳು, ರೇವಣ್ಣ ಅವರನ್ನು ಮೇ 4ರಂದು ಬಂಧಿಸಿದ್ದರು. ಮರುದಿನವೇ ರೇವಣ್ಣ ಅವರನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ, ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದರು.

ಕಸ್ಟಡಿ ಅವಧಿ ಮುಗಿದಿದ್ದರಿಂದ ರೇವಣ್ಣ ಅವರನ್ನು 17ನೇ ಎಸಿಎಂಎಂ ನ್ಯಾಯಾಲಯಕ್ಕೆ ಬುಧವಾರ ಹಾಜರು ಪಡಿಸಲಾಯಿತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು, ಆರೋಪಿಯನ್ನು ಮೇ 14ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ಹೊರಡಿಸಿದರು. ವಿಚಾರಣೆ ಬಳಿಕ ಎಸ್‌ಐಟಿ ಅಧಿಕಾರಿಗಳು ರೇವಣ್ಣ ಅವರನ್ನು ನ್ಯಾಯಾಲಯದಿಂದ ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದ್ದಾರೆ.

ರೇವಣ್ಣ ಅವರನ್ನು ಅಧಿಕಾರಿಗಳು ಜೈಲಿಗೆ ಕರೆತರುತ್ತಿದ್ದ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು. ಜೈಲಿನ ಮುಂಭಾಗದ ರಸ್ತೆಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಸಾರ್ವಜನಿಕರ ಓಡಾಟವನ್ನು ನಿರ್ಬಂಧಿಸಲಾಗಿತ್ತು.

ವಿಚಾರಣಾಧೀನ ಕೈದಿ ನಂಬರ್ ಹಂಚಿಕೆ: ರೇವಣ್ಣ ಅವರನ್ನು ಜೈಲಿಗೆ ದಾಖಲು ಮಾಡಿಕೊಂಡಿರುವ ಸಿಬ್ಬಂದಿ, ಅವರಿಗೆ ವಿಚಾರಣಾಧೀನ ಕೈದಿ ನಂಬರ್ ನೀಡಿದ್ದಾರೆ. ಜೈಲಿನ ಬ್ಯಾರಕ್‌ನಲ್ಲಿ ಸಹ ಕೈದಿಗಳ ಜೊತೆಯಲ್ಲಿ ರೇವಣ್ಣ ಅವರನ್ನು ಇರಿಸಿರುವುದಾಗಿ ಗೊತ್ತಾಗಿದೆ.

ರೇವಣ್ಣಗೆ ಹೊಟ್ಟೆ ನೋವು: ಎಸ್‌ಐಟಿ ಅಧಿಕಾರಿಗಳ ಕಸ್ಟಡಿಯಲ್ಲಿದ್ದ ಸಂದರ್ಭದಲ್ಲಿ ಎಚ್‌.ಡಿ. ರೇವಣ್ಣ ಅವರು ವಿಪರೀತ ಹೊಟ್ಟೆ ನೋವಿನಿಂದ ಬಳಲುತ್ತಿದ್ದರೆಂದು ಗೊತ್ತಾಗಿದೆ.

‘ರೇವಣ್ಣ ಅವರ ಆರೋಗ್ಯ ಸ್ಥಿತಿ ಮಂಗಳವಾರ ತೀವ್ರ ಹದಗೆಟ್ಟಿತ್ತು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆ ಕೊಡಿಸಲಾಗಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಜಾಮೀನು ಅರ್ಜಿ: ಇಂದು ವಿಚಾರಣೆ

‘ಶಾಸಕ ರೇವಣ್ಣ ಸಲ್ಲಿಸಿರುವ ನಿಯಮಿತ (ರೆಗ್ಯುಲರ್) ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಬೇಕು’ ಎಂದು ಎಸ್‌ಐಟಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಮನವಿ ಮಾಡಿದೆ.

ಈ ಕುರಿತಂತೆ ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ವಿಚಾರಣೆ ನಡೆಸಿದರು. ಈ ವೇಳೆ ಎಸ್‌ಐಟಿ ಪರ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಆಕ್ಷೇಪಣೆ ಸಲ್ಲಿಸಲು ಒಂದು ವಾರ ಸಮಯಾವಕಾಶ ನೀಡುವಂತೆ ಕೋರಿದರು. ಆದರೆ, ಇದನ್ನು ಒಪ್ಪದ ನ್ಯಾಯಾಧೀಶರು ವಿಚಾರಣೆಯನ್ನು ಗುರುವಾರಕ್ಕೆ (ಮೇ 9) ಮುಂದೂಡಿದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಮೇ 9ರಂದು ಪ್ರಕಟವಾಗಲಿದೆ.

ಮಾರ್ಚ್ 25ರಿಂದ ಏ.6ರವರೆಗೆ ರಾಜ್ಯದ 2,750 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಆಯಾ ವಿಷಯಗಳ ಪರೀಕ್ಷೆಗಳು ಮುಗಿದ ಮರುದಿನದಿಂದಲೇ ಮೌಲ್ಯಮಾಪನ ಕಾರ್ಯ ಆರಂಭಿಸಲಾಗಿತ್ತು. ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಬೆಳಿಗ್ಗೆ 10.30ಕ್ಕೆ ಫಲಿತಾಂಶ ಪ್ರಕಟಿಸಲಾಗುವುದು. ಫಲಿತಾಂಶವನ್ನು ಮಂಡಳಿಯ ಜಾಲತಾಣ https://karresults.nic.in ನಲ್ಲಿ ವೀಕ್ಷಿಸಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

4.41 ಲಕ್ಷ ಬಾಲಕರು, 4.28 ಲಕ್ಷ ಬಾಲಕಿಯರೂ ಸೇರಿದಂತೆ ಒಟ್ಟು 8.69 ಲಕ್ಷ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದರು. ಇದೇ ಮೊದಲ ಬಾರಿ ಮೂರು ಪರೀಕ್ಷೆಗಳನ್ನು ಪರಿಚಯಿಸಲಾಗಿದ್ದು, ಮೇ ಮೂರನೇ ವಾರದಲ್ಲೇ ಎರಡನೇ ಪರೀಕ್ಷೆ ಆರಂಭವಾಗಲಿದೆ. ಉತ್ತೀರ್ಣರಾದ ವಿದ್ಯಾರ್ಥಿಗಳು ಸಹ ಉಳಿದ ಎರಡು ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಯಾವ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಬರುತ್ತವೆಯೋ ಅದರ ಅಂಕಪಟ್ಟಿ ಪಡೆಯಬಹುದು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

PES PRE-UNIVERSITY COLLEGE
pu.pes.edu
8762367200
50 Feet Road, Hanumanthanagar BSK 1st Stage, Bengaluru 560050
GOLDEN JUBILEE YEAR
HEARTY CONGRATULATIONS STATE TOPPERS 2024
STATE TOPPER #3 | STATE TOPPER #4 | STATE TOPPER #6 | STATE TOPPER #7 | STATE TOPPER #8 | STATE TOPPER #10

DHEERAJ S. BASM / 99.17% | APPORVA N. PCMB / 99.17% | PAVITHRA P. BASM / 98.67% | BHAVAN P. PCMB / 98.67% | V. SANJAY PRASANNA SIMHA BASM / 98.33% | LAVANYA D. SEBA / 98%
PUC ADMISSIONS 2024, NOW OPEN
SCIENCE: PCMB, PCME, & PCMCs
COMMERCE: BASM, SEBA, GEBA, & SABCs
HIGHLIGHTS
- SMS alerts of attendance to parents
- Continuous Internal Assessment
- Progress Report Service (PRS)
- Mentor System
- Parents Meet
- Compulsory Yoga Classes
- Academic Support Program
- Gifted Student Development Program
- Merit Scholarship & Scholarship Initiatives
- Sports, Cultural & Literary Activities
- NCC & NSS Activities
- Seminar on Career Opportunities & Post PU Initiatives
HOSTEL FACILITY
Available for Boys & Girls
Medium of Instruction: English
Languages Offered: Kannada / Sanskrit / Hindi / Telugu

ಪ್ರತಿ ಕಣ್ಣುಗಳು ಹೇಳುತ್ತವೆ, ನಿಮ್ಮ ಕೂದಲಿನ ಸೌಂದರ್ಯವನ್ನು!

ನಿಮ್ಮ ಕೂದಲನ್ನು ಇರಿಸುತ್ತದೆ ಒಳಗಿಂದ ಸದೃಢ, ಹೊರಗಿಂದ ಸ್ಟೈಲಿಶ್.
ಇದರಲ್ಲಿದೆ ನೀಲಿನಿ ಮತ್ತು ಪ್ರಾಚೀನ ಆಯುರ್ವೇದಿಕ್ ಗಿಡ ಮೂಲಿಕೆಗಳ ಶಕ್ತಿ.
AMRITH NONI REACH ROOT™ Premium HAIR OIL
ಆಯುರ್ವೇದ ಸ್ವಾಮ್ಯದ ಔಷಧ
ಹೇರ್ ಗ್ರೋಥ್‌ಗೆ ಸಹಾಯ ಮಾಡುತ್ತದೆ, ಹೇರ್ ಫಾಲ್ ತಡೆಗಟ್ಟುತ್ತದೆ.
ಅರೆಕಾಲಿಕ ಬಿಳಿ ಕೂದಲ ಬೆಳವಣಿಗೆಯನ್ನು ತಡೆಗಟ್ಟಲು ಸಹಕರಿಸುತ್ತದೆ.
ಹೇರ್ ಡ್ಯಾಮೇಜ್ ಆಗುವುದನ್ನು ತಡೆಗಟ್ಟುತ್ತದೆ. ಡ್ಯಾಂಡ್ರಫ್ ಕಡಿಮೆ ಮಾಡುತ್ತದೆ.
ಕೂದಲನ್ನು ಇರಿಸುತ್ತದೆ ಸ್ಮೂತ್ ಮತ್ತು ಸಿಲ್ಕಿ.
ಹೆಚ್ಚಿನ ವಿವರಕ್ಕಾಗಿ ಇಲ್ಲಿ ಸಂಪರ್ಕಿಸಿ : +91 96064 45606
ಮೆಡಿಕಲ್ ಶಾಪ್, ಸೂಪರ್ ಮಾರ್ಕೆಟ್ ಮತ್ತು ಆಯುರ್ವೇದಿಕ್ ಸ್ಟೋರ್‌ಗಳಲ್ಲಿ ಲಭ್ಯ
www.amrithnoni.com
ಕಾಪಿರೈಟ್ ಅಮೃತ್ ನೋನಿ. ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ರೀಚ್ ರೂಟ್ ಅಮೃತ್ ನೋನಿ ಮತ್ತು ವ್ಯಾಲ್ಯೂ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ಹಕ್ಕುಸ್ವಾಮ್ಯ ಟ್ರೇಡ್ ಮಾರ್ಕ್ ಆಗಿದೆ. ಈ ದೃಶ್ಯಗಳಲ್ಲಿ ತೋರಿಸಿರುವ ಚಿತ್ರಗಳು ಮತ್ತು ಪದಾರ್ಥಗಳು ಸೃಜನಶೀಲ ಪ್ರಾತಿನಿಧ್ಯಕ್ಕಾಗಿ ಮಾತ್ರ. ನಿಜವಾದ ಬಣ್ಣ ಮತ್ತು ಸುಗಂಧವು ಬದಲಾಗಬಹುದು.

ಸುಧಾ, ಮಯೂರ ಓದಿರಿ

ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಲಿ ಮತ್ತು ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿದ ರಾಮನವಮಿ ಸಂಗೀತೋತ್ಸವದಲ್ಲಿ ಬುಧವಾರ ಜಿ. ರವಿಕಿರಣ್ ಮತ್ತು ತಂಡದವರು ವಿಶೇಷ ಕರ್ನಾಟಕ ಸಂಗೀತ ಕಛೇರಿ ಪ್ರಸ್ತುತ ಪಡಿಸಿದರು — ಪ್ರಜಾವಾಣಿ ಚಿತ್ರ

भाकृअनुप - राष्ट्रीय पशु पोषण एवं शरीर क्रिया विज्ञान संस्थान
आडुगोडी, बेंगलूरु - 560 030
कृषि अनुसंधान एवं शिक्षा विभाग, भारत सरकार
ICAR - National Institute of Animal Nutrition and Physiology
Adugodi, Bengaluru - 560 030
Department of Agricultural Research and Education, Government of India

NIANP/ADV-I-CDN/2024-25

The walk - in - interview has been scheduled on 22.05.2024 for engaging of One Young Professional - I and One Field Assistant at **ICAR-NIANP**, Bengaluru under **DAPSC** project (Exclusively for SC candidates as per project rules) on temporary basis. The consolidated remuneration is **Rs. 30000/-** per month. For detailed advertisement please visit the Institute **website www.nianp.res.in.**

Sd/-
Administrative Officer

ಕೆನರಾ ಬ್ಯಾಂಕ್
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ
ಎಆರ್‌ಎಂ –II ಶಾಖೆ, 2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ.86, ಎಂ ಜಿ ರಸ್ತೆ, ಬೆಂಗಳೂರು–560001. ದೂರವಾಣಿ: 080–25310181, 25310099, E-mail - cb6298@canarabank.com

ಸ್ಥಿರಾಸ್ತಿಗಳ ಹರಾಜು ಮಾರಾಟ ನೋಟೀಸ್

(ನಿಯಮ 8(6)ರ ಅಡಿಯಲ್ಲಿ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಮಯ 2002

ಪ್ರೊವಿಜನ್ ನಿಯಮ 8(6) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಸಾಂಕೇತಿಕವಾಗಿ ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಈ ಕಳಕಂಡ ದಿನಾಂಕದಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗನ್ನು ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. ಮೀಸಲು ಬೆಲೆ ಮತ್ತು ಮುಂಗಡ ಹಣ ಠೇವಣಿ ಮೊತ್ತವನ್ನು ಈ ಕೆಳಗೆ ನಮೂದಿಸಲಾಗಿದೆ.

ಕ್ರ. ಸಂ.	ಸಾಲಗಾರರ ಮತ್ತು ಜಾಮೀನುದಾರರ ಹೆಸರು/ ಚರ / ಸ್ಥಿರಾಸ್ತಿಗಳ ವಿವರಣೆ	ಬಾಕಿ ಇರುವ ಸಾಲದ ಮೊತ್ತ	ಆಸ್ತಿಯ ವಿವರ	ಹರಾಜಿನ ದಿನಾಂಕ & ಸಮಯ	ಮೀಸಲು ಬೆಲೆ & ಇಎಂಡಿ ಬೆಲೆ ದಿನಾಂಕ & ಸಮಯ	1)ಬಿಡ್‌ನ ಮೌಲ್ಯ 2) ಖಾತೆಯ ಸಂಖ್ಯೆ & ಐಎಫ್‌ಎಸ್‌ಸಿ
1.	**ಮೆ॥ ಬ್ಲೂಕ್ಲಿಫ್ ಅಪರಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್,** ನಂ.410, ಹಳೆಯ ಪಿಐಡಿ ನಂ.38/56, ವೈಜಯಂತ್ ಆರ್ಕೇಡ್, ಗುರುಸಾರ್ವಭೋಮ ನಗರ, ಐಟಿಐ ಲೇಔಟ್, 3ನೇ ಹಂತ, ಗೋಪಾಲನ್ ಆರ್ಕೇಡ್ ಎದುರು, ಮೈಸೂರು ರಸ್ತೆ, ಕೆಂಕೇರಿ ಹೋಬಳಿ, ಬೆಂಗಳೂರು–560039. **ಮತ್ತು ಹಾಗೂ ವಿಳಾಸ: ಬ್ಲೂಕ್ಲಿಫ್ ಅಪರಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್,** ಸಂಖ್ಯೆ 26, 1ನೇ ಮುಖ್ಯ ರಸ್ತೆ, ನಾಯಂಡಹಳ್ಳಿ ದಕ್ಷಿಣ ಬಡಾವಣೆ, ಕೆಂಗೇರಿ ಹೋಬಳಿ, ಬೆಂಗಳೂರು–560039, **ಶ್ರೀ. ಶಶಿಕಾಂತ ಎಂ ಕೆ** ಬಿನ್ ಎಂ ಎಸ್ ಕೃಷ್ಣೇಗೌಡ, 2/372, ವಾರ್ಡ್ ಸಂಖ್ಯೆ 2, 2ನೇ ಕ್ರಾಸ್, ವಿನಾಯಕ ಬಡವಣೆ, ಕೆ ಆರ್ ನಗರ, ಮೈಸೂರು–571602. **ಮತ್ತು ಹಾಗೂ ವಿಳಾಸ: ಶ್ರೀ. ಶಶಿಕಾಂತ ಎಂ ಕೆ,** ಎಂ ಎಸ್ ಕೃಷ್ಣೇಗೌಡ, ನಂ.67, 2ನೇ ಕ್ರಾಸ್, 4ನೇ ಮೇನ್, ವಿಜಯಶ್ರೀಪುರ, ಮೈಸೂರು–570006 **ಶ್ರೀ. ಶ್ರೀಜಿತ್ ಪಿ,** ಬಿನ್ ಕೆ ಕೆ ನಾರಾಯಣ ನಂಬಿಯಾರ್, ಕಲತ್ತಿಲ್ ವಳಪ್ಪಿಲ್ ಹೌಸ್, ಮರುವಂಚೇರಿ ಅಂಚೆ, ಕನ್ನಿಲೇರಿ, ಶಿವಪುರಂ ಕಣ್ಣೂರು ಜಿಲ್ಲೆ, ಕೇರಳ – 670702. **ಮತ್ತು ಹಾಗೂ ವಿಳಾಸ: ಶ್ರೀ. ಶ್ರೀಜಿತ್ ಪಿ,** ಬಿನ್ ನಾರಾಯಣನ್ ನಂಬಿಯಾರ್ ಕೆ ಕೆ, #139, ಬಾಲಾಜಿ ಲೇಔಟ್, ಉತ್ತರಹಳ್ಳಿ, ಬೆಂಗಳೂರು – 562159 **ಶ್ರೀಮತಿ ಚೌಡಮ್ಮ,** ಕೋಂ ಚಂದ್ರಪ್ಪ, ಸಂಖ್ಯೆ 50 ಹಳೆ, ಚರ್ಚ್ ರಸ್ತೆ ಎಸ್ ಟಿ ಸ್ಟ್ರೀಟ್ ಮಾರತಹಳ್ಳಿ ಕಾಲೋನಿ ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ 560037. **ಶ್ರೀ. ಶಾಜಿ ಪಿ,** ಬಿನ್ ಕೆ ಕೆ ನಾರಾಯಣ ನಂಬಿಯಾರ್, ಕಲತ್ತಿಲ್ ವಳಪ್ಪಿಲ್ ಹೌಸ್, ಮರುವಂಚೇರಿ ಅಂಚೆ, ಕನ್ನಿಲೇರಿ, ಶಿವಪುರಂ, ಕಣ್ಣೂರು ಜಿಲ್ಲೆ, ಕೇರಳ – 670702	ರೂ. **8,14,48,711.57** (ರೂಪಾಯಿ ಎಂಟು ಕೋಟಿ ಹದಿನಾಲ್ಕು ಲಕ್ಷದ ನಲವತ್ತೆಂಟು ಸಾವಿರದ ಏಳು ನೂರ ಹನ್ನೊಂದು ಮತ್ತು ಐವತ್ತೇಳು ಪೈಸೆ ಮಾತ್ರ) ದಿನಾಂಕ: **30.04.2024** ರಂದು ಇದ್ದಂತೆ ದಿನಾಂಕ **01.05.204** ರಿಂದ ಜೊತೆಗೆ ಮುಂದಿನ ಬಡ್ಡಿ ಮತ್ತು ಖರ್ಚುಗಳು.	**ದಾಖಲೆಗಳ ಪ್ರಕಾರ:** ಆಸ್ತಿಯ ಬಿಬಿಎಂಪಿ ಖಾತಾ ನಂ. 84/81/215, ಸಿಎಂಸಿ ಖಾತಾ ನಂ. 81, ಹಳೇ ಹೆಚ್‌ಎಎಸ್‌ಬಿ ಖಾನೇಶುಮಾರಿ ನಂ.210/69, ವಿಸ್ತೀರ್ಣ 3375 ಚದರ ಅಡಿ ಭೂಮಿ, (ಪೂರ್ವದಿಂದ ಪಶ್ಚಿಮಕ್ಕೆ 45 ಅಡಿ, ಉತ್ತರದಿಂದ ದಕ್ಷಿಣಕ್ಕೆ 75 ಅಡಿ), ಈ ಆಸ್ತಿಯು ಸರ್ಕಾರಿ ಶಾಲೆ ರಸ್ತೆ, ಮಾರತಹಳ್ಳಿ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಈ ಹಿಂದೆ ಮಹದೇವಪುರ ಸಿಎಂಸಿ ವ್ಯಾಪ್ತಿಯಲ್ಲಿ ಬರುತ್ತದೆ, ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ. 86ರಲ್ಲಿ ಬರುತ್ತದೆ, **ಚಕ್ಕುಬಂದಿ : ಪೂರ್ವಕ್ಕೆ :** ಹಲಸೂರು ಕೃಷ್ಣಪ್ಪ ರವರ ಆಸ್ತಿ, **ಪಶ್ಚಿಮಕ್ಕೆ :** ಕಾಂತಮ್ಮ ರವರ ಆಸ್ತಿ, **ಉತ್ತರಕ್ಕೆ :** ರಸ್ತೆ, **ದಕ್ಷಿಣಕ್ಕೆ :** ಎ. ಕೆ. ಕಾಲೋನಿ. **ವಾಸ್ತವಿಕ:** ಆಸ್ತಿಯ ಬಿಬಿಎಂಪಿ ಖಾತಾ ನಂ. 84/81/215, ಸಿಎಂಸಿ ಖಾತಾ ನಂ. 81, ಹಳೇ ಹೆಚ್‌ಎಎಸ್‌ಬಿ ಖಾನೇಶುಮಾರಿ ನಂ.210/69, ವಿಸ್ತೀರ್ಣ 2815 ಚದರ ಅಡಿ ಭೂಮಿ, (ಪೂರ್ವದಿಂದ ಪಶ್ಚಿಮಕ್ಕೆ 40.75 ಅಡಿ, ಉತ್ತರದಿಂದ ದಕ್ಷಿಣಕ್ಕೆ 69 ಅಡಿ), ಈ ಆಸ್ತಿಯು ಸರ್ಕಾರಿ ಶಾಲೆ ರಸ್ತೆ, ಮಾರತಹಳ್ಳಿ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಈ ಹಿಂದೆ ಮಹದೇವಪುರ ಸಿಎಂಸಿ ವ್ಯಾಪ್ತಿಯಲ್ಲಿ ಬರುತ್ತದೆ, ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ. 86ರಲ್ಲಿ ಬರುತ್ತದೆ, **ಚಕ್ಕುಬಂದಿ : ಪೂರ್ವಕ್ಕೆ :** ಹಲಸೂರು ಕೃಷ್ಣಪ್ಪ ರವರ ಆಸ್ತಿ, **ಪಶ್ಚಿಮಕ್ಕೆ :** ಕಾಂತಮ್ಮ ರವರ ಆಸ್ತಿ, **ಉತ್ತರಕ್ಕೆ :** ರಸ್ತೆ, **ದಕ್ಷಿಣಕ್ಕೆ :** ಎ. ಕೆ. ಕಾಲೋನಿ.	12.06.2024 ಮಧ್ಯಾಹ್ನ 12.30 ರಿಂದ 1.00 ರವರೆಗೆ	ಮೀಸಲು ಬೆಲೆ ರೂ.311.60 ಲಕ್ಷಗಳು ಇಎಂಡಿ ರೂ. 31.20 ಲಕ್ಷಗಳು (ದಿನಾಂಕ: 10.06.2024 ರಂದು ಮಧ್ಯಹ್ನ 3.00 ಗಂಟೆಯ ವರೆಗೆ)	1. ರೂ. 1,00,000/– ಗುಣಾಂಕಗಳಲ್ಲಿ 2. ಖಾತೆ ಸಂಖ್ಯೆ 209272434 IFSC: CNRB0006298 ಎನ್ಕಂಬರೆನ್ಸ್ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ತಿಳಿದಿಲ್ಲ
2.	**1. ಶ್ರೀ ಚಕಲಿ ನಾರಾಯಣಪ್ಪ, ಮಾಲೀಕರು: ಮೆ॥ ಜಿಆರ್‌ಎಸ್ ಎಂಟರ್‌ಪ್ರೈಸಸ್** ನಂ.201, ಮಹಾಲಕ್ಷ್ಮಿ ರೆಸಿಡೆನ್ಸಿ, 04/04, 6ನೇ ಕ್ರಾಸ್, ಅಶೋಕ್ ನಗರ, ಬನಶಂಕರಿ 1ನೇ ಹಂತ, ಬೆಂಗಳೂರು–560050. **2. ಶ್ರೀಮತಿ ಸುಜಾತಾ ವೈ ಎ ಕೋಂ** ಶ್ರೀ. ಸಿ ನಾರಾಯಣಪ್ಪ ನಂ.201, ಮಹಾಲಕ್ಷ್ಮಿ ರೆಸಿಡೆನ್ಸಿ, 04/04, 6ನೇ ಕ್ರಾಸ್, ಅಶೋಕ್ ನಗರ, ಬನಶಂಕರಿ 1ನೇ ಹಂತ, ಬೆಂಗಳೂರು – 560050 **3. ಶ್ರೀಮತಿ ಲೋಕಮಾತ** ಕೋಂ ಶ್ರೀ. ಲಕ್ಷ್ಮೀನಾರಾಯಣ, ವಾಸಸ್ಥಳ: ನಂ.779, 14ನೇ ಕ್ರಾಸ್, 7ನೇ ಬ್ಲಾಕ್, ಜಯನಗರ ಪಶ್ಚಿಮ, ಬೆಂಗಳೂರು – 560082. **4. ನಾರಾಯಣಪ್ಪ ಸಿ** ಬಿನ್ ಜವರಪ್ಪ, ಅತ್ತಿಕುಪ್ಪೆ ಅಂಚೆ, ಹಾರೋಹಳ್ಳಿ ಗ್ರಾಮ, ಬೆಂಗಳೂರು–562112. **5. ಮೆ॥ ಜಿಆರ್‌ಎಸ್ ಎಂಟರ್‌ಪ್ರೈಸೆಸ್** 2 1 IIIನೇ ಮಹಡಿ, ನವಾಬ್ ಸ್ಟ್ರೀಟ್, ಎಸ್ ಪಿ ರಸ್ತೆ, ಬೆಂಗಳೂರು–560002.	ರೂ. **4,13,44,609.07/–** (ರೂಪಾಯಿ ನಾಲ್ಕು ಕೋಟಿ ಹದಿಮೂರು ಲಕ್ಷದ ನಲವತ್ತ ನಾಲ್ಕು ಸಾವಿರದ ಆರು ನೂರ ಒಂಭತ್ತು ಮತ್ತು ಏಳು ಪೈಸೆ ಮಾತ್ರ) ದಿನಾಂಕ: 07/05/2024 ರಂದು ಇದ್ದಂತೆ ಜೊತೆಗೆ ಮುಂದಿನ ಬಡ್ಡಿ ಮತ್ತು ಖರ್ಚುಗಳು	**ಷೆಡ್ಯೂಲ್ 'ಎ' ಆಸ್ತಿ:** ಸ್ಥಿರಾಸ್ತಿ ವಾಸಯೋಗ್ಯ ಫ್ಲಾಟ್ ನಂ.ಜಿ–1, ನೆಲ ಮಹಡಿ, "ಮಹಾಲಕ್ಷ್ಮಿ ರೆಸಿಡೆನ್ಸಿ" ಅಪಾರ್ಟ್‌ಮೆಂಟ್ಸ್, ನಿವೇಶನ ನಂ.4/4 (ಹಳೆಯ ಸಂಖ್ಯೆ.30), 7ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಬೆಂಗಳೂರು 560050, ಒಟ್ಟು ವಿಸ್ತೀರ್ಣ 1350 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಪ್ರವೇಶ ಮತ್ತು ಕಾರಿಡಾರ್, ಪಶ್ಚಿಮಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ತೆರೆದ ಜಾಗ ಮತ್ತು ಉತ್ತರಕ್ಕೆ ಫ್ಲಾಟ್ ನಂ.ಜಿ–2. **ಷೆಡ್ಯೂಲ್ 'ಬಿ' ಆಸ್ತಿ:** ಷೆಡ್ಯೂಲ್ 'ಎ' ಆಸ್ತಿಯಲ್ಲಿ 370 ಚದರ ಅಡಿಗಳಿಗೆ ಸಮಾನವಾದ ಅವಿಭಾಜಿತ ಭಾಗವನ್ನು ಹೊಂದಿದೆ. **ಷೆಡ್ಯೂಲ್ 'ಸಿ' ಆಸ್ತಿ: (ಫ್ಲಾಟ್ ಮಾರಾಟಕ್ಕೆ ಇಡಲಾಗಿದೆ):** 3 ಬೆಡ್‌ರೂಮ್ ಅಪಾರ್ಟ್‌ಮೆಂಟ್ ಸಂಖ್ಯೆ ಜಿ–1, ನೆಲ ಮಹಡಿ, ಆಸ್ತಿ ಸಂಖ್ಯೆ.4/4, ಹಳೆಯ ಸಂಖ್ಯೆ.30, ಪಿಐಡಿ ನಂ.51–45–4/4, 7ನೇ ಕ್ರಾಸ್, "ಮಹಾಲಕ್ಷ್ಮಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್ಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಬೆಂಗಳೂರು – 560050, "ಜಿ 1" ನೆಲ ಮಹಡಿಯಲ್ಲಿ "ಮಹಾಲಕ್ಷ್ಮಿ ರೆಸಿಡೆನ್ಸಿ" ಎಂದು ಕರೆಯಲ್ಪಡುವ ಬಹುಮಹಡಿ ಕಟ್ಟಡದಲ್ಲಿ 1350 ಚದರ ಅಡಿಗಳ ಸೂಪರ್ ಬಿಲ್ಟ್ ಅಪ್ ಪ್ರದೇಶದೊಂದಿಗೆ (ಇದು ಬಾಲ್ಕನಿಗಳನ್ನು ಒಳಗೊಂಡಿರುತ್ತದೆ ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲು) ಜೊತೆಗೆ ತಳಮಹಡಿಯಲ್ಲಿ ಅಥವಾ ನೆಲಮಾಳಿಗೆಯಲ್ಲಿ ಕಾರು ನಿಲ್ಲಿಸುವ ಸ್ಥಳ, ಷೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾಗಿದೆ.	27/05/2024 ಬೆಳಿಗ್ಗೆ 10.30 ರಿಂದ 11.00 ರವರೆಗೆ	ಮೀಸಲು ಬೆಲೆ ರೂ.93.00 ಲಕ್ಷಗಳು ಇಎಂಡಿ ರೂ.9,30,000 (ದಿನಾಂಕ: 24/05/2024 ರಂದು ಮಧ್ಯಾಹ್ನ 3.00 ಗಂಟೆಯ ವರೆಗೆ)	1) ರೂ. 50,000/– 2) ಖಾತೆ ನಂ. 209272434 IFSC: CNRB0006298 ಎನ್ಕಂಬರೆನ್ಸ್ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ತಿಳಿದಿಲ್ಲ
3.	**ಶ್ರೀ ಹೆಚ್ ಬಿ ವೀರಾಚಾರ್** ಬಿನ್ ಎಚ್ ಪಿ ಭಾಸ್ಕರಾಚಾರ್, ಸಂಖ್ಯೆ 95/349, ಸರ್ವೆ ಸಂಖ್ಯೆ 23, ಖಾತಾ ಸಂಖ್ಯೆ 64 ಅಂದ್ರಹಳ್ಳಿ ಬೆಂಗಳೂರು–560091 **ಹಾಗೂ ವಿಳಾಸ:** 63/3, 2ನೇ ಕ್ರಾಸ್, ಶ್ರೀ ಗಂಧದನಗರ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು – 560091	ರೂ. 69,60,096/– (ರೂಪಾಯಿ ಅರವತ್ತೊಂಭತ್ತು ಲಕ್ಷದ ಅರವತ್ತು ಸಾವಿರದ ತೊಂಭತ್ತಾರು ಮಾತ್ರ) ಎಚ್ ಬಿ ವೀರಾಚಾರ್ 08.05.2024 ರಂತೆ ವೆಚ್ಚಗಳು ಮತ್ತು ಬಡ್ಡಿ ಒಳಗೊಂಡಂತೆ ಭವಿಷ್ಯದ ಬಡ್ಡಿ, ಮತ್ತು ವೆಚ್ಚಗಳು ಇತ್ಯಾದಿಗಳೊಂದಿಗೆ ಪಾವತಿಸಬೇಕಾಗುತ್ತದೆ.	ವಾಸಯೋಗ್ಯ ಭೂಮಿ ಮತ್ತು ಕಟ್ಟಡದ ನಿವೇಶನ ನಂ.95/349, ಸರ್ವೆ ನಂ.23, ಖಾತಾ ನಂ.3172, ಆಚಿದ್ರಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು – 560091, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 40 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ, ಚಕ್ಕುಬಂದಿ : ಉತ್ತರಕ್ಕೆ : ನಿವೇಶನ ನಂ. 92, ದಕ್ಷಿಣಕ್ಕೆ : ರಸ್ತೆ, ಪೂರ್ವಕ್ಕೆ : ನಿವೇಶನ ನಂ. 96, ಮತ್ತು ಪಶ್ಚಿಮಕ್ಕೆ : ನಿವೇಶನ ನಂ. 94.	12.06.2024 ಬೆಳಿಗ್ಗೆ 10.30 ರಿಂದ 11.00 ರವರೆಗೆ	ಮೀಸಲು ಬೆಲೆ ರೂ.97,50,000/– ಇಎಂಡಿ ರೂ.9,75,000/– (ದಿನಾಂಕ: 10.06.2024 ರಂದು ಮಧ್ಯಾಹ್ನ 3.00 ಗಂಟೆಯ ವರೆಗೆ)	1. ರೂ. 2,00,000/– 2. ಖಾತೆ ಸಂಖ್ಯೆ 209272434 IFSC: CNRB0006298 ಎನ್ಕಂಬರೆನ್ಸ್ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ತಿಳಿದಿಲ್ಲ
4.	**1. ಮೆ॥ ಜಿಎಸ್‌ಕೆ ಪ್ರಾಜೆಕ್ಟ್ಸ್ & ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್,** ಡೋರ್ ಸಂಖ್ಯೆ 530, 15ನೇ ಮೇನ್ 1ನೇ ಬ್ಲಾಕ್, 3ನೇ ಹಂತ, ಮಂಜುನಾಥ ನಗರ ಬೆಂಗಳೂರು ಕರ್ನಾಟಕ – 560010 **ಹಾಗೂ ವಿಳಾಸ:** ಶೆಡ್ ಸಂಖ್ಯೆ 2/1, ಸರ್ವೆ ನಂ 27/2, ರಾಮಯ್ಯ ಕೈಗಾರಿಕಾ ಪ್ರದೇಶ, ಹೇರೋಹಳ್ಳಿ ಕ್ರಾಸ್, ಮಹದೇಶ್ವರ ನಗರ, ವಿಶ್ವನೀಡಂ ಅಂಚೆ, ಬೆಂಗಳೂರು–91. **2. ಶ್ರೀ ಗಿರೀಶ್ ರಾಮೇಶ್ವರಪ್ಪ** ಬಿನ್ ರಾಮೇಶ್ವರಪ್ಪ. ಜಿ ಸಂಖ್ಯೆ 4, 2ನೇ ಮಹಡಿ, 9ನೇ ಕ್ರಾಸ್, ಮಹಾಲಕ್ಷ್ಮಿ ಲೇಔಟ್, ಹೆಚ್ಚಿನ ವಿಸ್ತರಣೆ, ಬೆಂಗಳೂರು – 560086 **3. ಶ್ರೀ ವೆಂಕಟೇಶ ಸಿ ಮಾರ** ಬಿನ್ ಲೇಟ್ ಶ್ರೀ ಚಿದಾನಂದಪ್ಪ ಹೆಚ್ ಮಾರ, ಸಂಖ್ಯೆ 177, 1ನೇ ಕ್ರಾಸ್, 7ನೇ ಕೈಗಾರಿಕಾ ಪಟ್ಟಣ, ರಾಜಾಜಿನಗರ, ಬೆಂಗಳೂರು – 560010 **4. ಶ್ರೀ ರಾಮೇಶ್ವರಪ್ಪ ಜಿ** ಬಿನ್ ಗೋವಿಂದಪ್ಪ ಜಿ ನಂ.3992/123, 16ನೇ ಕ್ರಾಸ್, ಅನಾಜನೇಯ ಬಡವಣೆ, ದಾವಣಗೆರೆ – 577004.	ರೂ. **2,08,11,381.87/–** (ರೂಪಾಯಿ ಎರಡು ಕೋಟಿ ಎಂಟು ಲಕ್ಷದ ಹನ್ನೊಂದು ಸಾವಿರದ ಮುನ್ನೂರ ಎಂಭತ್ತೊಂದು ಮತ್ತು ಎಂಭತ್ತೇಳು ಪೈಸೆ ಮಾತ್ರ) ಎಚ್ ಬಿ ವೀರಾಚಾರ್ 08.05.2024 ರಂತೆ ವೆಚ್ಚಗಳು ಮತ್ತು ಬಡ್ಡಿ ಒಳಗೊಂಡಂತೆ ಭವಿಷ್ಯದ ಬಡ್ಡಿ, ಮತ್ತು ವೆಚ್ಚಗಳು ಇತ್ಯಾದಿಗಳೊಂದಿಗೆ ಪಾವತಿಸಬೇಕಾಗುತ್ತದೆ.	ಖಾಲಿ ನಿವೇಶನದ ಸರ್ವೆ ನಂ.21/2 ಖಾತಾ ನಂ 25, ಕೃಷ್ಣ ಗಾರ್ಡನ್ ಲೇಔಟ್, ಮೈಲಸಂದ್ರ ಗ್ರಾಮ, ಕೆಂಗೇರಿ ಹೋಬಳಿ ಬೆಂಗಳೂರು ದಕ್ಷಿಣ ತಾಲ್ಲೂಕು ಕರ್ನಾಟಕ–560059, ಮತ್ತು ಈ ಆಸ್ತಿಯು ರಾಮೇಶ್ವರಪ್ಪ ರವರ ಹೆಸರಿನಲ್ಲಿದೆ, ವಿಸ್ತೀರ್ಣ 8930 ಚದರ ಅಡಿ ಮತ್ತು **ಚಕ್ಕುಬಂದಿ : ಪೂರ್ವಕ್ಕೆ : ಮಾದಯ್ಯ ರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ : ಪ್ರದೀಪ್ ರವರಿಗೆ ಸೇರಿದ ಅದೇ ಸರ್ವೆ ನಂ 21/2, ಉತ್ತರಕ್ಕೆ : ಸೋಮಶೇಖರ್ ರವರಿಗೆ ಸೇರಿದೆ ಮತ್ತು ದಕ್ಷಿಣಕ್ಕೆ : ರಸ್ತೆ.**	12.06.2024 ಬೆಳಿಗ್ಗೆ 10.30 ರಿಂದ 11.00 ರವರೆಗೆ	ಮೀಸಲು ಬೆಲೆ ರೂ.2,99,00,000/– ಇಎಂಡಿ ರೂ.29,90,000/– (ದಿನಾಂಕ: 10.06.2024 ರಂದು ಮಧ್ಯಾಹ್ನ 3.00 ಗಂಟೆಯ ವರೆಗೆ)	1. ರೂ. 2,00,000/– 2. ಖಾತೆ ಸಂಖ್ಯೆ 209272434 IFSC: CNRB0006298 ಎನ್ಕಂಬರೆನ್ಸ್ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ತಿಳಿದಿಲ್ಲ

ಇತರ ನಿಯಮಗಳು ಮತ್ತು ನಿಬಂಧನೆಗಳು

ಎ) ವೆಬ್‌ಸೈಟ್ **https://www.indianbankseauction.com** ನಲ್ಲಿ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" (ವಿದ್ಯುನ್ಮಾನ ಹರಾಜು) ಮೂಲಕ ಮಾತ್ರ ಹರಾಜು ಮಾರಾಟ ಬಿಡ್ಡರ್‌ಗಳು ಇ–ಹರಾಜು ಕಲಾಪಗಳಲ್ಲಿ ಭಾಗವಹಿಸುವ ಮುನ್ನ, ಹರಾಜು ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ ಅನ್ನು ನೋಡಲು ಸೂಚಿಸಲಾಗಿದೆ.

ಬಿ) ಅಧಿಕೃತ ಅಧಿಕಾರಿಯೊಂದಿಗೆ ಪೂರ್ವ ನೇಮಕಾತಿಯೊಂದಿಗೆ ಆಸ್ತಿಯನ್ನು ಪರಿಶೀಲಿಸಬಹುದು.

ಸಿ) ಆಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಕೊಡುಗೆಯನ್ನು ಇನ್ನಷ್ಟು ಸುಧಾರಿಸಬಹುದು.

ಡಿ) ಇಎಂಡಿ 10% ನಷ್ಟು ಮೊತ್ತವನ್ನು **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ಇವರ ಹೆಸರಿಗೆ ಪಡೆದ ಡಿಡಿ ಮೂಲಕ ಅಥವಾ ಆನ್‌ಲೈನ್ ಮೂಲಕ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ ಹಣ ವರ್ಗಾವಣೆ ಮೂಲಕ **ಕೆನರಾ ಬ್ಯಾಂಕ್, ಬೆಂಗಳೂರು, ಅಕೌಂಟ್ ನಂ:209272434, ಹಣ ವರ್ಗಾವಣೆ ಐಎಫ್‌ಎಸ್‌ಸಿ ಕೋಡ್ : CNRB0006298 ಖಾತೆಗೆ** ಹರಾಜಿನ ಇಎಂಡಿ ದಿನಾಂಕ ಮತ್ತು ಸಮಯದ ಮೊದಲು ಅಥವಾ ಮುಂಚಿತವಾಗಿ ಜಮೆ ಮಾಡಬೇಕು. ಆಸ್ತಿಗಳನ್ನು ನಿಗದಿಪಡಿಸಿದ ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ ಮತ್ತು ಬಿಡ್ಡರ್‌ಗಳು ಹರಾಜು ನಡೆಯುತ್ತಿರುವಾಗ ತಮ್ಮ ಆಫರ್‌ಗಳನ್ನು ಹೆಚ್ಚಿಸಬಹುದು.

ಇ) ಆಸಕ್ತ ಬಿಡ್‌ದಾರರು ಮಾನ್ಯವಾದ ಡಿಜಿಟಲ್ ಸಹಿ ಪ್ರಮಾಣಪತ್ರ ಮತ್ತು ಇ–ಮೇಲ್ ವಿಳಾಸವನ್ನು ಹೊಂದಿರಬೇಕು. ಡಿಜಿಟಲ್ ಸಹಿಗೆ ಸಂಬಂಧಿಸಿದಂತೆ ವಿವರಗಳಿಗಾಗಿ ದಯವಿಟ್ಟು ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ **ಮೆ. ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವಿಸ್ ಲಿಮಿಟೆಡ್., ಬೆಂಗಳೂರು. (ದೂ : 9480691777 & 9832952602, e-mail: eauction@ccsl.co.in)**

ಎಫ್) ಇಎಮ್‌ಡಿ ಮೊತ್ತವನ್ನು ಪಾವತಿಸಿದ ನಂತರ, ಉದ್ದೇಶಿತ ಬಿಡ್‌ದಾರರು ಈ ಕೆಳಗಿನ ದಾಖಲೆಗಳ/ವಿವರಗಳ ನಕಲನ್ನು ಇಎಂಡಿ ದಿನಾಂಕ ಮತ್ತು ಸಮಯದ ಮೊದಲು ಅಥವಾ ಮುಂಚಿತವಾಗಿ **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ,** ಅವರಿಗೆ ಬೈಹ್ಯಾಂಡ್ ಸಲ್ಲಿಸಬೇಕು.

(i) ಇಎಂಡಿ ಮೊತ್ತಕ್ಕೆ ಬೇಡಿಕೆ ಡ್ರಾಫ್ಟ್/ಪೇ ಆರ್ಡರ್. RTGS/NEFT ಮೂಲಕ ಪಾವತಿಸಿದರೆ, UTR ಸಂಖ್ಯೆಯೊಂದಿಗೆ ಅದರ ಸ್ವೀಕೃತಿ ರಶೀದಿಯನ್ನು ಪಡೆಯಬಹುದು.

(ii) ಬಿಡ್‌ದಾರರು ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಟ್ಟ ಪಾನ್ ಕಾರ್ಡ್ ಪ್ರತಿಯನ್ನು ಮತ್ತು ಅವನ / ಅವಳ ಗುರುತಿನ ಪುರಾವೆ ಮತ್ತು ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್ ನಂತಹ ನಿವಾಸದ ಪುರಾವೆಗಳನ್ನು ಸಹ ಲಗತ್ತಿಸಬೇಕು. ಆದಾಗ್ಯೂ, ಬಿಡ್ ಮೊತ್ತದ 25% ರ ಬಾಕಿ ಮೊತ್ತವನ್ನು ಪಾವತಿಸುವ ಸಮಯದಲ್ಲಿ ಯಶಸ್ವಿ ಬಿಡ್ಡುದಾರರು ಈ ದಾಖಲೆಗಳನ್ನು ಮೂಲದಲ್ಲಿ ಬ್ಯಾಂಕ್‌ಗೆ ಸಲ್ಲಿಸಬೇಕಾಗುತ್ತದೆ.

iii) ಬಿಡ್ ನಮೂನೆ.

ಜಿ) ಆಸಕ್ತ ಬಿಡ್‌ದಾರರು ತಮ್ಮ ಹೆಸರನ್ನು ಸೇವಾ ಪೂರೈಕೆದಾರರಾದ **ಮೆ. ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವಿಸಸ್ ಲಿಮಿಟೆಡ್ ಬೆಂಗಳೂರು.** ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ಆಸಕ್ತ ಬಿಡ್‌ದಾರರು **ಮೆ. ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವಿಸ್ ಲಿಮಿಟೆಡ್., ಬೆಂಗಳೂರು. ಸಂಪರ್ಕಿಸಬೇಕಾದವರು : (ದೂ: 9480691777 & 9832952602, e-mail: eauction@ccsl.co.in).**

ಹೆಚ್) ವಿಫಲವಾದ ಬಿಡ್‌ದಾರರಿಂದ ಠೇವಣಿ ಮಾಡಿದ ಇಎಮ್‌ಡಿಯನ್ನು ಅವರಿಗೆ ಮರುಪಾವತಿಸಲಾಗುತ್ತದೆ.

ಐ) ಮೇಲೆ ತಿಳಿಸಿದಂತೆ ಮೀಸಲು ಬೆಲೆಯಲ್ಲಿ ಹರಾಜು ಪ್ರಾರಂಭವಾಗುತ್ತದೆ. ಬಿಡ್‌ದಾರರು ತಮ್ಮ ಆಫರ್‌ಗಳನ್ನು **ಮೇಲೆ ತಿಳಿಸಿದ 'ಆನ್‌ಲೈನ್'** ಹರಾಜಿನ ಮುಕ್ತಾಯದ ಮೇಲೆ ಅತಿ ಹೆಚ್ಚು ಬಿಡ್‌ನ್ನು ಮೇಲೆ ತಿಳಿಸಲಾದ ಮೊತ್ತಕಿಂತ(ಮೀಸಲು ಬೆಲೆಗಿಂತ ಹೆಚ್ಚು) ಸಲ್ಲಿಸುವ ಬಿಡ್ಡರ್ ಅನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ಯಶಸ್ವಿ ಬಿಡ್‌ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಭದ್ರತಾ ಸಾಲದಾತರಿಂದ ಅದೇ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

ಜೆ) ಯಶಸ್ವಿಯಾದ ಟೆಂಡರುದಾರರು ಆತನ/ಆಕೆಯ ಪರವಾಗಿ ಟೆಂಡರ್ ತೀರ್ಮಾನದ ನಂತರ ಅದೇ ದಿನ ತಕ್ಷಣ ಮಾರಾಟ ಬೆಲೆಯ 25% ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು. ಬಾಕಿ ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಯಶಸ್ವಿಯಾದ ಟೆಂಡರುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಠೇವಣಿ ಹಣವನ್ನು ಅಧಿಕೃತ ಅಧಿಕಾರಿ ಇವರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಕೆ) **ರೂ.50 ಲಕ್ಷಗಳು (ಐವತ್ತು ಲಕ್ಷ ರೂಪಾಯಿಗಳು)** ಮತ್ತು ಅದಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕಾಗಿ, ಯಶಸ್ವಿ ಬಿಡ್‌ದಾರರು ಮಾರಾಟದ ಆದಾಯದ ಮೇಲೆ ದರದಲ್ಲಿ ಟಿಡಿಎಸ್ ಅನ್ನು ಕಡಿತಗೊಳಿಸಬೇಕು ಮತ್ತು ಟಿಡಿಎಸ್ ಪ್ರಮಾಣಪತ್ರದ ಮೂಲ ರಸೀದಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.

ಎಲ್) ಎಲ್ಲಾ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ ಮತ್ತು ಜಿಎಸ್‌ಟಿ ರಿಜಿಸ್ಟ್ರೇಷನ್ ಚಾರ್ಜ್‌ಗಳು ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಇತ್ಯಾದಿಯಂತಹ ಎಲ್ಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿಬಿಡ್ಡರ್‌ಗಳೇ ಭರಿಸಬೇಕು.

ಎಂ) ಯಾವುದೇ ಕಾರಣವನ್ನು ನೀಡದೆ ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ.

ಎನ್) ಇಂಟರ್ನೆಟ್‌ಗೆ ಪ್ರವೇಶವನ್ನು ಹೊಂದಿರದ ಆದರೆ ಇ–ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಬಿಡ್‌ದಾರರು ಇದ್ದರೆ, ಅವರು ಸಂಬಂಧಪಟ್ಟ ಸರ್ಕಲ್ ಆಫೀಸ್ ಅಥವಾ ಕೆನರಾ ಬ್ಯಾಂಕ್ ಎಆರ್‌ಎಂ ಶಾಖೆ ॥ ಇವರನ್ನು ಸಂಪರ್ಕಿಸಬಹುದು, ಅನುಕೂಲಕರ ಕೇಂದ್ರವಾಗಿ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಾರೆ.

ಒ) ಬಿಡ್ಡುದಾರರು ಶೀರ್ಷಿಕೆ, ವ್ಯಾಪ್ತಿ, ಪ್ರದೇಶದ ಬಾಕಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಆಸ್ತಿಯ ಸರಿಯಾದ ಶೀರ್ಷಿಕೆ ಮತ್ತು ಭೌತಿಕ ಪರಿಶೀಲನೆಯನ್ನು ಮಾಡಬೇಕು. ಬಿಡ್ ಸಲ್ಲಿಸಿದ ನಂತರ ಯಾವುದೇ ಕ್ಲೈಮ್‌ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

ಪಿ) **ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ರಂಜನ್ ಕುಮಾರ್, ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, (080–25310181), cb6298@canarabank.com ಅಥವಾ ಸೇವಾ ಪೂರೈಕೆದಾರರು ಮೆ. ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವಿಸ್ ಲಿಮಿಟೆಡ್., ಇ–ಮೇಲ್: eauction@ccsl.co.in ಸಂಪರ್ಕ ವ್ಯಕ್ತಿಗಳು ಮತ್ತು ಸಂಖ್ಯೆಗಳು:– 9480691777 & 9832952602.**

ವಿಶೇಷ ಸೂಚನೆ / ಎಚ್ಚರಿಕೆ:

ಕೊನೆಯ ನಿಮಿಷಗಳು/ಸೆಕೆಂಡುಗಳಲ್ಲಿ ಬಿಡ್ಡಿಂಗ್ ಅನ್ನು ತಮ್ಮ ಸ್ವಂತ ಆಸಕ್ತಿಯಿಂದ ಬಿಡ್‌ದಾರರು ತಪ್ಪಿಸಬೇಕು. ಅಂತಹ ಸಂದರ್ಭಗಳಲ್ಲಿ ಯಾವುದೇ ತೊಂದರೆ ಅಥವಾ ವೈಫಲ್ಯ (ಇಂಟರ್ನೆಟ್ ವೈಫಲ್ಯ, ವಿದ್ಯುಚ್ಛಕ್ತಿ ವೈಫಲ್ಯ, ಇತ್ಯಾದಿ) ಉಂಟಾದಲ್ಲಿ ಗುತ್ತಿಗೆದಾರರು ಅಥವಾ ಮಾರಾಟಗಾರರ ಭಾಗವಾಗಿ ಕೆನರಾ ಬ್ಯಾಂಕ್ ಅಥವಾ ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಅನಿಶ್ಚಿತ ಪರಿಸ್ಥಿತಿಯನ್ನು ತಡೆಗಟ್ಟಲು, ವಿದ್ಯುತ್ ಸರಬರಾಜು ಮತ್ತು ಅಗತ್ಯವಿರುವ ಎಲ್ಲ ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಮಾಡಲು ಬಿಡ್‌ದಾರರನ್ನು ಕೋರಲಾಗುತ್ತದೆ. ಆದ್ದರಿಂದ ಅವರು ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಸಮರ್ಥರಾಗಿದ್ದಾರೆ ಮತ್ತು ಯಶಸ್ವಿಯಾಗಿ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

ದಿನಾಂಕ : 07.05.2024 – 08.05.2024
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಪ್ರಸಕ್ತ ಸಾಲಿನಿಂದ 3 ವರ್ಷ ಪದವಿ

ಈಗಾಗಲೇ ಪ್ರವೇಶ ಪಡೆದವರಿಗಷ್ಟೇ ಆನರ್ಸ್ ಪದವಿ: ಉನ್ನತ ಶಿಕ್ಷಣ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗದ ಮಧ್ಯಂತರ ವರದಿ ಅನುಷ್ಠಾನಕ್ಕೆ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ಆಯೋಗದ ಶಿಫಾರಸಿನಂತೆ 2024–25ನೇ ಸಾಲಿನಿಂದ ನಾಲ್ಕು ವರ್ಷಗಳ ಪದವಿ ರದ್ದು ಮಾಡಿದೆ.

ರಾಷ್ಟ್ರೀಯ ಶಿಕ್ಷಣ ನೀತಿ–2020 ರಾಜ್ಯದಲ್ಲಿ ಅನುಷ್ಠಾನಗೊಂಡ ನಂತರ ಪದವಿ ತರಗತಿಗಳಿಗೆ ಪ್ರವೇಶ ಪಡೆದು ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಇಚ್ಛಿಸಿದಲ್ಲಿ ನಾಲ್ಕು ವರ್ಷಗಳ ಆನರ್ಸ್ ಪದವಿಗೆ ಪ್ರವೇಶ ಪಡೆಯಬಹುದು. ವಿದ್ಯಾರ್ಥಿಗಳ ಬೇಡಿಕೆ, ಕಾಲೇಜುಗಳ ಮೂಲಸೌಕರ್ಯಗಳನ್ನು ಪರಿಗಣಿಸಿ, ಅವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಾಲ್ಕನೇ ವರ್ಷದ ಪದವಿಗೆ ಆಸಕ್ತರನ್ನು ಸೂಕ್ತ ಕಾಲೇಜು ಅಥವಾ ಕೇಂದ್ರಗಳನ್ನು ವಿಶ್ವವಿದ್ಯಾಲಯಗಳು ಆಯ್ಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಲ್ಲಿ ಕೋರ್ಸ್ ಲಭ್ಯವಿಲ್ಲದಿದ್ದರೆ ಸಮೀಪದ ಕಾಲೇಜುಗಳಲ್ಲಿ ಪ್ರವೇಶ ನೀಡಬೇಕು ಎಂದು ಸೂಚಿಸಲಾಗಿದೆ.

> ಹಿಂದಿನ ಬಿಜೆಪಿ ಸರ್ಕಾರ ಸಮಾಲೋಚನೆ ನಡೆಸದೆ ನಾಲ್ಕು ವರ್ಷದ ಪದವಿ ಜಾರಿಗೆ ತಂದಿತ್ತು. ಇದನ್ನು ರಾಜ್ಯದ ವಿದ್ಯಾರ್ಥಿ ಸಮೂಹ ವಿರೋಧಿಸಿತ್ತು. ಈಗ ಮತ್ತೆ ಜನಪರ ಶಿಕ್ಷಣ ನೀತಿ ಜಾರಿಯಾಗಿದೆ
>
> **ಅಜಯ್ ಕಾಮತ್**, ರಾಜ್ಯ ಕಾರ್ಯದರ್ಶಿ, ಎಐಡಿಎಸ್‌ಒ

2021–22ನೇ ಸಾಲಿನಿಂದ 2023–24ರವರೆಗೆ ಪ್ರವೇಶ ಪಡೆದವರು ನಾಲ್ಕು ವರ್ಷಗಳ ಆನರ್ಸ್ ಪದವಿ ಪಡೆದರೆ ಅಂಥವರು ಒಂದು ವರ್ಷದ ಏಕೀಕೃತ ಸ್ನಾತಕೋತ್ತರ ಪದವಿ ಮಾಡಬಹುದು. ಮೂರು ವರ್ಷದ ಪದವಿಗೆ ನಿರ್ಗಮಿಸಲು ಬಯಸುವವರು ಹಿಂದಿನಂತೆ ಎರಡು ವರ್ಷಗಳ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಬಹುದು.

2021–22ನೇ ಸಾಲಿನಿಂದ ಹಿಂದೆ ಇದ್ದ ರೀತಿಯೇ 2024–25ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ನಿಯಮಗಳು ಇರಲಿವೆ. ಮೂರು ವಿಷಯಗಳ ಸಂಯೋಜನೆಯನ್ನೇ ಮುಂದುವರಿಸಲಾಗುತ್ತಿದೆ (ಉದಾ: ಕಲಾ ವಿಭಾಗದಲ್ಲಿ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಯೋಜನೆ ಇತ್ಯಾದಿ). 5 ಮತ್ತು 6ನೇ ಸೆಮಿಸ್ಟರ್‌ನಲ್ಲಿ ಒಂದು ವಿಷಯದಲ್ಲಿ ಪ್ರಾವೀಣ್ಯ ಪಡೆಯಲು ಅವಕಾಶ ನೀಡಲಾಗಿದೆ. ಪದವಿ ಹಂತದ ಪಠ್ಯಕ್ರಮ ರೂಪಿಸುವ ಹೊಣೆಗಾರಿಕೆಯನ್ನು ಹಿಂದೆ ಇದ್ದಂತೆ ಆಯಾ ವಿಶ್ವವಿದ್ಯಾಲಯಗಳ ವಿಷಯವಾರು ಅಧ್ಯಯನ ಮಂಡಳಿಗಳಿಗೆ ನೀಡಲಾಗಿದೆ. ವಿಷಯವಾರು ಸಂಯೋಜನೆ, ಪ್ರವೇಶ ಪ್ರಕ್ರಿಯೆ ಮಾಹಿತಿಯನ್ನು ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಪಡೆಯಬೇಕು.

2024–25ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ನಾಲ್ಕು ವರ್ಷಗಳ ಪದವಿ ರದ್ದು ಮಾಡಿದ್ದರೂ, ಮಧ್ಯಂತರದಲ್ಲೇ ಪದವಿ ತೊರೆದರೆ ಅವರು ವ್ಯಾಸಂಗ ಮಾಡಿದ ವರ್ಷಗಳ ಲೆಕ್ಕದಲ್ಲಿ ಕೋರ್ಸ್ ಪ್ರಮಾಣಪತ್ರ, ಡಿಪ್ಲೊಮಾ, ಪದವಿ ನೀಡುವ ಬಹು ಪ್ರವೇಶ–ನಿರ್ಗಮನ ಪದ್ಧತಿಯನ್ನು ರದ್ದು ಮಾಡಿಲ್ಲ. ಆಯೋಗ ಅಂತಿಮ ವರದಿ ಸಲ್ಲಿಸಿದ ನಂತರ ತೀರ್ಮಾನ ತೆಗೆದುಕೊಳ್ಳುವುದಾಗಿ ಉನ್ನತ ಶಿಕ್ಷಣ ಇಲಾಖೆ ಹೇಳಿದೆ.

ಸಿಇಟಿ: ಆರ್‌ಡಿ ಸಂಖ್ಯೆ ತಿದ್ದುಪಡಿಗೆ ಅವಕಾಶ

ಬೆಂಗಳೂರು: ಸಿಇಟಿ–2024ರ ಆನ್‌ಲೈನ್ ಅರ್ಜಿಯಲ್ಲಿ ಕಂದಾಯ ದಾಖಲೆ (ಆರ್‌ಡಿ) ಸಂಖ್ಯೆ ಹಾಗೂ ಇನ್ನಿತರ ಕ್ಲೇಮುಗಳ ತಿದ್ದುಪಡಿಗೆ ಮೇ 9ರ ಬೆಳಿಗ್ಗೆ 11ರಿಂದ ಮೇ 15ರ ರಾತ್ರಿ 11.59 ರವರೆಗೆ ಅಂತಿಮ ಅವಕಾಶ ನೀಡಲಾಗಿದೆ.

ಅರ್ಹತಾ ಕಂಡಿಕೆ, ಪ್ರವರ್ಗ ಮೀಸಲಾತಿ, ವಾರ್ಷಿಕ ಆದಾಯ, ಹೈದರಾಬಾದ್ ಕರ್ನಾಟಕ ಮೀಸಲಾತಿ 371(ಜೆ), ಕನ್ನಡ ಮಾಧ್ಯಮ, ಗ್ರಾಮೀಣ ಮಾಧ್ಯಮ, ವಿಶೇಷ ಪ್ರವರ್ಗಕ್ಕೆ ಸೇರಿರುವ ತಾವು ಸಲ್ಲಿಸಿರುವ ಅರ್ಜಿಯಲ್ಲಿ ಮಾಡಿರುವ ಕ್ಲೇಮುಗಳನ್ನು ಅಭ್ಯರ್ಥಿಗಳು ಪರಿಶೀಲಿಸಿ, ಅಗತ್ಯವಿದ್ದರೆ ತಿದ್ದುಪಡಿ ಮಾಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಅಭ್ಯರ್ಥಿಗಳು ಎಚ್ಚರದಿಂದ ಸರಿಯಾದ ಆರ್‌ಡಿ ಸಂಖ್ಯೆಯನ್ನು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಬೇಕು. ಆರ್‌ಡಿ ಸಂಬಂಧಿತ ಎಲ್ಲ ಪ್ರಮಾಣ ಪತ್ರಗಳಿಗೆ ಇದು ಅನ್ವಯಿಸಲಿದ್ದು, ಆರ್‌ಡಿ ಸಂಖ್ಯೆ ತಪ್ಪಾಗಿದ್ದಲ್ಲಿ, ಸಂಬಂಧಿತ ಮೀಸಲಾತಿಯ ಅರ್ಹತೆ ಲಭ್ಯವಾಗುವುದಿಲ್ಲ. ವೈದ್ಯಕೀಯ, ದಂತ ವೈದ್ಯಕೀಯ ಪ್ರವೇಶಾತಿಗೂ ಅನ್ವಯಿಸುವಂತೆ ಅಲ್ಪಸಂಖ್ಯಾತ ಮೀಸಲಾತಿಗಳನ್ನೂ ಕ್ಲೇಮ್ ಮಾಡಬಹುದು ಎಂದು ಹೇಳಿದೆ.

ಜೂನ್ 1ರಿಂದ ಪದವಿ ಪೂರ್ವ ಕಾಲೇಜುಗಳು ಆರಂಭ

ಬೆಂಗಳೂರು: ರಾಜ್ಯದ ಎಲ್ಲ ಪದವಿಪೂರ್ವ ಕಾಲೇಜುಗಳು ಜೂನ್ 1ರಿಂದ ಆರಂಭವಾಗಲಿದ್ದು, ಮೇ 13ರಿಂದ ಪ್ರಥಮ ಪಿಯುಸಿಗೆ ಪ್ರವೇಶ ಪ್ರಕ್ರಿಯೆಗಳು ನಡೆಯಲಿವೆ.

ಅಕ್ಟೋಬರ್ 2ರಿಂದ ಅ. 18ರವರೆಗೆ ದಸರಾ ರಜೆ ಇದ್ದು, ಅ.19ರಿಂದ ಮಾರ್ಚ್ 31ರವರೆಗೆ (2025) ಎರಡನೇ ಅವಧಿಯ ತರಗತಿಗಳು ನಡೆಯಲಿವೆ. ಏ.1ರಿಂದ ಬೇಸಿಗೆ ರಜೆ ಘೋಷಿಸಲಾಗಿದೆ. ದಂಡ ಶುಲ್ಕವಿಲ್ಲದೇ ಜೂನ್ 14ರ ಒಳಗೆ ಪ್ರವೇಶ ಪಡೆಯಬಹುದು. ದ್ವಿತೀಯ ಪಿಯು ಸೇರಿದಂತೆ ಜೂನ್ 29ರ ಒಳಗೆ ಎಲ್ಲ ಪ್ರವೇಶ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

ಪ್ರವೇಶ ಶುಲ್ಕಗಳು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಇದ್ದಂತೆ ಮುಂದುವರಿಯಲಿದ್ದು, ಯಾವುದೇ ಬದಲಾವಣೆ ಮಾಡಿಲ್ಲ. ಮಾರ್ಗಸೂಚಿಯಂತೆ ಎಲ್ಲ ಕಾಲೇಜುಗಳು ಮೀಸಲಾತಿ ಅನ್ವಯ ಮೆರಿಟ್ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು ಎಂದು ಪಿಯು ನಿರ್ದೇಶನಾಲಯ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

COMPUTERS

Hardware

USED COMPUTERS FOR SALE
Dual Core/ 2GB Ram / 80GB HDD / 17"LCD Rs.6,000/-
For Qty of 10 No's Rs.5,000/- per system
For Qty of 10 No's. without Monitor Rs.3,000/- per system
For Qty of 30 No's. without Monitor Rs.2,500/- per system
For Qty of 50 No's. without Monitor Rs.2,000/- per system
Core I 3/ 4GB Ram / 250GB HDD / 17"LCD Rs.10,000/-
For Qty of 10 No's. Rs.9,000/- per system
For Qty of 10 No's. without Monitor Rs.7,000/- per system
For Qty of 40 No's. without Monitor Rs.6,000/- per system
LAPTOP
Core I 3/ 4GB Ram / 500GB HDD / Adaptor Rs.12,000/-
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

BUSINESS

Business to Business

Business

WE LOOKING for investment to our Mosquito Repellent and Spray project in Bangalore. Good returns on investment assured. we consider as cofounder of the company . Contact for discussion : 9353420785 / 9900520141

REAL ESTATE SELLING

Residential/ Commercial

Others

FINANCE AGAINST Land & Building Properties Industries Schools Hospitals Projects & NRI Funds. @ 9445672935

RENTAL PROPERTIES

Accommodation Available

House

2BHK FOR Rent Banashankari Vidyapeeta. Vaastu Ground Floor. Vegetarian Brahmins only. Rs. 15,000. 99867-42260/ 99864-94502.

PERSONAL

Change of Name

CHANGE OF NAME
I, **IC-51871H COL V VIJAYA GOPAL** S/o Late **Shri Nagaraj GS Vedapudi,** residing at D-3, DGQA Officers Enclave, JC Nagar PO, Bengaluru-6, have changed my name to **IC-51871H COL VIJAYAGOPAL VEDAPUDI,** forever and for all future purposes vide affidavit before the Notary Public Sri Sivakumara. M.N, Bengaluru. on 18 April 2024

CHANGE OF NAME
I, **BHUVANESHWARI RAJU** Residing at No.1096, 5th Block, 26th Cross, 17th Main, 1st Stage H.B.R. Layout, Bangalore-43 have changed our minor daughter's name from **HASHITA** to **HASHITA KARTHIKEYAN** vide affidavit dated 8.5.2024 before Notary Bhagya Kumari N, Bangalore. Henceforth she shall be known as **HASHITA KARTHIKEYAN** only.

CHANGE OF NAME
I, **A V NAGA HARITHA @ CHINTHAPALLY NAGA HARITHA,** residing at No. B4, Nandana Amrutha, 10th main, 11th Cross, Maruthi Nagar, Malleshpalya, Bangalore- 560075, declare that both the above names pertain to me and Henceforth I shall be known as **A V NAGA HARITHA** vide affidavit dated 07.05.2024 before Notary Sreedharan Nair P.N., Bangalore.

CHANGE OF NAME
I, **KUSUM PRAVEEN** W/o. P PRAVEEN KUMAR R/a Mantri Webcity Tower V 902 Hennur Main Road, Near Big Brewski Nagenahalli Kothanur Post, Bangalore North, Bengaluru-560077, have changed my Name from **KUSUM PRAVEEN KUMAR** to **KUSUM PRAVEEN.** Henceforth, i will be known as **KUSUM PRAVEEN** for all my future Purpose. Vide affidavit dated 8.5.2024 Sworn before Notary Uday Kumar. K. Bengaluru.

CHANGE OF NAME
I, **SUNITA BIRCH** W/o **No. IC-010134M, Lt Col. Raghunath Gopal Shastry** Residing at No. 207, Block-4, Serene Ozone, Kannamangala, Devanahalli, Bangalore-562110, have changed my name from **SUNITA BIRCH** to **SUNITA SHASTRY** vide affidavit dated 07.05.2024 before notary K.Venkateshan, Bangalore.

CHANGE OF NAME
I, **SELVAKUMAR. G** Residing at No.20/21, 13th Cross, Manjunath Nagar, Kalkere, Ramamurthynagar, Bengaluru-560016, have changed my name to **GOVINDASWAMY SELVAKUMAR** vide affidavit dated 8.5.2024 before Notary S.I. Balaguru, Bangalore.

CHANGE OF NAME
I, **BHUVANESHWARI RAJU** Residing at No.1096, 5th Block, 26th Cross, 17th Main, 1st Stage H.B.R. Layout, Bangalore-43 have changed our minor daughter's name from **HASHITA** to **HASHITA KARTHIKEYAN** vide affidavit dated 8.5.2024 before Notary Bhagya Kumari N, Bangalore. Henceforth she shall be known as **HASHITA KARTHIKEYAN** only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನಿಧಾನಗತಿಯಲ್ಲಿದ್ದ ಯೋಜನೆಗೆ ವೇಗ ನೀಡಲು ಬಿಬಿಎಂಪಿ ನಿರ್ಧಾರ

ನಂಬಿಕೆ ನಕ್ಷೆ: ಮಂಜೂರು ಬಳಿಕ ಶುಲ್ಕ

• ಆರ್. ಮಂಜುನಾಥ್

ಬೆಂಗಳೂರು: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಿಧಾನಗತಿಯಲ್ಲಿದ್ದ 'ನಂಬಿಕೆ ನಕ್ಷೆ' ಯೋಜನೆಗೆ ಇದೀಗ ವೇಗ ನೀಡಲು ಬಿಬಿಎಂಪಿ ನಿರ್ಧರಿಸಿದ್ದು, ನಕ್ಷೆ ಮಂಜೂರಾದ ನಂತರವಷ್ಟೇ ಶುಲ್ಕ ಪಾವತಿಸಿಕೊಳ್ಳಲು ಚಿಂತಿಸುತ್ತಿದೆ.

ಬಿಬಿಎಂಪಿ ಕಚೇರಿಗೆ ಹೋಗದೆ 15 ದಿನಗಳಲ್ಲಿ ಕಟ್ಟಡ ನಕ್ಷೆ ಪಡೆಯುವ 'ನಂಬಿಕೆ ನಕ್ಷೆ– ನಿಮ್ಮ ಮನೆ ನಕ್ಷೆ, ನಿಮ್ಮ ಮನೆ ಬಾಗಿಲಿಗೆ' ಯೋಜನೆಗೆ ಮಾರ್ಚ್ 11ರಂದು ಚಾಲನೆ ನೀಡಲಾಗಿತ್ತು. 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿಯ ಈ ಯೋಜನೆಯಲ್ಲಿ 50 ಅಡಿ x 80 ಅಡಿ ಅಳತೆವರೆಗಿನ ಕಟ್ಟಡಗಳಿಗೆ ಸ್ವಯಂ ಚಾಲಿತವಾಗಿ ನಕ್ಷೆ ಸಿಗಲಿದೆ.

ಬಿಬಿಎಂಪಿ ವ್ಯಾಪ್ತಿಯ ರಾಜರಾಜೇಶ್ವರಿ ನಗರ ಹಾಗೂ ದಾಸರಹಳ್ಳಿ ವಲಯದಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಆರಂಭಿಕ ಹಂತದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳಾಗದವು. ನಂತರದ ಕೆಲವೇ ದಿನಗಳಲ್ಲಿ ಲೋಕಸಭಾ ಚುನಾವಣೆ ಘೋಷಣೆಯಾದ್ದರಿಂದ, ಸಿಬ್ಬಂದಿಯೆಲ್ಲ ಚುನಾವಣಾ ಕಾರ್ಯಕ್ಕೆ ನಿಯೋಜಿತರಾದರು. ಹೀಗಾಗಿ, ತಾಂತ್ರಿಕ ಸಮಸ್ಯೆ ನಿವಾರಣೆ ಸಾಧ್ಯವಾಗಲಿಲ್ಲ.



ಜೊತೆಗೆ ಕಂದಾಯ ವಿಭಾಗದ ಸಿಬ್ಬಂದಿ ಚುನಾವಣೆ ಕಾರ್ಯದಲ್ಲೇ ನಿರತರಾಗಿದ್ದರು. ಅವರು ಪರಿಶೀಲನೆ ಮಾಡಲು ಸಾಧ್ಯವಿರಲಿಲ್ಲ. ಇದು ಸ್ವಯಂ ಚಾಲಿತ ವ್ಯವಸ್ಥೆಯಾಗಿದ್ದರಿಂದ ಅವರ ಪರಿಶೀಲನೆ ಇಲ್ಲದೆ ದಿನಕ್ಕೆ ಅನುಗುಣವಾಗಿ ಸ್ವಯಂ ಮಂಜೂರಾಗುತ್ತಿತ್ತು. ಈ ಎಲ್ಲ ಸಮಸ್ಯೆಗಳಿಂದ 'ನಂಬಿಕೆ ನಕ್ಷೆ' ಯೋಜನೆ ಬಹುತೇಕ ಸ್ಥಗಿತಗೊಂಡಿತ್ತು ಎಂದು ಬಿಬಿಎಂಪಿ ನಗರ ಯೋಜನೆ ಅಧಿಕಾರಿಗಳು ಮಾಹಿತಿ ನೀಡಿದರು.

'ನಂಬಿಕೆ ನಕ್ಷೆ' ಯೋಜನೆಗೆ ವೇಗ ನೀಡಲಾಗಿದ್ದು, ರಾಜರಾಜೇಶ್ವರಿನಗರ ಹಾಗೂ ದಾಸರಹಳ್ಳಿ ವಲಯದ ನಾಗರಿಕರು ಕಟ್ಟಡ ನಕ್ಷೆಗೆ ಆನ್‌ಲೈನ್‌ನಲ್ಲೇ ಆರ್ಕಿಟೆಕ್ಟ್ ಅಥವಾ ಎಂಜಿನಿಯರ್‌ಗಳ ಮೂಲಕ ಅರ್ಜಿ ಸಲ್ಲಿಸಬಹುದು. ಈ ಮೊದಲು, ನಿಯಮದಂತೆ ಎಲ್ಲ ದಾಖಲೆಗಳು ಸರಿ ಇದ್ದರೆ ಒಂದು ದಿನದಲ್ಲಿ ತಾತ್ಕಾಲಿಕ ನಕ್ಷೆಯನ್ನು ಅಗತ್ಯ ಶುಲ್ಕ ಪಾವತಿಸಿ ಪಡೆಯಬಹುದಿತ್ತು. ಆದರೆ, ಇದೀಗ, ತಾತ್ಕಾಲಿಕ ನಕ್ಷೆ ಪಡೆಯುವ ಸಂದರ್ಭದಲ್ಲಿ ಕಟ್ಟಡ ನಕ್ಷೆ ಶುಲ್ಕ ಪಾವತಿಸುವಂತಿಲ್ಲ. 15 ದಿನಗಳಲ್ಲಿ ಸ್ವಯಂಚಾಲಿತವಾಗಿ ಕಟ್ಟಡ ನಕ್ಷೆ ಲಭ್ಯವಾಗುತ್ತದೆ. ಆ ಸಂದರ್ಭದಲ್ಲಿ ಶುಲ್ಕ ಪಾವತಿಸಿ, ಕಟ್ಟಡ ನಕ್ಷೆ ಪಡೆದುಕೊಳ್ಳಬಹುದು ಎಂದು ಅಧಿಕಾರಿಗಳು ತಿಳಿಸಿದರು.

ಪ್ರಕ್ರಿಯೆ ಹೇಗೆ?: ಅನುಮತಿ ಹೊಂದಿರುವ ಆರ್ಕಿಟೆಕ್ಟ್‌ಗಳು ಅಥವಾ ಎಂಜಿನಿಯರ್‌ಗಳು, ಮಾಲೀಕರು ಒದಗಿಸುವ ದಾಖಲೆ ಮತ್ತು ಕಟ್ಟಡ ನಕ್ಷೆಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bpas.bbmpgov.in/BPAMSClient4/Default.aspx?TAV-1) ಅಪ್‌ಲೋಡ್ ಮಾಡುತ್ತಾರೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಆನ್‌ಲೈನ್‌ನಲ್ಲೇ ಪರಿಶೀಲಿಸಿ, ಕೆರೆ, ಸರ್ಕಾರಿ ಪ್ರದೇಶಗಳ ಯಾವುದೇ ಬಫರ್ ಝೋನ್‌ನಲ್ಲಿ ಈ ಕಟ್ಟಡ ಬರುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಆಟೊ ಡಿಸಿಆರ್ ಮೂಲಕ ವರದಿ ಸಿದ್ಧಗೊಂಡು, ತಾತ್ಕಾಲಿಕ ನಕ್ಷೆ ಹಾಗೂ ಅನುಮತಿ ಪತ್ರವನ್ನು ನೀಡಲಾಗುತ್ತದೆ.

ನಂತರ ಕಂದಾಯ ಅಧಿಕಾರಿಗಳು, ನಗರ ಯೋಜನೆ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ನಕ್ಷೆ ಮಂಜೂರು ಮಾಡುತ್ತಾರೆ. ದಾಖಲೆಗಳಲ್ಲಿ ಯಾವುದಾದರೂ ಸಮಸ್ಯೆ ಅಥವಾ ತಪ್ಪಿದ್ದರೆ ಬಿಬಿಎಂಪಿ ಕಾಯ್ದೆಯಂತೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. 'ತಾತ್ಕಾಲಿಕ ನಕ್ಷೆ'ಯನ್ನು ರದ್ದುಗೊಳಿಸಿ, ಕಟ್ಟಡ ನಿರ್ಮಿಸದಂತೆ ನಿರ್ಬಂಧಿಸಲಾಗುತ್ತದೆ.

ಎಂಜಿನಿಯರ್‌ಗಳ ನೋಂದಣಿ

'ನಂಬಿಕೆ ನಕ್ಷೆ' ಯೋಜನೆಯಲ್ಲಿ ನಕ್ಷೆ ಅನುಮೋದನೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ, ದಾಖಲೆಗಳ ಪ್ರಾಥಮಿಕ ಪರಿಶೀಲನೆ ನಡೆಸುವ ಬಿಬಿಎಂಪಿಯಿಂದ ಅನುಮತಿ ಪಡೆದಿರುವ ಎಂಜಿನಿಯರ್‌ಗಳು/ ಆರ್ಕಿಟೆಕ್ಟ್‌ಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಈಗ ಸುಮಾರು 20 ಜನರು ನೋಂದಣಿ ಮಾಡಿಕೊಂಡಿದ್ದಾರೆ. ಇವರಲ್ಲದೆ ಇನ್ನಷ್ಟು ಎಂಜಿನಿಯರ್‌ಗಳು/ ಆರ್ಕಿಟೆಕ್ಟ್‌ಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ತಿಳಿಸಿದರು.

ಬಿಬಿಎಂಪಿ ವಿದ್ಯುತ್ ವಿಭಾಗ ರಾತ್ರಿ 8.30ರವರೆಗೂ ಕೆಲಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ವಿದ್ಯುತ್ ವಿಭಾಗದ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳು ರಾತ್ರಿ 8.30ರವರೆಗೂ ಕಾರ್ಯನಿರ್ವಹಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕರ ವಲಯದಿಂದ ದೂರುಗಳು ಬರುತ್ತಿವೆ. ಈ ದೂರುಗಳು ಸಂಜೆ 6ರಿಂದ ರಾತ್ರಿ 9ರವರೆಗೆ ಹೆಚ್ಚು ಬರುತ್ತಿವೆ. ಬೀದಿ ದೀಪಗಳ ನಿರ್ವಹಣೆಗೆ ನಿಯೋಜಿಸಲ್ಪಟ್ಟ ಗುತ್ತಿಗೆದಾರರು ನಿಗದಿಪಡಿಸಲಾದ ಸಮಯಕ್ಕೆ ಅವುಗಳನ್ನು ಸರಿಪಡಿಸದಿರುವುದು ಕಂಡುಬಂದಿದೆ. ಬಿಬಿಎಂಪಿ ವಿದ್ಯುತ್ ವಿಭಾಗದ ಮೇಲುಸ್ತುವಾರಿಯಲ್ಲಿ ಕಾರ್ಯಕ್ಷಮತೆ ಇಲ್ಲದಿರುವುದು ಕಂಡುಬಂದಿದೆ.

ಆದ್ದರಿಂದ, ವಿದ್ಯುತ್ ವಿಭಾಗದ ಕಾರ್ಯ ಅವಧಿಯನ್ನು ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಹಾಗೂ ಸಂಜೆ 5ರಿಂದ ರಾತ್ರಿ 8.30ರವರೆಗೆ ನಿಗದಿಪಡಿಸಲಾಗಿದೆ. ವಿದ್ಯುತ್ ವಿಭಾಗದ ಎಲ್ಲ ಅಧೀಕ್ಷಕ ಎಂಜಿನಿಯರ್, ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಹಾಯಕ/ ಕಿರಿಯ ಎಂಜಿನಿಯರ್, ಗುತ್ತಿಗೆ ಎಂಜಿನಿಯರ್‌ಗಳು ಈ ಅವಧಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದ್ದಾರೆ.

ಮಳೆ: ಮುಂಜಾಗ್ರತಾ ಕ್ರಮಕ್ಕೆ ಸೂಚನೆ

ಬೆಂಗಳೂರು: ನಗರದಲ್ಲಿ ಮಳೆಗಾಲದ ವೇಳೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೆಟ್ರೊ ಕಾಮಗಾರಿ ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಮಳೆ ನೀರಿನ ಸರಾಗ ಹರಿವಿಗೆ ಕ್ರಮ ಕೈಗೊಳ್ಳಬೇಕು. ರಾಜಕಾಲುವೆ ಹಾಗೂ ರಸ್ತೆ ಬದಿ ಚರಂಡಿಗಳಲ್ಲಿ ಹೂಳನ್ನು ತ್ವರಿತಗತಿಯಲ್ಲಿ ತೆರವುಗೊಳಿಸಬೇಕು. ಜೋರು ಮಳೆ ಸಮಯದಲ್ಲಿ ರಸ್ತೆಗಳ ಮೇಲೆ ಹೆಚ್ಚು ನೀರು ನಿಂತು ವಾಹನಗಳ ಸಂಚಾರಕ್ಕೆ ಹೆಚ್ಚು ಸಮಸ್ಯೆಯಾದಂತೆ ನೋಡಿಕೊಳ್ಳಬೇಕು ಎಂದರು.

ಮಳೆ ಸಂದರ್ಭದಲ್ಲಿ ಬಿದ್ದಂತಹ ಮರಗಳು ಹಾಗೂ ರೆಂಬೆ/ ಕೊಂಬೆಗಳನ್ನು ತ್ವರಿತಗತಿಯಲ್ಲಿ ತೆರವುಗೊಳಿಸಲು 28 ತಂಡಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ಹೆಚ್ಚುವರಿಯಾಗಿ 6 ತಂಡ ಗಳನ್ನು ನಿಯೋಜಿಸಲಾಗಿದೆ. ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ವಲಯವಾರು 8 ದ್ವಿಚಕ್ರ ವಾಹನಗಳ ತಂಡಗಳನ್ನು ನಿಯೋಜಿಸಲಾಗುತ್ತಿದೆ ಎಂದು ಹೇಳಿದರು.

ಅಗ್ನಿಶಾಮಕ ಠಾಣೆ ಹಾಗೂ ಎಸ್.ಡಿ.ಆರ್.ಎಫ್ ಇಲಾಖೆಗಳ ಜೊತೆ ಆಯಾ ವಲಯ ಅಧಿಕಾರಿಗಳು ಸಂಪರ್ಕ ದಲ್ಲಿರಬೇಕು. ಬೆಸ್ಕಾಂ, ಜಲಮಂಡಳಿ ಸೇರಿದಂತೆ ಇನ್ನಿತರೆ ಇಲಾಖೆಗಳನ್ನು ಒಳಗೊಂಡಂತೆ ಆಯಾ ವಲಯದ ಉಪ ವಿಭಾಗವಾರು ವ್ಯಾಟ್ಸ್‌ಆ್ಯಪ್ ಗ್ರೂಪ್ ರಚಿಸಿಕೊಂಡು, ಆ ಮೂಲಕ ಬಂದಂತಹ ದೂರು, ಸಮಸ್ಯೆಗಳನ್ನು ಕೂಡಲೇ ಇತ್ಯರ್ಥಪಡಿಸಬೇಕೆಂದು ಸೂಚಿಸಿದರು.

ಕೆಪಿಸಿಎಲ್ ನೇಮಕಾತಿ: ಅಂಕಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಸೇರಿದಂತೆ 622 ಹುದ್ದೆಗಳು ಹಾಗೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (ಕೆಎಸ್‌ಎಫ್‌ಸಿ) 41 ಹುದ್ದೆಗಳ ನೇಮಕಾತಿಯ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದೆ.

ಪ್ರತಿ ತಪ್ಪು ಉತ್ತರಕ್ಕೆ 1/3ರಷ್ಟು ನಕಾರಾತ್ಮಕ ಅಂಕ ಕಡಿತ ಮಾಡಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ಮೇ 15ರ ಒಳಗೆ ಇ-ಮೇಲ್ kea2023exam@gmail.comಗೆ ಕಳುಹಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.







1. ಶ್ವಾನಕ್ಕೂ ತಂಪು... ಬೆಂಗಳೂರು ನಗರದ ಕಸ್ತೂರಬಾ ರಸ್ತೆಯಲ್ಲಿ ಬುಧವಾರ ಸಂಜೆ ಯುವಕ, ಯುವತಿ ನಾಯಿಯೊಂದಿಗೆ ಮಳೆಯಲ್ಲೇ ಸಾಗಿದರು ಚಿತ್ರ / ರಂಜು ಪಿ. 2. ಬ್ರಿಗೇಡ್ ಮತ್ತು ರೆಸಿಡೆನ್ಸಿ ರಸ್ತೆಯ ಜಂಕ್ಷನ್‌ನಲ್ಲಿ ಬಿರುಸಿನ ಮಳೆಯಲ್ಲಿ ಜನರು ಕೊಡೆ ಹಿಡಿದು ಬಸ್ಸಿಗಾಗಿ ಕಾಯುತ್ತಿರುವುದು ಕಂಡುಬಂತು 3. ದಾಬಸ್‌ಪೇಟೆ ಸಮೀಪದ ತಿಮ್ಮಪ್ಪನ ಪಾಳ್ಯದಲ್ಲಿ ಭಾರಿ ಗಾಳಿಯಿಂದ ಮುರಿದುಬಿದ್ದಿರುವ ಹುಣಸೆ ಮರ

ರಾಜಧಾನಿಯಲ್ಲಿ ನೆಲಕ್ಕುರುಳಿದ ಮರಗಳು; ಹಲವು ರಸ್ತೆಗಳು ಜಲಾವೃತ; ಕೆಲಕಾಲ ಸಂಚಾರ ಅಸ್ತವ್ಯಸ್ತ

ವರ್ಷಧಾರೆ: ಕೊಂಚ ತಣಿದ ಬಿಸಿಲ ಧಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಒಂದು ದಿನ ಬಿಡುವು ನೀಡಿದ್ದ ಮಳೆ, ಬುಧವಾರ ಸಂಜೆ ಬಹುತೇಕ ಪ್ರದೇಶಗಳಲ್ಲಿ ಬಿರುಗಾಳಿ ಸಹಿತ ಉತ್ತಮವಾಗಿ ಸುರಿಯಿತು. ಕೆಲವು ಪ್ರದೇಶಗಳಲ್ಲಿ ತಡರಾತ್ರಿಯವರೆಗೂ ತುಂತುರು ಮಳೆಯಾಯಿತು.

ಸೋಮವಾರ ಸುರಿದ ಮಳೆಯಿಂದ ನಗರದಲ್ಲಿ ತಂಪನೆ ವಾತಾವರಣವಿತ್ತು. ಆದರೆ, ಮಂಗಳವಾರ ಹಾಗೂ ಬುಧವಾರ ತಾಪಮಾನ ಹೆಚ್ಚಾಗಿತ್ತು. ಬುಧವಾರ ಸಂಜೆಯ ಮಳೆ ಉಷ್ಣಾಂಶವನ್ನು ಕಡಿಮೆ ಮಾಡಿತು.

ಬುಧವಾರ ಸಂಜೆ ಬಿರುಗಾಳಿ, ಮಿಂಚು ಹಾಗೂ ಗುಡುಗು ಸಹಿತ ಮಳೆ ಸುರಿದಿದ್ದರಿಂದ ಹಲವು ಮರಗಳು, ಕೊಂಬೆಗಳು ನೆಲಕ್ಕುರುಳಿದವು. ಮಳೆ ನೀರು ಚರಂಡಿಗೆ ಸರಾಗವಾಗಿ ಹರಿಯದೆ, ರಸ್ತೆಗಳು ಜಲಾವೃತಗೊಂಡಿದ್ದವು.

ದೊಡ್ಡಬಿದರಕಲ್ಲು, ರಾಜರಾಜೇಶ್ವರಿನಗರ, ನಾಯಂಡಹಳ್ಳಿ ಸುತ್ತಮುತ್ತ ಅತಿಹೆಚ್ಚು ಮಳೆಯಾಗಿದ್ದರೆ, ರಾಜಮಹಲ್ ಗುಟ್ಟಹಳ್ಳಿ, ಬಾಣಸವಾಡಿ, ಕಮ್ಮನಹಳ್ಳಿ, ಚೌಡೇಶ್ವರಿನಗರ, ಹೊಯ್ಸಳನಗರಗಳಲ್ಲಿ ಉತ್ತಮ ಮಳೆಯಾಗಿದೆ.

ನಾಯಂಡಹಳ್ಳಿ ಜಂಕ್ಷನ್‌ನಲ್ಲಿ ರಸ್ತೆಯಲ್ಲಿ ಮಳೆ ನೀರು ತುಂಬಿದ್ದರಿಂದ ಬಿಎಂಟಿಸಿ ಬಸ್‌ಗಳು, ಕಾರುಗಳು ಹಾಗೂ ದ್ವಿಚಕ್ರ ವಾಹನಗಳು ಸಿಲುಕಿಕೊಂಡು ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಓಲ್ಡ್ ತರಗುಪೇಟೆ, ಕೆ.ಆರ್. ಮಾರುಕಟ್ಟೆ ಸುತ್ತಮುತ್ತಲಿನ ರಸ್ತೆಗಳಲ್ಲಿ ನೀರು ತುಂಬಿದ್ದರಿಂದ ಮೈಸೂರು ರಸ್ತೆ ಕಡೆಗೆ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ಯಲಹಂಕ ಉಪನಗರದ ಉನ್ನಿಕೃಷ್ಣನ್ ರಸ್ತೆಯಲ್ಲಿ ನೀರು ನಿಂತಿದ್ದರಿಂದ ಜಾಲಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಜಯಮಹಲ್ ಬಳಿಯ ರೈಲ್ವೆ ಕೆಳಸೇತುವೆ, ಜಯಮಹಲ್ ಮುಖ್ಯರಸ್ತೆ, ಹೆಬ್ಬಾಳ ವೃತ್ತ, ಹೆಬ್ಬಾಳ ಮೇಲ್ಸೇತುವೆ ಇಳಿಜಾರು, ಎನ್‌ಜಿಇಎಫ್ ಸಿಗ್ನಲ್‌ಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು.

152 ಮರ–ಕೊಂಬೆ ಧರೆಗೆ: ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆಯಲ್ಲಿ ಮರ ಹಾಗೂ ವಿದ್ಯುತ್ ಕಂಬ ಬಿದ್ದು ಆಟೊ ಜಖಂಗೊಂಡಿತು. ಚಾಲಕ, ಪ್ರಯಾಣಿಕರು ಪಾರಾಗಿದ್ದಾರೆ. ಬ್ಯಾಡರಹಳ್ಳಿ ಪೊಲೀಸ್ ಠಾಣೆ, ಸಿ.ವಿ. ರಾಮನ್‌ನಗರ ರಸ್ತೆ, ಮರಗಳು, ಕೊಂಬೆಗಳು ರಸ್ತೆಗೆ ಉರುಳಿ ಬಿದ್ದವು.

ಬುಧವಾರ ಸುರಿದ ಮಳೆಯಿಂದ ಬಿಬಿಎಂಪಿ ವ್ಯಾಪ್ತಿಯ ಏಳು ವಲಯಗಳಲ್ಲಿ 152 ಮರ/ ಕೊಂಬೆಗಳು ಧರೆಗುರುಳಿವೆ. ಇದರಲ್ಲಿ 40 ಮರ/ ಕೊಂಬೆಗಳನ್ನು ತೆರವು ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆರ್.ಆರ್ ನಗರ ವಲಯದಲ್ಲಿ 70, ಪೂರ್ವದಲ್ಲಿ 30, ಪಶ್ಚಿಮದಲ್ಲಿ 24, ದಕ್ಷಿಣದಲ್ಲಿ 16, ಯಲಹಂಕದಲ್ಲಿ 7, ದಾಸರಹಳ್ಳಿಯಲ್ಲಿ 3, ಬೊಮ್ಮನಹಳ್ಳಿ ವಲಯದಲ್ಲಿ 2 ಮರ/ ಕೊಂಬೆಗಳು ಬಿದ್ದಿವೆ.

ಹೆಚ್ಚು ಮಳೆ ಎಲ್ಲೆಲ್ಲಿ?

ದೊಡ್ಡಬಿದರಕಲ್ಲು	6.6 ಸೆಂ.ಮೀ
ರಾಜರಾಜೇಶ್ವರಿನಗರ	5.15 ಸೆಂ.ಮೀ
ನಾಯಂಡಹಳ್ಳಿ	5.15 ಸೆಂ.ಮೀ
ಮಾರುತಿಮಂದಿರ	4.2 ಸೆಂ.ಮೀ
ಪುಲಕೇಶಿನಗರ	3.8 ಸೆಂ.ಮೀ
ವಿದ್ಯಾಪೀಠ	3.75 ಸೆಂ.ಮೀ
ವಿ. ನಾಗೇನಹಳ್ಳಿ	3.50 ಸೆಂ.ಮೀ
ಕೆಂಗೇರಿ	2.45 ಸೆಂ.ಮೀ
ಗೊಟ್ಟಿಗೆರೆ	2.25 ಸೆಂ.ಮೀ
ಕೊಟ್ಟಿಗೆಪಾಳ್ಯ	2.15 ಸೆಂ.ಮೀ
ಉತ್ತರಹಳ್ಳಿ	2.15 ಸೆಂ.ಮೀ
ಸಂಪಂಗಿರಾಮನಗರ	2 ಸೆಂ.ಮೀ
ಅಂಜನಾಪುರ	2 ಸೆಂ.ಮೀ
ಕುಶಾಲನಗರ	2 ಸೆಂ.ಮೀ
ಹೆಮ್ಮಿಗೆಪುರ	2 ಸೆಂ.ಮೀ

ಹೊಸೂರು ರಸ್ತೆಯಲ್ಲಿ ಬಿರುಸಿನ ಮಳೆಯಲ್ಲೇ ಸಾಗಿದ ವಾಹನ ಸವಾರರು ಚಿತ್ರ/ ಪ್ರಶಾಂತ್ ಎಚ್‌.ಜಿ.

ದಾಬಸ್‌ಪೇಟೆ: ಬಿರುಗಾಳಿ ಮಳೆ

ದಾಬಸ್‌ಪೇಟೆ: ಸೋಂಪುರ ಹೋಬಳಿಯಾದ್ಯಂತ ಬಿರುಗಾಳಿ ಸಹಿತ ಮಳೆಯಾಗಿದ್ದು, ಗಾಳಿಗೆ ವಿದ್ಯುತ್ ಕಂಬಗಳು, ಮರಗಳು ಮುರಿದು ಬಿದ್ದಿವೆ. ಹುಲ್ಲಿನ ಬಣವೆಗಳು ಉರುಳಿವೆ. ಮನೆಗಳ ಚಾವಣಿ ಹಾರಿ ಹೋಗಿವೆ.

ಸಂಜೆ 5.30ರಿಂದ 6.30ರವರೆಗೆ ಮಳೆ ಸುರಿಯಿತು. ಮಳೆಯ ಜೊತೆಗೆ ಗಾಳಿಯು ತೀವ್ರವಾಗಿದ್ದರಿಂದ ಮರಗಳು ಮುರಿದು ಬಿದ್ದವು. ಮಾವಿನ ಕಾಯಿ, ಹಲಸಿನ ಕಾಯಿ ನೆಲಕ್ಕುರುಳಿದವು.

ಗಾಳಿಯ ವೇಗಕ್ಕೆ ತಿಮ್ಮಪ್ಪನ ಪಾಳ್ಯದ ರೈತ ಧನಂಜಯ ಅವರ ಹುಣಸೆ ಮರ, ಹಲಸಿನ ಮರ ನೆಲಕ್ಕೆ ಉರುಳಿವೆ.

ಚನ್ನೋಹಳ್ಳಿಯ ಮೂರ್ತಿ, ರಾಮಯ್ಯ ಅವರ ದನದ ಕೊಟ್ಟಿಗೆಯ ಚಾವಣಿ ಹಾರಿ ಹೋಗಿವೆ. ತ್ಯಾಗರಾಜು ಅವರಿಗೆ ಸೇರಿದ ಆಲದ ಮರ ಬಿದ್ದಿದೆ. ಆರು ತಿಂಗಳಿಂದ ಮಳೆಯಿಲ್ಲದೆ ಕಾದ ಭೂಮಿಗೆ ಈ ಮಳೆಯ ಸಿಂಚನ ತಂಪೆರೆಯಿತು. ರೈತರ ಮೊಗದಲ್ಲಿ ಸಂತಸವನ್ನು ಮೂಡಿಸಿತು.

ಗಾಳಿಗೆ ಉರುಳಿದ ಮರಗಳು

ಆರ್‌.ಆರ್‌.ನಗರದಲ್ಲಿ ಮಳೆಗಾಳಿಗೆ ಉರುಳಿ ಬಿದ್ದ ಮರಗಳು

ರಾಜರಾಜೇಶ್ವರಿನಗರ: ಬಾರಿ ಬಿರುಗಾಳಿ ಮತ್ತು ಮಳೆಗೆ ಆರ್.ಆರ್.ನಗರದ ವಿವಿಧೆಡೆ ಹಲವು ಮರಗಳು ಉರುಳಿಬಿದ್ದಿವೆ. ಕೆಲವು ಕಡೆಗಳಲ್ಲಿ ಮರದ ಕೊಂಬೆಗಳು ಮುರಿದುಬಿದ್ದು, ಸಂಚಾರಕ್ಕೆ ತೊಂದರೆಯುಂಟಾಯಿತು.

ಐಡಿಯಲ್ ಹೋಮ್ಸ್, ಕೃಷ್ಣಪ್ಪ ಲೇಔಟ್, ಎಂಪಿಎಂ ಲೇಔಟ್, ಎನ್‌ಜಿಇಎಫ್ ಲೇಔಟ್, ಮಾಗಡಿ ರಸ್ತೆಯ ಒಕ್ಕಲಿಗರ ಸಂಘದ ಹಾಸ್ಟೆಲ್, ಬಿಇಎಲ್ ಲೇಔಟ್, ಈಸ್ಟ್ ವೆಸ್ಟ್ ಕಾಲೇಜು ರಸ್ತೆ, ಅಮ್ಮ ಆಶ್ರಮ ಬಳಿ ಮರಗಳು ಉರುಳಿಬಿದ್ದಿವೆ. ಕೆಲವು ಕಡೆ ವಿದ್ಯುತ್ ಕಂಬಗಳ ಮೇಲೆ ಮರಗಳು ಉರುಳಿ ಬಿದ್ದಿದ್ದರಿಂದ ವಿದ್ಯುತ್ ಸಮಸ್ಯೆ ಉಂಟಾಗಿತ್ತು. ಬಿಬಿಎಂಪಿ, ಬೆಸ್ಕಾಂ, ಸಂಚಾರ ಪೊಲೀಸ್ ಸಿಬ್ಬಂದಿ ತೆರವು ಕಾರ್ಯ ನಡೆಸಿದರು. ಮರಗಳನ್ನು ತೆರವು ಮಾಡಿ, ವಿದ್ಯುತ್ ಸಮಸ್ಯೆ ಸರಿಪಡಿಸಲಾಯಿತು.

ಕುಸಿದ ಮೆಟ್ರೊ ಕಾಮಗಾರಿಯ ತಡೆಗೋಡೆ: ರಸ್ತೆ ಬಂದ್

ಬೆಂಗಳೂರು: ಕಾಳೇನ ಅಗ್ರಹಾರ–ನಾಗವಾರವನ್ನು ಸಂಪರ್ಕಿಸುವ 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ಪಾಟರಿ ಟೌನ್ ಮೆಟ್ರೊ ನಿಲ್ದಾಣ ಕಾಮಗಾರಿಗಾಗಿ ನಿರ್ಮಿಸಿದ್ದ ತಾತ್ಕಾಲಿಕ ತಡೆಗೋಡೆ ಬುಧವಾರ ಮಳೆಗೆ ಕುಸಿದು ಬಿದ್ದಿದೆ. ಯಾವುದೇ ಪ್ರಾಣಾಪಾಯ ಉಂಟಾಗಿಲ್ಲ.

ಮೆಟ್ರೊ ನಿಲ್ದಾಣ ನಿರ್ಮಾಣಕ್ಕಾಗಿ ಮಣ್ಣು ಅಗೆಯಲು ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಲಾಗಿತ್ತು. ಬುಧವಾರ ಸಂಜೆ 5.45ರ ಹೊತ್ತಿಗೆ ಸುರಿದ ಮಳೆಗೆ ತಡೆ ಕುಸಿದಿದೆ. ಇದರಿಂದ ಬೋರ್ ಬ್ಯಾಂಕ್ ರಸ್ತೆಯ ಒಂದು ಭಾಗಕ್ಕೆ ಹಾನಿಯಾಗಿದೆ. ಹಾಗಾಗಿ ಈ ರಸ್ತೆಯನ್ನು ಮುಚ್ಚಲಾಗಿದೆ. ರಸ್ತೆ ದುರಸ್ತಿಯಾಗುವವರೆಗೆ ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಶೀಘ್ರ ಅಂದ್ರಹಳ್ಳಿ ಕೆರೆಗೂ ನೀರು: ಶಾಸಕ ಎಸ್.ಟಿ.ಸೋಮಶೇಖರ್

ರಾಜರಾಜೇಶ್ವರಿನಗರ: 'ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಹೇರೋಹಳ್ಳಿ ಕೆರೆಗೆ ನೀರು ತುಂಬಿಸುವ ಕೆಲಸ ಪ್ರಾರಂಭ ಮಾಡಲಾಗಿದ್ದು, ಶೀಘ್ರದಲ್ಲೇ ಅಂದ್ರಹಳ್ಳಿ ಕೆರೆಗೂ ನೀರು ಹರಿಸಲಾಗುತ್ತದೆ' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಅವರು ತಿಳಿಸಿದರು.

ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಹೇರೋಹಳ್ಳಿ ಕೆರೆಗೆ ನೀರು ತುಂಬಿಸುವ ಯೋಜನೆ ವೀಕ್ಷಿಸಿದ ಅವರು, 'ವೃಷಾಭವತಿ ರಾಜಕಾಲುವೆಯಿಂದ ನೀರನ್ನು ಶುದ್ಧೀಕರಿಸಿ ಕೆಂಗೇರಿ ಕೆರೆ ತುಂಬಿಸಲಾಗುತ್ತಿದೆ. ಶೀಘ್ರದಲ್ಲಿಯೇ ಗಾಂಧಿನಗರ ಹೊಸಕೆರೆಗೂ ನೀರು ತುಂಬಿಸಲಾಗುವುದು. ಇದರಿಂದ ಬಿಬಿಎಂಪಿ ವ್ಯಾಪ್ತಿಯ ಎಲ್ಲ ಕೊಳವೆ ಬಾವಿಗಳಲ್ಲಿ ಅಂತರ್ಜಲ ವೃದ್ಧಿಯಾಗಿ ನೀರಿನ ಸಮಸ್ಯೆ ಬಗೆಹರಿಯಲಿದೆ ಎಂದರು.

ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್, ಮುಖಂಡರಾದ ವಿ.ರಘು, ಸವಿತಾ, ಗಂಗರಾಜು, ಪ್ರಕಾಶ್, ನಿಖಿಲ್‌ಗೌಡ, ಕೆಂಪಣ್ಣ, ಆದಿತ್ಯ, ರಮೇಶ್ ಇದ್ದರು.

ವಿಮಾನದಲ್ಲಿ ಸಿಗರೇಟ್ ಸೇದಿದ್ದ ಪ್ರಯಾಣಿಕ ಬಂಧನ

ಬೆಂಗಳೂರು: ಹಾರಾಟ ನಡೆಸುತ್ತಿದ್ದ ವಿಮಾನದಲ್ಲಿ ಸಿಗರೇಟ್ ಸೇದಿದ್ದ ಆರೋಪದಡಿ ಮೊಹಮ್ಮದ್ ಅಸ್ಲಾಂ ಎಂಬುವವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಅಸ್ಲಾಂ, ದುಬೈನಿಂದ ಬೆಂಗಳೂರಿಗೆ ವಿಮಾನದಲ್ಲಿ ಇತ್ತೀಚೆಗೆ ಪ್ರಯಾಣಿಸುತ್ತಿದ್ದ. ವಿಮಾನದ ಶೌಚಾಲಯಕ್ಕೆ ಹೋಗಿ ಸಿಗರೇಟ್ ಸೇದುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೊಗೆ ನೋಡಿದ್ದ ಸಿಬ್ಬಂದಿ, ಆರೋಪಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. ನಿಲ್ದಾಣದಲ್ಲಿ ವಿಮಾನ ಇಳಿಯುತ್ತಿದ್ದಂತೆ ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಆರೋಪಿಯನ್ನು ವಶಕ್ಕೆ ಪಡೆದಿದ್ದ ಸಿಬ್ಬಂದಿ ಠಾಣೆಗೆ ಒಪ್ಪಿಸಿದ್ದಾರೆ. ದೂರು ಸಹ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕ ದಂಧೆಗೆ ಕಡಿವಾಣ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸರ್ಕಾರಿ ಶಿಕ್ಷಣ ವ್ಯವಸ್ಥೆ ಹದಗೆಟ್ಟಿದ್ದು, ಬೇಸತ್ತ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಇದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕ ದಂಧೆ ಮಿತಿಮೀರಿದೆ. ಇದಕ್ಕೆ ಸರ್ಕಾರ ಕಡಿವಾಣ ಹಾಕಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೆಹಲಿಯಲ್ಲಿ ಖಾಸಗಿ ಶಾಲೆಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತಿವರ್ಷ ಶೇ 15ರಷ್ಟು ಶುಲ್ಕ ಹೆಚ್ಚಳ ಮಾಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿವೆ. ಆದರೆ, ರಾಜ್ಯದಲ್ಲಿ ಶುಲ್ಕ ನಿಯಂತ್ರಣ ಪ್ರಾಧಿಕಾರ ಇದೆಯಾ ಎನ್ನುವ ಪ್ರಶ್ನೆ ಮೂಡುತ್ತಿದೆ. ಖಾಸಗಿ ಶಾಲೆಗಳಿಗೆ ಶುಲ್ಕ ನಿಗದಿ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ ಎಂದು ಹೈಕೋರ್ಟ್ ಮಹತ್ವದ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರ ಹೈಕೋರ್ಟ್ ಮುಂದೆ ಸಮರ್ಪಕ ವಾದ ಮಂಡಿಸದಿರುವುದೇ ಇದಕ್ಕೆ ಕಾರಣ' ಎಂದು ತಿಳಿಸಿದರು.

BEFORE THE HON'BLE KARNATAKA APPELLATE TRIBUNAL AT BENGALURU (CH-1)

REVENUE APPEAL No. 285/2020

BETWEEN : Prabhavathi Spring Field, Aparments Buyers / Owners Welfare Association Begur Village and Hobli, Bengaluru-560114. ...Appellant

AND : Prabhavathi Developers, And Others ...Respondents

Notice to Respondent No.1(a)

Sri B E Praveen Kumar S/o Ekakharam, R/a No. 122, Hongasandra, Beguru Road, Bengaluru-560168.

Whereas the Appellant has instituted above Appeal against you and others Respondents before the Hon'ble Court (CH-1) At Bengaluru for above Appeal seeking set-aside the order dated 15/06/2015 Bering No-Sa, Kaa, A/BE.u/VI/Co/01/2015-16 passed by The Assistant Executive Engineer, BBMP, Begur Sub-Division, Bengaluru.

You are hereby notified of the above and accordingly Notice to appear in person or through a pleader before this Hon'ble Court (CH-1) Bengaluru **on 10/06/2024 at 11.00 am** to answer the Appeal, failing which the Appeal shall be heard and disposed of ex-parte.

Given under my hand and seal of this Court on the 07th day of May 2024.

By Order of the Court,
ಸಹಾಯಕ ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬೆಂಗಳೂರು.

Advocate for Appellant : **G A K Gowda**
No. 13, 1st Floor, Krishna Gardenia, RMV II Stage, Dolores Colony, Bengaluru-94.

'ಊಟಿಯಲ್ಲಿ ಸಿ.ಎಂ ಪಾರ್ಟಿ': ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬರದಿಂದ ಜನತೆ ಸಂಕಷ್ಟದಲ್ಲಿ ಮುಳುಗಿರುವಾಗ ಊಟಿಯಲ್ಲಿ ಪಾರ್ಟಿ ಮಾಡಿಕೊಂಡು ಮೋಜು ಮಾಡುತ್ತಿರುವ ನಿಮಗೆ ಕನ್ನಡಿಗರ ಬಗ್ಗೆ ಬದ್ಧತೆ ಇದೆಯೇ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

'ಸಿದ್ದರಾಮಯ್ಯ ಅವರೇ ನಿಮ್ಮ ಸರ್ಕಾರದ ಎಡವಟ್ಟುಗಳು, ದುರಾಡಳಿತ ಮತ್ತು ಬೇಜವಾಬ್ದಾರಿಯಿಂದ ರಾಜ್ಯದ ಜನತೆ ಅನುಭವಿಸುತ್ತಿರುವ ಸಂಕಷ್ಟಗಳನ್ನು ಒಮ್ಮೆ ನೆನಪಿಸಿಕೊಳ್ಳಿ. ಮಜಾ ಮಾಡಿಕೊಂಡು ಪ್ರಧಾನಿ ಮೋದಿಯವರ ಬಗ್ಗೆ ಅನಾವಶ್ಯಕ ಟೀಕೆಗಳ ಮೂಲಕ ರಾಜಕೀಯ ಮಾಡುತ್ತಿರುವ ನಿಮಗೆ ನಾಚಿಗೆ ಆಗಬೇಕು' ಎಂದು ಅವರು 'ಎಕ್ಸ್' ಮೂಲಕ ತಿವಿದಿದ್ದಾರೆ.

'ಮೋದಿಯವರು ಒಂದು ರಾಜ್ಯದ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಮಂತ್ರಿಯಾಗಿ ಕಳೆದ 23 ವರ್ಷಗಳಿಂದ ಸತತವಾಗಿ ಸರ್ಕಾರದ ಮುಖ್ಯಸ್ಥರಾಗಿ ಒಂದು ದಿನವೂ ರಜೆ ತೆಗೆದುಕೊಳ್ಳದೇ ಜನರ ಸೇವೆ ಮಾಡುತ್ತಿದ್ದಾರೆ. ಮೋದಿ ಅವರೆಲ್ಲಿ ತಾವೆಲ್ಲಿ' ಎಂದು ಕುಟುಕಿದ್ದಾರೆ.

ದುರಾಡಳಿತಕ್ಕೆ ಇಲ್ಲಿದೆ ಸಾಕ್ಷಿ:

- ಕೇಂದ್ರ ಸರ್ಕಾರದಿಂದ ರೈತರಿಗೆ ಬರ ಪರಿಹಾರ ನೀಡಲು ₹3,454 ಕೋಟಿ ಬಿಡುಗಡೆ ಮಾಡಿ ಎರಡು ವಾರ ಕಳೆದರೂ ಒಂದು ನಯಾಪೈಸೆ ಬರ ಪರಿಹಾರ ರೈತರ ಕೈ ಸೇರಿಲ್ಲ.
- ಹೈನುಗಾರರಿಗೆ ಏಳು ತಿಂಗಳಿಂದ ಬಾಕಿ ಇರುವ ₹700 ಕೋಟಿ ಇನ್ನೂ ಪಾವತಿ ಮಾಡಿಲ್ಲ.
- ತೆಂಗು ಬೆಳೆಗಾರರ ನಷ್ಟದ ಬಗ್ಗೆ ಅಧ್ಯಯನ ನಡೆಸಲು ಇನ್ನೂ ಸಮಿತಿ ರಚಿಸಿಲ್ಲ.
- ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣದ ಜಾಲ ದಿನೇ ದಿನೇ ಹೆಚ್ಚಾಗುತ್ತಿದ್ದರೂ ಇನ್ನೂ ಎಸ್‌ಐಟಿ ರಚನೆ ಮಾಡಿಲ್ಲ.
- ಅಂಗನವಾಡಿಗಳಲ್ಲಿ ಊಟ, ಆರೈಕೆ ಸರಿ ಇಲ್ಲದೆ 2 ಲಕ್ಷಕ್ಕೂ ಹೆಚ್ಚು ಮಕ್ಕಳ ದಾಖಲಾತಿ ಕಡಿಮೆ ಆಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ.
- ಆಂಬುಲೆನ್ಸ್ ಚಾಲಕರಿಗೆ ಮೂರು ತಿಂಗಳಿಂದ ವೇತನ ಪಾವತಿ ಆಗಿಲ್ಲ.
- ಸಿಇಟಿ ಪ್ರಶ್ನೆ ಪತ್ರಿಕೆ ಎಡವಟ್ಟಿನಿಂದ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗಿದ್ದರೂ ತಮಗೆ ಯಾವುದೇ ಚಿಂತೆ ಇಲ್ಲ.
- ಒಂದು ವಾರದೊಳಗೆ ಬಾಕಿ ಬಿಲ್ ಪಾವತಿ ಆಗದಿದ್ದರೆ ಕಾಮಗಾರಿ ಸ್ಥಗಿತಗೊಳಿಸುತ್ತೇವೆ ಎಂದು ಗುತ್ತಿಗೆದಾರರ ಸಂಘದ ಗಡುವು ನೀಡಿದ್ದರೂ ನಿಮ್ಮ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ.

ಆಯತಪ್ಪಿ ಅಗ್ನಿ ಕೊಂಡಕ್ಕೆ ಬಿದ್ದ ಅರ್ಚಕ

ಪ್ರಜಾವಾಣಿ ವಾರ್ತೆ

ಕನಕಪುರ: ಜೋಗಮಾನ ಹೊಸಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದ ಬಸವೇಶ್ವರ ಅಗ್ನಿ ಕೊಂಡೋತ್ಸವದಲ್ಲಿ ಆಯತಪ್ಪಿ ಕೊಂಡಕ್ಕೆ ಬಿದ್ದ ಅರ್ಚಕ ಲಕ್ಷ್ಮಣರಾಜೇ ಅರಸು ಗಾಯಗೊಂಡಿದ್ದಾರೆ. ಅವರನ್ನು ಕನಕಪುರದ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ಗ್ರಾಮಸ್ಥರು ಬೆಳಿಗ್ಗೆ ಗಂಗಾ ಪೂಜೆ ನಂತರ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡದವರೆಗೆ ತಂದಿದ್ದರು. ಕರಗ ಹೊತ್ತ ಅರ್ಚಕ ಜನರ ಹರ್ಷೋದ್ಗಾರ ಕೇಳುತ್ತಿದ್ದಂತೆ ಅಗ್ನಿಕೊಂಡ ಪ್ರವೇಶಿಸಿ ಆಯತಪ್ಪಿ ಬಿದ್ದರು. ಸುತ್ತಲೂ ಇದ್ದ ಜನರು ಅವರನ್ನು ಕೊಂಡದಿಂದ ಹೊರಕ್ಕೆ ತಂದು ರಕ್ಷಿಸಿದರು.

'ಕ್ಯಾಂಪಸ್ ಚಾಲೆಂಜ್' ಬಹುಮಾನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಇಲಾಖೆಯಿಂದ ಅಂತರ್ ವಿಭಾಗೀಯ ಕ್ರೀಡಾ ಉತ್ಸವ 'ಕ್ಯಾಂಪಸ್ ಚಾಲೆಂಜ್' ಹಮ್ಮಿಕೊಂಡಿದ್ದು, ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿ ನಿತೀಶ್ ಕೆ. ಮಾತನಾಡಿ, 'ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳಲ್ಲಿ ಕಲಿಯುವ ಮೂರು–ನಾಲ್ಕು ವರ್ಷಗಳೇ ಅವರ ಮುಂದಿನ 30 ರಿಂದ 40 ವರ್ಷಗಳ ಭವಿಷ್ಯವನ್ನು ನಿರ್ಧರಿಸುತ್ತದೆ' ಎಂದು ತಿಳಿಸಿದರು.

ವಿವಿಧ ಕ್ರೀಡೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಎಂಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವಾಗಿ ₹10,000 ನಗದು ಮತ್ತು ಬಹುಮಾನ ನೀಡಿ ಗೌರವಿಸಲಾಯಿತು.

ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಜೆ. ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್. ಶ್ರೀಧರ್, ವಿದ್ಯಾರ್ಥಿ ವ್ಯವಹಾರಗಳ ಡೀನ್ ವಿ. ಕೃಷ್ಣ, ಕ್ರೀಡಾ ನಿರ್ದೇಶಕ ವಿನಯ್ ಎಂ.ಎಸ್. ಭಾಗವಹಿಸಿದ್ದರು.



ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತರ್ ವಿಭಾಗೀಯ ಕ್ರೀಡಾ ಉತ್ಸವ 'ಕ್ಯಾಂಪಸ್ ಚಾಲೆಂಜ್' ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ನಾಳೆಯಿಂದ ಹೈಲೈಫ್ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಮೇ 10ರಿಂದ 12ರವರೆಗೆ 'ಹೈಲೈಫ್' ಪ್ರದರ್ಶನ ನಡೆಯಲಿದೆ. ಫ್ಯಾಷನ್ ಮತ್ತು ಲೈಫ್ ಸ್ಟೈಲ್ ಉಡುಪು ಹಾಗೂ ಇತರೆ ಉತ್ಪನ್ನಗಳಿಗೆ ಹೈಲೈಫ್ ಪ್ರಸಿದ್ಧಿ ಪಡೆದಿದೆ. ಬೆಂಗಳೂರಿನಲ್ಲಿ ತಾಪಮಾನ ಹೆಚ್ಚುತ್ತಿದೆ. ಹಾಗಾಗಿ, ಗ್ರಾಹಕರು ಬೇಸಿಗೆಯಲ್ಲಿ ತೊಡಲು ಹಿತಕರವಾದ ಉಡುಪುಗಳು ಈ ಪ್ರದರ್ಶನದಲ್ಲಿ ದೊರೆಯಲಿವೆ. ವಧು–ವರರು ಧರಿಸುವ ಬಟ್ಟೆಗಳು, ಅಪರೂಪದ ಆಭರಣಗಳ ಸಂಗ್ರಹವಿದೆ.

ಫ್ಯಾಷನ್ ಪ್ರಿಯರಿಗೆ ವಿಶಿಷ್ಟ ವಸ್ತ್ರಾಭರಣಗಳ ಅತ್ಯುತ್ತಮ ಸಂಗ್ರಹವಿದೆ. ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕೋರಿದೆ.

PUBLIC NOTICE

NOTICE is hereby given to the general public that Mahindra Lifespace Developers Limited ("MLDL"), owner of the property located at Survey No. 149 & 150, situated at Pattandur Agrahara Village, K R Puram Hobli, Bangalore East Taluk, which is more particularly described in the Schedule hereunder written and hereinafter referred to and called as "Schedule Property", is demolishing an old building within the Schedule Property.

The debris & waste generated through the demolition of the old building in the Schedule Property will be transferred to authorized processing center or specific earmarked areas notified by BBMP.

Any person having any claim, demand, charge, lien and interest whatsoever in respect to the demolition of the old building and transfer of debris & waste generated through the demolition of the old building are hereby requested to make the same known in writing to the undersigned within a period of **15 (fifteen) days** from the date of publication hereof, failing which, it shall be presumed that no such claim, demand, charge, lien and interest exists and if it exists, it shall be deemed that the claimant has relinquished such claim, demand, charge, lien and interest and/or waived any right to exercise such claim, demand, charge, lien and interest.

SCHEDULE PROPERTY

All that piece and parcel of land and old building bearing Survey No.149 & 150 situated at Pattandur Village, KR Puram Hobli, Bangalore East Taluk, and bounded by;
EAST : Road;
WEST : Kadugodi plantation boundary;
NORTH : Kadugodi plantation boundary;
and SOUTH : Survey No 151 & 152.
Dated: 09/05/2024

Mr. Nandan Mallya
Mahindra Lifespace Developers Limited
Sy. No. 49 & 50/2, Vajarahalli Village, Holiday Village Road, Off Kanakapura Main Road, Bengaluru – 560062

ರೈತ ಮುಖಂಡರಿಗೆ ಜಲಮಂಡಳಿ ಅಧ್ಯಕ್ಷರ ಭರವಸೆ

ಹೆಸರಘಟ್ಟ ಕೆರೆ ಅಭಿವೃದ್ಧಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಕೆರೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅವರು ರೈತರಿಗೆ ಭರವಸೆ ನೀಡಿದರು.

ಹೆಸರಘಟ್ಟ ಕೆರೆಯನ್ನು ಸಮಗ್ರ ಅಭಿವೃದ್ಧಿಮಾಡುವುದರಿಂದ ಸುತ್ತಮುತ್ತಲಿನ ಗ್ರಾಮಗಳು ಹಾಗೂ ಭವಿಷ್ಯದಲ್ಲಿ ನಗರದ ಹಲವು ಪ್ರದೇಶಗಳಿಗೂ ಅನುಕೂಲವಾಗಲಿದೆ ಎಂದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳೊಂದಿಗೆ ಬುಧವಾರ ಅವರು ಸಭೆ ನಡೆಸಿದರು.

'ಹೆಸರಘಟ್ಟ ಕೆರೆಯಲ್ಲಿ ನೀರಿರುವುದರಿಂದ ಅಕ್ಕಪಕ್ಕದ ಗ್ರಾಮಗಳಿಗೆ ಬಹಳಷ್ಟು ಅನುಕೂಲವಾಗಿದೆ. ಹಲವಾರು ಪ್ರಾಣಿ ಮತ್ತು ಪಕ್ಷಿಗಳು ಕೆರೆಯ ನೀರಿನ ಮೇಲೆ ಅವಲಂಬಿತವಾಗಿವೆ. ಹೀಗಾಗಿ, ಇಲ್ಲಿನ ನೀರನ್ನು ನಗರದ ಇತರೆ ಪ್ರದೇಶಗಳಿಗೆ ಸರಬರಾಜು ಮಾಡುವುದು ಬೇಡ. ಈ ಕೆರೆಗೆ ನೀರು ಬರುವಂತಹ ಪ್ರದೇಶಗಳಲ್ಲಿ ಮಾಲಿನ್ಯವಿದ್ದು, ಅದನ್ನು ತಡೆಯಬೇಕು. ಹೂಳು ತುಂಬಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗುತ್ತಿಲ್ಲ. ಹೆಸರಘಟ್ಟ ಕೆರೆಯನ್ನು ಅಭಿವೃದ್ಧಿಪಡಿಸಬೇಕು' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ ಮನವಿ ಮಾಡಿದರು.

'1894ರಲ್ಲಿ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಉದ್ದೇಶದಿಂದ ಹೆಸರಘಟ್ಟ ಕೆರೆಯನ್ನು ನಿರ್ಮಿಸಲಾಗಿತ್ತು. ಸೋಲದೇವನಹಳ್ಳಿ ಪಂಪಿಂಗ್ ಸ್ಟೇಷನ್‌ನಿಂದ ನಗರಕ್ಕೆ ಸರಬರಾಜು ಮಾಡಲಾಗುತ್ತಿತ್ತು. ದಾಸರಹಳ್ಳಿ ಪ್ರದೇಶದಲ್ಲಿ ನೀರಿನ ಅಭಾವದ ಕಾರಣ, ಹೆಸರಘಟ್ಟ ಕೆರೆಯಿಂದ ಆ ಪ್ರದೇಶಗಳಿಗೆ ನೀರು ಪೂರೈಸುವ ಉದ್ದೇಶವಿತ್ತು. ರೈತ ಸಂಘದ ಪದಾಧಿಕಾರಿಗಳು ನೀರು ಸರಬರಾಜು ಮಾಡುವುದು ಬೇಡ ಎಂದಿದ್ದಾರೆ. ಸರ್ಕಾರದೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ ಎತ್ತಿನಹೊಳೆ ಯೋಜನೆಯ ಮೂಲಕ ಲಭ್ಯವಾಗುವ ನೀರನ್ನು ಈ ಮೂಲಕ ಸರಬರಾಜು ಮಾಡಲು ಸಜ್ಜಾಗುವ ಗುರಿ ನಮ್ಮದಾಗಿದೆ' ಎಂದು ರಾಮ್‌ಪ್ರಸಾತ್ ಹೇಳಿದರು.

ನಗರದಲ್ಲಿ ಸದ್ಯ ಮಳೆ ಬೀಳುತ್ತಿದೆ. ಕಾವೇರಿ 5ನೇ ಹಂತದ ಕಾಮಗಾರಿ ಶೀಘ್ರ ಮುಗಿಯಲಿದ್ದು, ಹೆಚ್ಚಿನ ನೀರು ಲಭ್ಯವಾಗಲಿದೆ. ನೀರಿನ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಹೆಸರಘಟ್ಟ ನೀರನ್ನು ಬಳಸುವ ಮುನ್ನ ರೈತರು ಹಾಗೂ ಸರ್ಕಾರದೊಂದಿಗೆ ಸಮಾಲೋಚನೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ನಂಜುಂಡಪ್ಪ ಕಡತನಮಲೆ, ಸಂಘಟನಾ ಕಾರ್ಯದರ್ಶಿ ಆರ್. ಲೋಕೇಶ್ ಶರ್ಮಾ, ಜಲಮಂಡಳಿಯ ಪ್ರಧಾನ ಮುಖ್ಯ ಎಂಜಿನಿಯರ್ ಸುರೇಶ್ ಉಪಸ್ಥಿತರಿದ್ದರು.

ಹೆಸರಘಟ್ಟ ಪ್ರದೇಶದ ರೈತ ಮುಖಂಡರು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಅವರಿಗೆ ಮನವಿ ಸಲ್ಲಿಸಿದರು

ನಗರದಲ್ಲಿ ಇಂದು

ಶಂಕರ ಜಯಂತಿ, 52ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವ ಸಮಾರಂಭದ ಉದ್ಘಾಟನೆ: ಅತಿಥಿಗಳು: ಅಶೋಕ ಹಾರನಹಳ್ಳಿ, ಅಧ್ಯಕ್ಷತೆ: ಎಂ. ಅನಂತ್, ಸಂಗೀತ ಕಛೇರಿ: ಗಾಯನ: ರುದ್ರಪಟ್ಟಣಂ ಎಸ್. ರಮಾಕಾಂತ, ಪಿಟೀಲು: ಅಚ್ಯುತ್ ರಾವ್, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಖಂಜಿರ: ಸುನಾದ್ ಆನೂರು, ಆಯೋಜನೆ: ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5ರಿಂದ

ಬೇಸಿಗೆ ಮಕ್ಕಳ ಸಂಭ್ರಮ: ಉಪಸ್ಥಿತಿ: ಕೆ.ವಿ. ಮಂಜುನಾಥ್, ದಯಾನಂದ ಪಾಟೀಲ, ಪ್ರಸನ್ನ ಕುಮಾರ್, ಮಾರ್ಗದರ್ಶನ: ಕೆ.ವಿ. ನಾಗರಾಜಮೂರ್ತಿ, ಶಿಬಿರದ ನಿರ್ದೇಶಕರು: ಸೂರ್ಯಕುಮಾರಿ, ಮಲ್ಲಿಕಾರ್ಜುನಗೌಡ, ಆಯೋಜನೆ ಮತ್ತು ಸ್ಥಳ: ಅಲ್ಲಮ ಕಲಾಶಾಲೆ, ಕನ್ನಲ್ಲಿ, ಸಂಜೆ 5.30

ಸಿದ್ಧಿ ವಿನಾಯಕನ ಮೂರ್ತಿ ಪ್ರತಿಷ್ಠಾಪನ ಮಹೋತ್ಸವ: ಗಂಗೆ ಪೂಜೆ, ಗುರು ಪ್ರಾರ್ಥನೆ ಮಹಾಸಂಕಲ್ಪ, ಗಣಪತಿ ಪೂಜೆ, ಪುಣ್ಯಾಹವಾಚನ, ಭೂಮಿ ಪೂಜೆ, ಅಂಕುರಾರ್ಪಣ ಪೂಜೆ, ರಕ್ಷಾ ಬಂಧನ, ವಾಸ್ತು ಪೂಜೆ, ವಾಸ್ತು ಹೋಮ, ಅಷ್ಟಬಲಿ ಪೂಜೆ, ದೇವರಿಗೆ ಪುಷ್ಪ ದಿವಸ, ಅಷ್ಟ ಬಂಧನ ವಿಧಿ, ಆಯೋಜನೆ: ಸಿದ್ಧಿವಿನಾಯಕ ಸೇವಾ ಸಮಿತಿ, ಸ್ಥಳ: 3ನೇ ಮುಖ್ಯರಸ್ತೆ, ಜ್ಞಾನಭಾರತಿ 2ನೇ ಹಂತ, ಕಡೆ ಗಾಂಧಿನಗರದ ಪಕ್ಕ, ವಳಗೇರಹಳ್ಳಿ, ಕೆಂಗೇರಿ ಉಪನಗರ, ಸಂಜೆ 6ರಿಂದ

ರಾಮನವಮಿ ಸಂಗೀತೋತ್ಸವ: ವೀಣಾ: ಪ್ರಣಮ್ಯ, ಪಿಟೀಲು: ಸಾರಂಗ್, ಮೃದಂಗ: ಮೋನಿಶ್, ಹಿಂದೂಸ್ತಾನಿ ಶಾಸ್ತ್ರೀಯ ಗಾಯನ: ಸಿದ್ಧಾರ್ಥ ಬೆಳ್ಮಣ್ಣು, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ರಾಜೇಂದ್ರ ನಾಕೋಡ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ–2024: 'ಎಸ್‌ವಿಎನ್ ಗ್ಲೋಬಲ್ ಅವಾರ್ಡ್ ಫಾರ್ ಮ್ಯೂಸಿಕ್' ಪ್ರಶಸ್ತಿ ಪ್ರದಾನ: ಪುರಸ್ಕೃತರು: ಲಾಲ್ಗುಡಿ ಜಿ.ಜೆ.ಆರ್ ಕೃಷ್ಣನ್, ಲಾಲ್ಗುಡಿ ವಿಜಯಲಕ್ಷ್ಮಿ, ಪಿಟೀಲು: ಲಾಲ್ಗುಡಿ ಜಿ.ಜೆ.ಆರ್ ಕೃಷ್ಣನ್, ಲಾಲ್ಗುಡಿ ವಿಜಯಲಕ್ಷ್ಮಿ, ಅರ್ಜುನ್ ಕುಮಾರ್, ಸುಕನ್ಯ ರಾಂಗೋಪಾಲ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

'ಸಾಮಾಜಿಕ ಆಂದೋಲನ' ಕುರಿತು ಉಪನ್ಯಾಸ: ಭಾನುಮತಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಶ್ರೀನಿವಾಸ ಕಲ್ಯಾಣ' ಧಾರ್ಮಿಕ ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಹರಿದಾಸ ವೈಭವ: ಗಾಯನ: ಐಶ್ವರ್ಯ, ಶ್ರೀನಿಧಿ ಕುಲಕರ್ಣಿ, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಋತಪರ್ಣ ದೇಸಾಯಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಬಡಾವಣೆ, ಜಯನಗರದ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ(ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ರಾಜ್ಯದಲ್ಲಿ ಶೇ 70.64ರಷ್ಟು ಮತದಾನ

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ನಡೆದ ಮತದಾನ ಪ್ರಮಾಣದ ಅಂತಿಮ ಅಂಕಿ ಅಂಶವನ್ನು ಚುನಾವಣಾ ಆಯೋಗ ಬಿಡುಗಡೆ ಮಾಡಿದೆ. 2019ರ ಚುನಾವಣೆಗೆ ಹೋಲಿಸಿದರೆ ರಾಜ್ಯದ ಒಟ್ಟು ಸರಾಸರಿ ಪ್ರಮಾಣದಲ್ಲಿ ಶೇ 1.83ರಷ್ಟು ಮತದಾನ ಹೆಚ್ಚಳವಾಗಿದೆ. ಕೆಲವು ಕ್ಷೇತ್ರಗಳಲ್ಲಿ ಯಥಾಸ್ಥಿತಿ ಇದ್ದರೆ, ಮತ್ತೆ ಹಲವು ಕ್ಷೇತ್ರಗಳಲ್ಲಿ ಅಲ್ಪಪ್ರಮಾಣದ ಏರಿಕೆ ಕಂಡಿದೆ. ಒಂದೆರಡು ಕ್ಷೇತ್ರಗಳಲ್ಲಿ ಮತದಾನ ಪ್ರಮಾಣ ಇಳಿಕೆಯಾಗಿದೆ



ಕ್ಷೇತ್ರ	2024	2019
ವಿಜಯಪುರ	66.32	61.89
ಬಾಗಲಕೋಟೆ	72.66	70.70
ಬೆಳಗಾವಿ	71.49	67.84
ಚಿಕ್ಕೋಡಿ	78.66	75.62
ಧಾರವಾಡ	74.37	70.29
ಉತ್ತರ ಕನ್ನಡ	76.53	74.16
ಶಿವಮೊಗ್ಗ	78.33	76.58
ಉಡುಪಿ- ಚಿಕ್ಕಮಗಳೂರು	77.15	76.07
ದಕ್ಷಿಣ ಕನ್ನಡ	77.56	77.99
ಹಾಸನ	77.68	77.35
ಮೈಸೂರು	70.62	69.51
ಕಲಬುರಗಿ	62.25	61.18
ಚಾಮರಾಜನಗರ	76.82	75.35
ಮಂಡ್ಯ	81.67	80.59
ಬೀದರ್	65.47	63
ರಾಯಚೂರು	64.66	58.34
ಕೊಪ್ಪಳ	70.99	68.56
ಹಾವೇರಿ	77.60	74.21
ಬಳ್ಳಾರಿ	73.59	69.76
ದಾವಣಗೆರೆ	76.99	73.19
ಚಿತ್ರದುರ್ಗ	73.30	70.80
ತುಮಕೂರು	78.05	77.43
ಕೋಲಾರ	78.27	77.25
ಬೆಂಗಳೂರು ಕೇಂದ್ರ	54.06	54.32
ಚಿಕ್ಕಬಳ್ಳಾಪುರ	77	76.74
ಬೆಂಗಳೂರು ದಕ್ಷಿಣ	53.17	53.70
ಬೆಂಗಳೂರು ಉತ್ತರ	54.45	54.76
ಬೆಂಗಳೂರು ಗ್ರಾಮಾಂತರ	68.30	64.98

28 ಒಟ್ಟು ಕ್ಷೇತ್ರಗಳು

ಏಪ್ರಿಲ್ 26 | ಮೇ 7 | 2024 | 2019

(ಶೇಕಡವಾರು)

70.64 2024

68.81 2019

ಕೆಎಸ್‌ಆರ್‌ಟಿಸಿ ನೇಮಕಾತಿ: 15ರಿಂದ ದಾಖಲಾತಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಚಾಲಕ ಕಂ ನಿರ್ವಾಹಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಮತ್ತು ದೇಹದಾರ್ಢ್ಯ ಪರೀಕ್ಷೆಗಳು ಮೇ 15ರಿಂದ ನಡೆಯಲಿದೆ.

ಮಾರ್ಚ್‌ನಲ್ಲಿ ಪರಿಶೀಲನೆ ಆರಂಭವಾಗಿತ್ತು. ಚುನಾವಣೆ ಘೋಷಣೆಯಾದ ಬಳಿಕ ಮುಂದೂಡಲಾಗಿತ್ತು. ಮೇ 15ರಿಂದ ಶಾಂತಿನಗರದಲ್ಲಿರುವ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಮತ್ತೆ ನಡೆಯಲಿದೆ. ಈ ಸಂಬಂಧ ಅಭ್ಯರ್ಥಿಗಳು ನಿಗಮದ ಅಧಿಕೃತ ವೆಬ್‌-ಸೈಟ್ ksrtcjobs.karnataka.gov.in ರಲ್ಲಿ ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಎಲ್ಲ ಮೂಲ ದಾಖಲೆಗಳೊಂದಿಗೆ ನಿಗದಿತ ದಿನಾಂಕ ಹಾಗೂ ಸಮಯಕ್ಕೆ ಹಾಜರಾಗಲು ಸೂಚನೆ ನೀಡಲಾಗಿದೆ.

ಅರ್ಹರಾದ ಅಭ್ಯರ್ಥಿಗಳಿಗೆ ಚಾಲನಾ ವೃತ್ತಿ ಪರೀಕ್ಷೆ ನಡೆಸುವ ಕುರಿತು ಪ್ರತ್ಯೇಕ ದಿನಾಂಕ, ಸ್ಥಳವನ್ನು ನಿಗದಿಪಡಿಸಲಾಗುವುದು. ಹುದ್ದೆಯ ಆಯ್ಕೆಯು ಗಣಕೀಕೃತ ಚಾಲನಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಅರ್ಹತೆ ಹಾಗೂ ಅಧಿಸೂಚನೆ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ನಡೆಯಲಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ತಾಯಿ ಕೊಂದವನಿಗೆ ಸೇವೆಯ ಶಿಕ್ಷೆ

ಆರೋಪಿ ಖುಲಾಸೆಗೊಳಿಸಿ ಸೆಷನ್ಸ್ ನ್ಯಾಯಾಲಯ ನೀಡಿದ್ದ ತೀರ್ಪು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿಯನ್ನು ಕೊಂದಿದ್ದ ಆರೋಪಿಯನ್ನು ಖುಲಾಸೆಗೊಳಿಸಿ ಸೆಷನ್ಸ್ ನ್ಯಾಯಾಲಯ ನೀಡಿದ್ದ ತೀರ್ಪನ್ನು ಹೈಕೋರ್ಟ್ ರದ್ದುಪಡಿಸಿದೆ.

ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಡಿಕೇರಿ ಪೊಲೀಸರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಆರೋಪಿಯು ಈಗಾಗಲೇ ಎರಡು ವರ್ಷಗಳ ಜೈಲು ಶಿಕ್ಷೆ ಅನುಭವಿಸಿರುವ ಕಾರಣ ಸುಧಾರಣಾ ಕ್ರಮವಾಗಿ ಆತ ಸಂಪಾಜೆಯ ಸರ್ಕಾರಿ ಶಾಲೆಯ ಆವರಣ ಸ್ವಚ್ಛಗೊಳಿಸುವಿಕೆ, ಶಾಲೆಯ ತೋಟ ನಿರ್ವಹಣೆ ಮಾಡಿ ಸಮುದಾಯ ಸೇವೆ ಸಲ್ಲಿಸಬೇಕು’ ಎಂದು ಆದೇಶಿಸಿದೆ.

‘ಒಂದು ವೇಳೆ ಸಮುದಾಯ ಸೇವೆ ಮಾಡದೇ ಇದ್ದರೆ ಹೆಚ್ಚುವರಿಯಾಗಿ ₹25 ಸಾವಿರ ಮತ್ತು ಮೂರು ತಿಂಗಳು ಜೈಲು ವಾಸ ಅನುಭವಿಸಬೇಕು’ ಎಂದು ಆದೇಶದಲ್ಲಿ ತಿಳಿಸಿದೆ.

ಪ್ರಕರಣವೇನು?: ‘ಮಗ ಅನಿಲ್ ದುಶ್ಚಟಗಳಿಂದ ದಾರಿ ತಪ್ಪಿದ್ದಾನೆ ಎಂದು ಆತನ ತಾಯಿ ಗಂಗಮ್ಮ 2015ರ ಏಪ್ರಿಲ್ 4ರಂದು ಬೈದಿದ್ದರು. ಇದರಿಂದ ಸಿಟ್ಟಿಗೆದ್ದಿದ್ದ ಆತ ಅಕೆಯನ್ನು ದೊಣ್ಣೆಯಿಂದ ಥಳಿಸಿದ್ದ. ಇದರಿಂದ ಆಕೆ ಗಂಭೀರವಾಗಿ ಗಾಯಗೊಂಡಿದ್ದರು ಮತ್ತು ಏಪ್ರಿಲ್ 5ರಂದು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದರು’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿತ್ತು.

ಅನಿಲ್‌ನನ್ನು ಬಂಧಿಸಿದ್ದ ಪೊಲೀಸರು ಆತನ ವಿರುದ್ಧ ಕೊಲೆ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ್ದ ಸೆಷನ್ಸ್ ನ್ಯಾಯಾಲಯ, ‘ಅನುಮಾನಕ್ಕೆ ಆಸ್ಪದವಿಲ್ಲದಂತೆ ಅನಿಲ್ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ’ ಎಂದು ಖುಲಾಸೆಗೊಳಿಸಿತ್ತು.

ತಪ್ಪಿಸಿಕೊಂಡಿದ್ದ ಆರೋಪಿಗೆ ಜೈಲು ಶಿಕ್ಷೆ ಕಾಯಂ

ಬೆಂಗಳೂರು: ಎರಡು ಗುಂಪುಗಳ ನಡುವಿನ ಗಲಾಟೆಗೆ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾಗಿ ಪೊಲೀಸರ ವಶದಿಂದ ತಪ್ಪಿಸಿಕೊಂಡಿದ್ದ ಆರೋಪಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಆರು ತಿಂಗಳು ಕಠಿಣ ಜೈಲು ಶಿಕ್ಷೆ ಹಾಗೂ ₹1 ಸಾವಿರ ದಂಡವನ್ನು ಹೈಕೋರ್ಟ್ ಕಾಯಂಗೊಳಿಸಿದೆ.

ಈ ಸಂಬಂಧ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ್ದ ಬಾಗೇಪಲ್ಲಿಯ ಸೋಮಶೇಖರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್‌.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಅವರನ್ನು ಉದ್ದೇಶ ಪೂರ್ವಕವಾಗಿ ತಳ್ಳಿ ಪೊಲೀಸರ ವಶದಿಂದ ತಪ್ಪಿಸಿಕೊಂಡಿದ್ದಾರೆ. ಅದನ್ನು ಪ್ರಾಸಿಕ್ಯೂಷನ್ ಸಾಕ್ಷಿಗಳೂ ದೃಢೀಕರಿಸಿದ್ದಾರೆ. ಹೀಗಾಗಿ, ಶಿಕ್ಷೆ ರದ್ದುಗೊಳಿಸಲಾಗದು’ ಎಂದು ನ್ಯಾಯಪೀಠ ಅದೇಶದಲ್ಲಿ ತಿಳಿಸಿದೆ.

ಪ್ರಕರಣವೇನು?: ಹೊಸಹುಡ್ಯ ಗ್ರಾಮದಲ್ಲಿ 2012ರ ಏಪ್ರಿಲ್ 7ರಂದು ರಾತ್ರಿ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿತ್ತು. ವಿಷಯ ತಿಳಿದು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಸಾದಪ್ಪ ಮತ್ತು ಪೊಲೀಸರು ಗ್ರಾಮಕ್ಕೆ

ತೆರಳಿದ್ದರು. ಆ ವೇಳೆ ಸೋಮಶೇಖರ್ ಮತ್ತು ವೆಂಕಟೇಶ್ ಅವರನ್ನು ಬಂಧಿಸಲಾಗಿತ್ತು ಮತ್ತು ಅವರ ವಿರುದ್ಧ ಕೊಲೆ ಯತ್ನ ಸೇರಿದಂತೆ ಹಲವು ಪ್ರಕರಣಗಳನ್ನು ದಾಖಲಿಸಲಾಗಿತ್ತು.

‘ಆರೋಪಿಗಳನ್ನು ಪಾತಪಾಳ್ಯ ಪೊಲೀಸ್ ಠಾಣೆಗೆ ಕರೆ ತಂದಾಗ ಜೀಪ್‌ನಿಂದ ಕೆಳಗೆ ಇಳಿಯುವ ವೇಳೆ ಸೋಮಶೇಖರ್, ಸಾದಪ್ಪನವರನ್ನು ತಳ್ಳಿ ತಪ್ಪಿಸಿಕೊಂಡು ಓಡಿದ್ದ’ ಎಂಬ ಆರೋಪಡಿ ಬಾಗೇಪಲ್ಲಿ ಜೆಎಂಎಫ್‌ಸಿ ನ್ಯಾಯಾಲಯ 2014ರ ಜೂನ್ 9ರಂದು 6 ತಿಂಗಳು ಕಠಿಣ ಜೈಲು ಶಿಕ್ಷೆ ಮತ್ತು ₹1 ಸಾವಿರ ದಂಡ ವಿಧಿಸಿದ್ದರು. ಇದನ್ನು ಚಿಕ್ಕಬಳ್ಳಾಪುರ ಸೆಷನ್ಸ್ ನ್ಯಾಯಾಲಯ 2016ರ ಡಿಸೆಂಬರ್ 31ರಂದು ಎತ್ತಿ ಹಿಡಿದಿತ್ತು.

ಕಲಾಪತಂಗ

ನಗರದಲ್ಲಿ ಯುವಕ ಸಂಘದ ಕ್ಯಾಂಪಸ್–2 ಕಮ್ಯುನಿಟಿ ಹಾಗೂ ನೃಪತುಂಗ ವಿಶ್ವವಿದ್ಯಾಲಯವು ರಾಷ್ಟ್ರೋತ್ಥಾನ ಪರಿಷತ್ ಸಂಸ್ಥೆಯ ಸಹಯೋಗ ದೊಂದಿಗೆ ಹಮ್ಮಿಕೊಂಡಿದ್ದ ‘ಕಲಾಪತಂಗ’ ಬೇಸಿಗೆ ಶಿಬಿರದ ಸಮಾರೋಪದಲ್ಲಿ ವಿವಿಧ ಕಲೆಗಳನ್ನು ಶಿಬಿರಾರ್ಥಿಗಳು ಪ್ರದರ್ಶಿಸಿದರು

ಲೇಖಕಿಯರ ಸಂಘ: ದತ್ತಿ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 13 ದತ್ತಿ ಪ್ರಶಸ್ತಿಗಳಿಗೆ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಿದೆ.

ದತ್ತಿ ಪ್ರಶಸ್ತಿಗಳು: ಕಾಕೋಳು ಸರೋಜಮ್ಮ (ಕಾದಂಬರಿ), ಭಾಗ್ಯ ನಂಜಪ್ಪ (ವಿಜ್ಞಾನ ಸಾಹಿತ್ಯ), ನಾಗರತ್ನ ಚಂದ್ರಶೇಖರ (ಲಲಿತ ಪ್ರಬಂಧ), ಜಿ.ವಿ. ನಿರ್ಮಲ (ಅನುವಾದಿತ ಕಾದಂಬರಿ, ಕಥಾ ಸಂಕಲನ ಹಾಗೂ ಜೀವನ ಚರಿತ್ರೆ), ತ್ರಿವೇಣಿ ಸಾಹಿತ್ಯ ಪುರಸ್ಕಾರ (ಸಣ್ಣಕಥೆ ಹಾಗೂ ಕಾದಂಬರಿ), ಕಮಲಾ ರಾಮಸ್ವಾಮಿ (ಪ್ರವಾಸ ಸಾಹಿತ್ಯ), ನುಗ್ಗೆಹಳ್ಳಿ ಪಂಕಜ (ಹಾಸ್ಯ ಕೃತಿ), ಗುಣಸಾಗರಿ ನಾಗರಾಜ್ (ಮಕ್ಕಳ ಸಾಹಿತ್ಯ) ಮತ್ತು ಇಂದಿರಾ ವಾಣಿರಾವ್ ದತ್ತಿ ಪ್ರಶಸ್ತಿಗೆ ನಾಟಕ ಕೃತಿಗಳನ್ನು ಆಹ್ವಾನಿಸಿದೆ.

ಜಯಮ್ಮ ಕರಿಯಣ್ಣ (ಸಂಶೋಧನೆ), ತ್ರಿವೇಣಿ (ಕಥೆ ಹಾಗೂ ಕಾದಂಬರಿ), ಉಷಾ ಪಿ.ರೈ (ಕವನ ಸಂಕಲನ- 2020- 2021- 2022 ವರ್ಷಗಳಲ್ಲಿ ಪ್ರಕಟಗೊಂಡಿರುವುದು), ನಿರುಪಮಾ ದತ್ತಿ ಪ್ರಶಸ್ತಿಗೆ ಡಿಜಿಟಲ್ ಮತ್ತು ಮುದ್ರಣ ಮಾಧ್ಯಮದಲ್ಲಿ ಪ್ರಕಟಗೊಂಡ ಕಥೆಗಳನ್ನು ಆಹ್ವಾನಿಸಲಾಗಿದೆ.

2023ರ ಜನವರಿಯಿಂದ 2023ರ ಡಿಸೆಂಬರ್‌ವರೆಗೆ ಪ್ರಕಟಗೊಂಡ ಪ್ರಥಮ ಆವೃತ್ತಿಯ ಕೃತಿಗಳನ್ನು ಮಾತ್ರ ಪ್ರಶಸ್ತಿಗೆ ಪರಿಗಣಿಸಲಾಗುವುದು. ಈಗಾಗಲೇ ಎರಡು ಪುಸ್ತಕ ಬಹುಮಾನ ಪಡೆದ ಲೇಖಕಿಯರ ಕೃತಿಗಳನ್ನು ಬಹುಮಾನಕ್ಕಾಗಿ ಪರಿಗಣಿಸಲಾಗುವುದಿಲ್ಲ. ಸಂಪಾದಿತ ಕೃತಿಗಳು ಹಾಗೂ ಪಿಎಚ್‌.ಡಿ. ಪ್ರಬಂಧಗಳನ್ನು ಬಹುಮಾನಕ್ಕಾಗಿ ಪರಿಗಣಿಸಲಾಗುವುದಿಲ್ಲ. ಆಸಕ್ತರು ಕೃತಿಯ ಮೂರು ಪ್ರತಿಗಳು ಹಾಗೂ ವಿಳಾಸ ಸಹಿತ ಅಗತ್ಯ ವಿವರವನ್ನು ಮೇ 23ರ ಒಳಗೆ ಕರ್ನಾಟಕ ಲೇಖಕಿಯರ ಸಂಘ, 206, 2ನೇ ಮಹಡಿ, ವಿಜಯ ಮ್ಯಾನ್ ಶನ್, 2ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಂಘದ ಅಧ್ಯಕ್ಷೆ ಎಚ್‌.ಎಲ್‌.ಪುಷ್ಪ ತಿಳಿಸಿದ್ದಾರೆ.

ಅಭ್ಯರ್ಥಿ ಪರ ವಾಟ್ಸ್ ಆ್ಯಪ್ ಸಂದೇಶ ರವಾನೆ: ಅಮಾನತು ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ವೇಳೆ ಬಿಜೆಪಿ ಪರವಾದ ಪ್ರಚಾರ ಸಂದೇಶವನ್ನು ವಾಟ್ಸ್‌ಆ್ಯಪ್ ಗ್ರೂಪ್‌ಗೆ ರವಾನಿಸಿದ ಆರೋಪದಡಿ ಹಾಸನದ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿಯ ಪ್ರಥಮ ದರ್ಜೆ ಸಹಾಯಕ ನೌಕರ ಬಿ.ಎಚ್‌. ಮಂಜುನಾಥ್ ಅವರನ್ನು ಸೇವೆಯಿಂದ ಅಮಾನುತುಗೊಳಿಸಿದ ಜಿಲ್ಲಾ ಚುನಾವಣಾ ಅಧಿಕಾರಿಯ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಜಿಲ್ಲಾಧಿಕಾರಿ ಆದೇಶ ಪ್ರಶ್ನಿಸಿ ಬಿ.ಎಚ್‌.ಮಂಜುನಾಥ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ಪೀಠದಲ್ಲಿನ ನ್ಯಾಯಮೂರ್ತಿ ಎಸ್‌. ಸುನಿಲ್ ದತ್ ಯಾದವ್ ನೇತೃತ್ವದ ವಿಭಾಗೀಯ ನ್ಯಾಯಪೀಠವು ಈ ಕುರಿತಂತೆ ಆದೇಶಿಸಿದೆ.

ಪ್ರತಿವಾದಿಗಳಾದ ಹಾಸನ ಜಿಲ್ಲಾ ಚುನಾವಣಾಧಿಕಾರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಲಾಗಿದೆ.

ಪ್ರಕರಣವೇನು?: ‘ಅರ್ಜಿದಾರರು 2024ರ ಮಾರ್ಚ್ 31ರಂದು ಬಿಜೆಪಿ ಪರ ಚುನಾವಣಾ ಪ್ರಚಾರದ ಸಂದೇಶವನ್ನು ಹಾಸನ ಪ್ರೀತಂ ಜೆ. ಗೌಡ ಎಂ.ಎಲ್‌.ಎ ಎಂಬ ವಾಟ್ಸ್ ಆ್ಯಪ್ ಗ್ರೂಪ್ ಮೂಲಕ ರವಾನಿಸಿದ್ದಾರೆ’ ಎಂದು ಆರೋಪಿಸಿ ನಾಗೇಂದ್ರ ರಾಮ ಎಂಬುವವರು ಜಿಲ್ಲಾ ಚುನಾವಣಾ ಅಧಿಕಾರಿಗೆ ಇ-ಮೇಲ್ ಮೂಲಕ ದೂರು ಸಲ್ಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿ, ಅರ್ಜಿದಾರರನ್ನು ಸೇವೆಯಿಂದ ಅಮಾನತುಗೊಳಿಸಿ ಏಪ್ರಿಲ್ 8ರಂದು ಜಿಲ್ಲಾ ಚುನಾವಣಾಧಿಕಾರಿ ಆದೇಶಿಸಿದ್ದರು. ಈ ಆದೇಶ ಪ್ರಶ್ನಿಸಿ ಮಂಜುನಾಥ್ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಗೆ (ಕೆಎಟಿ) ಅರ್ಜಿ ಸಲ್ಲಿಸಿದ್ದರು. ಆದೇಶಕ್ಕೆ ತಡೆ ನೀಡಲು ಕೆಎಟಿ ನಿರಾಕರಿಸಿತ್ತು.

ಸಾಕ್ಷ್ಯ ನಾಶ: ವಿಚಾರಣೆಗೆ ಹಾಜರಾದ ಡಿವೈಎಸ್ಪಿ

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದ ಸಾಕ್ಷ್ಯ ನಾಶಪಡಿಸಿದ್ದ ಆರೋಪದಡಿ ಸಿಐಡಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಗೆ ಡಿವೈಎಸ್ಪಿ ಶ್ರೀಧರ್ ಪೂಜಾರ ಅವರು ಬುಧವಾರ ಹಾಜರಾದರು.

ಪ್ರಕರಣ ದಾಖಲಾದ ನಂತರ ಕೆಲವು ಬಾರಿ ವಿಚಾರಣೆಗೆ ಹಾಜರಾಗಿದ್ದ ಪೂಜಾರ, ನಂತರತಲೆಮರೆಸಿಕೊಂಡಿದ್ದರು.ಅವರಬಂಧನಕ್ಕೆವಾರೆಂಟ್‌ಜಾರಿಯಾಗಿತ್ತು.ನ್ಯಾಯಾಲಯದ ಮೆಟ್ಟಿಲೇರಿದ್ದ ಅವರು, ಜಾಮೀನು ಪಡೆದುಕೊಂಡಿದ್ದರು. ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗುವಂತೆ ಜಾಮೀನಿನಲ್ಲಿ ಷರತ್ತು ವಿಧಿಸಲಾಗಿತ್ತು.

ಪ್ರಕರಣದ ತನಿಖಾಧಿಕಾರಿಯೂ ಆಗಿರುವ ಸಿಐಡಿ ಡಿವೈಎಸ್ಪಿ ಬಾಲರಾಜು ಅವರ ಕೊಠಡಿಗೆ ಶ್ರೀಧರ್ ಪೂಜಾರ ಹಾಜರಾಗಿದ್ದರು. ಆರೋಗ್ಯ ಸಮಸ್ಯೆಯಿಂದಾಗಿ ಬಾಲರಾಜು ರಜೆ ಪಡೆದಿದ್ದರು. ಪೂಜಾರ ಅವರಿಂದ ಸಹಿ ಪಡೆದುಕೊಂಡ ಕಚೇರಿ ಸಿಬ್ಬಂದಿ, ಕೆಲ ದಿನಗಳ ನಂತರ ಪುನಃ ವಿಚಾರಣೆಗೆ ಬರುವಂತೆ ಹೇಳಿ ವಾಪಸು ಕಳುಹಿಸಿದ್ದಾರೆಂದು ಗೊತ್ತಾಗಿದೆ.

‘ಶ್ರೀಧರ್ ಪೂಜಾರ ಅವರು ಈ ಹಿಂದೆ ಬೆಂಗಳೂರು ಸಿಸಿಬಿಯಲ್ಲಿ ಕೆಲಸ ಮಾಡುತ್ತಿದ್ದರು. ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಅವರ ವಿರುದ್ಧ, ಸಾಕ್ಷ್ಯ ನಾಶಪಡಿಸಿದ್ದರೆಂಬ ಆರೋಪವಿದೆ. ಈ ಸಂಬಂಧ ಸಿಐಡಿಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್ ಬಾಬು ಹಾಗೂ ಸೈಬರ್ ತಜ್ಞ ಕೆ.ಎಸ್‌. ಸಂತೋಷ್‌ಕುಮಾರ್‌ನನ್ನು ಈಗಾಗಲೇ ಬಂಧಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

‘ಶ್ರೀಧರ್ ಪೂಜಾರ ಬಂಧನಕ್ಕೂ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಅವರು ಪೊಲೀಸರ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದರು. ಇದೀಗ, ಅವರಿಗೆ ಜಾಮೀನು ಸಿಕ್ಕಿದೆ. ಅವರ ವಿಚಾರಣೆ ಮುಂದುವರಿಸಲಾಗುವುದು’ ಎಂದು ತಿಳಿಸಿವೆ.

ಕಾಂಗ್ರೆಸ್ ಪ್ರತಿದಾಳಿಗೆ ಹಿಂದಕ್ಕೆ ಸರಿದ ಕಮಲಪಡೆ • ಪೋಸ್ಟ್ ಅಳಿಸಿ ಹಾಕಿದ ಬಿಜೆಪಿ

ರಥೋತ್ಸವ ಸಮಿತಿಗೆ ಮುಸ್ಲಿಂ ವ್ಯಕ್ತಿ ಬಿಜೆಪಿ ಕಿಡಿಗೆ ಕಾಂಗ್ರೆಸ್ ತಣ್ಣೀರು!

ಪ್ರಜಾವಾಣಿ ವಾರ್ತೆ

ಹೊಸಕೋಟೆ: ನಗರದಲ್ಲಿ ಇದೇ 23ರಿಂದ ನಡೆಯಲಿರುವ ಅವಿಮುಕ್ತೇಶ್ವರ ದೇವಾಲಯದ ರಥೋತ್ಸವ ಸಮಿತಿಯ ಹತ್ತು ಸದಸ್ಯರ ಪೈಕಿ ಮುಸ್ಲಿಂ ವ್ಯಕ್ತಿಯೊಬ್ಬರನ್ನು ನೇಮಕ ಮಾಡಿರುವುದಕ್ಕೆ ಬಿಜೆಪಿ ಕಿಡಿ ಕಾರಿದರೆ, ಕಾಂಗ್ರೆಸ್ ಅದಕ್ಕೆ ತಣ್ಣೀರು ಎರೆಚಿದೆ.

ಶಾಸಕ ಶರತ್ ಬಚ್ಚೇಗೌಡ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ರಥೋತ್ಸವದ ಸಮಿತಿ ರಚಿಸಲಾಗಿತ್ತು. ಹತ್ತು ಸದಸ್ಯರ ಸಮಿತಿಯಲ್ಲಿ ಮುಸ್ಲಿಂ ಸಮುದಾಯದ ನವಾಜ್ ಎಂಬುವರೂ ಇದ್ದರು. ಇದು ಬಿಜೆಪಿ ಕೆಂಗಣ್ಣಿಗೆ ಗುರಿಯಾಗಿದೆ. ಈ ವಿಷಯ ಮುಂದಿಟ್ಟುಕೊಂಡು ಬಿಜೆಪಿಯು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ಆರಂಭಿಸಿತ್ತು.

‘ಹಿಂದೂ ದೇವಾಲಯದ ರಥೋತ್ಸವ ಸಮಿತಿಯಲ್ಲಿ ಮುಸ್ಲಿಂ ವ್ಯಕ್ತಿಯನ್ನು ಸದಸ್ಯನನ್ನಾಗಿ ನೇಮಕ ಮಾಡಲಾಗಿದೆ. ಇದು ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯನ್ನು ಸಾಬೀತುಪಡಿಸಿದೆ. ಅಲ್ಲದೆ, ಹಿಂದೂ ವಿರೋಧಿ ಸಿ.ಎಂ ಸಿದ್ದರಾಮಯ್ಯ ಅವರು ಹಿಂದೂ ದೇವಾಲಯಗಳನ್ನು ನಿಯಂತ್ರಿಸಲು ಮತ್ತು ಅವುಗಳ ಸಂಪತ್ತನ್ನು ದೋಚಲು ಹಿಂದೂಯೇತರ ವ್ಯಕ್ತಿಯನ್ನು ನೇಮಿಸಿರುವುದು ಸರಿಯಲ್ಲ’ ಎಂದು ಬಿಜೆಪಿ ಎಕ್ಸ್, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪ ಎತ್ತಿತು.

ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಸಾಮಾಜಿಕ ಜಾಲತಾಣ ಗಳಲ್ಲಿ ದಾಖಲೆ ಸಮೇತ ಪ್ರತಿದಾಳಿ ನಡೆಸಿದರು. ತಕ್ಷಣ ಬಿಜೆಪಿ ಸಾಮಾಜಿಕ ಜಾಲತಾಣಗಳಲ್ಲಿಯ ಮಾಹಿತಿ ಅಳಿಸಿ ಹಾಕಿತು.

‘ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಅಂದಿನ ಸಚಿವ ಎಂ.ಟಿ.ಬಿ. ನಾಗರಾಜ್ ಎರಡು ಬಾರಿ ಅವಿಮುಕ್ತೇಶ್ವರ ರಥೋತ್ಸವ ಸಮಿತಿಗೆ ಹಿಂದೂಯೇತರರ ವ್ಯಕ್ತಿ, ಅದರಲ್ಲೂ ಮುಸ್ಲಿಂ ಧರ್ಮೀಯರನ್ನು ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿದ್ದರು’ ಎಂಬ ಮಾಹಿತಿಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿತು.

ಇದಕ್ಕೆ ಸಂಬಂಧಿಸಿದ ದಾಖಲೆಗಳು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗುತ್ತಿದ್ದಂತೆಯೇ ಎಚ್ಚೆತ್ತುಕೊಂಡ ಬಿಜೆಪಿ ಒಂದು ಹೆಜ್ಜೆ ಹಿಂದೆ ಸರಿದು ತಾನು ಹಂಚಿಕೊಂಡಿದ್ದ ಪೋಸ್ಟ್‌ಗಳನ್ನು ತಕ್ಷಣ ಅಳಿಸಿ ಹಾಕಿತು.


Siddaramaiah
4ಗಂ ·
ಬಿಜೆಪಿ ನಾಯಕರೇ, ನಮ್ಮ ಕೈಗೆ ಬಡಿಗೆ ಕೊಟ್ಟು ಮತ್ತೆ ಮತ್ತೆ ಯಾಕೆ ಬಡಿಸಿಕೊಳ್ಳೀರಿ? ನಿಮ್ಮ ಸುಳ್ಳುಗಳನ್ನು ಬಯಲು ಮಾಡಲು ಅವಕಾಶ ಕೊಟ್ಟು ಸಮಾಜ... ಇನ್ನಷ್ಟು ವೀಕ್ಷಿಸಿ
1,330 · 66 ಕಾಮೆಂಟ್‌ಗಳು • 236 ಹಂಚಿಕೆಗಳು

ಸಿದ್ದರಾಮಯ್ಯ ಹಂಚಿಕೊಂಡ ಪೋಸ್ಟ್

ಬಿಜೆಪಿ ತನ್ನ ವಾಂತಿ ತಾನೇ ತಿಂದಂತೆ

ಹೊಸಕೋಟೆ ಅವಿಮುಕ್ತೇಶ್ವರ ದೇವಸ್ಥಾನದ ರಥೋತ್ಸವ ಸಮಿತಿಗೆ ಅನ್ಯಧರ್ಮೀಯ ಸದಸ್ಯನನ್ನು ನೇಮಕ ಮಾಡಿದ ಕುರಿತು ತಾನು ಹೇಳಿದ ಸುಳ್ಳನ್ನು ಅಳಿಸಿ ಹಾಕುವುದೆಂದರೆ ತಾನು ವಾಂತಿ ಮಾಡಿ, ಅದನ್ನು ಮಾಡಿದವರೇ ತಿಂದ ಹಾಗೆ. ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡ ರಾಜ್ಯ @ಬಿಜೆಪಿ ಕರ್ನಾಟಕ ನಾವು ಸತ್ಯ ಬಿಚ್ಚಿಟ್ಟ ಕೂಡಲೇ ಸಾಮಾಜಿಕ ಮಾಧ್ಯಮಗಳಲ್ಲಿದ್ದ ತನ್ನ ಸುಳ್ಳು ಆರೋಪದ ಹೇಳಿಕೆ ಅಳಿಸಿ ಹಾಕಿದೆ. ಆದರೆ, ಜನರ ಕ್ಷಮೆ ಕೇಳಿಲ್ಲ. ಬಿಜೆಪಿ ನಾಯಕರೇ, ನಮ್ಮ ಕೈಗೆ ಬಡಿಗೆ ಕೊಟ್ಟು ಮತ್ತೆ ಏಕೆ ಬಡಿಸಿಕೊಳ್ಳುತ್ತೀರಿ? ನಿಮ್ಮ ಸುಳ್ಳುಗಳನ್ನು ಬಯಲು ಮಾಡಲು ಅವಕಾಶ ಕೊಟ್ಟು ಸಮಾಜದ ಎದುರು ಯಾಕೆ ಬೆತ್ತಲಾಗುತ್ತೀರಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿ ಸ್ವಲ್ಪ ವಿವೇಕದಿಂದ ವರ್ತಿಸಲಿ

ರಥೋತ್ಸವ ಸಮಿತಿಯಲ್ಲಿ ಸರ್ವ ಸಮುದಾಯದ ಸದಸ್ಯರ ನೇಮಕ ಮಾಡುವುದು ದೇವಾಲಯದ ಸಂಪ್ರದಾಯ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಸಹ ಅಂದು ಸಚಿವರಾಗಿದ್ದ ಎಂ.ಟಿ.ಬಿ ನಾಗರಾಜ 2022ರಲ್ಲಿ ಅಪ್ಸರ್ ಎಂಬುವವರನ್ನು ಸಮಿತಿಗೆ ನೇಮಕ ಮಾಡಿದ್ದು ನಮ್ಮ ಕಣ್ಣ ಮುಂದಿದೆ. ಅಲ್ಲದೆ 2021ರಲ್ಲಿ ಇದೇ ಬಿಜೆಪಿ ಇಮ್ತಿಯಾಜ್ ಪಾಷಾ ಎಂಬುವವರು ಸದಸ್ಯರನ್ನಾಗಿ ಮಾಡಿದ್ದನ್ನು ಮರೆತಂತಿದೆ. ಹಿಂದಿನ ಅವಧಿಯ ಎಲ್ಲ ಪಟ್ಟಿ ಬಿಜೆಪಿ ತೆರೆದು ನೋಡಿ ಸ್ವಲ್ಪ ವಿವೇಕದಿಂದ ವರ್ತಿಸಿದರೆ ಉತ್ತಮ.

ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

ಬಿಜೆಪಿ ಕುತಂತ್ರ ಫಲಿಸದು

ಸರ್ವ ಜನಾಂಗದ ಶಾಂತಿಯ ತೋಟ ನಮ್ಮ ಹೊಸಕೋಟೆ. ಬಿಜೆಪಿ ಅಧಿಕಾರದಲ್ಲಿದ್ದಾಗಲೂ ರಥೋತ್ಸವಕ್ಕೆ ಹಿಂದೂಯೇತರ ವ್ಯಕ್ತಿಯನ್ನು ನೇಮಿಸಿರುವುದು ಎಲ್ಲರಿಗೂ ತಿಳಿದ ವಿಚಾರವೇ. ಆದರೂ ಜನರ ನಡುವೆ ಕೋಮು ವಿಷದ ಬೀಜ ಬಿತ್ತುವುದು. ಜನರ ನೆಮ್ಮದಿ ಹಾಳುಗೆಡವುವುದು ಬಿಜೆಪಿ ಪ್ರಮುಖ ಗುರಿ. 2015, 2020, 2022ರಲ್ಲಿ ಮುಸ್ಲಿಂ ವ್ಯಕ್ತಿಯನ್ನು ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಲಾಗಿತ್ತು. ಶಿಫಾರಸು ಮಾಡಿದ್ದು ಬಿಜೆಪಿ ಶಾಸಕ ಎಂ.ಟಿ.ಬಿ ನಾಗರಾಜ. ಸುಳ್ಳಿನ ಮೇಲೆ ಸುಳ್ಳು ಹೇಳುವ ಬಿಜೆಪಿಗೆ ಅವಿಮುಕ್ತೇಶ್ವರ ಒಳ್ಳೆಯ ಬುದ್ದಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಶರತ್ ಬಚ್ಚೇಗೌಡ, ಹೊಸಕೋಟೆ ಶಾಸಕ

ಕಸಾಪ: ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಥಾಪನೆ ದಿನಾಚರಣೆ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮೇ ತಿಂಗಳು ಪೂರ್ತಿ ತನ್ನ ಪ್ರಕಟಣೆಗಳಿಗೆ ರಿಯಾಯಿತಿ ಘೋಷಿಸಿದೆ.

ಪ್ರಕಟಣೆಗಳ ಮೇಲೆ ಶೇ10ರಿಂದ ಶೇ75ರವರೆಗಿನ ರಿಯಾಯತಿ ಇರಲಿದೆ. ಪರಿಷತ್ತು 1,800ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ಇದರಲ್ಲಿ ಎಂಟು ಸಂಪುಟಗಳ ಬೃಹತ್ ಕನ್ನಡ ಕನ್ನಡ ನಿಘಂಟು, ಕನ್ನಡ ಸಂಕ್ಷಿಪ್ತ ನಿಘಂಟು, ರತ್ನಕೋಶ, ಸಂಕ್ಷಿಪ್ತ ಕನ್ನಡ ಇಂಗ್ಲೀಷ್ ನಿಘಂಟು, ಹಳೆಗನ್ನಡ ಕೃತಿಗಳು ಹಾಗೂ ಅವುಗಳ ಗದ್ಯಾನುವಾದಗಳು, ಶತಮಾನೋತ್ಸವ ಮಾಲಿಕೆ ಕೃತಿಗಳು, ವ್ಯಾಕರಣ ಛಂದಸ್ಸಿಗೆ ಸಂಬಂಧಿಸಿದಂತಹ ಶಾಸ್ತ್ರ ಗ್ರಂಥಗಳು, ಜೀವನ ಚರಿತ್ರೆಗಳು, ದಲಿತ ಮತ್ತು ಮಹಿಳಾ ಸಂಪುಟಗಳು, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಅಪರೂಪದ ಸಂಶೋಧನಾ ಕೃತಿಗಳೂ ಸೇರಿವೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

‘ಎಲ್ಲರಿಗೂ ಕಾನೂನಿನ ಅರಿವು ಅಗತ್ಯ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಪ್ರತಿಯೊಬ್ಬ ನಾಗರಿಕರಲ್ಲೂ ನಮ್ಮ ನೆಲದ ಕಾನೂನಿನ ಸೂಕ್ತ ಗ್ರಹಿಕೆ ಮತ್ತು ಅರಿವು ಇರಬೇಕು. ಅದರಲ್ಲೂ ಯುವಜನಾಂಗ ಈ ದಿಸೆಯಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡು, ನಾಗರಿಕರಲ್ಲಿ ತಿಳಿವಳಿಕೆ ಮೂಡಿಸಬೇಕು‘ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪ್ರತಿಪಾದಿಸಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಉತ್ಸವ ‘ಅನಾದ್ಯಂತ–2024’ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನಿನ ಅರಿವು ಬಹಳ ಮುಖ್ಯ. ಕಾನೂನಿನ ಜ್ಞಾನವಿಲ್ಲದವರು ತಮಗೇ ತಿಳಿಯದಂತೆ ಅಪರಾಧಗಳ ಸುಳಿಗೆ ಸಿಲುಕಿ ಸಂಕಷ್ಟ ಎದುರಿಸುತ್ತಾರೆ. ಕಾನೂನಿನ ಅರಿವಿದ್ದರೆ ಅಕ್ರಮಗಳ ಸುಳಿಗೆ ಸಿಲುಕುವುದನ್ನು ತಡೆಯಬಹುದು‘ ಎಂದು ಹೇಳಿದರು.

ಚಿತ್ರನಟಿ ಸಪ್ತಮಿಗೌಡ ಮಾತನಾಡಿ, ವಿದ್ಯಾರ್ಥಿಗಳು ಕಲಿಕೆಯಲ್ಲಿ ಎಷ್ಟೇ ನಿರಾಸಕ್ತಿ ತೋರಿದರೂ, ಅಂಥವರಿಗೆ ತಾಳ್ಮೆಯಿಂದ ಪಾಠಹೇಳಿ ಜ್ಞಾನದ ಅರಿವು ಮೂಡಿಸುವ ಅಧ್ಯಾಪಕರು ದೇವರಿಗೆ ಸಮಾನ. ವಿದ್ಯಾರ್ಥಿಗಳು ಅಧ್ಯಾಪಕರನ್ನು ಗೌರವಿಸಿದರೆ, ಶೈಕ್ಷಣಿಕ ಬದುಕು ಸಾರ್ಥಕವಾಗುತ್ತದೆ’ ಎಂದರು.

ನಿಟ್ಟೆ ಶಿಕ್ಷಣಸಂಸ್ಥೆ ಶೈಕ್ಷಣಿಕ ನಿರ್ದೇಶಕ ಪ್ರೊ.ಸಂದೀಪ್‌ಶಾಸ್ತ್ರಿ, ಪ್ರಾಚಾರ್ಯ ಡಾ.ಎಚ್.ಸಿ. ನಾಗರಾಜ್, ಆಡಳಿತಾಧಿಕಾರಿ ರೋಹಿತ್ ಪೂಂಜಾ, ಶೈಕ್ಷಣಿಕ ಮುಖ್ಯಸ್ಥ ವಿ.ಶ್ರೀಧರ್ ಅವರು ಉಪಸ್ಥಿತರಿದ್ದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಉತ್ಸವ ‘ಅನಾದ್ಯಂತ–2024’ ಕಾರ್ಯಕ್ರಮವನ್ನು ಚಿತ್ರನಟಿ ಸಪ್ತಮಿಗೌಡ ಉದ್ಘಾಟಿಸಿದರು. ಪ್ರಾಂಶುಪಾಲ ಡಾ.ಎಚ್.ಸಿ.ನಾಗರಾಜ್, ಶಿಕ್ಷಣ ಸಂಯೋಜಕರಾದ ಡಾ.ಎನ್.ನಳಿನಿ ಪಾಲ್ಗೊಂಡಿದ್ದರು

3 ಗಂಟೆಯಲ್ಲಿ ₹ 4.50 ಲಕ್ಷ ಲಾಭ: ನಿವೃತ್ತ ಡಿಜಿಪಿ ಹೆಸರಿನಲ್ಲಿ ಸುಳ್ಳು ಪೋಸ್ಟ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ‘₹40 ಸಾವಿರ ಹೂಡಿಕೆ ಮಾಡಿದ್ದಕ್ಕೆ 3 ಗಂಟೆಯಲ್ಲಿ ₹ 4.50 ಲಕ್ಷ ಲಾಭ ಬಂದಿದೆ’ ಎಂಬುದಾಗಿ ಉಲ್ಲೇಖಿಸಿ ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಶಂಕರ ಬಿದರಿ ಹೆಸರಿನಲ್ಲಿ ಸುಳ್ಳು ಪೋಸ್ಟ್ ಪ್ರಕಟಿಸಲಾಗಿದ್ದು, ಇದೊಂದು ವಂಚನೆ ಜಾಲವೆಂದು ಶಂಕಿಸಲಾಗಿದೆ.

ಶಂಕರ ಬಿದರಿ ಅವರ ಫೇಸ್‌ಬುಕ್ ಖಾತೆಯಲ್ಲಿ ಬುಧವಾರ ಬೆಳಿಗ್ಗೆ ಸುಳ್ಳು ಸಂದೇಶ ಪೋಸ್ಟ್ ಮಾಡಲಾಗಿದೆ. ಹೂಡಿಕೆ ಮಾಹಿತಿಗೆ ವಿದೇಶಿ ಮಹಿಳೆಯೊಬ್ಬರನ್ನು ಸಂಪರ್ಕಿಸುವಂತೆ ಪೋಸ್ಟ್‌ನಲ್ಲಿ ಬರೆಯಲಾಗಿದೆ.

‘ವಿಕ್ಟೋರಿಯಾ36 ಟ್ರೇಡರ್ ಎಂಬುವವರು ಹೂಡಿಕೆ ಬಗ್ಗೆ ಮಾಹಿತಿ ನೀಡಿದ್ದರು. ಇವರು ಬಿಟ್ ಕಾಯಿನ್ ಮೈನಿಂಗ್ ಪರಿಣಿತರು ಎಂಬುದು ಗೊತ್ತಾಯಿತು. ಹೀಗಾಗಿ, ಅವರ ಸಲಹೆಯಂತೆ ₹40,000 ಹೂಡಿಕೆ ಮಾಡಿದ್ದೆ. ಕೇವಲ ಮೂರೇ ಗಂಟೆಯಲ್ಲಿ ನನಗೆ ₹4.50 ಲಕ್ಷ ವಾಪಸು ಬಂದಿದೆ. ಅದನ್ನು ನನ್ನ ಖಾತೆಯಿಂದ ಡ್ರಾ ಮಾಡಿಕೊಂಡಿದ್ದೇನೆ’ ಎಂದು ಪೋಸ್ಟ್‌ನಲ್ಲಿ ಬರೆಯಲಾಗಿದೆ. ಜೊತೆಗೆ ಕೆಲ ಸ್ಕ್ರಿನ್‌ಶಾಟ್‌ಗಳನ್ನು ಲಗತ್ತಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಶಂಕರ ಬಿದರಿ, ‘ಯಾರೋ ಅಪರಿಚಿತರು ನನ್ನ ಖಾತೆ ಹ್ಯಾಕ್ ಮಾಡಿ, ಸುಳ್ಳು ಪೋಸ್ಟ್ ಪ್ರಕಟಿಸಿದ್ದಾರೆ. ಇದನ್ನು ಯಾರೂ ನಂಬಬಾರದು. ಎಚ್ಚರಿಕೆ ವಹಿಸಬೇಕು. ಸುಳ್ಳು ಪೋಸ್ಟ್ ವಿಚಾರವನ್ನು ಪೊಲೀಸರ ಗಮನಕ್ಕೆ ತಂದಿದ್ದೇನೆ’ ಎಂದಿದ್ದಾರೆ.

ಸಂಗೀತೋತ್ಸವದ ಸರ್ವಾಧ್ಯಕ್ಷರಾಗಿ ರುದ್ರಪಟ್ಣಂ ರಮಾಕಾಂತ ಆಯ್ಕೆ

ಬೆಂಗಳೂರು: ಶ್ರೀತ್ಯಾಗರಾಜ ಗಾನ ಸಭಾ ಟ್ರಸ್ಟ್ ಆಯೋಜಿಸುತ್ತಿರುವ 52ನೇ ವರ್ಷದ ಸಂಗೀತೋತ್ಸವದ ಸರ್ವಾಧ್ಯಕ್ಷರನ್ನಾಗಿ ವಿದ್ವಾನ್ ರುದ್ರಪಟ್ಣಂ ಎಸ್. ರಮಾಕಾಂತ ಅವರನ್ನು ಆಯ್ಕೆ ಮಾಡಲಾಗಿದೆ.

ಇದೇ 9 ರಿಂದ 12ರವರೆಗೆ ತ್ಯಾಗರಾಜ ಗಾನಸಭಾ ಟ್ರಸ್ಟ್‌ನಿಂದ 52ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವ ಸಮಾರಂಭವನ್ನು ಆಯೋಜಿಸಲಾಗುತ್ತಿದೆ. ರಾಜಾಜಿನಗರದ 1ನೇ ಕೆ ಬ್ಲಾಕ್ 19ನೇ ಬಿ ಮುಖ್ಯರಸ್ತೆಯಲ್ಲಿರುವ ಬಾಲಮೋಹನ ವಿದ್ಯಾಮಂದಿರದಲ್ಲಿ ಸಂಗೀತೋತ್ಸವ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರುದ್ರಪಟ್ಣಂ ರಮಾಕಾಂತ

ವಿದ್ಯುತ್ ಸ್ಪರ್ಶ: ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಸಮೀಪದ ತಮಿಳುನಾಡಿನ ಡೆಂಕಣಿಕೋಟೆ ಸಮೀಪದ ಚಂದನಪಲ್ಲಿಯಲ್ಲಿ ಮಂಗಳವಾರ ಆಹಾರ ಅರಸಿ ಕಾಡಿನಿಂದ ನಾಡಿಗೆ ಬಂದಿದ್ದ ಕಾಡಾನೆಗಳ ಹಿಂಡಿನ ಸಲಗವೊಂದು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದೆ.

ಸುಮಾರು ಹತ್ತು ವರ್ಷದ ಗಂಡಾನೆ ಮೃತಪಟ್ಟಿದೆ. ಡೆಂಕಣಿಕೋಟೆ ಅರಣ್ಯ ಇಲಾಖೆಯ ಸಿಬ್ಬಂದಿ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯ ಸಂಸ್ಕಾರ ನಡೆಸಿದರು.

ಡೆಂಕಣಿಕೋಟೆ, ಜವಳಗೆರೆ ಅರಣ್ಯ ಪ್ರದೇಶದಲ್ಲಿ 50ಕ್ಕೂ ಹೆಚ್ಚು ಕಾಡಾನೆಗಳ ಹಿಂಡಿದ್ದು ಪ್ರತಿದಿನ ಕಾಡಿನಿಂದ ಗ್ರಾಮಗಳತ್ತ ಬರುತ್ತಿವೆ. ಹಾಗಾಗಿ ರೈತರು ಆತಂಕದಿಂದ ಜೀವನ ಸಾಗಿಸಬೇಕಾದ ಪರಿಸ್ಥಿತಿಯಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ‘ಮಾಸದ ಮಾತು‘ ಕಾರ್ಯಕ್ರಮ

ಕನ್ನಡ ಸಿನಿಮಾದ ಇತಿಹಾಸದ ಮೆಲುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘವು ಬುಧವಾರ ಹಮ್ಮಿಕೊಂಡಿದ್ದ ‘ಮಾಸದ ಮಾತು’ ಕಾರ್ಯಕ್ರಮವು ಕನ್ನಡ ಸಿನಿಮಾದ ತೊಂಬತ್ತು ವರ್ಷಗಳ ಇತಿಹಾಸದ ಮೆಲುಕು ಹಾಕಲು ವೇದಿಕೆಯಾಯಿತು.

ಕನ್ನಡದ ಮೊದಲ ಚಿತ್ರ ‘ಸತಿ ಸುಲೋಚನಾ’ಕ್ಕೆ 90 ವರ್ಷ ತುಂಬಿದ್ದರೆ, ‘ಬೇಡರ ಕಣ್ಣಪ್ಪ’ ಚಿತ್ರಕ್ಕೆ 70 ವರ್ಷಗಳಾಗಿವೆ. 1934ರಲ್ಲಿಯೇ ಕನ್ನಡ ಚಿತ್ರಗಳು ಬಂದವಾದರೂ ಅದಕ್ಕೆ ವೇಗ ಬಂದಿದ್ದು 1954ರಿಂದ. ರಾಜಕುಮಾರ್ ಚಿತ್ರರಂಗ ಪ್ರವೇಶಿಸಿದ ಬಳಿಕ ಕನ್ನಡ ಚಿತ್ರರಂಗದ ದಿಕ್ಕು ಬದಲಾಗಿದ್ದು ಸೇರಿದಂತೆ ಹಲವು ಘಟನೆಗಳನ್ನು ಕಾರ್ಯಕ್ರಮದಲ್ಲಿ ನೆನಪು ಮಾಡಿಕೊಳ್ಳಲಾಯಿತು.

ಹೊಸ ಅಲೆಯ ಚಿತ್ರಗಳು ತಾಂತ್ರಿಕವಾಗಿ ದುರ್ಬಲವಾಗಿರುವುದಲ್ಲದೇ ಬಹುತೇಕ ಸಿನಿಮಾಗಳಿಂದ ಅಭಿರುಚಿಯ ಅಧಃಪತನವಾಗುತ್ತಿದೆ ಎಂಬ ವಿಷಾದದ ಧ್ವನಿ ಮೂಡಿತು.

ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘವು ಮಾಸದ ಮಾತು ಸರಣಿ ಉಪನ್ಯಾಸವನ್ನು ಹಮ್ಮಿಕೊಂಡು ಬರುತ್ತಿದ್ದು, ಇದು ಐದನೇ ತಿಂಗಳ ಕಾರ್ಯಕ್ರಮವಾಗಿದೆ.

ತೇಜಸ್ ಕನ್ನಡ ಸಂಘದ ಕಲಾವಿದರಿಂದ ಗೀತಗಾಯನ ನಡೆಯಿತು. ‘ಸುಧಾ’ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಉಪನ್ಯಾಸ ನೀಡಿದರು. ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಅಧ್ಯಕ್ಷ ಡಿ. ರಾಜೇಶ್, ಪ್ರಧಾನ ಕಾರ್ಯದರ್ಶಿ ದೇವಜಾರ ಕೆ.ಡಿ., ಹಿಂ.ವಿ.ಕಾ. ಅಧಿಕಾರಿಗಳ ಸಂಘದ ಸಂಘಟನಾ ಕಾರ್ಯದರ್ಶಿ ಕೆ.ಎಚ್.ವೆಂಕಟೇಶ್, ಮತ್ತು ತೇಜಸ್ ಕನ್ನಡ ಸಂಘದ ಅಧ್ಯಕ್ಷ ಎಂ. ಚಂದ್ರಶೇಖರಪ್ಪ ಭಾಗವಹಿಸಿದ್ದರು.

ನಗರದ ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ ಬುಧವಾರ ಹಮ್ಮಿಕೊಂಡಿದ್ದ ‘ತೊಂಬತ್ತು ವರ್ಷಗಳ ಕನ್ನಡ ಸಿನಿಮಾ ಹಾಗೂ ಕನ್ನಡ ಸಂಸ್ಕೃತಿ’–ಮಾಸದ ಮಾತು ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಡಿ. ರಾಜೇಶ್, ಹಿಂ.ವಿ.ಕಾ. ಅಧಿಕಾರಿಗಳ ಸಂಘದ ಸಂಘಟನಾ ಕಾರ್ಯದರ್ಶಿ ಕೆ.ಎಚ್.ವೆಂಕಟೇಶ್ ಮತ್ತು ತೇಜಸ್ ಕನ್ನಡ ಸಂಘದ ಅಧ್ಯಕ್ಷ ಎಂ. ಚಂದ್ರಶೇಖರಪ್ಪ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಮೈಸೂರು, ಚಾಮರಾಜನಗರ, ಬೀದರ್‌ನಲ್ಲಿ ತಂಪಾದ ಇಳೆ

ಕೊಡಗಿನಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಕೊಡಗಿನಲ್ಲಿ ಬುಧವಾರ ಗುಡುಗು, ಸಿಡಿಲು, ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿಯಿತು. ಚಾಮರಾಜನಗರದ ವಿವಿಧೆಡೆ ಮಂಗಳವಾರ ರಾತ್ರಿ ಹಾಗೂ ಬುಧವಾರ ಹದ ಮಳೆಯಾಯಿತು. ಮೈಸೂರು ಜಿಲ್ಲಾ ಕೇಂದ್ರ, ನಂಜನಗೂಡು, ಎಚ್‌.ಡಿ ಕೋಟೆ, ತಲಕಾಡು ಹಾಗೂ ಬಿಳಿಕೆರೆಯಲ್ಲಿ ಜೋರು ಮಳೆಯಾಯಿತು.

ಮಡಿಕೇರಿ ಸಮೀಪದ ಕೆದಕಲ್ ಮತ್ತು ನಾಪೋಕ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಆಲಿಕಲ್ಲು ಮಳೆ ಸುರಿಯಿತು. ಸುಂಟಿಕೊಪ್ಪ ವ್ಯಾಪ್ತಿಯ ಏಳನೇ ಮೈಲು, ಬೋಯಿಕೇರಿ, ಕಿಬ್ಬೆಟ್ಟ, ಗರಗಂದೂರು, ಮಳೂರು, ಏಳನೇ ಹೊಸಕೋಟೆ, ಕೊಡಗರಹಳ್ಳಿ, ಹರದೂರಿನಲ್ಲಿ ಉತ್ತಮ ಮಳೆಯಾಗಿದೆ. ಕೊಟ್ಟಮುಡಿ ಗ್ರಾಮದಲ್ಲಿ ಯುವಕರು ಮಳೆಯಲ್ಲಿ ಸಂಭ್ರಮಿಸಿದರು.

ಮಡಿಕೇರಿ ನಗರದಲ್ಲಿ ಸಾಧಾರಣ ಮಳೆಯಾಗಿದ್ದು, ಗುಡುಗು, ಸಿಡಿಲಿನ ಆರ್ಭಟ ಹೆಚ್ಚಿತ್ತು. ಬ್ರಹ್ಮಗಿರಿ ಹಾಗೂ ಪುಷ್ಪಗಿರಿ ಅರಣ್ಯ ಪ್ರದೇಶದಲ್ಲೂ ಉತ್ತಮ ಮಳೆಯಾಗಿದೆ. ಸುಂಟಿಕೊಪ್ಪದ ಜನತಾ ಕಾಲೊನಿಯ ಮೆಟ್ಟಿಲು ರಸ್ತೆ ಜಲಾವೃತಗೊಂಡಿತ್ತು.ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಾರ್ಟಳ್ಳಿ, ಮಹದೇಶ್ವರ ಬೆಟ್ಟ ವ್ಯಾಪ್ತಿಯಲ್ಲಿ ಹದ ಮಳೆಯಾಗಿದೆ.

ಬೀದರ್‌ನಲ್ಲಿ ಮಳೆ: ಬೀದರ್, ಹುಲಸೂರ, ಕಮಲನಗರ, ತಾಲ್ಲೂಕಿನಲ್ಲಿ ಬುಧವಾರ ಗುಡುಗು–ಬಿರುಗಾಳಿ ಸಹಿತ ಕೆಲ ಕಾಲ ಉತ್ತಮವಾಗಿ ಮಳೆಯಾಗಿದೆ.

ಬೀದರ್, ಹುಲಸೂರ, ಕಮಲನಗರ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಗುಡುಗು ಸಹಿತ ಮಳೆಯಾಗಿದೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಅರ್ಧಗಂಟೆ ಸಾಧಾರಣ ಮಳೆಯಾಗಿದೆ.

ತಂಪೆರೆದ ಮಳೆರಾಯ........ ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ಬುಧವಾರ ಸಂಜೆ ಸುರಿದ ಧಾರಾಕಾರ ಮಳೆಯಲ್ಲೇ ವಾಹನಗಳು ಸಾಗಿದವು – ಪ್ರಜಾವಾಣಿ ಚಿತ್ರ / ರಂಜು ಪಿ.

ಬೆಂಗಳೂರಿನಲ್ಲಿ ಕೆಲವೆಡೆ ವರ್ಷಧಾರೆ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಬುಧವಾರ ಸಂಜೆ ಬಿರುಸಿನ ಮಳೆಯಾಗಿದ್ದು, ರಾಜರಾಜೇಶ್ವರಿ ನಗರ ವಲಯದ ದೊಡ್ಡಬಿದರಕಲ್ಲು ವ್ಯಾಪ್ತಿಯಲ್ಲಿ 6.6 ಸೆಂ.ಮೀನಷ್ಟು ಮಳೆಯಾದ ವರದಿಯಾಗಿದೆ.

ನಗರದಾದ್ಯಂತ ಮಧ್ಯಾಹ್ನದವರೆಗೂ ಬಿರುಬಿಸಿಲಿತ್ತು. ನಾಲ್ಕೂವರೆ ಗಂಟೆ ಸುಮಾರಿಗೆ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿತು. ಸಂಜೆ 5.30 ರಿಂದ ಮಳೆ ಆರಂಭವಾಯಿತು. ಎಂ.ಜಿ.ರಸ್ತೆ, ರಾಜ್‌ಮಹಲ್ ಗುಟ್ಟಹಳ್ಳಿ, ಉತ್ತರಹಳ್ಳಿ, ಕೆಂಗೇರಿ, ರಾಜರಾಜೇಶ್ವರಿ ನಗರ, ಬಾಣಸವಾಡಿ ಭಾಗದಲ್ಲಿ ಉತ್ತಮ ಮಳೆಯಾಗಿದೆ. ರಾಜರಾಜೇಶ್ವರಿ ನಗರ, ನಾಯಂಡಹಳ್ಳಿಯಲ್ಲಿ ತಲಾ 5.1 ಸೆಂ.ಮೀ, ಮಾರುತಿ ಮಂದಿರ 4.2 ಸೆಂ.ಮೀ ಮಳೆಯಾಗಿದೆ. ವಿದ್ಯಾಪೀಠ, ಪುಲಕೇಶಿನಗರ, ವಿಶ್ವನಾಥ ನಾಗೇನಹಳ್ಳಿ ವ್ಯಾಪ್ತಿಯಲ್ಲಿ 3 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ.

ರಾಜ್ಯದಲ್ಲಿ ಮತ್ತೆರಡು ದಿನ ಮಳೆ ಮುಂದುವರಿಕೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಳೆದ ಮೂರು ದಿನಗಳಿಂದ ಮುಂಗಾರುಪೂರ್ವ ಮಳೆ ಸುರಿಯುತ್ತಿದ್ದು, ಮುಂದಿನ 48 ಗಂಟೆಗಳಲ್ಲಿ ಇದೇ ವಾತಾವರಣ ಮುಂದುವರಿಯಲಿದೆ. ಹಗಲು ಬಿಸಿಲು, ಮೋಡದ ವಾತಾವರಣ ಇರಲಿದ್ದು, ಸಂಜೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೇ 9ರಂದು ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಗುಡುಗು, ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಚಿತ್ರದುರ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ವಿಜಯನಗರ, ದಕ್ಷಿಣ ಕನ್ನಡ, ಬೀದರ್, ಕಲಬುರಗಿ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗಲಿದೆ. ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರುವ ಸಾಧ್ಯತೆ ಇದೆ. ಎರಡು ದಿನಗಳ ನಂತರ ರಾಜ್ಯದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಹವಮಾನ ಇಲಾಖೆ ವರದಿ ಮಾಡಿದೆ.

ಮಳೆ ಪ್ರಮಾಣ: ತುಮಕೂರು ಜಿಲ್ಲೆಯ ಚಿಕ್ಕನಹಳ್ಳಿಯಲ್ಲಿ 4 ಸೆಂಟಿ ಮೀಟರ್ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ಪರಶುರಾಂಪುರ, ಕೊಡಗು ಜಿಲ್ಲೆಯ ಹಾರಂಗಿಯಲ್ಲಿ 3 ಸೆಂ.ಮೀ., ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಹಾಸನ ಜಿಲ್ಲೆಯ ಬೇಲೂರು, ತುಮಕೂರು ಜಿಲ್ಲೆಯ ವೈ.ಎನ್. ಹೊಸಕೋಟೆಗಳಲ್ಲಿ 2 ಸೆಂ.ಮೀ. ಮಳೆ ದಾಖಲಾಗಿದೆ.

ತಗ್ಗು ಪ್ರದೇಶಗಳಲ್ಲಿರುವ ಮನೆಗಳಿಗೆ ನುಗ್ಗಿದ ನೀರು

ಕೋಲಾರ: 3 ದಿನಗಳಿಂದ ಮಳೆ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ವಿವಿಧೆಡೆ ಮಂಗಳವಾರ ತಡರಾತ್ರಿಯಿಂದ ಬುಧವಾರ ಬೆಳಗಿನ ಜಾವದವರೆಗೂ ಧಾರಾಕಾರ ಮಳೆ ಸುರಿದಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ.

ಮೂರು ದಿನಗಳಿಂದ ಜಿಲ್ಲೆಯಲ್ಲಿ ಮಳೆಯಾಗುತ್ತಿದೆ. ಕೆಜಿಎಫ್, ಮುಳಬಾಗಿಲು ಭಾಗದಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಜಮೀನುಗಳೂ ಜಲಾವೃತಗೊಂಡಿವೆ. ಇನ್ನು ಕೆಲವೆಡೆ ಬಿರುಗಾಳಿ ಸಹಿತ ಮಳೆಗೆ ಮನೆ ಹಾಗೂ ವಾಣಿಜ್ಯ ಮಳಿಗೆಗಳ ತಗಡಿನ ಚಾವಣಿ ಹಾರಿ ಹೋಗಿದ್ದು, ವಿದ್ಯುತ್ ಸಂಪರ್ಕ ಕಡಿದು ಹೋಗಿದೆ.

ಮುಳಬಾಗಿಲು ತಾಲ್ಲೂಕಿನ ಹನುಮನಹಳ್ಳಿಯಲ್ಲಿ 13.4 ಸೆಂ.ಮೀ. (134 ಮಿ.ಮೀ.) ಮಳೆಯಾಗಿದ್ದು, ಜಿಲ್ಲೆಯಲ್ಲಿಯೇ ಅತ್ಯಧಿಕ ಮಳೆ ಬಿದ್ದ ಪ್ರದೇಶವಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಕೋಲಾರ ಜಿಲ್ಲೆಯ ಕೆಜಿಎಫ್‌ನಲ್ಲಿ ಬುಧವಾರ ಬಿದ್ದ ಮಳೆಯ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿದೆ

ಕೆಜಿಎಫ್ ನಗರದಲ್ಲಿ ಬುಧವಾರ ಮುಂಜಾನೆ ಸುರಿದ ಧಾರಾಕಾರ ಮಳೆಯಿಂದ ನೂರಾರು ಮನೆಗಳಿಗೆ ನೀರು ನುಗ್ಗಿದ್ದು ಭಾರಿ ಪ್ರಮಾಣದ ಹಾನಿ ಉಂಟಾಗಿದೆ.

ನಗರದ ಮೈನಿಂಗ್ ಪ್ರದೇಶದ ತಗ್ಗು ಪ್ರದೇಶ, ಊರಿಗಾಂಪೇಟೆ, ಫಿಶ್‌ಲೈನ್‌ನಲ್ಲಿ ಮನೆಗಳಿಗೆ ಮಳೆ ನೀರು ನುಗ್ಗಿದ್ದರಿಂದ ದವಸ ಧಾನ್ಯ ಹಾಳಾಗಿವೆ. ರಾತ್ರಿಯಿಡೀ ನಿದ್ದೆಗೆಟ್ಟ ನಿವಾಸಿಗಳು ಮನೆಯೊಳಗೆ ನುಗ್ಗಿದ ನೀರನ್ನು ಹೊರ ಹಾಕಿದರು.

ಊರಿಗಾಂಪೇಟೆಯ ಮುಖ್ಯ-ರಸ್ತೆಯಲ್ಲಿ ರಾಜಕಾಲುವೆ ಒಂದು ಭಾಗ ನೆಲಕ್ಕುರಳಿದ ಕಾರಣ ಮಳೆ ನೀರು ಬಡಾವಣೆಗಳಿಗೆ ನುಗ್ಗಿದೆ. ಹಲವಾರು ಅಂಗಡಿ, ಮನೆಗಳು ನೀರಿನಲ್ಲಿ ನಿಂತಿವೆ.

8.4 ಸೆಂ.ಮೀ ಮಳೆ

ಶ್ರೀನಿವಾಸಪುರ ತಾಲ್ಲೂಕಿನ ರೋಣೂರಿನಲ್ಲಿ 8.4 ಸೆಂ.ಮೀ., ಗೌನಿಪಲ್ಲಿಯಲ್ಲಿ 7.7 ಸೆಂ.ಮೀ., ಕೋಲಾರ ತಾಲ್ಲೂಕಿನ ಮಣಿಘಟ್ಟದಲ್ಲಿ 8.3ಸೆಂ.ಮೀ., ಐತರಾಸನಹಳ್ಳಿಯಲ್ಲಿ 8 ಸೆಂ.ಮೀ., ಬಂಗಾರಪೇಟೆ ತಾಲ್ಲೂಕಿನ ಚಿನ್ನಕೋಟೆಯಲ್ಲಿ 7.9 ಸೆಂ.ಮೀ. ಮಳೆಯಾಗಿದೆ.

ಮುಳಬಾಗಿಲು ತಾಲ್ಲೂಕಿನ ದೇವರಾಯನಸಮುದ್ರದಲ್ಲಿ 6.1 ಸೆಂ.ಮೀ., ಹೆಬ್ಬಣಿಯಲ್ಲಿ 6.5 ಸೆಂ.ಮೀ., ಗುಮ್ಮಕಲ್ಲಿನಲ್ಲಿ 5.6 ಸೆಂ.ಮೀ., ಮಾಲೂರು ತಾಲ್ಲೂಕಿನ ದಿನ್ನೇಹಳ್ಳಿಯಲ್ಲಿ 5.8 ಸೆಂ.ಮೀ., ನೂಟುವೆಯಲ್ಲಿ 5.7 ಸೆಂ.ಮೀ., ಕುಡಿಯನೂರಲ್ಲಿ 5.6 ಸೆಂ.ಮೀ., ಕೇತಗನಹಳ್ಳಿಯಲ್ಲಿ 5.4 ಸೆಂ.ಮೀ. ಹಾಗೂ ಕೆಜಿಎಫ್‌ನ ಕ್ಯಾಸಂಬಳ್ಳಿಯಲ್ಲಿ 3.9 ಸೆಂ.ಮೀ. ಮಳೆಯಾಗಿದೆ.

ರೇವಾ ವಿವಿ ಬರೀ ಎಂಜಿನಿಯರಿಂಗ್ ಅಲ್ಲ; ವಿವಿಧ ಮನಸ್ಸುಗಳ ವೈವಿಧ್ಯ ಶಿಕ್ಷಣ ಸಂಸ್ಥೆ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಶೈಕ್ಷಣಿಕ ಜಗತ್ತಿನಲ್ಲಿ ಏನೇನೂ ಕದಲಿಕೆಗಳು, ಚಲನೆಗಳು ಆಗುತ್ತಿರುತ್ತವೆ. ಕೇವಲ ಶಿಕ್ಷಣದಲ್ಲಿ ಉತ್ಕೃಷ್ಟತೆ ಸಾಧಿಸಬೇಕು ಎಂಬುದರಿಂದ ಈಗ ಸಮಗ್ರ ಬೆಳವಣಿಗೆಗೆ ಹಾಗೂ ನಾವೀನ್ಯತೆ ಬೆಳೆಸುವ ಕಡೆಗೆ ಬದಲಾಗಿದೆ. ರೇವಾ ವಿಶ್ವವಿದ್ಯಾನಿಲಯದಲ್ಲಿ ನಾವು ಈ ಹೊಸ ತಲೆಮಾರಿನ ಕಲಿಕಾ ಸಿದ್ಧಾಂತವನ್ನು ಅಪ್ಪಿಕೊಂಡಿದ್ದೇವೆ. ವಿದ್ಯಾರ್ಥಿಗಳನ್ನು ಕ್ರಿಯಾತ್ಮಕ ವ್ಯಕ್ತಿಗಳಿಗೆ ರೂಪಿಸುತ್ತೇವೆ, ಅವರು ಕೇವಲ ಶಿಕ್ಷಣದಲ್ಲಿ ಮಾತ್ರ ಶ್ರೇಷ್ಠರಾಗಿ ಇರುವುದಿಲ್ಲ. ಇದರ ಜತೆಗೆ ಹೊಸದಕ್ಕೆ ತುಡಿಯುವವರಾಗಿ ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವವರಾಗಿ ಸಿದ್ಧರಾಗುತ್ತಾರೆ.

ಶಿಕ್ಷಣದಲ್ಲಿ ಅತ್ಯುತ್ಕೃಷ್ಟ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಬಹಳ ವೇಗವಾಗಿ ರೇವಾ ವಿಶ್ವವಿದ್ಯಾಲಯ ಪಡೆಯಿತು. ಒಂದು ದಶಕಕ್ಕೂ ಕಡಿಮೆ ಸಮಯದಲ್ಲಿ ದೇಶದ ಅತ್ಯುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ಒಂದು ಎಂದೆನಿಸಿಕೊಂಡಿದ್ದೇವೆ. ಅದರಲ್ಲೂ ನಿರ್ದಿಷ್ಟವಾಗಿ ಎಂಜಿನಿಯರಿಂಗ್ ಶಿಕ್ಷಣಕ್ಕೆ ಹೊರತಾದ ಪ್ರೋಗ್ರಾಮ್– ಗಳಲ್ಲಿ ನಮಗೆ ಈ ಹೆಸರು ಬಂದಿದೆ. ನಮ್ಮಲ್ಲಿನ ಅಚಲವಾದ ಸಮರ್ಪಣಾ ಭಾವ ಹಾಗೂ ಸಮಗ್ರವಾದ ಮತ್ತು ಮುಂದಾಲೋಚನೆಯ ಶಿಕ್ಷಣ ಒದಗಿಸುವುದಕ್ಕೆ ಈ ಯಶಸ್ಸು ಸಾಕ್ಷಿಯಾಗಿ ಕಾಣುತ್ತದೆ.

ಇಂದು ವಾಣಿಜ್ಯ ಮತ್ತು ಮ್ಯಾನೇಜ್ ಮೆಂಟ್ ಶಿಕ್ಷಣದೊಂದಿಗೆ ಭವಿಷ್ಯಕ್ಕೆ ಸಿದ್ಧರಾಗಿ

ತಾಂತ್ರಿಕೇತರ ಪ್ರೋಗ್ರಾಮ್ ಗಳ ಪೈಕಿ ವಾಣಿಜ್ಯ ಹಾಗೂ ಮ್ಯಾನೇಜ್ ಮೆಂಟ್ ವಿಷಯ ಬೋಧಿಸುವ ಬೋಧಕ ಸಿಬ್ಬಂದಿಯು ಎತ್ತರದಲ್ಲಿ ನಿಲ್ಲುತ್ತಾರೆ. ಅದಕ್ಕೆ ಕಾರಣ ಏನೆಂದರೆ ನವೀನ ಪಠ್ಯಕ್ರಮ ಮತ್ತು ಸಮಗ್ರ ಕಲಿಕಾ ಅನುಭವ. ಇಲ್ಲಿ ನೀಡುವಂಥ ಪ್ರೋಗ್ರಾಮ್ ಗಳು ಸಮಗ್ರವಾಗಿ ಇರುವುದಷ್ಟೇ ಅಲ್ಲ, ಅದರ ಜತೆಗೆ ಶೈಕ್ಷಣಿಕ ವ್ಯವಸ್ಥೆ ಹಾಗೂ ಉದ್ಯಮದ ನಡುವೆ ಇರುವಂಥ ಅಂತರಕ್ಕೆ ಸೇತುವೆಯಂತೆ ಕೆಲಸ ಮಾಡುವ ರೀತಿಯಲ್ಲಿ ಕಾರ್ಯತಂತ್ರವಾಗಿ ವಿನ್ಯಾಸ ಮಾಡಲಾಗಿದೆ ಎಂಬುದು ರೇವಾ ಯೂನಿವರ್ಸಿಟಿ– ಯಲ್ಲಿನ ಸ್ಕೂಲ್ ಆಫ್ ಕಾಮರ್ಸ್ ಬಗ್ಗೆ ಇರುವಂಥ ಹೆಮ್ಮೆಯಾಗಿದೆ. ಇಲ್ಲಿನ ಬಿ.ಕಾಂ., ಎಂ.ಕಾಂ., ಪಿಎಚ್‌.ಡಿ., ಕಾರ್ಯಕ್ರಮಗಳನ್ನು ಅದೆಷ್ಟು ಚೆನ್ನಾಗಿ ರೂಪಿಸಲಾಗಿದೆ ಅಂದರೆ, ಇದರಿಂದಾಗಿ ವಾಣಿಜ್ಯ ವಿಷಯದ ಬಗ್ಗೆ ಸಮಗ್ರವಾದ ತಿಳಿವಳಿಕೆ ದೊರೆಯುತ್ತದೆ, ಇದರ ಜತೆಗೆ ಆಯಾ ವಿದ್ಯಾರ್ಥಿಯ ಆದ್ಯತೆಗೆ ತಕ್ಕಂತೆ ಮತ್ತು ವೃತ್ತಿಪರವಾದ ಗುರಿಗೆ ತಕ್ಕಂತೆ ಸಿದ್ಧಪಡಿಸುವ ಸಾಧ್ಯತೆಯೂ ಇದೆ. ಪ್ರತಿ ವಿದ್ಯಾರ್ಥಿಯ ವಿಶಿಷ್ಟ ಅಗತ್ಯಕ್ಕೆ ತಕ್ಕಂತೆ ಶಿಕ್ಷಣ ಇರಬೇಕು ಎಂಬುದನ್ನು ನಾವು ಬಲವಾಗಿ ನಂಬುತ್ತೇವೆ.

ರೇವಾ ವಿಶ್ವವಿದ್ಯಾಲಯದಲ್ಲಿ ಇರುವಂಥ ದ ಸ್ಕೂಲ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಅದೇ ಶಿಕ್ಷಣ ಬೋಧಿಸುವ ಉಳಿದ ಸಂಸ್ಥೆಗಳಿಗಿಂತ ಮುಂದೆ ಇರುವುದರಲ್ಲಿ ನಂಬಿಕೆಯನ್ನು ಇರಿಸಿದೆ. ಮತ್ತು ಈಗಿನ ತಲೆಮಾರಿನ ಹೊಸ ಯುಗದ ವಿದ್ಯಾರ್ಥಿಗಳ ವಿಶಿಷ್ಟ ಅಗತ್ಯಗಳ ಬಗ್ಗೆ ನಮಗೆ ಗೊತ್ತಿದೆ. ಶಿಕ್ಷಣದಲ್ಲಿನ ಬದಲಾವಣೆಗಳನ್ನು ಗುರುತಿಸಿ, ಮತ್ತು ವಿದ್ಯಾರ್ಥಿಗಳಿಗೆ ಇವತ್ತು ಮುಖ್ಯ ವ್ಯಾಸಂಗದ ವಿಷಯಗಳನ್ನು ಕಲಿಯುವುದು ಮತ್ತು ಭವಿಷ್ಯದ ಅಗತ್ಯಕ್ಕೆ ಸಿದ್ಧಗೊಳ್ಳುವುದು ಎರಡೂ ಅಗತ್ಯವಾಗಿದೆ. ಹೊಸ ಕ್ಷೇತ್ರಗಳಲ್ಲಿ ಶೈಕ್ಷಣಿಕವಾಗಿ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಕಡೆಗೆ ನಿರಂತರ ಅನ್ವೇಷಣೆ ಮಾಡುವುದಕ್ಕೆ ನಮ್ಮ ಸಂಸ್ಥೆಯನ್ನು ಅರ್ಪಿಸಿಕೊಂಡಿದ್ದೇವೆ. ರೇವಾ ವಿಶ್ವವಿದ್ಯಾನಿಲಯದಲ್ಲಿನ ದ ಬ್ಯಾಚುಲರ್ ಆಫ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್ (ಬಿಬಿಎ) ಪ್ರೋಗ್ರಾಮ್‌ಗಳು ಸಾಂಪ್ರದಾಯಿಕ ಶಿಕ್ಷಣದ ಗಡಿಯ ಆಚೆಗೆ ಹೋಗುತ್ತದೆ. ವಿದ್ಯಾರ್ಥಿಗಳಿಗೆ ವಿಶಿಷ್ಟ ಮಿಶ್ರಣವಾದ ಶೈಕ್ಷಣಿಕ ಉತ್ಕೃಷ್ಟತೆ, ಉದ್ಯಮ ಸಂಯೋಜನೆ ಮತ್ತು ವೈಯಕ್ತಿಕ ಬೆಳವಣಿಗೆಗೆ ಸಮಗ್ರ ವಿಧಾನವನ್ನು ಒದಗಿಸುತ್ತದೆ. ಶೈಕ್ಷಣಿಕ ವ್ಯವಸ್ಥೆ ಮತ್ತು ಉದ್ಯಮದ ಮಧ್ಯೆ ಇರುವ ಅಂತರವನ್ನು ತುಂಬುವ ಸೇತುವೆಯಂತೆ ಈ ಪ್ರೋಗ್ರಾಮ್ ರೂಪಿಸಲಾಗಿದೆ. ನಮ್ಮಲ್ಲಿನ ಬಿಬಿಎ ಪ್ರೋಗ್ರಾಮ್ ವಿದ್ಯಾರ್ಥಿಗಳು ವೈವಿಧ್ಯಮಯ ಉದ್ಯಮ ಕ್ಷೇತ್ರಗಳು ಹಾಗೂ ಉದ್ಯಮಶೀಲತೆಯಲ್ಲಿ ಯಶಸ್ಸು ಕಾಣಲು ದಾರಿ ತೋರಿಸುತ್ತದೆ.

ನಾಯಕರ ಆಲೋಚನೆ, ಮಾನವಿಕ ಹಾಗೂ ಸಮಾಜ ವಿಜ್ಞಾನ ವಿಷಯ ಉತ್ತೇಜಿಸುವ ಸ್ಕೂಲ್ ಆಫ್ ಆರ್ಟ್ಸ್

ರೇವಾ ವಿಶ್ವವಿದ್ಯಾಲಯದಲ್ಲಿ ಇರುವಂತಹ ಸ್ಕೂಲ್ ಆಫ್ ಆರ್ಟ್ಸ್, ಹ್ಯುಮಾನಿಟೀಸ್ ಅಂಡ್ ಸೋಷಿಯಲ್ ಸೈನ್ಸಸ್ ಸಾಂಪ್ರದಾಯಿಕ ಗಡಿಗಳ ಆಚೆಗೆ ಪರಿವರ್ತನೆ ತರುವಂಥ ಶಿಕ್ಷಣವನ್ನು ನೀಡುವುದಕ್ಕೆ ಬದ್ಧವಾಗಿದೆ. ನಮ್ಮ ಪ್ರೋಗ್ರಾಮ್ ಗಳು ಪದವೀಧರರನ್ನು ಹೇಗೆ ಸಿದ್ಧ ಮಾಡುತ್ತವೆ ಅಂದರೆ, ಅವರು ತೆಗೆದುಕೊಂಡ ನಿರ್ದಿಷ್ಟ ವಿಷಯಗಳಲ್ಲಿ ಪರಿಣತಿ ಹೊಂದುವುದು ಮಾತ್ರವಷ್ಟೇ ಅಲ್ಲ, ಜತೆಗೆ ಸಮಕಾಲೀನ ಚಿಂತನೆ ಮತ್ತು ಸಂಶೋಧನೆಯಲ್ಲಿ ತೊಡಗಿಕೊಳ್ಳ ಬಲ್ಲಷ್ಟು ಸಾಮರ್ಥ್ಯ ಅವರಿಗೆ ಇರುತ್ತದೆ. ಆ ಮೂಲಕ ಅವರ ವೃತ್ತಿಪರ ಬದುಕನ್ನು ಶ್ರೀಮಂತಗೊಳಿಸಲಾಗುತ್ತದೆ. ನಮ್ಮಲ್ಲಿ ಪದವಿಪೂರ್ವ, ಸ್ನಾತಕೋತ್ತರ, ಮತ್ತು ಪಿಎಚ್‌.ಡಿ., ಪ್ರೋಗ್ರಾಮ್ ಗಳನ್ನು ಪತ್ರಿಕೋದ್ಯಮ, ಮನಶಾಸ್ತ್ರ ಇಂಗ್ಲಿಷ್ ಮತ್ತು ಪೊಲಿಟಿಕಲ್ ಸೈನ್ಸ್, ಅರ್ಥಶಾಸ್ತ್ರ– ಗಳಲ್ಲಿ ನೀಡಲಾಗುತ್ತದೆ.

ಇಷ್ಟು ಸಮಗ್ರವಾದ ವಿಭಾಗಗಳಲ್ಲಿ ನೀಡುವಂಥ ಕೋರ್ಸ್‌ಗಳಿಂದಾಗಿ ಶಿಕ್ಷಣಾರ್ಥಿಗಳು ಕಲೆ, ಮಾನವಿಕ ಶಾಸ್ತ್ರ ಸಮಾಜವಿಜ್ಞಾನ ವಿಷಯಗಳಲ್ಲಿ ವಿವಿಧ ಶೈಕ್ಷಣಿಕ ಮಟ್ಟದಲ್ಲಿ ಆಳವಾದ ಅಧ್ಯಯನವನ್ನು ಮಾಡಲು ಅವಕಾಶ ದೊರೆಯುತ್ತದೆ. ಕಲೆ ಮತ್ತು ಮಾನವಿಕ ಶಾಸ್ತ್ರ ಕ್ಷೇತ್ರದಲ್ಲಿ ವಿಶ್ವದಾದ್ಯಂತ ಅರ್ಥಪೂರ್ಣ ಮತ್ತು ನವೀನ ಮಾದರಿಯ ಬದಲಾವಣೆಗೆ ಸಾಕ್ಷಿ ಆಗುತ್ತಿದೆ. ರೇವಾ ವಿಶ್ವವಿದ್ಯಾನಿಲಯವು ಈ ಪರಿವರ್ತನೆಯ ಹಂತವನ್ನು ಗುರುತಿಸಿದ್ದು, ಈ ರೋಮಾಂಚಕಾರಿ ಬೆಳವಣಿಗೆಗೆ ಬೇಕಾದ ಕೊಡುಗೆಯನ್ನು ನಮ್ಮ ವಿದ್ಯಾರ್ಥಿಗಳು ನೀಡಲು ಮತ್ತು ಮಾರ್ಗ ಹುಡುಕುವುದಕ್ಕೆ ಬೇಕಾದ ದೃಷ್ಟಿಕೋನ ಹಾಗೂ ಪರಿಕರಗಳನ್ನು ನೀಡಲು ರೇವಾ ಶ್ರಮಿಸುತ್ತಿದೆ.

ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ನಲ್ಲಿ ಕಲಾ ಪಯಣ ಆರಂಭಿಸಿ

ಭಾರತದ ಸಾಂಸ್ಕೃತಿಕ ಶ್ರೀಮಂತಿಕೆಯು ಪ್ರದರ್ಶನ ಕಲೆಗಳ ಮೂಲಕ ತನ್ನ ನಿರಂತರವಾದ ಅಭಿವ್ಯಕ್ತಿ ಕಂಡುಕೊಳ್ಳುತ್ತದೆ. ಇದು ದೇಶದ ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿಯಾಗಿದೆ. ಪ್ರದರ್ಶನ ಕಲೆಗಳಲ್ಲಿ ವೃತ್ತಿಜೀವನಕ್ಕೆ ಹೆಚ್ಚುತ್ತಿರುವ ಬೇಡಿಕೆಯನ್ನು ಗುರುತಿಸಿ, ರೇವಾ ವಿಶ್ವವಿದ್ಯಾಲಯದಲ್ಲಿ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಮತ್ತು ಇಂಡಿಕ್ ಸ್ಟಡೀಸ್ **(SoPA & IS)** ಅನ್ನು ಡಾ. ಪಿ. ಶ್ಯಾಮ ರಾಜು ಅವರ ದೂರದೃಷ್ಟಿಯ ಮಾರ್ಗದರ್ಶನದಲ್ಲಿ ಸ್ಥಾಪಿಸಲಾಗಿದೆ. ಕಲೆಯ ಮೇಲಿನ ಉತ್ಸಾಹದಿಂದ ಉತ್ತೇಜಿತಗೊಂಡ ಈ ಶಾಲೆಯು ಸಂಗೀತ, ನೃತ್ಯ ಮತ್ತು ರಂಗಭೂಮಿಯ ವಿಭಾಗಗಳಲ್ಲಿ ಸುಶಿಕ್ಷಿತ ಮತ್ತು ಪ್ರತಿಭಾವಂತ ಕಲಾವಿದರನ್ನು ಪೋಷಿಸುವ ಗುರಿಯನ್ನು ಹೊಂದಿದೆ. ಭವಿಷ್ಯಕ್ಕಾಗಿ ಕಲಾವಿದರನ್ನು ಸಿದ್ಧಪಡಿಸಲು ಇಲ್ಲಿನ ಕಾರ್ಯಕ್ರಮಗಳನ್ನು ವಿನ್ಯಾಸ– ಗೊಳಿಸಲಾಗಿದೆ.

ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ನಲ್ಲಿ ಕಾನೂನು ಅಧ್ಯಯನ

ರೇವಾ ವಿಶ್ವವಿದ್ಯಾನಿಲಯದಲ್ಲಿನ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ಗಟ್ಟಿಯಾದ ಕಾನೂನು ಶಿಕ್ಷಣ ನೀಡುವುದಕ್ಕೆ ಬದ್ಧವಾಗಿದೆ. ಇಲ್ಲಿ ಪದವೀಧರರನ್ನು ಹೇಗೆ ಸಿದ್ಧಪಡಿಸಲಾಗುತ್ತದೆ ಅಂದರೆ, ಅವರಿಗೂ ಕಾನೂನು ಜ್ಞಾನದ ಮೂಲಭೂತ ತಿಳಿವಳಿಕೆ ನೀಡಲಾಗುತ್ತದೆ. ನಮ್ಮ ಪದವಿ ಪ್ರೋಗ್ರಾಂಗಳು ಪದವೀಧರರಿಗೆ ಅಗತ್ಯವಾದ ಕೌಶಲ, ಕಾನೂನಿನ ಸಂಕೀರ್ಣತೆಗಳನ್ನು ತಿಳಿಯುವುದಕ್ಕೆ ಬೇಕಾದ ಒಳನೋಟಗಳನ್ನು ದೊರೆಯುವಂತೆ ಮಾಡುತ್ತವೆ. ಐದು ವರ್ಷಗಳ ಅವಧಿಯ ಸಂಯೋಜಿತ ಕಾನೂನು ಕೋರ್ಸ್ ರೇವಾದಲ್ಲಿ ದೊರೆಯುತ್ತದೆ. ಇದರಲ್ಲಿ ಹತ್ತು ಸೆಮಿಸ್ಟರ್ ಗಳಿರುತ್ತವೆ. ಈ ಪ್ರೋಗ್ರಾಮ್ ಗಳಲ್ಲಿ ಬಿಎ., ಎಲ್ ಎಲ್ ಬಿ (ಆನರ್ಸ್) ಮತ್ತು ಬಿಬಿಎ., ಎಲ್ ಎಲ್ ಬಿ (ಆನರ್ಸ್) ಒಳಗೊಂಡಿದೆ. ವಿದ್ಯಾರ್ಥಿಗಳಿಗೆ ಸಮಗ್ರವಾದ ಕಾನೂನು ಶಿಕ್ಷಣವನ್ನು ಒದಗಿಸುತ್ತದೆ. ಇದು ಪಠ್ಯಪುಸ್ತಕದಲ್ಲಿ ಜ್ಞಾನ ಹಾಗೂ ಪ್ರಾಯೋಗಿಕ ಒಳನೋಟಗಳನ್ನು ಸಹ ಒದಗಿಸುತ್ತದೆ. ಇನ್ನು ನಮ್ಮ ಸಂಸ್ಥೆಯಲ್ಲಿ ಅದ್ಭುತವಾದ ಮೂಲಸೌಕರ್ಯ, ಇದರ ಜತೆಗೆ ಅಣುಕು ನ್ಯಾಯಾಲಯ, ಕೌನ್ಸೆಲಿಂಗ್ ವಿಭಾಗ, ಮತ್ತು ಪೂರ್ತಿ ಹವಾ ನಿಯಂತ್ರಿತ (ಏರ್ ಕಂಡೀಷನ್ಡ್) ಲೈಬ್ರರಿ, ಇದರ ಜತೆಗೆ ವಿವಿಧ ಮುದ್ರಿತ ಹಾಗೂ ಆನ್ ಲೈನ್ ಸಂಪನ್ಮೂಲಗಳು ಲಭ್ಯವಿವೆ. ಈ ಸೌಲಭ್ಯಗಳು ಕಾನೂನಿನ ಬಗ್ಗೆ ಹಾಗೂ ಕಾನೂನಿನ ಪ್ರಕ್ರಿಯೆಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹಾಗೂ ಪ್ರಚುರ ಪಡಿಸುವುದಕ್ಕೆ ಕೊಡುಗೆ ನೀಡುತ್ತವೆ.

ಡಾ ಪಿ ಶ್ಯಾಮರಾಜು

ಶಿವಮೊಗ್ಗದಲ್ಲಿ ಗ್ಯಾಂಗ್‌ವಾರ್: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಲಷ್ಕರ್ ಮೊಹಲ್ಲಾದಲ್ಲಿ ರೌಡಿ ಶೀಟರ್‌ಗಳ ಮಧ್ಯೆ ನಡೆದ ಗಲಭೆಯಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ಬುಧವಾರ ಸಂಜೆ ಸಂಭವಿಸಿದೆ.

ಘಟನೆಯಲ್ಲಿ ಮತ್ತೊಬ್ಬ ವ್ಯಕ್ತಿ ಗಾಯಗೊಂಡಿದ್ದಾನೆ. ಸ್ಥಿತಿ ಗಂಭೀರವಾಗಿದ್ದು, ಆತನನ್ನು ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ.

ಸಂಜೆ 5ರ ಹೊತ್ತಿಗೆ ಲಷ್ಕರ್ ಮೊಹಲ್ಲಾಕ್ಕೆ ಬಂದ ಕೆಲವರು ಸ್ಥಳೀಯ ರೌಡಿಶೀಟರ್ ಯಾಸೀನ್ ಖುರೇಶಿ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿದ್ದಾರೆ. ರಕ್ಷಣೆಗೆ ಬಂದ ಆತನ ಗ್ಯಾಂಗ್‌ನ ಸದಸ್ಯರು ಪ್ರತಿದಾಳಿ ನಡೆಸಿದ್ದಾರೆ.

ಈ ವೇಳೆ ದಾಳಿ ಮಾಡಲು ಬಂದವರ ತಂಡದಲ್ಲಿದ್ದ ಕೆ.ಆರ್. ಪುರಂ ನಿವಾಸಿ ಶೋಯಬ್ ಖಲಂದರ್ ಅಲಿಯಾಸ್ ಶೇಬು (32) ಹಾಗೂ ಅಣ್ಣಾನಗರ ನಿವಾಸಿ ಗೌಸ್ (30) ಮೇಲೆ ಖುರೇಶಿ ತಂಡದ ಸದಸ್ಯರು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಗಾಯಗೊಂಡು ಕೆಳಗೆ ಬಿದ್ದ ಅವರ ತಲೆಯ ಮೇಲೆ ಚಪ್ಪಡಿ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾರೆ. ಇದರಿಂದ ಲಷ್ಕರ್ ಮೊಹಲ್ಲಾ ಪ್ರದೇಶದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ.

ಘಟನೆಯಲ್ಲಿ ಯಾಸೀನ್ ಖುರೇಶಿ ಸಹ ತೀವ್ರ ಗಾಯಗೊಂಡಿದ್ದು, ಆತನ ಸ್ಥಿತಿ ಗಂಭೀರವಾಗಿದೆ.

ಎಸ್‌.ಪಿ ಪರಿಶೀಲನೆ: ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇನ್ನಷ್ಟು ಮಾಹಿತಿ ಪಡೆಯಲು ಸಿಬ್ಬಂದಿಯು ಸುತ್ತಲಿನ ಪ್ರದೇಶದ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳ ಪರಿಶೀಲನೆ ನಡೆಸುತ್ತಿದ್ದಾರೆ. ನಂತರ ವಿವರ ನಿಡಲಾಗುವುದು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಮಯೂರ, ಸುಧಾ ಓದಿರಿ

ಚಿತ್ರದುರ್ಗ: ಬಸವೇಶ್ವರ ಪ್ರತಿಮೆ ನಿರ್ಮಾಣ ಅಪೂರ್ಣ

ಉನ್ನತ ಮಟ್ಟದ ತನಿಖೆಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಆವರಣದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ 375 ಅಡಿ ಎತ್ತರದ ಬಸವೇಶ್ವರ ಪ್ರತಿಮೆ ನಿರ್ಮಾಣಕ್ಕಾಗಿ ಸರ್ಕಾರ ನೀಡಿದ ₹ 35 ಕೋಟಿ ಅನುದಾನಕ್ಕೆ ಅನುಗುಣವಾದ ಕಾಮಗಾರಿಯು ಮೇಲ್ನೋಟಕ್ಕೆ ಕಾಣುತ್ತಿಲ್ಲ ಎಂಬ ಅನುಮಾನ ವ್ಯಕ್ತಪಡಿಸಿರುವ ಹೆಚ್ಚುವರಿ ಜಿಲ್ಲಾಧಿಕಾರಿ ನೇತೃತ್ವದ ಸಮಿತಿ, ಉನ್ನತ ಮಟ್ಟದ ತನಿಖೆಗೆ ಶಿಫಾರಸು ಮಾಡಿದೆ.

‘ಬಸವೇಶ್ವರ ಪ್ರತಿಮೆಗೆ ಸರ್ಕಾರ ನೀಡಿದ ಅನುದಾನ ದುರ್ಬಳಕೆ ಆಗಿದೆ’ ಎಂದು ಆರೋಪಿಸಿ ಮಾಜಿ ಸಚಿವ ಎಚ್‌.ಏಕಾಂತಯ್ಯ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು. ಈ ಕುರಿತು ಪರಿಶೀಲನೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ನೇಮಿಸಲಾಗಿತ್ತು. ಸಮಿತಿಯ ವರದಿ ಮಂಗಳವಾರ (ಮೇ 7)ದಂದು ಜಿಲ್ಲಾಧಿಕಾರಿಗೆ ಸಲ್ಲಿಕೆಯಾಗಿದೆ.

‘ಬಸವೇಶ್ವರ ಪ್ರತಿಮೆ ನಿರ್ಮಾಣಕ್ಕೆ 12 ವರ್ಷಗಳಲ್ಲಿ ನಡೆದ ಕಾಮಗಾರಿ ಪ್ರಗತಿ ಸಾಧಿಸಿದ್ದು ತೀರಾ ಕಡಿಮೆ. ಮುಂದಿನ ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಕೂಡ ವಿರಳ’ ಎಂಬ ಅನುಮಾನ ಸಮಿತಿಯ ವರದಿಯಲ್ಲಿ ವ್ಯಕ್ತವಾಗಿದೆ.

‘ಬಸವೇಶ್ವರ ಪ್ರತಿಮೆ ನಿರ್ಮಾಣ ಕಾರ್ಯವನ್ನು ₹280.2 ಕೋಟಿ ಯೋಜನಾ ವೆಚ್ಚದಲ್ಲಿ ಮುರುಘಾ ಮಠ ಕೈಗೆತ್ತಿಕೊಂಡಿದೆ. ಪೀಠಕ್ಕೆ ₹90.2 ಕೋಟಿ ಹಾಗೂ ಪ್ರತಿಮೆಗೆ ₹190 ಕೋಟಿ ವಿನಿಯೋಗಿಸಲು ಅಂದಾಜು ಪಟ್ಟಿ ಸಿದ್ಧಪಡಿಸಿದೆ. ರಾಜ್ಯ ಸರ್ಕಾರ ಪ್ರತಿಮೆಗೆ 2011ರಿಂದ 2023ರವರೆಗೆ ₹40 ಕೋಟಿ ಅನುದಾನ ನೀಡಿದೆ. ಇದರಲ್ಲಿ ₹35 ಕೋಟಿಯನ್ನು ಮುರುಘಾ ಮಠಕ್ಕೆ ಹಸ್ತಾಂತರಿಸಲಾಗಿದ್ದು, ₹5 ಕೋಟಿ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದಲ್ಲಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಸರ್ಕಾರ ನೀಡಿದ ಅನುದಾನದಲ್ಲಿ ಈಗಾಗಲೇ ₹24.5 ಕೋಟಿ ಅನುದಾನ ವೆಚ್ಚವಾಗಿರುವುದಾಗಿ ಮಠದಿಂದ ಮಾಹಿತಿ ನೀಡಲಾಗಿದೆ. ಆದರೆ, ಖರ್ಚಿನ ಬಗ್ಗೆ ನಂಬಲರ್ಹ ದಾಖಲೆಗಳು ಲಭ್ಯವಾಗಿಲ್ಲ. ಸರ್ಕಾರಿ ಅನುದಾನ ಸಮರ್ಪಕವಾಗಿ ವಿನಿಯೋಗವಾಗಿಲ್ಲದ ಕಾರಣ ಕಾಮಗಾರಿ ಫಲಪ್ರದ ಆಗದಿರುವುದು ಕಂಡುಬಂದಿದೆ. ಮಠದ ಬ್ಯಾಂಕ್ ಖಾತೆಯಿಂದ ಹಲವು ಸಂಸ್ಥೆ ಮತ್ತು ವ್ಯಕ್ತಿಗಳಿಗೆ ಹಣ ಪಾವತಿಯಾಗಿದೆ. ಈ ವೆಚ್ಚ ಯೋಜನೆಗೆ ಸಂಬಂಧಿಸಿದ್ದೇ ಎಂಬುದು ಖಚಿತವಾಗಿಲ್ಲ’ ಎಂದು ಸಮಿತಿ ಹೇಳಿದೆ.

‘ಪ್ರತಿಮೆ ನಿರ್ಮಾಣಕ್ಕೆ ಸರ್ಕಾರಿ ಅನುದಾನ ಹೊರತುಪಡಿಸಿ ಉಳಿದ ₹240.2 ಕೋಟಿ ಹಣದ ಕ್ರೋಡೀಕರಣಕ್ಕೂ ಮಠದ ಬಳಿ ಸರಿಯಾದ ಯೋಜನೆಗಳಿಲ್ಲ. ಸಂಪನ್ಮೂಲ ಸಂಗ್ರಹಕ್ಕೆ ಮಠ ಪ್ರಯತ್ನಿಸದೇ ಇರುವುದರಿಂದ ಸರ್ಕಾರದ ಅನುದಾನ ಫಲಪ್ರದವಾಗಿಲ್ಲ ಎಂದೇ ಪರಿಗಣಿಸಬಹುದು. ದಶಕದಿಂದ ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿದೆ’ ಎಂಬ ಅಸಮಾಧಾನವನ್ನು ಸಮಿತಿ ವರದಿಯಲ್ಲಿ ವ್ಯಕ್ತಪಡಿಸಿದೆ.

ಚಿತ್ರದುರ್ಗದ ಮುರುಘಾ ಮಠದ ಹಿಂಭಾಗದಲ್ಲಿ ನಿರ್ಮಾಣ ಹಂತದಲ್ಲಿರುವ ಬಸವ ಪ್ರತಿಮೆಯ ಪಾದ ಪ್ರಜಾವಾಣಿ ಚಿತ್ರ– ವಿ.ಚಂದ್ರಪ್ಪ

ತಾಂತ್ರಿಕ ವರದಿ ಕೇಳಿದ ಜಿಲ್ಲಾಧಿಕಾರಿ

ಬಸವ ಪ್ರತಿಮೆ ನಿರ್ಮಾಣಕ್ಕೆ ಈವರೆಗೆ ನಡೆದ ಕಾಮಗಾರಿಯ ಬಗ್ಗೆ ತಾಂತ್ರಿಕ ವರದಿ ನೀಡುವಂತೆ ಲೋಕೋಪಯೋಗಿ ಇಲಾಖೆಗೆ ಜಿಲ್ಲಾಡಳಿತ ಸೂಚಿಸಿದೆ.

ಹೆಚ್ಚುವರಿ ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ಅನುದಾನ ಬಿಡುಗಡೆ, ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡಿದೆ. ಕಾಮಗಾರಿ ಪ್ರಗತಿಯ ನಿಖರ ಮಾಹಿತಿಗೆ ಲೋಕೋಪಯೋಗಿ ಇಲಾಖೆಯ ಎಂಜಿನಿಯರ್‌ಗಳ ಬಳಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ವರದಿ ಕೇಳಿದ್ದಾರೆ ಎಂದು ಮೂಲಗಳು ವಿವರಿಸಿವೆ.

‘ದೇವಸ್ಥಾನಗಳಲ್ಲಿ ವಸ್ತ್ರಸಂಹಿತೆ’

ಪ್ರಜಾವಾಣಿ ವಾರ್ತೆ

ಹಾಸನ: ‘ದೇವಸ್ಥಾನದ ಪಾವಿತ್ರ್ಯತೆ, ಶಿಷ್ಟಾಚಾರ, ಸಂಸ್ಕೃತಿ ಕಾಪಾಡಲು ರಾಜ್ಯದ 500 ಕ್ಕೂ ಅಧಿಕ ದೇವಸ್ಥಾನ-ಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಕಾರ ವಸ್ತ್ರ ಸಂಹಿತೆ ಜಾರಿಗೊಳಿಸಲು ಕರ್ನಾಟಕ ದೇವಸ್ಥಾನ - ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘದ ಅಧಿವೇ-ಶನದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ’ ಎಂದು ಹಿಂದೂ ಜನಜಾಗೃತಿ ಸಮಿತಿಯ ದಕ್ಷಿಣ ಕರ್ನಾಟಕದ ಸಮನ್ವಯಕ, ಕರ್ನಾಟಕ ದೇವಸ್ಥಾನ ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘದ ಮುಖ್ಯ ಆಯೋಜಕ ಚಂದ್ರ ಮೊಗವೀರ ಹೇಳಿದರು.

ನಗರದಲ್ಲಿ ಬುಧವಾರ ಪತ್ರಿಕಾ-ಗೋಷ್ಠಿಯಲ್ಲಿ ಮಾತನಾಡಿ, ‘ಪ್ರತಿ ದೇವಸ್ಥಾನದ ಮುಂಭಾಗ ವಸ್ತ್ರ ಸಂಹಿತೆಯ ಫಲಕ ಹಾಕಲಾಗುವುದು. ಭಕ್ತರು ತುಂಡು ಬಟ್ಟೆ ಧರಿಸಿ ಬರುವ ಬದಲು, ಭಾರತೀಯ ಸಂಸ್ಕೃತಿಯನ್ನು ಅನುಸರಿಸಬೇಕು ಎಂಬ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗುವುದು’ ಎಂದರು.

‘ಮಹಿಳೆಯರು ಚೂಡಿದಾರ್, ಲಂಗ-ದಾವಣಿ, ಸಲ್ವಾರ್-ಕುರ್ತಾ ಅಥವಾ ಸೀರೆ ಧರಿಸಬೇಕು. ಪುರುಷರು ಕುರ್ತಾ, ಧೋತಿ, ಲುಂಗಿ, ಪೈಜಾಮ ಅಥವಾ ಸಾಮಾನ್ಯ ಶರ್ಟ್-ಪ್ಯಾಂಟ್ ಹಾಕಬೇಕು. ಸ್ಕರ್ಟ್, ಮಿಡಿ, ಶಾರ್ಟ್ ಪ್ಯಾಂಟ್, ಸ್ಯಾಂಡೋ ವೆಸ್ಟ್, ಜೀನ್ಸ್, ಸ್ಕರ್ಟ್, ಸ್ಲೀವ್‌ಲೆಸ್ ಡ್ರೆಸ್, ನೈಟ್ ಡ್ರೆಸ್ ಧರಿಸಿ ಬರಬಾರದು’ ಎಂದರು.

ನಿಧನ ವಾರ್ತೆ

ಮಾಜಿ ಶಾಸಕ ವಸಂತ ಬಂಗೇರ

ಬೆಳ್ತಂಗಡಿ (ದಕ್ಷಿಣ ಕನ್ನಡ): ಬೆಳ್ತಂಗಡಿ ಕ್ಷೇತ್ರವನ್ನು ಐದು ಸಲ ಪ್ರತಿನಿಧಿಸಿದ್ದ ಮಾಜಿ ಶಾಸಕ ಕೆ. ವಸಂತ ಬಂಗೇರ (79) ಅಲ್ಪಕಾಲದ ಅಸೌಖ್ಯದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಕುವೆಟ್ಟು ಗ್ರಾಮದ ಕೇದೆ ಸುಬ್ಬ ಪೂಜಾರಿ ಮತ್ತು ದೇವಕಿ ದಂಪತಿಯ ಪುತ್ರರಾಗಿ 1946ರ ಜ.15 ರಂದು ಜನಿಸಿದ್ದ ಬಂಗೇರ ಅವರದು ಐದು ದಶಕಗಳ ಸುದೀರ್ಘ ರಾಜಕೀಯ ಜೀವನ. 1972ರಲ್ಲಿ ಕುವೆಟ್ಟು ಗ್ರಾಮ ಪಂಚಾಯಿತಿಯ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿ ಪಂಚಾಯಿತಿಯ ಅಧ್ಯಕ್ಷರಾಗುವ ಮೂಲಕ ಅವರ ರಾಜಕೀಯ ಬದುಕು ಆರಂಭಗೊಂಡಿತ್ತು. ಬಿಜೆಪಿ, ಜನತಾದಳ ಹಾಗೂ ಕಾಂಗ್ರೆಸ್ ಪಕ್ಷಗಳಿಂದ ಶಾಸಕರಾಗಿ ಆಯ್ಕೆಯಾದ ಹೆಗ್ಗಳಿಗೆ ಅವರದು. ಅವರು ವಿಧಾನಸಭೆಯ ಮುಖ್ಯ ಸಚೇತಕ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿದ್ದರು.

1983ರಲ್ಲಿ ಬಿಜೆಪಿಯಿಂದ ಗೆದ್ದು ಮೊದಲ ಸಲ ಶಾಸಕರಾಗಿದ್ದರು. 1985ರಲ್ಲಿ ರಾಜ್ಯದಲ್ಲಿ ಬಿಜೆಪಿಯಿಂದ ಗೆದ್ದಿದ್ದ ಇಬ್ಬರು ಶಾಸಕರಲ್ಲಿ ಬಂಗೇರ ಅವರೂ ಒಬ್ಬರು. ಆ ಅವಧಿಯಲ್ಲಿ ಬಿಜೆಪಿಯಿಂದ ಬಿ.ಎಸ್.ಯಡಿಯೂರಪ್ಪ ಅವರೂ ಶಾಸಕರಾಗಿದ್ದರು.

ಅವರಿಗೆ ಪತ್ನಿ ಸುಜಿತಾ ವಿ. ಬಂಗೇರ ಹಾಗೂ ಪುತ್ರಿಯರಾದ ಪ್ರೀತಿತಾ ಬಂಗೇರ, ಬಿನುತಾ ಬಂಗೇರ, ಅಳಿಯಂದಿರಾದ ಧರ್ಮ ವಿಜೇತ್ ಎಂ., ಸಂಜೀವ ಕಣೇಕಲ್, ಮೊಮ್ಮಕ್ಕಳು, ಸಹೋದರರಾದ ಕೆ.ಪ್ರಭಾಕರ ಬಂಗೇರ ಹಾಗೂ ರಮೇಶ ಬಂಗೇರ ಇದ್ದಾರೆ. ಅವರ ಪಾರ್ಥಿವ ಶರೀರವನ್ನು ಗುರುವಾರ ಬೆಂಗಳೂರಿನಿಂದ ಇಲ್ಲಿಗೆ ತರಲಾಗುತ್ತದೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಿ, ನಂತರ ಅಂತ್ಯಸಂಸ್ಕಾರ ನೆರವೇರಿಸಲಾ ಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಈ ಸಂಚಿಕೆಯ ಕೆಲವು ವಿಶೇಷಗಳು
‘ಅರುಣಾಚಲ’ ವಿವಾದ ಮತ್ತೆ ಕೆದಕಿದ ಚೀನಾ! | RBI ಗೆ 90 ವರ್ಷ | ಇರಾನ್–ಇಸ್ರೇಲ್ ಸಂಘರ್ಷ; ಏನು.. ಎತ್ತ..?
ಈ ಸಂಚಿಕೆಯಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳು, QR ಕೋಡ್ ಆಧಾರಿತ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು ಲಭ್ಯ
ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128
ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ
ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ
* ಷರತ್ತುಗಳು ಅನ್ವಯ

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಲೋಕಸಭೆ ಚುನಾವಣೆ ಮಹತ್ವದ ಅಂಶಗಳು

ಚನ್ನಬಸಪ್ಪ ರೊಟ್ಟಿ

ಭಾರತ ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಪ್ರಸ್ತುತ ಭಾರತದಲ್ಲಿ 2024, ಏಪ್ರಿಲ್ 19ರಿಂದ ಜೂನ್ 1ರವರೆಗೆ ಏಳು ಹಂತಗಳಲ್ಲಿ ಲೋಕಸಭೆಯ 18ನೇ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು, ಲೋಕಸಭೆ ಹಾಗೂ ಲೋಕಸಭೆ ಚುನಾವಣೆಗೆ ಸಂಬಂಧಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮೇಲಿಂದ ಮೇಲೆ ಕೇಳಿರುವ ಹಾಗೂ ಕೇಳಬಹುದಾದ ಪ್ರಶ್ನೆಗಳನ್ನು ಆಧರಿಸಿ ಕೆಲ ಪ್ರಮುಖ ಅಂಶಗಳನ್ನು ಇಲ್ಲಿ ನೀಡಲಾಗಿದೆ.

- ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಪ್ರಾಂತೀಯ ಕೌನ್ಸಿಲ್‌ಗಳಿಗೆ ಸದಸ್ಯರನ್ನು ಆಯ್ಕೆ ಮಾಡಲು 1920ರಲ್ಲಿ ಬ್ರಿಟಿಷ್ ಭಾರತದಲ್ಲಿ ಚುನಾವಣೆಗಳು ನಡೆದವು. ಇವು ದೇಶದ ಆಧುನಿಕ ಇತಿಹಾಸದಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಗಳಾಗಿವೆ.
- ಭಾರತದ ಲೋಕಸಭೆಗೆ ಮೊದಲ ಸಾರ್ವತ್ರಿಕ ಚುನಾವಣೆಗಳು 25 ಅಕ್ಟೋಬರ್ 1951ರಿಂದ 21 ಫೆಬ್ರುವರಿ 1952ರವರೆಗೆ ನಡೆದವು. ಮೊದಲ ಲೋಕಸಭೆಯ ಮೊದಲ ಅಧಿವೇಶನ 13 ಮೇ 1952ರಂದು ಪ್ರಾರಂಭವಾಯಿತು.
- ಮೊದಲ ಲೋಕಸಭೆಯಲ್ಲಿ 489 ಸ್ಥಾನಗಳಿಗೆ ಆಯ್ಕೆ ನಡೆದಿತ್ತು. 1996ರಿಂದ 2024ರವರೆಗೆ 543 ಸ್ಥಾನಗಳಿಗೆ ಆಯ್ಕೆ ನಡೆಯುತ್ತಿದೆ.
- 1984ರಲ್ಲಿ ನಡೆದ 8ನೇ ಲೋಕಸಭೆ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಗಳಿಸಿದ ಶೇ 48.12ರಷ್ಟು ಮತಗಳ ಪ್ರಮಾಣ ಇಲ್ಲಿಯವರೆಗಿನ ಅತ್ಯಧಿಕ ಮತಗಳಿಕೆಯ ಪ್ರಮಾಣವಾಗಿದೆ.
- ಸ್ವತಂತ್ರ ಭಾರತದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮೊತ್ತಮೊದಲು ಮತ ಚಲಾಯಿಸಿದವರು ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ಕಲ್ಪಾ ಗ್ರಾಮದ ಶ್ಯಾಮ್ ಶರಣ್ ನೇಗಿ.
- ಭಾರತದ ಮೊದಲ ಲೋಕಸಭಾ ಸ್ಪೀಕರ್ ಗಣೇಶ್ ವಾಸುದೇವ್ ಮಾವಲಂಕರ್. (1952 ರಿಂದ 1956)
- ಲೋಕಸಭೆಯ ಮೊದಲ ಮಹಿಳಾ ಸ್ಪೀಕರ್ ಮೀರಾ ಕುಮಾರ್ (2009 ರಿಂದ 2014). ಅವರು 15ನೇ ಲೋಕಸಭೆಯ ಸ್ಪೀಕರ್ ಆಗಿದ್ದರು.
- ಲೋಕಸಭಾ ಸದಸ್ಯರ ಅವಧಿ 5 ವರ್ಷಗಳಾಗಿರುತ್ತದೆ. (ವಿಸರ್ಜನೆ ಹೊರತುಪಡಿಸಿ)
- ಸ್ಪೀಕರ್ ಅನುಮೋದನೆಯೊಂದಿಗೆ ಲೋಕಸಭೆಯಲ್ಲಿ ಮಾತ್ರ 'ಹಣಕಾಸಿನ ಮಸೂದೆ' ಮಂಡಿಸಬಹುದು.
- ಸಂಸತ್ತಿನ ಸದನದಲ್ಲಿ ಸದಸ್ಯರು ನಿರ್ದಿಷ್ಟ ಸಚಿವರಿಗೆ ಪ್ರಶ್ನೆಯೊಂದನ್ನು ಕೇಳಿ ಅದಕ್ಕೆ ಮೌಖಿಕ ವಿವರಣೆಯನ್ನು ನಿರೀಕ್ಷಿಸಿದರೆ, ಅದನ್ನು 'ಚುಕ್ಕೆ ಗುರುತಿನ ಪ್ರಶ್ನೆ' (Star Mark) ಎಂದು ಕರೆಯಲಾಗುತ್ತದೆ.
- ಲೋಕಸಭೆ ಅಧಿವೇಶನದ ಒಂದೇ ದಿನದಲ್ಲಿ ಗರಿಷ್ಠ 20 'ಚುಕ್ಕೆ ಗುರುತಿನ ಪ್ರಶ್ನೆ'ಗಳನ್ನು ಕೇಳಬಹುದು.ಲೋಕಸಭೆಯನ್ನು 'ಸಂಸತ್ತಿನ ಕೆಳಮನೆ' ಎಂದು ಕರೆಯಲಾಗುತ್ತದೆ.
- ಸಾರ್ವತ್ರಿಕ ವಯಸ್ಕ ಮತದಾನ ಎಂದರೆ, 18 ವರ್ಷ ಮೀರಿದ ಎಲ್ಲರಿಗೂ ಯಾವುದೇ ಭೇದವಿಲ್ಲದೇ ಮತದಾನದ ಅವಕಾಶವನ್ನು ಒದಗಿಸುವುದಾಗಿದೆ. (ಮುಂಚೆ ಇದು 21 ವರ್ಷಗಳಾಗಿತ್ತು)
- ಪ್ರಸ್ತುತ ಭಾರತದ ಲೋಕಸಭೆಯ ಸದಸ್ಯರ ಒಟ್ಟು ಸಂಖ್ಯೆ 545 ಇವರ ಪೈಕಿ 543 ಜನ ನೇರವಾಗಿ ಜನರಿಂದ ಆಯ್ಕೆಯಾದರೆ, ಇಬ್ಬರನ್ನು ಭಾರತದ ಸಂವಿಧಾನದ 331ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿ ನಾಮನಿರ್ದೇಶನ ಮಾಡುತ್ತಾರೆ.
- 17ನೇ ಲೋಕಸಭೆಗೆ (2019) ಯಾವುದೇ ನಾಮನಿರ್ದೇಶಿತ ಸದಸ್ಯರನ್ನು ಭಾರತದ ರಾಷ್ಟ್ರಪತಿ ನಾಮನಿರ್ದೇಶನ ಮಾಡಿಲ್ಲ.
- ಲೋಕಸಭೆಗೆ ಆಯ್ಕೆಯಾಗಬೇಕಾದರೆ, ಭಾರತದ ಸಂವಿಧಾನದ 84ನೇ ವಿಧಿಯ ಪ್ರಕಾರ, ಒಬ್ಬ ವ್ಯಕ್ತಿಯು ಭಾರತೀಯ ಪ್ರಜೆಯಾಗಿರಬೇಕು, ಕನಿಷ್ಠ 25 ವರ್ಷ ವಯಸ್ಸಿನವರಾಗಿರಬೇಕು ಮತ್ತು ಸಂಸತ್ತು ರೂಪಿಸಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸೂಚಿಸಬಹುದಾದ ಇತರ ಅರ್ಹತೆಗಳನ್ನು ಹೊಂದಿರಬೇಕು.
- ಭಾರತದ ಸಂವಿಧಾನದ 94, 101ನೇ ವಿಧಿಯನ್ವಯ ಲೋಕಸಭೆ ವಿಸರ್ಜನೆಯ ನಂತರವೂ ಮುಂದಿನ ಲೋಕಸಭೆ ಅಸ್ತಿತ್ವಕ್ಕೆ ಬಂದು ಮುಂದಿನ ಸ್ಪೀಕರ್ ಆಯ್ಕೆ ಆಗುವವರೆಗೆ ಸ್ಪೀಕರ್ ಅಧಿಕಾರಾವಧಿ ಮುಂದುವರಿಯುತ್ತದೆ.
- ಭಾರತದ ಸಂವಿಧಾನದ 102ನೇ ವಿಧಿಯನ್ವಯ ಲೋಕಸಭೆಯ ಸ್ಪೀಕರ್ ಆಯ್ಕೆ ನಡೆಯುತ್ತದೆ.
- ಲೋಕಸಭೆಯು ನೇರ ಚುನಾವಣೆ ಮೂಲಕ ಆಯ್ಕೆಯಾದ ಜನಪ್ರತಿನಿಧಿಗಳಿಂದ ಕೂಡಿದೆ. ಅದಕ್ಕಾಗಿಯೇ ಇದನ್ನು 'ಜನಪ್ರಿಯ ಚೇಂಬರ್' ಎಂದು ಕರೆಯಲಾಗುತ್ತದೆ.
- ಸಾಮಾನ್ಯವಾಗಿ ಒಂದು ವರ್ಷದಲ್ಲಿ ಲೋಕಸಭೆಯ ಮೂರು ಅಧಿವೇಶನಗಳು ನಡೆಯುತ್ತವೆ ಅವುಗಳೆಂದರೆ: ಬಜೆಟ್ ಅಧಿವೇಶನ (ಫೆಬ್ರುವರಿ-ಮೇ), ಮಾನ್ಸೂನ್ ಅಧಿವೇಶನ (ಜುಲೈ-ಆಗಸ್ಟ್), ಚಳಿಗಾಲದ ಅಧಿವೇಶನ (ನವೆಂಬರ್-ಡಿಸೆಂಬರ್).
- ಭಾರತದ ಚುನಾವಣಾ ಆಯೋಗ (ECI) ಸ್ವಾಯತ್ತ ಪ್ರಾಧಿಕಾರವಾಗಿದೆ.
- ಚುನಾವಣಾ ಆಯೋಗದ ಮೂಲ ಕಾಯ್ದೆಯ ಪ್ರಕಾರ ಒಬ್ಬ ಚುನಾವಣಾ ಆಯುಕ್ತರನ್ನು ಮಾತ್ರ ನೇಮಕ ಮಾಡಲು ಅವಕಾಶವಿತ್ತು. 1989ರವರೆಗೆ ಅದೇ ಪದ್ಧತಿ ಚಾಲ್ತಿಯಲ್ಲಿತ್ತು. 1989ರ ಚುನಾವಣೆ ಸಂದರ್ಭದಲ್ಲಿ ಎದುರಾದ ಬಿಕ್ಕಟ್ಟುಗಳ ಕಾರಣದಿಂದ ಇನ್ನೂ ಇಬ್ಬರು ಆಯುಕ್ತರನ್ನು ನೇಮಕ ಮಾಡಲಾಗಿತ್ತು. 90ರ ದಶಕದಲ್ಲಿ ಕಾನೂನುಗಳಿಗೆ ತಿದ್ದುಪಡಿ ತಂದು ಒಟ್ಟು ಮೂವರು ಆಯುಕ್ತರನ್ನು ನೇಮಕ ಮಾಡುತ್ತಾ ಬರಲಾಗಿದೆ.
- ಭಾರತದ ಚುನಾವಣಾ ಆಯೋಗದ ಮೊದಲ ಮುಖ್ಯ ಚುನಾವಣಾ ಆಯುಕ್ತ ಸುಕುಮಾರ್ ಸೇನ್ ಆಗಿದ್ದರು. ಪ್ರಸ್ತುತ ಭಾರತದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಆಗಿದ್ದು, ಜ್ಞಾನೇಶ್ ಕುಮಾರ್ ಮತ್ತು ಸುಖ್ಬೀರ್ ಸಿಂಗ್ ಸಂಧು ಚುನಾವಣಾ ಆಯುಕ್ತರಾಗಿದ್ದಾರೆ.
- ಚುನಾವಣಾ ಅಕ್ರಮ ತಡೆಯಲು 1997ರ ಸಾರ್ವತ್ರಿಕ ಚುನಾವಣೆಗಳಿಂದ ಮತಪೆಟ್ಟಿಗೆಗಳ ಬದಲಿಗೆ ಎಲೆಕ್ಟ್ರಾನಿಕ್ ಮತಯಂತ್ರಗಳನ್ನು (ಇವಿಎಂ) ಬಳಸಲಾಗುತ್ತಿದೆ.
- ನಾಗಾಲ್ಯಾಂಡ್‌ನಲ್ಲಿ 14 ಆಗಸ್ಟ್ 2014ರಂದು ಮೊದಲಬಾರಿಗೆ VVPAT (Voter Verifiable Paper Audit Trail) ಅನ್ನು ಪರಿಚಯಿಸಲಾಯಿತು.
- VVPAT ಮೂಲಕ ರಚಿಸಲಾದ ಸ್ಲಿಪ್ ಮತದಾರರಿಗೆ ಅವರ ಮತವನ್ನು ಯಾವ ಪಕ್ಷ ಅಥವಾ ಅಭ್ಯರ್ಥಿಗೆ ನೀಡಲಾಗಿದೆ, ಅವರ ಹೆಸರು, ಅವರ ಕ್ಷೇತ್ರ ಮತ್ತು ಅವರ ಮತಗಟ್ಟೆ ಸಂಖ್ಯೆಯನ್ನು ತಿಳಿಸುತ್ತದೆ.
- 2014ರ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ, VVPAT ಅನ್ನು ಪ್ರಾಯೋಗಿಕವಾಗಿ ಲಕ್ನೋ, ಗಾಂಧಿನಗರ, ಬೆಂಗಳೂರು ದಕ್ಷಿಣ, ಚೆನ್ನೈ ಸೆಂಟ್ರಲ್, ಜಾಧವ್‌ಪುರ, ರಾಯ್‌ಪುರ, ಪಟ್ನಾ ಸಾಹಿಬ್ ಮತ್ತು ಮಿಜೋರಾಂ ಈ 8 ಲೋಕಸಭಾ ಕ್ಷೇತ್ರಗಳಲ್ಲಿ ಬಳಸಲಾಯಿತು.
- ಭಾರತೀಯ ಚುನಾವಣಾ ಆಯೋಗ 2024ರ ಲೋಕಸಭಾ ಚುನಾವಣೆಯಲ್ಲಿ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಅನುಕೂಲವಾಗುವ ನಿಟ್ಟಿನಲ್ಲಿ 'ಮನೆಯಿಂದಲೇ ಮತದಾನ' ಮಾಡುವ ವ್ಯವಸ್ಥೆ ಜಾರಿಗೊಳಿಸಿದೆ.
- 1961ರಲ್ಲಿ ಜಾರಿಗೊಳಿಸಿದ್ದ 'ನಿಯಮ 49-O' ಮತದಾರ ತನ್ನ ಮತವನ್ನು ಚಲಾಯಿಸದೇ ಇರಲು ನಿರ್ಧರಿಸಿದಾಗ ಮತ್ತು ಈ ಸತ್ಯವನ್ನು ಆತ / ಆಕೆ ದಾಖಲಿಸಲು ನಿರ್ಧರಿಸಿದಾಗ ಅನುಸರಿಸಬೇಕಾದ ಕಾರ್ಯವಿಧಾನ ಒಳಗೊಂಡಿತ್ತು. ಈ ನಿಯಮ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ಸೆಪ್ಟೆಂಬರ್ 2013ರಲ್ಲಿ ಸುಪ್ರೀಂ ಕೋರ್ಟ್ ಘೋಷಿಸಿತು.
- ನಂತರ 27 ಸೆಪ್ಟೆಂಬರ್ 2013 ರಂದು, ಸುಪ್ರೀಂಕೋರ್ಟ್ 'ಮೇಲಿನ ಯಾವುದೂ ಅಲ್ಲ' (NOTA) ಆಯ್ಕೆಯನ್ನು ಚಲಾಯಿಸುವ ಮೂಲಕ ಋಣಾತ್ಮಕ ಮತ ಚಲಾಯಿಸುವ ಹಕ್ಕು ನಾಗರಿಕರಿಗೆ ಇದೆ ಎಂದು ತೀರ್ಪು ನೀಡಿತು.
- ನವೆಂಬರ್ 2013ರಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ 'NOTA'ವನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಯಿತು.
- 2024ರ ಲೋಕಸಭಾ ಚುನಾವಣೆ ಇತಿಹಾಸದಲ್ಲಿಯೇ ಅತ್ಯಂತ ದುಬಾರಿ ಹಾಗೂ ಸುದೀರ್ಘ ಅವಧಿಯ ಚುನಾವಣೆಯಾಗಿದ್ದು, 7 ಹಂತಗಳಲ್ಲಿ ನಡೆಯುತ್ತಿದ್ದು, ಮೊದಲ ಹಂತದ ಮತದಾನ ಏಪ್ರಿಲ್ 19ರಂದು ಆರಂಭವಾಯಿತು. ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದೆ. ಒಟ್ಟು ವೆಚ್ಚ ₹ 1 ಲಕ್ಷ ಕೋಟಿ ಮೀರಲಿದೆ ಎಂದು ಅಂದಾಜಿಸಲಾಗಿದೆ.

ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ..

1. ಸ್ವಾತಂತ್ರ್ಯಪೂರ್ವದ ಮೊದಲ ಕಾನೂನು ಆಯೋಗದ ಅಧ್ಯಕ್ಷತೆಯನ್ನು ಕೆಳಗಿನ ಯಾವ ಬ್ರಿಟಿಷ್ ಅಧಿಕಾರಿಗಳು ವಹಿಸಿದ್ದರು?

ಎ. ಲಾರ್ಡ್ ಮೆಕಾಲೆ
ಬಿ. ಲಾರ್ಡ್ ವಿಲಿಯಂ ಬೆಂಟಿಕ್
ಸಿ. ವಾರನ್ ಹೇಸ್ಟಿಂಗ್ಸ್
ಡಿ. ಲಾರ್ಡ್ ವೆಲ್ಲೆಸ್ಲಿ

ಉತ್ತರ: ಎ

2. ಭಾರತೀಯ ಕಾನೂನು ಆಯೋಗದ ಸ್ವರೂಪಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಭಾರತೀಯ ಕಾನೂನು ಆಯೋಗದ ಸ್ವರೂಪವನ್ನು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ.
2. ಭಾರತೀಯ ಕಾನೂನು ಆಯೋಗದ ಸ್ವರೂಪವನ್ನು ಅವಶ್ಯಕತೆಗೆ ಅನುಗುಣವಾಗಿ ಸರ್ಕಾರ ಬದಲಾಯಿಸುತ್ತದೆ.
3. ಭಾರತೀಯ ಕಾನೂನು ಆಯೋಗದ ಅಧ್ಯಕ್ಷೀಯ ಸ್ಥಾನದಲ್ಲಿ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳು ಮಾತ್ರ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 2 ಮತ್ತು3 ಡಿ. 1 ಮತ್ತು3

ಉತ್ತರ: ಸಿ

3. ಚಂಡಿ ಪ್ರಸಾದ್ ಭಟ್ ಅವರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಚಂಡಿ ಪ್ರಸಾದ್ ಭಟ್ ಅವರು ಗಾಂಧಿವಾದಿಗಳಾಗಿರಲಿಲ್ಲ.
2. ಚಂಡಿ ಪ್ರಸಾದ್ ಭಟ್ ಅವರು ಸಾಮಾಜಿಕ ಕಾರ್ಯಕರ್ತರು ಮತ್ತು ಪರಿಸರ ಪ್ರೇಮಿಯಾಗಿದ್ದರು.
3. ದಶೋಲಿ ಗ್ರಾಮ ಸ್ವರಾಜ್ಯ ಮಂಡಲವನ್ನು ಚಂಡಿ ಪ್ರಸಾದ್ ಭಟ್ ಅವರು ಸ್ಥಾಪಿಸಿದರು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 2 ಮತ್ತು 3
ಸಿ. 3 ಮಾತ್ರ ಡಿ. 2 ಮಾತ್ರ

ಉತ್ತರ: ಬಿ

4. ಭಾರತದ ಪರಿಸರ ಸಂರಕ್ಷಣಾ ಚಳವಳಿಗಳು ಮತ್ತು ಸ್ಥಳಗಳ ಬಗ್ಗೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಬಿಷ್ಣೋಯ್ ಚಳವಳಿಯನ್ನು ರಾಜಸ್ಥಾನದ ಕೆಜೂಲಿ ಮತ್ತು ಮಾನ್ವಾರ್‌ನಲ್ಲಿ ಹಮ್ಮಿಕೊಳ್ಳಲಾಯಿತು.
2. ಬಿಷ್ಣೋಯ್ ಚಳವಳಿಗೆ ಅಮೃತದೇವಿಯವರು ನಾಯಕತ್ವವನ್ನು ಒದಗಿಸಿದರು.
3. ಸೇವ್ ಅರೆ ಚಳವಳಿಯ ನಾಯಕತ್ವವನ್ನು ಮೇಧಾ ಪಾಟ್ಕರ್ ಮತ್ತು ಅರುಂಧತಿ ರಾಯ್ ಅವರು ವಹಿಸಿದರು.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 1 ಮಾತ್ರ
ಸಿ. 2 ಮಾತ್ರ ಡಿ. 2 ಮತ್ತು 3

ಉತ್ತರ: ಎ

5. ಕೆಳಗಿನ ಯಾವ ಸ್ಥಳಗಳಲ್ಲಿ ಭಾಷಾ ಅಲ್ಪಸಂಖ್ಯಾತ ಆಯುಕ್ತರ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸಲಾಗಿದೆ?

1. ಬೆಂಗಳೂರು, ಕರ್ನಾಟಕ.
2. ಬೆಳಗಾವಿ, ಕರ್ನಾಟಕ.
3. ಚೆನ್ನೈ, ತಮಿಳುನಾಡು.
4. ಕೋಲ್ಕತ್ತಾ, ಪಶ್ಚಿಮ ಬಂಗಾಳ.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.

ಎ. 2, 3 ಮತ್ತು 4 ಬಿ. 1, 2 ಮತ್ತು 3
ಸಿ. 1 ಮತ್ತು 4 ಡಿ. 2 ಮತ್ತು 4

ಉತ್ತರ: ಎ

6. ಭಾಷಾವಾರು ಅಲ್ಪಸಂಖ್ಯಾತ ಅಧಿಕಾರಿಯ ಹುದ್ದೆಯನ್ನು ಸ್ಥಾಪಿಸುವಂತೆ ಕೆಳಗಿನ ಯಾವ ಆಯೋಗ ಶಿಫಾರಸ್ಸು ನೀಡಿತು?

ಎ. ಜೆ.ವಿ.ಪಿ ಸಮಿತಿ.
ಬಿ. ಎಸ್. ಕೆ. ದಾರ್ ಆಯೋಗ.
ಸಿ. ಫಜಲ್ ಅಲಿ ಆಯೋಗ.
ಡಿ. ಮಹಾಜನ್ ಆಯೋಗ.

ಉತ್ತರ: ಸಿ

7. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರು ಕೆಳಗಿನ ಯಾವ ದರ್ಜೆಯ ಸ್ಥಾನಮಾನವನ್ನು ಹೊಂದಿರುತ್ತಾರೆ?

ಎ. ಸಂಪುಟ ದರ್ಜೆಯ ಸಚಿವರ ಸ್ಥಾನಮಾನ.
ಬಿ. ರಾಜ್ಯ ಸಚಿವರ ಸ್ಥಾನಮಾನ.
ಸಿ. ಉಪ ಸಚಿವರ ಸ್ಥಾನಮಾನ.
ಡಿ. ಸಂಪುಟ ಕಾರ್ಯದರ್ಶಿಯ ಸ್ಥಾನಮಾನ.

ಉತ್ತರ: ಎ

8. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಕೆಳಗಿನ ಯಾವ ಕಾರ್ಯಗಳನ್ನು ನಿರ್ವಹಿಸುತ್ತದೆ?

1. ರಾಷ್ಟ್ರೀಯ ವಿಪತ್ತು ನಿರ್ವಹಣಾ ನೀತಿಯನ್ನು ಜಾರಿಗೆ ತರುವುದು.
2. ರಾಷ್ಟ್ರೀಯ ವಿಪತ್ತು ನಿರ್ವಹಣಾ ಯೋಜನೆಯನ್ನು ಅನುಮೋದಿಸುವುದು.
3. ರಾಜ್ಯಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಪತ್ತು ನಿರ್ವಹಣಾ ಪ್ರಾಧಿಕಾರಗಳಿಗೆ ಅವಶ್ಯಕ ನಿಯಮಾವಳಿಗಳನ್ನು ರೂಪಿಸುವುದು.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 2 ಮತ್ತು 3

ಉತ್ತರ: ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Unit-1 Prose : A Hero

Know about the Author

R.K.Narayan is widely considered to be one of India's greatest English language novelists known for simple and unpretentious writing style. He is best known for his works set in the fictional South Indian town of Malgudi. His works include Swami and his Friends, The Bachelor of Arts, The English Teacher and The Financial Expert. His novel, The Guide was adapted for film, it won Sahitya Academy Award. He highlights, social content and provides a feel for his characters through everyday life. He was nominated to the Rajya Sabha, the upper house of India's parliament.

Question and Answer

1) Swami's father drew his attention to a report in the newspaper. What was the report about?

Ans:- The report was about the bravery of a village lad who came face to face with a tiger while returning home by jungle path and fought the tiger to climb the tree where he stayed half a day till some people came that way and killed the tiger.

2) The report said that the boy (who fought with the tiger) stayed on the tree for half a day. Why did he do so?

a) He wanted to watch the tiger from the top of tree
b) He wanted someone to kill the tiger
c) He wanted to take rest for some time

Ans:- (b) He wanted someone to kill the tiger

3) Swami said that a very strong and grown up person might have fought with a tiger. Do you think he made this remark out of his

(a) Experience, (b) Wisdom, (c) Belief?

(Choose the most appropriate word)

Ans:- (c) Belief

4) "Can you prove you have courage?" Swami's father said. (Answer the following questions)

a) Was he joking? Or, serious?
b) Was it a challenge? Or, a command

Ans:-(a) Swami's father was serious.
(b) It started as a challenge, but soon became a command when Swami tried to escape from it.

5) The place where Swami usually slept was .... (Fill in the blank)

Ans:- Beside his granny in the passage.

6) What is disgraceful, according to Swami's father?

Ans:- According to Swami's father it is disgraceful for a boy in second form (aged 12 years and 8th year of study in school as per classification of students according to their age in England) to sleep beside granny or mother like a baby.

7) What do you think was the practice of granny before she went to bed?

Ans:- Granny used to tell stories to Swami before she went to bed.

8) Was Swami really sleeping? Or was he pretending?

Ans: Swami Was not really sleeping, he was pretending to sleep by covering his face with the blanket and snored under it.

9) To Swami, his father looked like an .... (Fill in the blank)

Ans: To Swami, his father looked like an apparition in the semi darkness of the passage.

10) Why do you think Swami looked at his granny and his mother while following his father to the room?

Ans: Swami looked at his granny and mother with an appeal to save him from his father's challenge to make him sleep alone in the office room.

11) "There might be scorpions before your law books", said Swami.

a) Had he seen them earlier? Or were there scorpions really?

b) Was it a trick to escape from his father?

(Answer all the questions)

Ans: a) Swami had not seen any scorpions earlier. There may not be any scorpions really.
b) Yes, absolutely It was a trick to escape from his father.

12) Swami wished that the tiger had not spared the boy, which means.........

(Choose the right answer)

(1) He did not want the boy to be alive.
(2) He did not want the tiger to be alive.

Ans: He did not want the boy to be alive.

13) As silence deepened in the room, what was Swami reminded of?

Ans: Swami remembered all the stories of devils and ghosts he had heard in his life. Swami remembered his close friend seeing devil in banyan tree, devil making Muniswami's father spit blood by slapping and many other such stories.

14) Which place in the room did Swami think was safe, compact and reassuring?

Ans: Swami felt that the place under the bench is compact, safe and reassuring.

15) Swami touched.............in the room instead of granny. (Fill in the blank appropriately)

Ans: the wooden leg of the bench

Expl: Swami saw frightening dream of tiger chasing him and he is unable to escape. Swami put his hand out to touch reassuring granny's presence at his side, as was his habit; instead he touched the wooden leg of the bench as he was alone in office room.

16) Swami saw a moving creature in the room. Was it................ (Fill in the blank)

(a) his shadow , (b) a scorpion ,
(c) a man. ?

Ans: A man?

17) Who cried, "Aiyo! Something has bitten me?"

Ans: The burglar bitten by Swami cried in agony with a thundering cry, "Aiyo! Something has bitten me"

18) Who did father, cook and a servant stumble upon?

Ans: The father of Swami, their servant and cook stumbled on the burglar who lay with a bleeding ankle amidst the furniture in the office room.

19) Why were congratulations showered on Swami?

Ans: Swami was showered with congratulations as he helped the police to arrest one of the most notorious house breakers of the district by biting into his flesh

20) Do you think Swami really wanted to join the police? If not, what did he want to be?

Ans: No. Swami did not want to join the police force.

Swami had quite made up his mind to become an engine driver, railway guard or a bus conductor later in life. He agreed to police inspector's invitation to join police only out of politeness.

(Contd......)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Solutions

9. If 15g urea $(H_2N-CO-NH_2)$ is dissolved in 200 g water. Calculate the molality of the solution.

Soln:- The molality is given by the equation -

$$\text{Molality, } m = \frac{w_2}{M_2} \times \frac{1000}{w_1}$$

Molecular mass of urea $(H_2N-CO-NH_2)=60$

$$\therefore m = \frac{15}{60} \times \frac{1000}{200} = 1.25$$

10. State the laws of osmotic pressure.

Ans:-(a) Van't Hoff – Boyle's law – At constant temperature, the osmotic pressure is directly proportional to the concentration C of the solution.

$$\pi \propto C$$

(b) Van't Hoff – Charle's law -

Concentration being constant, the osmotic pressure of a solution is directly proportional to the absolute temperature T.

$$\pi \propto T$$

11. Calculate the osmotic pressure of 0.8 molar urea (mol. Mass = 60) solution at 298 K. (R = 8.314 J K^{-1} mol^{-1})

Soln:- By the Van't Hoff's theory of osmotic pressure, the osmotic pressure

$$\pi = \frac{nRT}{V}$$

Here, $n = 0.8$ mol, $V = 1\ dm^3 = 10^{-3}\ m^3$

$$\therefore \pi = \frac{0.8 \times 8.314 \times 298}{10^{-3}}$$

$$= 1982057\ Pa$$

$$= 1982.057\ kPa$$

12. Write a brief note on reverse osmosis?

Ans:- This reverse osmosis technique is very useful in obtaining pure water from sea water.

When a semipermeable membrane separates a solvent and a solution, solvent molecules move across the membrane into the solution. However, if external pressure is applied on the solution such that the applied pressure is greater than the osmotic pressure of the solution, the solvent molecules move from the solution to the solvent. This process is called the reverse osmosis.

13. How do you say that the osmotic pressure is a colligative property?

Ans:- Osmotic pressure of a solution is given by $\pi = RTC$; hence $\pi \alpha C$ at constant temperature.

This shows that the osmotic pressure depends on molar concentration, irrespective of the nature of the solute. Hence, it is a colligative property.

14. Calculate the osmotic pressure of 8 % sucrose solution at 293 K. (R=8.314J$K^{-1}mol^{-1}$)

Soln:- The osmotic pressure is given by,

$$\pi = \frac{RTw}{MV}$$

Given that – $w = 8g$, $M = 342\ g$;

$(C_{12}H_{22}O_{11}$ – mol.mass is 342)

$V = 100\ cm^3$ ($\because$ 8% solution)

$= 100 \times 10^{-6}\ m^3$, $T = 298\ K$

$$\therefore \pi = \frac{8.314 \times 293 \times 8}{342\left(100 \times 10^{-6}\right)}$$

$$= 569825\ Pa$$

$$= 569.825\ kPa$$

15. List out some of the differences between Osmosis and Diffusion.

Ans:- Some of the differences between Osmosis and Diffusion are –

	Osmosis	Diffusion
1	It takes place through the semipermeable membrane.	Semipermeable membrane is not necessary.
2	Only the solvent molecules move.	Both solute and the solvent molecules move.
3	Solvent molecules move from lower concentration to higher concentration.	Molecules move from higher concentration to lower concentration.
4	This property is exhibited by the solutions in the liquid state.	This property is exhibited by the liquid and gaseous solutions.

16. Mention some of the differences between the ideal and non ideal solutions.

Ans:- Some of the differences between the ideal and non ideal solutions are –

Ideal solutions	*Non - ideal solutions*
1.The intermolecular interactions between the components of the solution are similar to those in the pure components.	The intermolecular interactions between the components of the solution are different from those found in the pure components.
2. There is no volume change during mixing. ($\Delta V = 0$)	Volume of the solution is either more or less than the total volume of the components mixed.
3. The enthalpy of mixing is zero($\Delta H = 0$), that is no heat is evolved or absorbed when a solution is prepared.	The enthalpy of mixing is not zero ($\Delta H \neq 0$), that is heat is either evolved or absorbed during mixing of the compounds.
4. Obey's Raoult's law of solution.	Does not obey Raoult's law of solution. It shows either positive or negative deviation.

(Contd............)

ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಆರೋಪಿಯಾಗಿರುವ ಲೈಂಗಿಕ ಹಗರಣ, ಪೆನ್‌ಡ್ರೈವ್ ಹಂಚಿಕೆ ವಿಚಾರಕ್ಕೆ ಸಂಬಂಧಿಸಿದ ಜಟಾಪಟಿ ದಿನಕಳೆದಂತೆ ತೀವ್ರತೆ ಹೆಚ್ಚಿಸಿಕೊಳ್ಳುತ್ತಲೇ ಇದೆ. ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರ ನಡುವಿನ ವಾಕ್ಸಮರ ದಿನಕ್ಕೊಂದು ತಿರುವು ಪಡೆಯುತ್ತಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಬುಧವಾರ ಪರಸ್ಪರರನ್ನು ಕಟು ಮಾತುಗಳಲ್ಲಿ ಟೀಕಿಸಿಕೊಂಡಿದ್ದಾರೆ:

ಪ್ರಜ್ವಲ್ ಪ್ರಕರಣ: ನಾಯಕರ ಕಿತ್ತಾಟ



'ಕಿಂಗ್ ಆಫ್ ಬ್ಲ್ಯಾಕ್‌ಮೇಲರ್'

ಚಿಕ್ಕಮಗಳೂರು: 'ಪೆನ್ ಡ್ರೈವ್ ಪ್ರಕರಣದಲ್ಲಿ ಮಾತನಾಡುತ್ತಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರೇನು ವಕೀಲರೇ ಅಥವಾ ನ್ಯಾಯಾಧೀಶರೇ, ಅವರೊಬ್ಬ ಕಿಂಗ್ ಆಫ್ ಬ್ಲ್ಯಾಕ್‌ಮೇಲರ್' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

ನಗರದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಕ್ಕಲಿಗ ನಾಯಕತ್ವಕ್ಕೆ ಪೈಪೋಟಿಯೂ ಇಲ್ಲ, ಕುಮಾರಣ್ಣನಿಗೆ ನನ್ನ ರಾಜೀನಾಮೆ ಬೇಕಂತೆ, ಕೊಡೋಣ. ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನು ಹೆದರಿಸುವುದು ಮತ್ತು ಮುಗಿಸುವುದೇ ಅವರ ಕೆಲಸ. ಪಾಯಿಂಟ್ ಬೈ ಪಾಯಿಂಟ್ ಮಾಹಿತಿ ಇದೆಯಂತೆ. ಹೋಗಿ ನ್ಯಾಯಾಲಯದಲ್ಲಿ ವಾದ ಮಾಡಲಿ' ಎಂದು ಲೇವಡಿ ಮಾಡಿದರು.

'ಕಥಾ ನಾಯಕ, ನಿರ್ದೇಶಕ, ನಿರ್ಮಾಪಕ ಎಲ್ಲಾ ಅವರೇ, ಎಲ್ಲಾ ವಿಷಯ ಅವರಿಗೇ ಗೊತ್ತಿದೆ. ಉಪ್ಪು ತಿಂದವರು ನೀರು ಕುಡಿಯುತ್ತಾರೆ ಎಂದಿದ್ದರು. ಈಗ್ಯಾಕೆ ಉರಿ ಬಂದಿದೆ. ರೇವಣ್ಣ ಕುಟುಂಬವೇ ಬೇರೆ, ನನ್ನ ಕುಟುಂಬವೇ ಬೇರೆ ಎಂದಿದ್ದ ದೇವೇಗೌಡರ ಕುಟುಂಬವೇ ಬೇರೆ ಎಂದಿದ್ದ ಹೇಳಿಕೆಗೆ ಅವರು ಬದ್ಧರಾಗಲಿ. ವಿಧಾನಸಭೆಗೆ ಬರಲಿ, ಉಳಿದ ವಿಷಯಗಳನ್ನು ಚರ್ಚೆ ಮಾಡೋಣ' ಎಂದು ಹೇಳಿದರು.

'ಸಂತ್ರಸ್ತರು ಅವರದೇ ಪಕ್ಷದ ಕಾರ್ಯಕರ್ತೆಯರಂತೆ. ಮರ್ಯಾದೆ ಇದ್ದರೆ ಹೋಗಿ ಅವರಿಗೆ ಧೈರ್ಯ ತುಂಬಲಿ. ನನ್ನ ವಿರುದ್ಧ ಮಾತನಾಡದಿದ್ದರೆ ಕುಮಾರಸ್ವಾಮಿಗೆ ನಿದ್ರೆ ಬರಲ್ಲ. ನನ್ನ ಹೆಸರು ಹೇಳದಿದ್ರೆ ಅವರಿಗೆ ಮಾರ್ಕೆಟ್ಟೇ ಇರಲ್ಲ' ಎಂದರು.

ಪೆನ್‌ಡ್ರೈವ್ ಹಂಚಿಕೆ ವಿಷಯದಲ್ಲಿ ಬಿಜೆಪಿಯವರಿಂದ ಏನೆಲ್ಲಾ ಮಾಡಿಸಬೇಕೋ ಅದನ್ನು ಅವರೇ ಮಾಡಿಸಿದ್ದಾರೆ. ಈಗ ತನಿಖೆ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಎಸ್‌ಐಟಿ ಎಂದರೆ ಶಿವಕುಮಾರ್, ಸಿದ್ದರಾಮಯ್ಯ, ಸುರ್ಜೆವಾಲ ಇನ್ವೆಸ್ಟಿಗೇಷನ್ ಟೀಮ್ ಅಂತೆ ಫಸ್ಟ್ ಕ್ಲಾಸ್ ಕುಮಾರಣ್ಣ ಎಂದು ಕುಟುಕಿದರು.

ಇಡೀ ಪ್ರಕರಣವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡ ಡಿಕೆಶಿ

ಬೆಂಗಳೂರು: 'ಕಿಂಗ್ ಆಫ್ ಬ್ಲ್ಯಾಕ್ ಮೇಲರ್ ನಾನಲ್ಲ, ಇಡೀ ಪ್ರಕರಣವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡ ವ್ಯಕ್ತಿ ನೀನು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಡಿ.ಕೆ.ಶಿವಕುಮಾರ್ ಸಂಸ್ಕೃತಿ ಎಂಥದು ಎಂದು ಎಲ್ಲರಿಗೂ ಗೊತ್ತಿದೆ. ವಕೀಲರಾದ ದೇವರಾಜೇಗೌಡ ಜತೆ ಅವರು ಮಾತನಾಡಿದ್ದು ಏಕೆ' ಎಂದು ಪ್ರಶ್ನಿಸಿದರು.

'ಮಹಿಳೆ ಅಪಹರಣ ಪ್ರಕರಣದಲ್ಲಿ ಏನೇನು ನಡೆದಿದೆ ಎನ್ನುವುದು ಗೊತ್ತಿದೆ. ನೊಂದ ಮಹಿಳೆ ಸಿಕ್ಕಿದ್ದು ಅವರ ಸಂಬಂಧಿಕರ ಮನೆಯಲ್ಲಿ. ಹುಣಸೂರಿನ ಪತ್ತೆಯಾಗಿ ಅವರ ಮನೆಯಿಂದ ಕರೆದುಕೊಂಡು ಬಂದಿದ್ದಾರೆ. ರೇವಣ್ಣ ನಮ್ಮ ಪಕ್ಷದ ಶಾಸಕ, ನನ್ನ ಸಹೋದರ. ಹಾಗಾಗಿ, ಅವರ ಪರವಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನಾಗಿ ಹೋರಾಟ ಮಾಡುತ್ತೇನೆ. ಪ್ರಜ್ವಲ್ ರೇವಣ್ಣ ಪ್ರಕರಣದ ಬಗ್ಗೆ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದರು.

'ಪೆನ್‌ಡ್ರೈವ್ ಹಂಚಿಕೆಯ ಮೂಲ ಸೂತ್ರದಾರ ಕಾರು ಚಾಲಕ ಕಾರ್ತಿಕ್ ಎಸ್‌ಐಟಿಗೆ ಸಿಗುತ್ತಿಲ್ಲ. ಸುದ್ದಿ ವಾಹಿನಿಗಳಿಗೆ ಸಿಗುತ್ತಾನೆ. ಅವನಿಗೆ ತರಬೇತಿ ನೀಡಲಾಗುತ್ತಿದೆ. ಬಂಡೆ ರಕ್ಷಣೆ ಕೊಡುತ್ತಿದೆ ಎಂದು ಕಾರ್ತಿಕ್ ಅಂದುಕೊಂಡಿದ್ದಾನೆ. ವಿಡಿಯೊಗಳು ಬಿಡುಗಡೆ ಮಾಡಿದವರ ವಿಚಾರಣೆ ನಡೆದಿಲ್ಲ. ನವೀನ್ ಗೌಡ, ಕಾರ್ತಿಕ್ ಹಾಗೂ ಹಾಸನ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರಿಗೆ ನೋಟಿಸ್ ಕೊಟ್ಟಿಲ್ಲ. ತನಿಖೆಯ ದಿಕ್ಕು ಎತ್ತ ಸಾಗುತ್ತಿದೆ ಎನ್ನುವುದು ಅರ್ಥವಾಗುತ್ತಿದೆ' ಎಂದರು.

ಜೈಲಿಗೆ ಕಳಿಸಲು ಹೊಂಚು: 'ಹಿಂದೆ ಸಿದ್ದರಾಮಯ್ಯ ಅವರು ಬಿಡಿಎ ಅಧಿಕಾರಿ ಕೆಂಪಯ್ಯ ಅವರನ್ನು ಇಟ್ಟುಕೊಂಡು ನನ್ನನ್ನು ಬಂಧಿಸಿ ಒಂದು ದಿನವಾದರೂ ಜೈಲಿಗೆ ಕಳಿಸಬೇಕು ಎಂದು ಸಂಚು ಮಾಡಿದ್ದರು. ಅವರ ಆಸೆ ಈಡೇರಲಿಲ್ಲ' ಎಂದು ಆರೋಪಿಸಿದರು.



ನೊಂದ ಮಹಿಳೆಯರು ಕುಮಾರಕೃಪದಲ್ಲಿ

'ನೊಂದ 12 ಮಹಿಳೆಯರನ್ನು ಕುಮಾರಕೃಪಾ ಅತಿಥಿಗೃಹದಲ್ಲಿ ಇಟ್ಟಿದ್ದಾರೆ. ಪೆನ್‌ಡ್ರೈವ್ ಹಂಚುವಾಗ ಆ ಮಹಿಳೆಯರ ಮುಖ ತೋರಿಸಿ, ಮಾನ ಮರ್ಯಾದೆ ಹರಾಜು ಹಾಕಿದ್ದಾರೆ. ಈಗ ನೋಡಿದರೆ ಅವರ ಬಗ್ಗೆ ಅನುಕಂಪ ತೋರಿಸುತ್ತಿದ್ದಾರೆ' ಎಂದು ಕುಮಾರಸ್ವಾಮಿ ಟೀಕಿಸಿದರು.

'ಮಹಿಳೆಯರ ಅಶ್ಲೀಲ ವಿಡಿಯೊಗಳಿದ್ದ ಪೆನ್‌ಡ್ರೈವ್‌ಗಳನ್ನು ಹಾದಿಬೀದಿಯಲ್ಲಿ ಸುರಿದಿರುವ ಕಿಡಿಗೇಡಿಗಳನ್ನು ರಾಜ್ಯ ಸರ್ಕಾರವೇ ರಕ್ಷಣೆ ಮಾಡುತ್ತಿದೆ. ಮುಖ್ಯಮಂತ್ರಿಗೆ ಮಾನ ಮರ್ಯಾದೆ, ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಬೆನ್ನು ಮೂಳೆ ಇದೆಯಾ' ಎಂದು ಪ್ರಶ್ನಿಸಿದರು.

ಪೆನ್‌ಡ್ರೈವ್ ಹಂಚಿಕೆ: ಆರೋಪಿಗಳ ವಿರುದ್ಧ ಕ್ರಮ ಏಕಿಲ್ಲ- ವಕೀಲ ಪ್ರಶ್ನೆ

ಹಾಸನ: 'ಪೆನ್ ಡ್ರೈವ್ ಹಂಚಿಕೆ ಸಂಬಂಧ ದೂರು ದಾಖಲಾಗಿದ್ದರೂ, ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಏಕೆ' ಎಂದು ಎಚ್.ಡಿ. ರೇವಣ್ಣ ಪರ ವಕೀಲ ಗೋಪಾಲ ಪ್ರಶ್ನಿಸಿದರು.

ನಗರದಲ್ಲಿ ಬುಧವಾರ ಮಾತನಾಡಿ, 'ಪೆನ್ ಡ್ರೈವ್ ಹಂಚಿಕೆ ಸಂಬಂಧ ಜೆಡಿಎಸ್ ಜಿಲ್ಲಾ ಚುನಾವಣಾ ಏಜೆಂಟ್ ಪೂರ್ಣಚಂದ್ರ ತೇಜಸ್ವಿ ಅವರು, ಆರೋಪಿಗಳಾದ ನವೀನ್ ಗೌಡ, ಕಾರ್ತಿಕ್, ಪುಟ್ಟ ರಾಜು, ಚೇತನ್, ಕ್ವಾಲಿಟಿ ಬಾರ್ ಶರತ್ ಸೇರಿ ಐವರ ವಿರುದ್ಧ ದೂರು ನೀಡಿದ್ದರು. ದೂರು ದಾಖಲಾಗಿ 15 ದಿನ ಕಳೆದರೂ ಏಕೆ ಅವರನ್ನು ಬಂಧಿಸಿಲ್ಲ' ಎಂದು ಪ್ರಶ್ನಿಸಿದರು.

'ಪ್ರಕರಣ ಗಂಭೀರ ಸ್ವರೂಪದ್ದಾಗಿದ್ದು, 10 ವರ್ಷಕ್ಕೂ ಅಧಿಕ ಶಿಕ್ಷೆ ವಿಧಿಸಲು ಸಾಧ್ಯವಿದೆ. ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಆರೋಪಿಗಳ ಜಾಮೀನು ಅರ್ಜಿ ವಜಾ ಮಾಡಿದೆ. ಆದರೂ ಪೊಲೀಸರು ಏಕೆ ಬಂಧಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಪ್ರಕರಣ ದಾಖಲಾದ ದಿನವೇ ರೇವಣ್ಣ ಅವರ ಬಂಧನವಾಗುತ್ತದೆ. ಆದರೆ ಹೆಣ್ಣು ಮಕ್ಕಳ ಮಾನಹಾನಿ ಮಾಡುವ ವಿಡಿಯೊ ಹರಿಬಿಟ್ಟವರ ವಿರುದ್ಧ 15 ದಿನ ಕಳೆದರೂ ಕ್ರಮ ಆಗುತ್ತಿಲ್ಲ' ಎಂದರು.

'ಹಾಸನದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಏನು ಮಾಡುತ್ತಿದ್ದಾರೆ? ಅವರಿಗೆ ಸರ್ಕಾರದ ರಕ್ಷಣೆ ಇರುವ ಕಾರಣ ಬಂಧಿಸಿಲ್ಲವೇ? ಅವರ ಬಂಧನವಾಗದಿದ್ದರೆ, ಸಾಕ್ಷಿ ನಾಶ ಮಾಡುವ ಸಾಧ್ಯತೆ ಇದ್ದು, ಕೂಡಲೇ ಬಂಧಿಸಬೇಕು' ಎಂದರು.

ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಹಾಸನ: ಪೆನ್‌ಡ್ರೈವ್ ಬಹಿರಂಗ ಪ್ರಕರಣಕ್ಕೆ ಸಂಬಂಧಿಸಿ, ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಕಾರ್ತಿಕ್, ಪುಟ್ಟರಾಜ್, ನವೀನ್ ಹಾಗೂ ಚೇತನ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಇಲ್ಲಿನ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಜಾ ಮಾಡಿದೆ.

ಅಶ್ಲೀಲ ವಿಡಿಯೊ ಪೆನ್‌ಡ್ರೈವ್ ಬಿಡುಗಡೆ ಆರೋಪದಡಿ ಈ ನಾಲ್ವರ ವಿರುದ್ಧ ಜೆಡಿಎಸ್ ಚುನಾವಣೆ ಏಜೆಂಟ್ ಪೂರ್ಣಚಂದ್ರ ತೇಜಸ್ವಿ ಎಂಬುವವರು ಸೈಬರ್ ಕ್ರೈಂ ಠಾಣೆಯಲ್ಲಿ ಏಪ್ರಿಲ್‌ನಲ್ಲಿ ದೂರು ದಾಖಲಿಸಿದ್ದರು.

ಬಳಿಕ ಆರೋಪಿಗಳು ನಿರೀಕ್ಷಣಾ ಜಾಮೀನು ನೀಡುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ವಿಡಿಯೊ ಸಿಕ್ಕ ಬಳಿಕ, 'ಪ್ರಜ್ವಲ್ ಅಶ್ಲೀಲ ವಿಡಿಯೊ ಬಿಡುಗಡೆಗೆ ಕ್ಷಣಗಣನೆ' ಎಂದು ನವೀನ್ ಪೋಸ್ಟ್ ಹಾಕಿದ್ದ. ಅದು ಸಾಮಾಜಿಕ ಮಾಧ್ಯಮಗಳಲ್ಲಿ ಸಂಚಲನಕ್ಕೆ ಕಾರಣವಾಗಿತ್ತು. ಅದನ್ನು ಗಮನಿಸಿದ್ದ ಜೆಡಿಎಸ್, ಪೋಸ್ಟ್‌ನ ಸ್ಕ್ರೀನ್ ಶಾಟ್ ತೆಗೆದು ಪೊಲೀಸರಿಗೆ ದೂರು ನೀಡಿತ್ತು. ಪ್ರಕರಣ ದಾಖಲಾಗುತ್ತಿದ್ದಂತೆಯೇ ನವೀನ್ ಗೌಡ ಫೇಸ್‌ಬುಕ್ ಅಕೌಂಟ್ ಡಿಲೀಟ್ ಮಾಡಿದ್ದ.

'₹3 ಕೋಟಿಗೆ ಪೆನ್‌ಡ್ರೈವ್ ಖರೀದಿ'

ಜೆಡಿಎಸ್ ಮುಖಂಡ ಜಿಟಿಡಿ ಆರೋಪ • ಪ್ರತಿಭಟನಾ ಮೆರವಣಿಗೆ, ರಸ್ತೆ ತಡೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ಅಂತರ-ರಾಷ್ಟ್ರೀಯ ಮಟ್ಟದ ಜಾಲ ಹೊಂದಿದೆ. ಚೆನ್ನೈನ ಕಂಪನಿಯೊಂದರಿಂದ ₹3 ಕೋಟಿ ವೆಚ್ಚದ ಪೆನ್‌ಡ್ರೈವ್ ಖರೀದಿಸಿ, ಮಲೇಷ್ಯಾಕ್ಕೆ ತೆರಳಿ ಅಲ್ಲಿನ ಲ್ಯಾಬೊರೇಟರಿಯಲ್ಲಿ ವಿಡಿಯೊ ಕಾಪಿ ತಯಾರಿಸಿ, ವ್ಯವಸ್ಥಿತವಾಗಿ ಪಿತೂರಿ ನಡೆಸಿ ಹಂಚಿದ್ದಾರೆ' ಎಂದು ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಆರೋಪಿಸಿದರು.

'ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು' ಎಂದು ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರ ಜೆಡಿಎಸ್ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, 'ಪ್ರಕರಣದ ಬೇರು ಇತರೆ ರಾಜ್ಯಕ್ಕೂ ಹಬ್ಬಿದೆ' ಎಂದು ಪ್ರತಿಪಾದಿಸಿದರು.

ಆಕ್ರೋಶ: ಪ್ರತಿಭಟನೆಯಲ್ಲಿ ಪಾಲ್ಗೊಂಡ ಜೆಡಿಎಸ್ ಶಾಸಕರು, ಮುಖಂಡರು ಹಾಗೂ ನೂರಾರು ಕಾರ್ಯಕರ್ತರು, ರಾಜ್ಯ ಸರ್ಕಾರ ಹಾಗೂ ಎಸ್‌ಐಟಿ ವಿರುದ್ಧ ಘೋಷಣೆ ಕೂಗಿದರು. ತಲೆಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಮೆರವಣಿಗೆ ನಡೆಸಿದರು.

'ಎಸ್‌ಐಟಿ ತನಿಖೆ ಬೇಡ', 'ಮಹಿಳೆಯರ ತೇಜೋವಧೆ ಮಾಡಿ ಪೆನ್‌ಡ್ರೈವ್ ವಿತರಿಸಿದವರನ್ನು ಬಂಧಿಸಿ', 'ಪೆನ್‌ಡ್ರೈವ್ ವಿತರಿಸಿದವರ ವಿರುದ್ಧ ನ್ಯಾಯಾಂಗ ತನಿಖೆಯಾಗಲಿ', 'ನೀವು ರಾಜಕಾರಣ ಮಾಡಿ, ನಿಮ್ಮ ರಾಜಕಾರಣದಲ್ಲಿ ಹೆಣ್ಣು ಮಕ್ಕಳನ್ನು ಬೀದಿಗೆ ತರಬೇಡಿ' ಎಂಬ ಬರಹವುಳ್ಳ ಫಲಕಗಳನ್ನು ಪ್ರದರ್ಶಿಸಿದರು. ಜಿಲ್ಲಾಧಿಕಾರಿ ಕಚೇರಿ ಮುಂಭಾಗ ರಸ್ತೆ ತಡೆ ನಡೆಸಿದರು.

ಶಾಸಕರಾದ ಜಿ.ಡಿ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರ.ಮಹೇಶ ನೇತೃತ್ವ ವಹಿಸಿದ್ದರು.

'ಅಶ್ಲೀಲ ವಿಡಿಯೋ ಹರಿಬಿಟ್ಟವರ ವಿರುದ್ಧ ತನಿಖೆ ನಡೆಸಬೇಕು ಹಾಗೂ ಪ್ರಕರಣವನ್ನು ಸಿಬಿಐಗೆ ನೀಡಬೇಕು' ಎಂದು ಒತ್ತಾಯಿಸಿ ಮೈಸೂರು ನಗರ (ಜಿಲ್ಲಾ) ಜನತಾದಳ ಜಾತ್ಯತೀತ ಪಕ್ಷದ ಸದಸ್ಯರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ರಸ್ತೆತಡೆ ನಡೆಸಿದರು – ಪ್ರಜಾವಾಣಿ ಚಿತ್ರ

ಪೆನ್‌ಡ್ರೈವ್ ಪ್ರಕರಣ ವ್ಯಕ್ತಿಗತ ವಾದುದು. ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ಪ್ರಜ್ವಲ್‌ನಿಂದಾಗಿ ಮೈತ್ರಿಗೆ ಡ್ಯಾಮೇಜ್ ಇಲ್ಲ

ಕೋಟ ಶ್ರೀನಿವಾಸ ಪೂಜಾರಿ, ಉಡುಪಿ- ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ

ಸಿಬಿಐ ತನಿಖೆ ಅನಗತ್ಯ–ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸುವ ಅಗತ್ಯವಿಲ್ಲ ಎಂದು ಗೃಹ ಸಚಿವ ಜಿ.ಪರ-ಮೇಶ್ವರ ಅವರು ಹೇಳಿದರು.

'ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿ ಕಾರ್ಯ ನಿರ್ವ-ಹಿಸಿದ್ದವರು. ಎಸ್‌ಐಟಿ ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂಬುದು ಅವರಿಗೆ ಗೊತ್ತಿದೆ. ನಮ್ಮ ಪೊಲೀಸರು ಸಮರ್ಥರಿದ್ದಾರೆ. ತನಿಖೆ ಯಾವ ರೀತಿ ಮುಂದುವರಿದೆ ಎಂಬುದನ್ನು ಜನರು ಗಮನಿಸುತ್ತಿದ್ದಾರೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಎಸ್‌ಐಟಿ ತನಿಖೆ ಸರಿಯಾದ ದಾರಿಯಲ್ಲೇ ಹೋಗುತ್ತಿದೆ. 2008ರಿಂದ 2013ರವರೆಗೆ ಅಧಿಕಾರದಲ್ಲಿದ್ದ ಬಿಜೆಪಿ ಯಾವುದೇ ಒಂದು ಪ್ರಕರಣವನ್ನೂ ಸಿಬಿಐಗೆ ವಹಿಸಿರಲಿಲ್ಲ. ಕೆಲವು ಪ್ರಕರ-ಣಗಳಲ್ಲಿ ಸಿಬಿಐ ಕೊಟ್ಟ ವರದಿಯನ್ನು ಜನರು ಒಪ್ಪಿರಲಿಲ್ಲ. ಅಂತಹ ಪ್ರಕರಣ ಗಳಲ್ಲಿ ಸಿಬಿಐ ಕಾರ್ಯವೈಖರಿಯನ್ನು ಟೀಕಿಸಿರುವುದನ್ನೂ ನೋಡಿದ್ದೇವೆ. ಸಿಬಿಐ ಅಂದ ತಕ್ಷಣ ಏನೋ ಆಗಿ ಬಿಡುತ್ತದೆ ಎಂಬ ಕಲ್ಪನೆ ಬೇಡ' ಎಂದೂ ಪರಮೇಶ್ವರ ತಿಳಿಸಿದರು.

'ಪೆನ್‌ಡ್ರೈವ್ ಹಂಚಿಕೆ ಹಾಗೂ ಬಹಿರಂಗದ ಬಗ್ಗೆಯೂ ತನಿಖೆ ಆಗಲಿದೆ. ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಅವರನ್ನು ವಿಚಾರಣೆ ನಡೆಸುವ ನಿರ್ಧಾರವನ್ನು ಎಸ್‌ಐಟಿ ಮಾಡಲಿದೆ. ಪ್ರಕರಣದಲ್ಲಿ ಕೆಲವರನ್ನು ವಿಚಾರಣೆ ಮಾಡಲಾಗುತ್ತಿಲ್ಲ ಎಂದು ಆರೋಪಿಸಲಾಗುತ್ತಿದೆ. ಕಾನೂನಿನ ಚೌಕಟ್ಟಿನಲ್ಲಿ ಯಾವಾಗ ವಿಚಾರಣೆ ನಡೆಸಬೇಕು, ಯಾವಾಗ ಬಂಧಿಸಬೇಕು ಎಂಬುದು ನಮ್ಮ ಕೈಯಲ್ಲಿ ಇಲ್ಲ. ಇವೆಲ್ಲವನ್ನು ಎಸ್‌ಐಟಿ ನಿರ್ಧರಿಸಲಿದೆ' ಎಂದು ಅವರು ಹೇಳಿದರು.

'ನಿಖರವಾದ ಸಾಕ್ಷ್ಯಗಳಿಲ್ಲದೇ ದೇವರಾಜೇಗೌಡ ಮತ್ತು ಕಾರ್ತಿಕ್ ಅವರನ್ನು ಬಂಧಿಸಲು ಸಾಧ್ಯವಾಗುವು-ದಿಲ್ಲ. ಅವರ ಹೇಳಿಕೆಗಳನ್ನು ಎಸ್‌ಐಟಿ ದಾಖಲಿಸಿಕೊಂಡಿದೆ. ಹೇಳಿಕೆಯನ್ನು ಪುನರ್‌ಪರಿಶೀಲಿಸುತ್ತಾರೆ. ಈ ಪ್ರಕರಣ ದಲ್ಲಿ ಸಂತ್ರಸ್ತರನ್ನು ಹೊರತುಪಡಿಸಿ ಇಂತಹವರಿಗೆಲ್ಲ ರಕ್ಷಣೆ ಕೊಡುವುದಿಲ್ಲ. ಬಂಧಿಸಲು ಅಗತ್ಯವಿರುವ ಸಾಕ್ಷ್ಯಗಳು ಸಿಕ್ಕ ಕೂಡಲೇ ಬಂಧಿಸಲಾಗುವುದು' ಎಂದು ಪರಮೇಶ್ವರ ವಿವರಿಸಿದರು.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ಇಂಟರ್‌ಪೋಲ್ ನೋಟಿಸ್: ಏನು, ಎತ್ತ' ಎಂಬ ಲೇಖನದ ಕುರಿತು ಪರಮೇಶ್ವರ ಸುದ್ದಿಗೋಷ್ಠಿಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದರು.

ಎಚ್.ಡಿ.ಕುಮಾರಸ್ವಾಮಿಗೆ ತಿರುಗೇಟು

ಜಿ.ಪರಮೇಶ್ವರ

'ನನಗೆ ಬೆನ್ನುಮೂಳೆ ಇರುವುದರಿಂದಲೇ ರಾಜ್ಯದ ಜನ 135 ಕ್ಷೇತ್ರಗಳಲ್ಲಿ ಗೆಲ್ಲಿಸಿ ಅಧಿಕಾರ ನೀಡಿದ್ದಾರೆ' ಎಂದ ಪರಮೇಶ್ವರ ಅವರು ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿದರು.

'ಕುಮಾರಸ್ವಾಮಿ ಅವರಿಗೆ ತಾವೇ ಅಧಿಕಾರದಲ್ಲಿ ಕೂರಬೇಕು ಎಂಬ ಆಸೆ ಇತ್ತು. ಪಾಪ ಅದು ಅವರಿಗೆ ಆಗಲಿಲ್ಲ. ನಾವು ಅಧಿಕಾರದಲ್ಲಿದ್ದೀವಿ ಅಂತ ಕುಮಾರಸ್ವಾಮಿ ಸಂತೋಷ ಪಡಬೇಕು' ಎಂದು ಹೇಳಿದರು.

ಜೆಡಿಎಸ್ ಮಹಿಳಾ ಘಟಕ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದಲ್ಲಿ ಪೆನ್‌ಡ್ರೈವ್‌ಗಳನ್ನು ಹಂಚುವ ಮೂಲಕ ಮಹಿಳೆಯರ ಮಾನಹಾನಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಜೆಡಿಎಸ್ ಮಹಿಳಾ ಘಟಕದ ಪದಾಧಿಕಾರಿಗಳು ರಾಜ್ಯ ಮಹಿಳಾ ಆಯೋಗಕ್ಕೆ ಬುಧವಾರ ದೂರು ಸಲ್ಲಿಸಿದರು.

ನಂತರ ಮಾತನಾಡಿದ ರಾಜ್ಯ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಅಶ್ಲೀಲ ವಿಡಿಯೊಗಳನ್ನು ಸೋರಿಕೆ ಮಾಡುವಮೂಲಕಸ್ತ್ರೀಕುಲಕ್ಕೆಅಪಚಾರ ಎಸಗಲಾಗಿದೆ. ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

ಬೆಂಗಳೂರು ಮಹಾನಗರ ಜನತಾ ದಳ ಮಹಿಳಾ ವಿಭಾಗದ ಅಧ್ಯಕ್ಷೆ ಶೈಲಾ ಎಸ್. ರಾವ್, ವಕ್ತಾರರಾದ ಪ್ರಶಾಂತಿ, ರಾಜಾಜಿನಗರ ಕ್ಷೇತ್ರದ ಮಹಿಳಾ ಅಧ್ಯಕ್ಷೆ ಕವಿತಾ,ರಾಜ್ಯಕಾರ್ಯದರ್ಶಿಮಂಗಳಮ್ಮ ನಿಯೋಗದಲ್ಲಿದ್ದರು.

ಜೈನಾ ಕೊಠಾರಿ ವಿಶೇಷ ಅಭಿಯೋಜಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ನಡೆಯಿತೆನ್ನ-ಲಾದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಎಸ್‌ಐಟಿ ಪರವಾಗಿ ನ್ಯಾಯಾಲಯದಲ್ಲಿ ಹಾಜರಾಗಿ ವಾದ ಮಂಡಿಸಲು ಸುಪ್ರೀಂ ಕೋರ್ಟ್ ವಕೀಲೆ ಜೈನಾ ಕೊಠಾರಿ ಮತ್ತು ವಕೀಲ ಅಶೋಕ್ ನಾಯಕ್ ಅವರನ್ನು ಹೆಚ್ಚುವರಿ ವಿಶೇಷ ಅಭಿಯೋಜಕರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಅಭಿಯೋಜಕರ ತಂಡ ವನ್ನು ಬಲಪಡಿಸುವ ಉದ್ದೇಶದಿಂದ ಇಬ್ಬರನ್ನು ನೇಮಿಸಲಾಗಿದೆ ಎಂದು ಕಾನೂನು ಇಲಾಖೆ ಹೊರಡಿಸಿದ ಆದೇಶದಲ್ಲಿ ಹೇಳಿದೆ.

ಪರಿಷತ್ ಚುನಾವಣೆ ನಾಮಪತ್ರ ಇವತ್ತಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರರ ಮೂರು ಹಾಗೂ ಶಿಕ್ಷಕರ ಮೂರು ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಮೇ 9ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ.

ಈಶಾನ್ಯ ಪದವೀಧರ ಕ್ಷೇತ್ರ, ಬೆಂಗಳೂರು ಪದವೀಧರ ಕ್ಷೇತ್ರ, ಆಗ್ನೇಯ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರಗಳಲ್ಲಿ ಜೂನ್ 3ರಂದು ಮತದಾನ ನಡೆಯಲಿದೆ.

ಮೇ 16 ನಾಮಪತ್ರ ಸಲ್ಲಿಸಲು ಕೊನೆಯ ದಿನ. 17ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಮೇ 20ರ ವರೆಗೆ ಅವಕಾಶವಿದೆ. ಜೂನ್ 6ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೊಗಳು

ಶ್ರೇಯಸ್ ಪಟೇಲ್ ಜೊತೆಗೆ ಕಾರ್ತಿಕ್

ಪ್ರಜಾವಾಣಿ ವಾರ್ತೆ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿ ಹೊಸ ತಿರುವು ಮೂಡಿದ್ದು, ಪ್ರಜ್ವಲ್ ಕಾರು ಚಾಲಕ ಕಾರ್ತಿಕ್ ಅವರನ್ನು ಹಾಸನ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಭೇಟಿಯಾಗಿರುವ ಫೋಟೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಶ್ರೇಯಸ್ ಅವರ ಮೂಲಕವೇ ಪೆನ್‌ಡ್ರೈವ್ ಅನ್ನು ಕಾರ್ತಿಕ್ ಕಾಂಗ್ರೆಸ್ ಮುಖಂಡರಿಗೆ ಕೊಟ್ಟಿರಬಹುದು' ಎಂದು ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಆರೋಪಿಸಿದ್ದರು. ಅದಕ್ಕೆ ಸ್ಪಷ್ಟನೆ ನೀಡಿದ್ದ ಶ್ರೇಯಸ್, 'ಕಾರ್ತಿಕ್ ಸೇರಿದಂತೆ ಯಾರನ್ನೂ ಭೇಟಿಯಾಗಿಲ್ಲ' ಎಂದು ಪ್ರತಿಪಾದಿಸಿದ್ದರು.

'ಒಮ್ಮೆ ಮಾತ್ರ ಜಮೀನು ವಿಚಾರವಾಗಿ ಕಾರ್ತಿಕ್ ಭೇಟಿಯಾಗಿ ದ್ದರು. ಅದಾದ ಮೇಲೆ ಸಿಕ್ಕಿಲ್ಲ. ಫೋನ್ ಮಾಡಿಲ್ಲ' ಎಂದಿದ್ದರು.

ಇದರ ಬೆನ್ನಲ್ಲೇ, ಅವರು ಕಾರ್ತಿಕ್ ಜೊತೆಗಿರುವ ಫೋಟೋ ಹರಿದಾಡುತ್ತಿದೆ. ಹೊಳೆನರಸೀಪುರದ ಅವರ ನಿವಾಸದಲ್ಲಿ ಕೆಲ ದಿನಗಳ ಹಿಂದೆ ಕಾಂಗ್ರೆಸ್ ಮುಖಂಡ ಪುಟ್ಟಿ ಅಲಿಯಾಸ್ ಪುಟ್ಟರಾಜು ಭೇಟಿಯಾಗಿದ್ದರು. ಶ್ರೇಯಸ್, ಕಾರ್ತಿಕ್ ಹಾಗೂ ಪುಟ್ಟರಾಜು ಕೈ ಕೈ ಹಿಡಿದು ನಿಂತಿರುವ ಫೋಟೋ ಬಗ್ಗೆ ಜಿಲ್ಲೆಯಲ್ಲಿ ಚರ್ಚೆ ನಡೆದಿದೆ.

ಅಶ್ಲೀಲ ವಿಡಿಯೊ ಬಹಿರಂಗ ವಾದ ನಂತರ ಹೊಳೆನರಸೀಪುರ ತಾಲ್ಲೂಕಿನ ಕಡುವಿನಕೋಟೆಯ ಕಾರ್ತಿಕ್ ಮನೆಗೂ ಪೊಲೀಸ್ ಭದ್ರತೆ ನೀಡಲಾಗಿದೆ.

ಕಾಂಗ್ರೆಸ್ ಮುಖಂಡ ಪುಟ್ಟಿ ಅಲಿಯಾಸ್ ಪುಟ್ಟರಾಜು ಹಾಗೂ ಕಾರ್ತಿಕ್ ನಡುವೆ ನಿಂತ ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್

ಐಎಫ್‌ಎಸ್‌ನಲ್ಲಿ ಶಶಿಕುಮಾರ್‌ಗೆ 66ನೇ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯ ಫಲಿತಾಂಶ ಬುಧವಾರ ಪ್ರಕಟ ಆಗಿದ್ದು ಮಧುಗಿರಿ ತಾಲ್ಲೂಕಿನ ಸೋಂಪುರ ಗ್ರಾಮದ ಎಸ್.ಎಲ್.ಶಶಿಕುಮಾರ್ ರಾಷ್ಟ್ರಮಟ್ಟ ದಲ್ಲಿ 66ನೇ ರ್‍ಯಾಂಕ್ ಗಳಿಸಿದ್ದಾರೆ.

ಎಸ್.ಎಲ್. ಶಶಿಕುಮಾರ್

ಗ್ರಾಮದ ಶಿಕ್ಷಕ ಲಕ್ಷ್ಮಿರಂಗಯ್ಯ ಹಾಗೂ ಚಂದ್ರಕಾಂತಮ್ಮ ದಂಪತಿ ಪುತ್ರರಾದ ಶಶಿಕುಮಾರ್ ಪಟ್ಟಣದ ಕಾರ್ಡಿಯಲ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ, ತುಮಕೂರಿನ ಸರ್ವೋದಯ ಕಾಲೇಜಿನಲ್ಲಿ ಪಿಯು ಹಾಗೂ ಬೆಂಗಳೂರಿನ ಪಿಇಎಸ್ ಕಾಲೇಜಿನಿಂದ 2019ರಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

'ಶ್ರಮದಿಂದ ಸತತ ಅಧ್ಯಯನ ನಡೆಸಿದರೆ ಸುಲಭವಾಗಿ ಗುರಿ ತಲುಪಬಹುದು. ಪ್ರತಿದಿನ 12 ತಾಸು ತಯಾರಿ ನಡೆಸುತ್ತಿದ್ದೆ. ತಂದೆ, ತಾಯಿ ಪಡುತ್ತಿದ್ದ ಕಷ್ಟ, ಕಾರ್ಪಣ್ಯ ಸದಾ ಕಣ್ಣ ಮುಂದೆ ಬರುತ್ತಿದ್ದವು. ಸಾಧನೆ ಮಾಡಿ ಹೆತ್ತವರಿಗೆ ಮತ್ತು ಹುಟ್ಟಿದ ಊರಿಗೆ ಒಳ್ಳೆಯ ಹೆಸರು ತರಬೇಕು ಎಂದು ಪಣ ತೊಟ್ಟಿದ್ದೆ. ನನ್ನ ಶ್ರಮ ಇಂದು ಫಲ ನೀಡಿದೆ' ಎಂದು ಶಶಿಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಮಹಿಳಾ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ -ಪ್ರಕರಣ ದಾಖಲು

ಮಂಗಳೂರು: ನಗರದ ದಂತ ವೈದ್ಯಕೀಯ ಕಾಲೇಜೊಂದರ ಮಹಿಳೆಯರ ಶೌಚಾಲಯದಲ್ಲಿ ಮೊಬೈಲ್ ಅಡಗಿಸಿಟ್ಟು ವಿಡಿಯೊ ಚಿತ್ರೀಕರಿಸುತ್ತಿದ್ದುದು ಪತ್ತೆಯಾಗಿದೆ. 17 ವರ್ಷದ ಬಾಲಕನೊಬ್ಬ ಈ ಕೃತ್ಯವೆಸಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಈ ಕೃತ್ಯವೆಸಗಿದ್ದಾನೆ ಎನ್ನಲಾದ, ಕಾನೂನು ಸಂಘರ್ಷಕ್ಕೆ ಸಿಲುಕಿದ ಬಾಲಕನನ್ನು ವಶಕ್ಕೆ ಪಡೆದು ಆತನನ್ನು ಬಾಲನ್ಯಾಯ ಮಂಡಳಿ ಮುಂದೆ ಹಾಜರುಪಡಿಸಿ ಮುಂದಿನ ಕ್ರಮ ಕೈಗೊಂಡಿದ್ದೇವೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ವೈದ್ಯಕೀಯ ಕಾಲೇಜಿನ ಮಹಿಳೆಯರ ಶೌಚಾಲಯದಲ್ಲಿ ಯಾರೂ ಇಲ್ಲದಾಗ ಮೊಬೈಲ್ ರಿಂಗುಣಿಸಿತ್ತು. ಶೌಚಾಲಯವನ್ನು ಪರಿಶೀಲಿಸಿದಾಗ ಪತ್ತೆಯಾಗಿದ್ದ ಮೊಬೈಲ್ ಮೊಬೈಲನ್ನು ವಶಕ್ಕೆ ಪಡೆದುಕೊಂಡಿದ್ದೇವೆ' ಎಂದರು.

ವಿಶ್ರಾಂತಿಗೆ ರೆಸಾರ್ಟ್ ಸೇರಿದ ಸಿಎಂ, ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಎರಡು ತಿಂಗಳಿಗೂ ಹೆಚ್ಚು ಸಮಯದಿಂದ ಲೋಕಸಭಾ ಚುನಾವಣೆಗಾಗಿ ಬೆವರು ಹರಿಸಿದ್ದ ವಿವಿಧ ರಾಜಕೀಯ ಪಕ್ಷಗಳ ನಾಯಕರು ಎರಡನೇ ಹಂತದ ಮತದಾನದ ಬಳಿಕ ವಿಶ್ರಾಂತಿಗೆ ಮೊರೆ ಹೋಗಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್‌ಗೆ ಸಂಬಂಧಿಸಿದಂತೆ ರಾಜಕೀಯದ ಬಿಸಿ ಏರಿರುವುದರಿಂದ ಜೆಡಿಎಸ್ ನಾಯಕರು ತೀವ್ರ ಒತ್ತಡಕ್ಕೆ ಸಿಲುಕಿದ್ದಾರೆ. ಆದರೆ, ಕಾಂಗ್ರೆಸ್ ನಾಯಕರು ನಿರುಮ್ಮಳವಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರವೇ ವಿಶ್ರಾಂತಿಗಾಗಿ ರೆಸಾರ್ಟ್‌ಗೆ ತೆರಳಿದರೆ, ಉಪಮುಖ್ಯ-ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಿಕ್ಕಮಗಳೂರಿನ ಸೆರಾಯ್ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದರು.

ಮುಖ್ಯಾಂಶಗಳು

- ತವರು ಜಿಲ್ಲೆಗಳಿಗೆ ತೆರಳಿ ಕುಟುಂಬ ಸದಸ್ಯರ ಜತೆ ಕಾಲ ಕಳೆದ ಸಚಿವರು
- ಬೆಂಗಳೂರಿನಲ್ಲೇ ಉಳಿದ ಬಿ.ವೈ. ವಿಜಯೇಂದ್ರ, ಆರ್. ಅಶೋಕ

ಬೆಂಗಳೂರು ಮೂಲದ ಸಚಿವರು ಬೆಂಗಳೂರಿನಲ್ಲೇ ಇದ್ದರೆ, ಉಳಿದವರು ತವರು ಜಿಲ್ಲೆಗಳಲ್ಲೇ ಕುಟುಂಬದವರ ಜತೆ ಕಾಲ ಕಳೆದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಬುಧವಾರ ಬೆಂಗಳೂರಿನಲ್ಲೇ ಇದ್ದರು. ವಿಜಯೇಂದ್ರ ಅವರು ಬುಧವಾರ ಪಕ್ಷದ ಕಚೇರಿಗೆ ಭೇಟಿ ನೀಡಿದರು. ಜೂನ್ 3ಕ್ಕೆ ವಿಧಾನ-ಪರಿಷತ್‌ನ ಆರು ಸ್ಥಾನಗಳಿಗೆ ಮತದಾನ ಇರುವುದರಿಂದ ಅಭ್ಯರ್ಥಿಗಳ ಆಯ್ಕೆ ಸೇರಿ ಇತರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಒಂದೆರಡು ದಿನಗಳಲ್ಲೇ ಪಕ್ಷದ ಪ್ರಮುಖ ನಾಯಕರ ಸಭೆಯನ್ನು ಕರೆಯಲು ನಿರ್ಧರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಅಲ್ಲದೇ, ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಭಗವಂತ ಖೂಬಾ, ಶಾಸಕ ವಿ.ಸುನಿಲ್ ಕುಮಾರ್, ಮಾಜಿ ಸಚಿವ ಸಿ.ಟಿ.ರವಿ ಅವರನ್ನು ತೆಲಂಗಾಣ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ನಡೆಯುವ ಚುನಾವಣಾ ಕಾರ್ಯಕ್ಕೆ ನಿಯೋಜಿಸಲು ಬಿಜೆಪಿ ವರಿಷ್ಠರು ತೀರ್ಮಾನಿಸಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿಜೆಪಿಯ ಬಹುತೇಕ ನಾಯಕರು ತಮ್ಮ ಮನೆಗಳಲ್ಲಿ ಕುಟುಂಬದವರ ಜತೆ ಕಾಲ ಕಳೆಯುವ ಮೂಲಕ ಎರಡು ತಿಂಗಳ ಓಡಾಟದ ದಣಿವು ತೀರಿಸಿಕೊಳ್ಳುವ ಪ್ರಯತ್ನ ನಡೆಸಿದರು.

ಪ್ರಜ್ವಲ್ ರೇವಣ್ಣ ಪ್ರಕರಣದಿಂದ ಜೆಡಿಎಸ್ ನಾಯಕರು ತೀವ್ರ ಇಕ್ಕಟ್ಟಿಗೆ ಸಿಲುಕಿದ್ದಾರೆ. ಎಚ್.ಡಿ.ರೇವಣ್ಣ ಜೈಲು ಪಾಲಾಗಿರುವುದರಿಂದ ದೇವೇಗೌಡರ ಕುಟುಂಬವು ಆಘಾತದಿಂದ ಹೊರಬಂದಿಲ್ಲ.

ಲೀಲಾದೇವಿಗೆ 'ಬಸವಶ್ರೀ', ಅಂಬಯ್ಯಗೆ 'ವಚನ ಸಾಹಿತ್ಯ ಶ್ರೀ'

ಬೆಂಗಳೂರು: ಬಸವ ವೇದಿಕೆ ವತಿಯಿಂದ ನೀಡುವ 'ಬಸವಶ್ರೀ ಪ್ರಶಸ್ತಿ'ಗೆ ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಹಾಗೂ 'ವಚನ ಸಾಹಿತ್ಯ ಶ್ರೀ' ಪ್ರಶಸ್ತಿಗೆ ಹಿಂದೂಸ್ತಾನಿ ಗಾಯಕ ಅಂಬಯ್ಯ ನುಲಿ ಆಯ್ಕೆಯಾಗಿದ್ದಾರೆ.

ಬುಧವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ವೇದಿಕೆಯ ಅಧ್ಯಕ್ಷ ಸಿ. ಸೋಮಶೇಖರ್, 'ಲೀಲಾದೇವಿ ಆರ್. ಪ್ರಸಾದ್ ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಹಾಗೂ ಶರಣ ಸಾಹಿತ್ಯಕ್ಕೆ ನೀಡಿರುವ ಮೌಲಿಕ ಕೊಡುಗೆಯನ್ನು ಪರಿಗಣಿಸಿ 'ಬಸವಶ್ರೀ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಅಂಬಯ್ಯ ನುಲಿ ಅವರು ವಚನ ಸಂಗೀತಕ್ಕೆ ಸಲ್ಲಿಸಿರುವ ಕೊಡುಗೆಯನ್ನು ಪರಿಗಣಿಸಿ 'ವಚನ ಸಾಹಿತ್ಯಶ್ರೀ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ' ಎಂದರು.

'ಇದೇ 12ರಂದು ಬೆಂಗಳೂರಿನ ಗಾಂಧಿಭವನದಲ್ಲಿ ಸಂಜೆ 5.30ಕ್ಕೆ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಶಾಸಕ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, 'ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಅವರು 'ಬಸವಜ್ಯೋತಿ' ಸಂಚಿಕೆ ಹಾಗೂ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ತಿಳಿಸಿದರು.

ಲೀಲಾದೇವಿ

ಅಂಬಯ್ಯ

'ಅಪಘಾತದ ಸಾವು ಆರೋಪಿಗಳಿಗೆ ಕನಿಷ್ಠ ಶಿಕ್ಷೆ ಅಗತ್ಯ'

ಬೆಂಗಳೂರು: 'ಅಜಾಗರೂಕಯಿಂದ ವಾಹನ ಚಲಾಯಿಸಿ ಅಪಘಾತಗಳಿಗೆ ಕಾರಣರಾಗುವವರಿಗೆ ಕನಿಷ್ಠ ಶಿಕ್ಷೆ ವಿಧಿಸದೇ ಇದ್ದಲ್ಲಿ ಸಮಾಜ ಮತ್ತು ಸಂತ್ರಸ್ತರಿಗೆ ಅನ್ಯಾಯ ಮಾಡಿದಂತೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಪಘಾತ ಪ್ರಕರಣದಲ್ಲಿ ಶಿಕ್ಷೆಯನ್ನು ಖಚಿತಪಡಿಸಿದ್ದ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸಂತೋಷ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಅಜಾಗರೂಕತೆಯಿಂದ ಆಂಬುಲೆನ್ಸ್ ಚಲಾಯಿಸಿ ಮತ್ತೊಂದು ಕಾರಿನ ಚಾಲಕನ ಸಾವಿಗೆ ಕಾರಣವಾಗಿರುವ ಸಂತೋಷ್‌ಗೆ ವಿಚಾರಣಾ ನ್ಯಾಯಾಲಯ ವಿಧಿಸಿರುವ ಆರು ತಿಂಗಳ ಜೈಲು ಶಿಕ್ಷೆಯನ್ನು ರದ್ದುಗೊಳಿಸಲು ನ್ಯಾಯಪೀಠ ನಿರಾಕರಿಸಿದೆ.

ರಾಮನಗರ ಜಿಲ್ಲಾ ಪಂಚಾಯತ್

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2ನೇ ಮಹಡಿ, ಜಿಲ್ಲಾಪಂಚಾಯತ್ ಭವನ, ಬಿ. ಎಂ. ರಸ್ತೆ, ರಾಮನಗರ.
ದೂರವಾಣಿ : 080-27276047, ಇಮೇಲ್ : dobcramanagara@gmail.com

ಸಂಖ್ಯೆ : ಹಿಂವಕಇ/ರಾ.ಜಿ./ಆ.ಟೆ./ಸಿಆರ್–34/2023–24 ದಿನಾಂಕ : 03–05–2024

ತಿದ್ದುಪಡಿ ಇ-ಟೆಂಡರ್ ಪ್ರಕಟಣೆ

2024–25 ಮತ್ತು 2025–26 ನೇ ಸಾಲಿಗೆ (ಮಾರ್ಚ್ 2026 ರ ಅಂತ್ಯದ ವರೆಗೆ ಮಾತ್ರ) ರಾಮನಗರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್, ಮೆಟ್ರಿಕ್ – ನಂತರ ಆಶ್ರಮ ಶಾಲೆಗಳಿಗೆ ತಾಲ್ಲೂಕುವಾರು ಆಹಾರ, ತರಕಾರಿ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಆಹ್ವಾನಿಸಿರುವ ದಿನಾಂಕ : 13–05–2024 ರ ಟೆಂಡರ್ ದಸ್ತಾವೇಜಿಗೆ ತಿದ್ದುಪಡಿಯನ್ನು ಮಾಡಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ದಿನಾಂಕ : 13–05–2024 ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ. https://kppp.karnataka.gov.in ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ರಾಮನಗರ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/606(ಎ)/ಮಣಿಪಾಲ್/2022–23

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಎಫ್–34/ವಾ–12(ಎ)/123 ದಿನಾಂಕ: 07–05–2024

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಉತ್ಪಾದನಾ ದರ ನಿರ್ಧರಣೆ ಮತ್ತು ಷರತ್ತುಗಳು) ವಿನಿಯಮಗಳು, 2024 ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕವಿನಿಆ) ಹೊರಡಿಸಲು ಪ್ರಸ್ತಾವಿಸಿರುವ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಉತ್ಪಾದನಾ ದರ ನಿರ್ಧರಣೆ ಮತ್ತು ಷರತ್ತುಗಳು) ವಿನಿಯಮಗಳು, 2024, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 25–04–2024 ರಂದು ಪ್ರಕಟವಾಗಿದೆ. ಕ.ವಿ.ನಿ.ಆ. ದ ವೆಬ್‌ಸೈಟ್: https://kerc.karnataka.gov.in ನಲ್ಲಿ ಕರಡು ವಿನಿಯಮಗಳು ಲಭ್ಯವಿದೆ.

ಆಸಕ್ತರು ಕರಡು ವಿನಿಯಮಗಳ ಬಗ್ಗೆ ತಮ್ಮ ಲಿಖಿತ ಅಭಿಪ್ರಾಯ / ವಿಮರ್ಶೆ / ಸಲಹೆಗಳು ಇದ್ದಲ್ಲಿ, **ಆಯೋಗದ ಕಾರ್ಯದರ್ಶಿಯವರಿಗೆ** ಮೇಲೆ ತಿಳಿಸಿದಂತೆ ಕರಡು ವಿನಿಯಮಗಳು ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನದಿಂದ 30 ದಿನದೊಳಗೆ ಕಳುಹಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/59/2024–25

ಚುನಾವಣಾ ಆಯೋಗದ ಅನುಮತಿ ಪತ್ರ
ಸಂಖ್ಯೆ: ಸಿಇಸುಇ 92 ಎಂಸಿಸಿ (ಅಮುಚುಅ–1) 2024, ದಿನಾಂಕ: 22.03.2024

ಸುಭಾಷಿತ

ಗುರು ಎಂದರೆ ವ್ಯಕ್ತಿಯಲ್ಲ, ಒಂದು ಶಕ್ತಿ. ಅಜ್ಞಾನದ ಕತ್ತಲೆಯ ಕಳೆದು ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಶಬ್ದವೇ ಗುರು.

–ಸ್ವಾಮಿ ವಿವೇಕಾನಂದ

ಬರ ಪರಿಹಾರ ಕಾರ್ಯಕ್ಕೆ ಚುರುಕು ಮುಟ್ಟಿಸಿ, ಜನರ ಬವಣೆ ನಿವಾರಿಸಿ

ಲೋಕಸಭಾ ಚುನಾವಣೆಗೆ ರಾಜ್ಯದಲ್ಲಿ ಎರಡು ಹಂತಗಳಲ್ಲಿ ನಡೆದ ಮತದಾನ ಪ್ರಕ್ರಿಯೆ ಪೂರ್ಣಗೊಂಡಿದೆ. ಎರಡು ತಿಂಗಳಿಂದ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಚುನಾವಣೆ ಸಂಬಂಧದ ಕೆಲಸಗಳಲ್ಲಿ ನಿರತರಾಗಿದ್ದರು. ಈಗ ಬಹುತೇಕರಿಗೆ ಚುನಾವಣಾ ಕಾರ್ಯದಿಂದ ಮುಕ್ತಿ ಸಿಕ್ಕಿದೆ. ಇನ್ನು ತಡ ಮಾಡುವುದು ಸರಿಯಲ್ಲ. ಬರದಿಂದ ಬಸವಳಿದಿರುವ ಜನರಿಗೆ ಪರಿಹಾರ ಒದಗಿಸಲು ಆಡಳಿತ ಚುರುಕು ಹಿಡಿಯಲು ಹಾಗೂ ಅಧಿಕಾರಿಗಳು ಮುಂದಾಗಬೇಕಿದೆ. ಕುಡಿಯುವ ನೀರು ಒದಗಿಸುವ ಕಾರ್ಯದಲ್ಲಿ ತೀವ್ರತೆ ತೋರಿಸಬೇಕಿದೆ. ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಚುನಾವಣಾ ನೀತಿ ಸಂಹಿತೆ ಅಡ್ಡಿ ಆಗುವುದಿಲ್ಲ ವಾದರೂ ಚುನಾವಣೆ ಎನ್ನುವುದು ಒಂದು ನೆಪವಾಗಿತ್ತು. ಈಗ ಯಾವುದೇ ನೆಪ ಹೇಳದೆ ಜನರ ಸಮಸ್ಯೆಗಳನ್ನು ಆಲಿಸಬೇಕು ಮತ್ತು ಸಮಸ್ಯೆ ಪರಿಹಾರಕ್ಕೆ ಧಾವಿಸಬೇಕು. ರಾಜ್ಯದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಬಿಸಿಲಿನ ತಾಪ ಇದೆ. ಬಿಸಿ ಗಾಳಿಯಿಂದಲೂ ಜನರು ಸಂಕಷ್ಟಕ್ಕೆ ಈಡಾಗಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಶಾಖಾಘಾತದಿಂದ ಕೆಲವರು ಪ್ರಾಣ ಕಳೆದುಕೊಂಡಿದ್ದಾರೆ. ಬಹುತೇಕ ಜಿಲ್ಲೆಗಳಲ್ಲಿ ಬರ ತೀವ್ರವಾಗಿದೆ. ಕುಡಿಯುವ ನೀರು, ಮೇವು ಸಿಗದೆ ಜಾನುವಾರುಗಳು ಕಂಗೆಟ್ಟಿವೆ. ರೈತರ ಬೆಳೆಯೂ ನಾಶವಾಗಿದೆ. 29 ಜಿಲ್ಲೆಗಳ 149 ತಾಲ್ಲೂಕುಗಳ 1,084 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 1,920 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಕೊಳವೆಬಾವಿಗಳು ಬತ್ತಿವೆ. ನೀರಿನ ಮೂಲಗಳಾದ ಕೆರೆಗಳು ಒಣಗಿವೆ. ಬೆಂಗಳೂರು ಮಹಾನಗರ ಸೇರಿದಂತೆ ರಾಜ್ಯದ ಬಹುತೇಕ ನಗರ, ಪಟ್ಟಣಗಳಿಗೆ ನೀರು ಒದಗಿಸುತ್ತಿದ್ದ ರಾಜ್ಯದ ಬಹುಪಾಲು ಜಲಾಶಯಗಳಲ್ಲಿಯೂ ನೀರಿನ ಸಂಗ್ರಹ ಮಟ್ಟ ಕುಸಿದಿದೆ. ಒಳನಾಡು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಭಾಗಗಳು ಬಿಸಿಲಿನ ಬೇಗೆಗೆ ತತ್ತರಿಸಿಹೋಗಿವೆ. ಕಾದ ಹಂಚಿನ ಮೇಲೆ ಬದುಕು ಎಂಬಂತಾಗಿದೆ ಅಲ್ಲಿಯ ಜನರ ಸ್ಥಿತಿ. 22 ನಗರ ಸ್ಥಳೀಯ ಸಂಸ್ಥೆಗಳ 188 ವಾರ್ಡ್‌ಗಳಲ್ಲಿಯೂ ನೀರಿನ ಕೊರತೆ ಎದುರಾಗಿದ್ದು, ಟ್ಯಾಂಕರ್‌ಗಳ ಮೂಲಕ ನೀರು ಒದಗಿಸಲಾಗುತ್ತಿದೆ. ಕೆಲವು ಕಡೆ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಕೊಡಲಾಗುತ್ತಿದೆ. ಜಾನುವಾರುಗಳಿಗೆ ಮೇವು ಪೂರೈಸಲು ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದ್ದರೂ ಅವು ಸಾಕಾಗುತ್ತಿಲ್ಲ. ಕೆಲವು ಗೋಶಾಲೆಗಳೂ ನೀರಿನ ಕೊರತೆ ಎದುರಿಸುತ್ತಿವೆ. ಸಮಸ್ಯಾತ್ಮಕ ಪ್ರದೇಶಗಳನ್ನು ಗುರುತಿಸಲಾಗಿದೆ. ಮೊದಲೇ ಗುರುತಿಸಲಾಗಿತ್ತು, ತಕ್ಷಣವೇ ನೀರು ಪೂರೈಸಲು ಟ್ಯಾಂಕರ್‌ಗಳಿಗೆ ಟೆಂಡರ್ ಕೂಡಾ ಕರೆಯಲಾಗಿತ್ತು. ಆದರೆ ಚುನಾವಣೆ ಕಾರಣಕ್ಕೆ ಕಾರ್ಯಗಳು ಚುರುಕು ಪಡೆದಿರಲಿಲ್ಲ. ಈಗ ತಕ್ಷಣವೇ ಕಾರ್ಯೋನ್ಮುಖರಾಗಬೇಕು. ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆಯೋ ಅಲ್ಲೆಲ್ಲ ನೀರು ಒದಗಿಸುವ ಕೆಲಸವನ್ನು ತುರ್ತಾಗಿ ಮಾಡಬೇಕಿದೆ. ಜಾನುವಾರುಗಳಿಗೆ ಮೇವು ಒದಗಿಸಬೇಕಿದೆ. ಇನ್ನಷ್ಟು ಗೋಶಾಲೆ ಹಾಗೂ ಮೇವು ಬ್ಯಾಂಕ್‌ಗಳನ್ನು ತೆರೆಯಬೇಕಿದೆ.

> ಬರದಿಂದ ಕಂಗೆಟ್ಟಿರುವ ಜನರಿಗೆ ಸಾಂತ್ವನ ಹೇಳುವ, ಧೈರ್ಯ ತುಂಬುವ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ತುರ್ತಾಗಿ ಮಾಡಬೇಕಿದೆ

ಲೋಕಸಭಾ ಚುನಾವಣೆಗೆ ಮತದಾನ ಮುಗಿದಿದೆ ಎಂದು ವಿಶ್ರಾಂತಿ ಪಡೆಯುವ ಸಮಯ ಇದಲ್ಲ. ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ. ಈ ನಿಟ್ಟಿನಲ್ಲಿ ಆಡಳಿತ ಯಂತ್ರವನ್ನು ಚುರುಕುಗೊಳಿಸುವ ಕಾರ್ಯವನ್ನು ಮುಖ್ಯಮಂತ್ರಿ ಮತ್ತು ಕಂದಾಯ ಸಚಿವರು ಮಾಡಬೇಕಾಗಿದೆ. ಬರದಿಂದ ಕಂಗೆಟ್ಟು, ನಿರಾಶೆಗೆ ಒಳಗಾಗಿರುವ ಜನರಿಗೆ ಸಾಂತ್ವನ ಹೇಳುವ, ಧೈರ್ಯ ತುಂಬುವ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ತುರ್ತಾಗಿ ಮಾಡಬೇಕಿದೆ. ಬರ ಆವರಿಸುವ ಸೂಚನೆಗಳು ಮೊದಲೇ ಗೋಚರಿಸಿದ್ದವು. ಕಳೆದ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯೂ ಆಗಿರಲಿಲ್ಲ. ಆದರೂ ಸೂಕ್ತ ವ್ಯವಸ್ಥೆ ಮಾಡಿಕೊಳ್ಳದೇ ಇರುವುದು ಆಡಳಿತದ ವೈಫಲ್ಯವನ್ನು ತೋರುತ್ತದೆ. ಈಗಲಾದರೂ ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು. ಸಮಸ್ಯೆ ಉಲ್ಬಣಿಸಿದಾಗ ಪರಿಹಾರೋಪಾಯಗಳನ್ನು ಹುಡುಕುವ ಬದಲು ಮುನ್ನೆಚ್ಚರಿಕೆ ಕ್ರಮಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳುವುದು ಸರ್ಕಾರದ ಕರ್ತವ್ಯ. ಬರದಿಂದ ಕಂಗೆಟ್ಟಿರುವ ಜನರಿಗೆ ಅಗತ್ಯ ಸೌಲಭ್ಯ ಒದಗಿಸುವ ಜೊತೆಗೆ ಇದನ್ನೇ ಒಂದು ಅವಕಾಶ ಎಂದು ಅರಿತು ಮಳೆಗಾಲ ಬರುವುದರೊಳಗೆ ಕೆರೆಗಳ ಹೂಳು ತೆಗೆದು, ಮಳೆನೀರು ಸಂಗ್ರಹಕ್ಕೆ ಅವುಗಳನ್ನು ಅನುವಾಗಿಸುವುದು ಇಂದಿನ ಅಗತ್ಯ.

ದಿನದ ಟ್ವೀಟ್

ಮಾತನ್ನು ಆಡದೇ ಇರಬಹುದಿತ್ತು...

ನರೇಂದ್ರ ಮೋದಿ ಅವರೇ, ನೀವು ಸರ್ಕಾರದ ಮುಖ್ಯಸ್ಥರು. ಅಂಬಾನಿ ಮತ್ತು ಅದಾನಿ ಅವರು ವಿರೋಧ ಪಕ್ಷಗಳಿಗೆ ದೇಣಿಗೆ ನೀಡುತ್ತಿದ್ದಾರೆ ಎಂದು ಹೇಳುವುದು ಒಳ್ಳೆಯ ಅಭಿರುಚಿಯ ಮಾತಲ್ಲ. ತಮಗೆ ಸೂಕ್ತ ಅನ್ನಿಸಿದಾಗ ಅಂಬಾನಿ ಮತ್ತು ಅದಾನಿ ಅವರ ಹೆಸರನ್ನು ನಕಾರಾತ್ಮಕವಾಗಿ ಬಳಸಿಕೊಳ್ಳುವ ವಿಚಾರದಲ್ಲಿ ಬಿಜೆಪಿಯೂ ವಿರೋಧ ಪಕ್ಷಗಳ ರೀತಿಯಲ್ಲಿ ವರ್ತಿಸಬಾರದು. ಈ ಮಾತು ಒಂದುವೇಳೆ ವ್ಯಂಗ್ಯ ಎಂದಾಗಿದ್ದರೂ, ಮಾತನ್ನು ಆಡದೇ ಇರಬಹುದಿತ್ತು.

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ಬಿಜೆಪಿಯು ಜನರಿಗೆ ₹5,000, ₹10,000 ಮತ್ತು ₹15,000ದಷ್ಟು ಹಣ ಕೊಟ್ಟು ಮತ ಖರೀದಿಸುತ್ತಿದೆ. ರಾಜ್ಯದಲ್ಲಿ ಈ ಹಿಂದೆ ಸಿಪಿಎಂನಲ್ಲಿ ಇದ್ದ ಸಮಾಜಘಾತುಕರೇ ಈಗಿನ ಬಿಜೆಪಿಯ ನಾಯಕರು.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 9-5-1999

● **ಕಾವೇರಿ ಜಲ ವಿದ್ಯುತ್ ಯೋಜನೆ ಮೇ 20ರಂದು ಮಹತ್ವದ ಸಭೆ**

ನವದೆಹಲಿ, ಮೇ 8– ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಅಂತರರಾಜ್ಯ ಜಲ ವಿದ್ಯುತ್ ಯೋಜನೆಗಳ ಒಡಂಬಡಿಕೆ ಪತ್ರದ ಅಂತಿಮ ಕರಡನ್ನು ಕರ್ನಾಟಕ ಮತ್ತು ತಮಿಳುನಾಡಿಗೆ ಕಳುಹಿಸಲಾಗಿದ್ದು ಈ ತಿಂಗಳ 20ರ ನಂತರ ರಾಷ್ಟ್ರೀಯ ಜಲ ವಿದ್ಯುತ್ ನಿಗಮ ಎರಡೂ ರಾಜ್ಯಗಳ ಜತೆ ಮಹತ್ವದ ಸಭೆ ನಡೆಸಲಿದೆ.

ರಾಷ್ಟ್ರೀಯ ಜಲ ವಿದ್ಯುತ್ ನಿಗಮ ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಕಾವೇರಿ ನದಿಗೆ ಅಡ್ಡವಾಗಿ ನಿರ್ಮಿಸಲು ಉದ್ದೇಶಿಸಿರುವ ನಾಲ್ಕು ಜಲ ವಿದ್ಯುತ್ ಯೋಜನೆಗಳ ಫಲಾನುಭವಿ ರಾಜ್ಯಗಳ ಪಟ್ಟಿಯಲ್ಲಿ ಪುದುಚೇರಿ ಮತ್ತು ಕೇರಳವನ್ನು ಸೇರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

● **ದಳ ವಿದ್ಯಮಾನ: ಸಚಿವರಿಂದಲೇ ಅಪಸ್ವರ**

ಬೆಂಗಳೂರು, ಮೇ 8– ಜನತಾದಳದ ಹಿರಿಯ ನಾಯಕರಾದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೆಗಲ ಮೇಲೆ ಕೈಹಾಕಿ ಉಪಾಹಾರ ಹಾಗೂ ಭೋಜನ ಕೂಟಗಳನ್ನು ನಡೆಸಿ ಪಕ್ಷದಲ್ಲಿ ಒಗ್ಗಟ್ಟು ಮೂಡಿಬಂದಿದೆ ಎಂದು ಹೇಳುತ್ತಿರುವುದಕ್ಕೆ ಪಕ್ಷದ ಹಿರಿಯ ಸಚಿವರಿಂದಲೇ ಅಪಸ್ವರ ವ್ಯಕ್ತವಾಗಿದೆ.

ಒಂದೂವರೆ ವರ್ಷದಿಂದ ದೇವೇಗೌಡರ ಬೆಂಬಲಿಗರದ್ದು ಒಂದು ಗುಂಪು ಹಾಗೂ ಮುಖ್ಯಮಂತ್ರಿ ಪಟೇಲ್ ಅವರ ಬೆಂಬಲಿಗರದ್ದು ಮತ್ತೊಂದು ಗುಂಪು ಎಂಬುದಾಗಿ ಜನತಾದಳದಲ್ಲಿ ಸ್ಪಷ್ಟವಾಗಿ ಕೆಲಸ ಮಾಡಿದವು. ಆದರೆ ಈಗ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳು ಹತ್ತಿರಕ್ಕೆ ಬಂದಿವೆ ಎಂಬ ಕಾರಣದಿಂದ ಈ ನಾಯಕರು ಹಿಂದಿನ ಕಹಿ ಅನುಭವಗಳನ್ನು ಮರೆತು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹೆಗಲ ಮೇಲೆ ಕೈ ಹಾಕಿಕೊಂಡು ಭಾಯಿ ಭಾಯಿ ಹೇಳಿದರೆ ಪಕ್ಷದ ಒಗ್ಗಟ್ಟಿಗೆ ಅರ್ಥವಿದೆಯೇ ಎಂಬ ಪ್ರಶ್ನೆ ಕೆಲವು ಹಿರಿಯ ಸಚಿವರನ್ನು ಕಾಡುತ್ತಿದೆ.

50 ವರ್ಷಗಳ ಹಿಂದೆ

ಗುರುವಾರ, 9-5-1974

● **ರಾಷ್ಟ್ರದಾದ್ಯಂತ ರೈಲ್ವೆ ಮುಷ್ಕರ: ಸಂಚಾರ ಅಸ್ತವ್ಯಸ್ತ**

ನವದೆಹಲಿ, ಮೇ 8– ರಾಷ್ಟ್ರದಾದ್ಯಂತ ಇಂದು ಬೆಳಿಗ್ಗೆ ಆರು ಗಂಟೆಗೆ ರೈಲ್ವೆ ಮುಷ್ಕರ ಪ್ರಾರಂಭವಾದಂತೆ ರೈಲು ಸಂಚಾರ ವ್ಯಾಪಕವಾಗಿ ಅಸ್ತವ್ಯಸ್ತಗೊಂಡಿತು.

ಸ್ವಾತಂತ್ರ್ಯ ಬಂದ ನಂತರ ಇದು ಮೂರನೇ ರೈಲ್ವೆ ಮುಷ್ಕರ. ರಾಷ್ಟ್ರದ ವಿವಿಧ ಭಾಗಗಳಿಂದ ಬಂದಿರುವ ವರದಿಗಳ ಪ್ರಕಾರ ಮುಷ್ಕರದ ಕರೆಗೆ ಸಿಕ್ಕಿರುವ ಪ್ರತಿಕ್ರಿಯೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿದೆ. ಮುಖ್ಯ ಮಾರ್ಗಗಳಲ್ಲಿ ಸಂಚಾರ ವ್ಯವಸ್ಥೆಗೆ ತೀವ್ರ ಧಕ್ಕೆ ತಟ್ಟಿತು.

● **100 ಮಂದಿ ನೌಕರರ ವಜಾ**

ಮದರಾಸು, ಮೇ 8– ರೈಲ್ವೆ ಮುಷ್ಕರ ಆರಂಭ ಆಗುತ್ತಿದ್ದಂತೆ ಹಲವಾರು ಕಡೆಗಳಿಂದ ನೌಕರರ ವಜಾ ವರದಿಗಳು ಬರುತ್ತಿವೆ.

ದಕ್ಷಿಣ ರೈಲ್ವೆಯ 48 ಮಂದಿ ಉದ್ಯೋಗಿಗಳನ್ನು ಬೆದರಿಕೆ, ಪ್ರಚೋದನೆ ಮತ್ತು ಮಾಮೂಲು ಕರ್ತವ್ಯ ನಿರ್ವಹಣೆ ನಿರಾಕರಿಸಿದ್ದಕ್ಕಾಗಿ ಸೇವೆಯಿಂದ ತೆಗೆದುಹಾಕಲಾಗಿದೆ ಎಂದು ಜನರಲ್ ಮ್ಯಾನೇಜರ್ ಹೇಳಿದ್ದಾರೆ.

ನಿಷ್ಠಾವಂತ ಕೆಲಸಗಾರರಿಗೆ ಬೆದರಿಕೆ ಹಾಕಿದ ಮತ್ತು ರೈಲ್ವೆ ಸಂಚಾರಕ್ಕೂ ತಡೆ ಉಂಟುಮಾಡಿದ ಆಪಾದನೆಗಾಗಿ ಪೂರ್ವ ರೈಲ್ವೆಯಲ್ಲಿ 40 ನೌಕರರನ್ನು ವಜಾ ಮಾಡಲಾಗಿದೆ. ಇದೇ ಕಾರಣಕ್ಕಾಗಿ ದಕ್ಷಿಣ ಮಧ್ಯ ರೈಲ್ವೆಯ 12 ಮಂದಿ ನೌಕರರನ್ನು ವಜಾ ಮಾಡಲಾಗಿದೆ.

ಛಲವೊಂದಿದ್ದರೆ ಬರವನ್ನೇ ಹಿಂಡಿ ಹನಿ ಹನಿ ನೀರನ್ನು ಬಸಿಯಲೂಬಹುದು

ನೆಲಕ್ಕೆ, ಹೊಲಕ್ಕೆ ಐಸಿಟಿ, ಐಒಟಿ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಸೆಕೆಯ ಅಲೆ ಕೇವಲ ನೆಲದ ಮೇಲಷ್ಟೇ ಚಲಿಸುತ್ತದೆ ಎಂದುಕೊಂಡಿದ್ದಿರಾ? ಅದು ಸಮುದ್ರದ ಆಳದಲ್ಲೂ ನಿಧಾನಕ್ಕೆ ಚಲಿಸುತ್ತದೆ. ಹೋದವರ್ಷದ ಆ ಅಲೆಯ ಪ್ರಭಾವ ಈಗ ಕಾಣುತ್ತಿದೆ. ಅಂದಮೇಲೆ, ನೆಲದಡಿಯಲ್ಲೂ ಅಂಥದ್ದೇ ಶಾಖದ ಅಲೆ ಇರಬಹುದಲ್ಲವೆ? ನಮ್ಮಲ್ಲಿ ಬರಪೀಡಿತ ತಾಲ್ಲೂಕುಗಳ ಸಂಖ್ಯೆ ವರ್ಷವರ್ಷಕ್ಕೂ ಹೆಚ್ಚುತ್ತಿರುವುದನ್ನು ನೋಡಿದರೆ ಅಂಥದ್ದೊಂದು ಗುಮಾನಿ ಬರುತ್ತಿದೆ. ಮೊನ್ನೆ ಭಾನುವಾರ ತುಮಕೂರು ಜಿಲ್ಲೆಯ ತೋವಿನಕೆರೆಯ ರಾಜಣ್ಣ ಆತ್ಮಹತ್ಯೆ ಮಾಡಿಕೊಂಡರು. ಒಣಗುತ್ತಿರುವ ಅಡಿಕೆ ತೋಟವನ್ನು ಉಳಿಸಿಕೊಳ್ಳಲೆಂದು ಅವರು ಒಂದೆರಡಲ್ಲ, ಏಳು ಕೊಳವೆ ಬಾವಿಗಳನ್ನು ಕೊರೆಸಿದರು. ಎಲ್ಲವೂ ವಿಫಲವಾಗಿದ್ದವು. ಭೂಗತ ಬರಗಾಲ, ಸಾಲಬಾಧೆ ಅವರನ್ನು ಬಲಿತೆಗೆದುಕೊಂಡಿತು. ಕಳೆದ ಒಂದು ವರ್ಷದಲ್ಲಿ ಕರ್ನಾಟಕದಲ್ಲಿ ಅಂಥ ನತದೃಷ್ಟರ ಸಂಖ್ಯೆ 800ನ್ನು ದಾಟಿದೆಯಂತೆ. ಆದರೂ ಅದನ್ನು 'ಆತ್ಮಹತ್ಯೆಯ ಅಲೆ' ಎನ್ನುತ್ತಿಲ್ಲವೇಕೊ?

ವಿಜ್ಞಾನ–ತಂತ್ರಜ್ಞಾನದ ನೆರವು ಪಡೆದರೆ ಈ ಅಲೆಯಿಂದಲೂ ಹುಷಾರಾಗಿ ಪಾರಾಗಬಹುದು. ರಾಜಸ್ಥಾನದ ಕೆರ್ಡಿ ಗ್ರಾಮದ ರೈತನ ಜೋಳದ ಪೈರು ಹೀಗೇ ಒಣಗಿ ನಿಂತಿತ್ತು. ಅಪ್ಪನ ಖಿನ್ನತೆಯನ್ನು ಗಮನಿಸಿ 16ರ ಹುಡುಗ ತನ್ನ ಸೈನ್ಸ್ ಪ್ರಾಜೆಕ್ಟ್‌ಗೆ ಬರವನ್ನೇ ಎತ್ತಿಕೊಂಡ. ನೀರನ್ನು ಜಾಸ್ತಿ ದಿನ ಹಿಡಿದಿಡಬಲ್ಲ ಕೃಷಿ-ತ್ಯಾಜ್ಯಗಳ ಮೇಲೆ ಪ್ರಯೋಗ ಆರಂಭಿಸಿದ. ಬೆಂಡೆಯ ದಂಟು, ಜೋಳದ ರೆಂಬೆ, ಕಬ್ಬಿನ ಸಿಪ್ಪೆ ಏನೆಲ್ಲವುಗಳ ಮೇಲೆ ಮಣ್ಣು ಮುಚ್ಚಿ, ನೀರು ಚಿಮುಕಿಸಿ, ಬೀಜ ಬಿತ್ತುತ್ತ, ಫಲಿತಾಂಶವನ್ನು ದಾಖಲಿಸುತ್ತ ಹೋದ. ಕಿತ್ತಳೆ ಸಿಪ್ಪೆ ಮತ್ತು ಬಾಳೆಹಣ್ಣಿನ ಸಿಪ್ಪೆಗಳಿದ್ದ ಮಡಿಗಳಲ್ಲಿ ಸಸಿಗಳು ಚೆನ್ನಾಗಿ ಬೆಳೆಯುವುದನ್ನು ಕಂಡುಕೊಂಡ. ಈ ಸಿಪ್ಪೆಗಳನ್ನೇ ಪುಡಿ ಮಾಡಿ, ಮಣ್ಣಿನೊಂದಿಗೆ ಸೇರಿಸಿದರೆ ಬೆಳೆ ಇನ್ನೂ ಚೆನ್ನಾಗಿ ಬರುವುದನ್ನು ದಾಖಲಿಸಿದ. ಕೃಷಿ ವಿಜ್ಞಾನದ ಕಾಲೇಜನ್ನು ಸೇರಿದ ಮೇಲೆ ಉದಯಪುರದ ಜ್ಯೂಸ್ ಅಂಗಡಿಗಳ ಬಳಿ ರಾತ್ರಿಯೆಲ್ಲ ಸುತ್ತಾಡಿ ಕಿತ್ತಳೆ ಸಿಪ್ಪೆಗಳನ್ನು ಸಂಗ್ರಹಿಸಿ ಪುಡಿಪ್ರಯೋಗ ಮಾಡುತ್ತ ಹೋದ.

ಈ ಯುವಕನ ಹೆಸರು ನಾರಾಯಣ ಲಾಲ್ ಗುರ್ಜರ್. ಪದವಿಯ ಓದನ್ನು ಪೂರ್ಣಗೊಳಿಸುವ ಮೊದಲೇ ಕಿತ್ತಳೆ ಸಿಪ್ಪೆಯ ಬೆನ್ನೇರಿ ಜಪಾನಿನ ಓಕಿನಾವಾ ವಿಜ್ಞಾನ ತಂತ್ರಜ್ಞಾನ ಸಂಸ್ಥೆಯಲ್ಲಿ ಸಂಶೋಧನಾ ಸ್ಕಾಲರ್ ಆದ. ಕೋವಿಡ್ ಅವಧಿಯಲ್ಲಿ ಅಲ್ಲಿ ಸಿಲುಕಿದ್ದಾಗಲೇ ಕಿತ್ತಳೆ ಸಿಪ್ಪೆಯಿಂದ ಪಾಲಿಮರ್ ಪುಡಿಯನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದು 23ರ ಹರಯದಲ್ಲೇ ಪೇಟೆಂಟ್ ಪಡೆದ. ತನ್ನ ತೂಕಕ್ಕಿಂತ 400 ಪಟ್ಟು ಹೆಚ್ಚು ನೀರನ್ನು ಹಿಡಿದಿಟ್ಟುಕೊಂಡು ನಿಧಾನಕ್ಕೆ ಬೇರಿಗೆ ಜಿನುಗಿಸಬಲ್ಲ ನಾನಾ ಬಗೆಯ ಕೃತಕ ಪಾಲಿಮರ್‌ಗಳು ಹೊಲಕ್ಕೆ ಬಂದಿವೆಯಾದರೂ ಗುರ್ಜರ್ ವಿಧಾನದ್ದು ಅಪ್ಪಟ ಪರಿಸರಸ್ನೇಹಿ. ಕಿತ್ತಳೆಯ ಪಾಲಿಮರ್ ಪುಡಿಯನ್ನು ಎರಚಿದರೆ ಶೇ 40ರಷ್ಟು ನೀರನ್ನು ಮತ್ತು ಶೇ 20ರಷ್ಟು ಗೊಬ್ಬರವನ್ನು ಉಳಿಸಬಹುದು ಎಂದು ಈ ಯುವಕ ತೋರಿಸಿದ. ಈಗ ಉದಯಪುರದಲ್ಲಿ ಗುರ್ಜರ್‌ನ ಫ್ಯಾಕ್ಟರಿಯಲ್ಲಿ ತಿಂಗಳಿಗೆ ನೂರು ಟನ್ 'ಫಸಲ್ ಅಮೃತ್' ಪಾಲಿಮರ್ ಪುಡಿ ತಯಾರಾಗಿ ದೇಶವಿದೇಶಗಳಿಗೆ ಹೋಗುತ್ತಿದೆ.

ನೀರಿನ ಅಪವ್ಯಯವನ್ನು ತಡೆಯಬೇಕು; ತುಸುವೇ ನೀರನ್ನು ಆದಷ್ಟೂ ದಕ್ಷತೆಯಿಂದ ಬಳಸಬೇಕು. ಈ ಎರಡು ಉದ್ದೇಶಗಳ ಸಾಧನೆಗೆ ಇಂದು ನಾನಾ ಸಾಧನಗಳು ಬಂದಿವೆ. ಈಗಲ್ಲ, ತುಂಬ ಹಿಂದೆಯೇ ಬಂದಿವೆ. ಆದರೆ ಅವೆಲ್ಲ ಕೃಷಿ ವಿಜ್ಞಾನಿಗಳ ಮತ್ತು ಕೃಷಿ ಅಧಿಕಾರಿಗಳ ಮುಷ್ಟಿಯಲ್ಲಿದ್ದವು. ರೈತರಿದ್ದಲ್ಲಿ ಹೋಗಿ ಅವುಗಳನ್ನು ಪರಿಚಯಿಸುವ ಆಸಕ್ತಿ ಅಥವಾ ಉತ್ಸಾಹ ಸರ್ಕಾರಿ ಸಂಬಳ ಪಡೆಯುವವರಲ್ಲಿ ಎಷ್ಟಿದ್ದೀತು? ಕ್ರಮೇಣ ಖಾಸಗಿ ಕಂಪನಿಗಳು ರೈತರ ಹೊಲಕ್ಕಿಳಿದವು. ಮಹಾರಾಷ್ಟ್ರದ ಜಳಗಾಂವ್ ಎಂಬ ಊರು ಹೆಸರಿಗೆ ತಕ್ಕಂತೆ ನೀರಿಗೆ ಹೆಸರಾಗಿತ್ತು; ಜವುಳುಗಾಂವ್ ಆಗಿತ್ತು. ಬಾಳೆಯೇ ಮುಖ್ಯ ಬೆಳೆಯಾಗಿತ್ತು. ಕ್ರಮೇಣ ನೀರು ಕಡಿಮೆಯಾಗುತ್ತ ಬಂದಂತೆ ಸೆಕೆ ಜಾಸ್ತಿಯಾಗುತ್ತ ಈಗ ಅದು ಬರಪೀಡಿತ 'ಝುಳಗಾಂವ್' ಆಗಿದೆ. ಆದರೆ ರೈತರ ಕೈ ಹಿಡಿದೆತ್ತಲು ಹನಿ ನೀರಾವರಿ ಕಂಪನಿಗಳು ಅಲ್ಲಿಗೆ ಬಂದವು. ಇಂದು ದೇಶದ ಅತಿ ಹೆಚ್ಚು ಬಾಳೆ ಜಳಗಾಂವ್ ಜಿಲ್ಲೆಯಲ್ಲಿ ಬೆಳೆಯುತ್ತಿದೆ; ಪಾಕಿಸ್ತಾನಕ್ಕೆ ನಿರ್ಯಾತವಾಗುತ್ತಿದೆ. ಕದಳೀಕ್ರಾಂತಿ ಅಲ್ಲಿ ಅದೆಷ್ಟು ವ್ಯಾಪಕವಾಗಿದೆ ಎಂದರೆ ಊರೂರಲ್ಲೂ ರೈತರದ್ದೇ ಕೃಷಿ ಉತ್ಪಾದಕ ಕಂಪನಿಗಳು ಚಿಗುರಿಕೊಂಡಿವೆ. ಆಧುನಿಕ ತಂತ್ರಜ್ಞಾನ ಬೇರುಮಟ್ಟಕ್ಕೆ ಇಳಿದಿದೆ. ಬರವನ್ನೇ ಹಿಂಡಿ ಬಾಳೆಹಣ್ಣಿನ ರಸವನ್ನು ಬಸಿಯಲಾಗುತ್ತಿದೆ.

ಈಗಂತೂ ಇಂಟರ್‌ನೆಟ್ ಮತ್ತು ಕಂಪ್ಯೂಟರ್ ತಂತ್ರಜ್ಞಾನಕ್ಕೆ (ಐಸಿಟಿ) ಹಾಗೂ ವಸ್ತುಗಳ ಅಂತರ್ಜಾಲಕ್ಕೆ (ಐಒಟಿ) ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ಕೂಡ ಸೇರಿದ್ದರಿಂದ ರೈತರಿಗೆ ಜ್ಞಾನಲೋಕದ ಮಹಾದ್ವಾರವೇ ತೆರೆದುಕೊಂಡಿದೆ. ಸ್ಮಾರ್ಟ್‌ಫೋನ್ ಹಿಡಿದು ಹೊಲಕ್ಕಿಳಿದು ಕ್ಯಾಮೆರಾದಲ್ಲಿ ಸಸ್ಯವನ್ನೂ ಕಳೆಯನ್ನೂ ಹೆಸರಿಸಬಹುದು. ರೋಗ ತಗುಲಿದ ಎಲೆಯ ಚಿತ್ರವನ್ನು ರವಾನಿಸಿದರೆ ಶಿಲೀಂಧ್ರವೊ, ತಿಗಣೆಯೊ ಅಥವಾ ಪೋಷಕಾಂಶ ಕೊರತೆಯೊ, ಅತಿ ನೀರಾವರಿಯೊ, ಬಾಯಾರಿಕೆಯೊ ಎಲ್ಲ ಗೊತ್ತಾಗುತ್ತದೆ. ಸರಿಪಡಿಸುವ ಮಾರ್ಗೋಪಾಯಗಳ ಸಲಹೆಯೂ ಸಿಗುತ್ತದೆ. ನಿಮ್ಮ ಭಾಷೆಯಲ್ಲೇ ಹೇಳುತ್ತದೆ. ವಿಶೇಷ ಏನೆಂದರೆ ಇವೆಲ್ಲ ಸಣ್ಣ ರೈತರಿಗೆಂದೇ ರೂಪುಗೊಂಡಿವೆ. (ದೊಡ್ಡ ಕೃಷಿ ಕಂಪನಿಗಳಿಗೆ ಆ್ಯಪ್‌ಗಳ ಅಗತ್ಯವಿಲ್ಲ. ಅಲ್ಲಿ ವಿಜ್ಞಾನಿಗಳೇ ಇರುತ್ತಾರೆ). ಚಿಕ್ಕ ಹಿಡುವಳಿದಾರರಿಗೆಂದೇ 'ಪ್ಲಾಂಟಿಕ್ಸ್' ಹೆಸರಿನ ಆ್ಯಪ್ ಒಂದಿದೆ. ಜರ್ಮನ್ ಮೂಲದ ನವೋದ್ಯಮಿಗಳು ತಯಾರಿಸಿದ ಈ ಆ್ಯಪ್‌ನ 130 ಲಕ್ಷ ಬಳಕೆದಾರರಲ್ಲಿ ಭಾರತೀಯ ರೈತರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇನ್ಫೊ ಕಂಪನಿಯ 'ಕಿಸಾನ್' ಆ್ಯಪ್‌ಗೆ 30 ಲಕ್ಷ ಚಂದಾದಾರರಿದ್ದು, ಅದು 15 ಭಾರತೀಯ ಭಾಷೆಗಳಲ್ಲಿ ಕೃಷಿಕರಿಗೆ ಮಾರ್ಗದರ್ಶನ ನೀಡುತ್ತಿದೆ. ಹವಾಮಾನ ಮತ್ತು ಮಾರುಕಟ್ಟೆಯ ವಿದ್ಯಮಾನಗಳನ್ನೂ ತಿಳಿಸುತ್ತದೆ. ಅಂಥ ಹೊಸ ಹೊಸ ಆ್ಯಪ್‌ಗಳು ರೈತರಿಗೆ ಜ್ಞಾನದ ದೀವಿಗೆಯಾಗುತ್ತಲೇ ಸಮುದಾಯಗಳನ್ನು ಬೆಸೆಯುತ್ತಿವೆ; ಹೊಸ ವಿಚಾರಗಳ ವಿನಿಮಯಕ್ಕೆ ಅನುವು ಮಾಡಿಕೊಡುತ್ತಿವೆ. ಕುರಿ ಮೇಯಿಸುವವರ ಕೈಗೂ ಐಸಿಟಿ, ಐಒಟಿಗಳು ಬಂದಿವೆ.

ತಳಸಮುದಾಯದ ಶ್ರಮಿಕರನ್ನು ತಂತ್ರಜ್ಞಾನದ ಮೂಲಕ ಒಗ್ಗೂಡಿಸುವ ಬಗ್ಗೆ ಮಾಧವ ಗಾಡ್ಗೀಳರ ನೆರವಿನಲ್ಲಿ ಸಂಶೋಧನೆ ಮಾಡಿದ ಪಾವಗಡದ ಯುವರೈತ ಪಿ.ಆರ್. ಶೇಷಗಿರಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಡಾಕ್ಟರೇಟ್ ಪಡೆದು ತಮ್ಮ ಹೊಲಕ್ಕೇ ಹಿಂದಿರುಗಿದರು. ಬರಪೀಡಿತ ರೈತರ ನೀರಿನ ಸಮಸ್ಯೆಯ ಬಿಸಿ ಅವರಿಗೆ ತಟ್ಟಿತ್ತು. ಬೆಂಗಳೂರಿನ ಇಲೆಕ್ಟ್ರಾನಿಕ್ ಸಿಟಿಯ ತಮ್ಮ ಪರಿಚಿತರ ಜೊತೆ ಸೇರಿ ರೈತರ ಪಂಪ್‌ಸೆಟ್‌ಗಳಿಗೆ ಹೊಸ ಸ್ಟಾರ್ಟರನ್ನು ರೂಪಿಸಿದರು. ಹೆಸರು 'ಕೃಷಿಹೃದಯ'. ಅದರ ನರಮಂಡಲವನ್ನು ಮೊಬೈಲ್‌ಗೆ ಜೋಡಿಸಿದರು. ಮನೆಯಲ್ಲೇ ಕೂತು ಬಟನ್ ಒತ್ತಿ ಪಂಪ್‌ಸೆಟ್ ಚಾಲೂ ಮಾಡುವುದೇನೂ ಹೊಸದಲ್ಲ. ಆದರೆ ಇವರು ರೂಪಿಸಿದ ಆ್ಯಪ್ ಹಾಕಿಕೊಂಡರೆ ನೀರು ಮೇಲಕ್ಕೆ ಬರುವ ಪ್ರಮಾಣ ಪ್ರತಿನಿಮಿಷಕ್ಕೂ ಗೊತ್ತಾಗುತ್ತದೆ. ಬಾವಿಯಲ್ಲಿ ನೀರು ಕಡಿಮೆಯಾದರೆ ಪಂಪನ್ನು ಸ್ಥಗಿತಗೊಳಿಸಿ, ನಿಗದಿತ ವೇಳೆಯ ನಂತರ ತಾನೇ ಚಾಲನೆ ಕೊಡುತ್ತದೆ. ಯಾವ ಟವರ್‌ನಿಂದಲಾದರೂ ಸಿಗ್ನಲ್ ಹೀರುವ ಚುರುಕು ಸಿಮ್ ಕಾರ್ಡನ್ನು ಜೋಡಿಸಲಾಗಿದೆ. ಹನಿ ನೀರಾವರಿಯ ಕೊಳವೆಗೆ ಇವರ ಸ್ಮಾರ್ಟ್ ವಾಲ್ವ್ ಕೂಡ ತಯಾರಾಗಿದೆ. ನೆಲದಡಿಯ ಎರಡು ಮೀಟರ್ ಆಳದವರೆಗಿನ ತೇವಾಂಶವನ್ನು ಅಳೆದು ನೋಡುತ್ತ ಹೊಲದ ಯಾವ ಭಾಗಕ್ಕೆ ಎಷ್ಟು ನೀರು ಬೇಕು, ಯಾವ ಬೆಳೆ ಎಲ್ಲಿ ಸೂಕ್ತ ಎಂಬುದನ್ನೂ ನಿರ್ಧರಿಸುತ್ತದೆ.

ಬೇಟೆಗಾರನ ಬಲೆಯಲ್ಲಿ ಸಿಕ್ಕ ಪಕ್ಷಿಗಳೆಲ್ಲ ಹೇಗೆ ಒಟ್ಟಿಗೆ ಬಲೆಯ ಸಮೇತ ಮೇಲಕ್ಕೇರಿ ಪಾರಾದವೆಂಬ ಪಂಚತಂತ್ರದ ಕತೆ ನಮಗೆಲ್ಲ ಗೊತ್ತೇ ಇದೆ. ಸಂಕಷ್ಟಗಳ ಬಲೆಯಲ್ಲಿ ಸಿಲುಕಿರುವ ರೈತರನ್ನು ಒಗ್ಗೂಡಿಸಲು, ಮೇಲಕ್ಕೆತ್ತಲು ಐಸಿಟಿ, ಐಒಟಿಗಳು ಬಂದಿವೆ. ಸ್ಮಾರ್ಟ್‌ಫೋನನ್ನು ಹಿಡಿದ ಕೃಷಿಕರೂ ಸ್ಮಾರ್ಟ್ ಆಗುತ್ತಿದ್ದಾರೆ.

ಚುರುಮುರಿ

ವ್ಯಾಕ್ಸಿನ್ ವರಾತ !

● ಗುರು ಪಿ.ಎಸ್.

'ಗೊತ್ತಿತ್ತು ರೀ, ನಂಗೆ ಗೊತ್ತಿತ್ತು. ನೀವು ತುಂಬಾ ಸ್ವಾರ್ಥಿ ಅಂತ ನನಗೆ ಮೊದಲೇ ಗೊತ್ತಿತ್ತು' ಬೆಳಿಗ್ಗೆಯೇ ಹೆಂಡತಿಯ ಸುಪ್ರಭಾತ ಶುರುವಾಗಿತ್ತು.

'ಏನಾಯ್ತು ಮಾರಾಯ್ತಿ ನಿಂಗೆ' ಕೇಳಿದೆ.

'ನೋಡಿ ಇಲ್ಲಿ, ಏನು ನ್ಯೂಸ್ ಬಂದಿದೆ ಅಂತ' ಪೇಪರ್ ತೆಗೆದು ಮುಖಕ್ಕೆ ಹಿಡಿದು, 'ಕೋವಿಶೀಲ್ಡ್ ಲಸಿಕೆಯಿಂದ ಗಂಭೀರ ಅಡ್ಡ ಪರಿಣಾಮ. ಕೋವಿಶೀಲ್ಡ್ ಹಿಂಪಡೆಯುವುದಾಗಿ ಘೋಷಿಸಿದ ಲಸಿಕೆ ತಯಾರಿಕಾ ಕಂಪನಿ' ಎಂದು ಬರೆದಿದ್ದ ಸಾಲುಗಳನ್ನು ಜೋರಾಗಿ ಓದಿದಳು ಪತ್ನಿ.

'ಹೌದು, ಅದಕ್ಕೆ ನಾನೇನು ಮಾಡ್ಲಿ ಈಗ, ನಂದೇನು ತಪ್ಪಿದೆ?' ಗೊಂದಲದಲ್ಲೇ ಕೇಳಿದೆ.

'ಅವತ್ತೇನಾಯ್ತು ನೆನಪು ಮಾಡಿಕೊಳ್ಳಿ'.

'ನೆನಪಿಲ್ಲ, ಹೇಳು ಮಾರಾಯ್ತಿ'.

'ನೀವು ಕೋವ್ಯಾಕ್ಸಿನ್ ಲಸಿಕೆ ಹಾಕಿಸಿಕೊಂಡು ಬಂದಿದ್ರಿ, ನನಗೂ ಅದೇ ವ್ಯಾಕ್ಸಿನ್ ಹಾಕಿಸಿ ಅಂದರೆ, ಅದು ಖಾಲಿಯಾಗಿದೆಯಂತೆ ಅಂತ ಹೇಳಿ ನನಗೆ ಕೋವಿಶೀಲ್ಡ್ ಲಸಿಕೆ ಹಾಕಿಸಿದ್ರಿ'.

'ಆ ಟೈಮ್‌ನಲ್ಲಿ ಯಾವುದೋ ಒಂದು ಲಸಿಕೆ ಹಾಕಿಸಬೇಕಿತ್ತು, ಹಾಕಿಸಿದೆ ಏನಾಯ್ತೀಗ?'

'ನೋಡಿ ಈಗ, ಕೋವಿಶೀಲ್ಡ್ ತೆಗೆದುಕೊಂಡವರಿಗೆ ಅಡ್ಡ ಪರಿಣಾಮ ಅಂತೆ'.

'ವ್ಯಾಕ್ಸಿನ್ ಹಾಕಿಸಿಕೊಂಡು ಮೂರು ವರ್ಷ ಆಯ್ತಲ್ಲ, ಈಗೇನು ಆಗಲ್ಲ, ತಲೆ ಕೆಡಿಸಿಕೊಳ್ಳಬೇಡ. ನೋಡು ನನಗೇನಾದರೂ ಆಗಿದೆಯಾ?'

'ನಿಮಗೆ ಹೇಗಾಗುತ್ತೆ ಹೇಳಿ, ಎಲ್ಲ ನನಗೆ ಆಗ್ತಿದೆ. ಈ ಸುದ್ದಿ ಓದಿದಾಗಿನಿಂದ ಸುಸ್ತಾಗ್ತಿದೆ. ಎಲ್ಲದಕ್ಕೂ ನೀವೇ ಕಾರಣ' ಬೈಯತೊಡಗಿದಳು.

'ನೀನೇನಮ್ಮ, ವ್ಯಾಕ್ಸಿನ್ ಸರ್ಟಿಫಿಕೇಟ್‌ನಲ್ಲಿ ಫೋಟೊ ಹಾಕಿಕೊಂಡಿದ್ದವರನ್ನ ಬಿಟ್ಟು ಈಗ ನನಗೆ ಕ್ಲಾಸ್ ತೆಗೆದುಕೊಳ್ತಿದೀಯಾ. ಈಗ ನಾನೇನು ಮಾಡಬೇಕು ಅದನ್ನಾದರೂ ಹೇಳು'.

'ನಾನು ನನ್ನ ವ್ಯಾಕ್ಸಿನ್ ಸರ್ಟಿಫಿಕೇಟ್ ನೋಡಿದಾಗೆಲ್ಲ ಟೆನ್ಷನ್ ಆಗುತ್ತೆ, ಸಮಾಧಾನ ಆಗಬೇಕು, ಹಾಗೆ ಏನಾದರೂ ಮಾಡಿ' ಎಂದು ಹೇಳಿ ಒಳಗೆ ಹೋದಳು.

ಹೆಂಡತಿಯ ವ್ಯಾಕ್ಸಿನ್ ಸರ್ಟಿಫಿಕೇಟ್ ತೆಗೆದುಕೊಂಡು, ಕೋವಿಶೀಲ್ಡ್ ಜಾಗದಲ್ಲಿ ಕೋವ್ಯಾಕ್ಸಿನ್ ಎಂದು ಫೋಟೊಶಾಪ್ ಮೂಲಕ ತಿದ್ದಿಸಿಕೊಂಡು ಬಂದೆ.

ಸರ್ಟಿಫಿಕೇಟ್ ನೋಡಿದ ಹೆಂಡತಿ ಈಗ ಪ್ರಸನ್ನ ವದನೆ!

ಸಂಗತ

ವಿಟಮಿನ್ ಅಂಗಡಿ: ಕಲ್ಲಂಗಡಿ ಸಿಪ್ಪೆ

ಸಿಪ್ಪೆಯನ್ನು ಸರಾಗವಾಗಿ ತಿಪ್ಪೆಗೆ ಎಸೆಯುವ ಮುನ್ನ ಮತ್ತೊಮ್ಮೆ ಯೋಚಿಸಿ

● ಶಿಶಿರ ವಸಿಷ್ಠ

ಬೇಸಿಗೆಯ ಧಗೆ ಕಡಿಮೆ ಮಾಡಿಕೊಳ್ಳಲು ನಾವು ತಿನ್ನುವ ಹಣ್ಣುಗಳಲ್ಲಿ ಕಲ್ಲಂಗಡಿಗೆ ಮೊದಲ ಸ್ಥಾನ ನೀಡಿದ್ದೇವೆ. ನಿಂಬೆಯ ಪಾನಕ, ತಂಪು ಪಾನೀಯಗಳು, ಕರಬೂಜ ಹಣ್ಣು, ಮಜ್ಜಿಗೆಯಂಥವು ನಮ್ಮ ದಾಹ- ಹಸಿವುಗಳನ್ನು ತಕ್ಕಮಟ್ಟಿಗೆ ತಣಿಸುತ್ತವೆಯಾದರೂ ಅತ್ಯಾಕರ್ಷಕ ಕೆಂಪು ತಿರುಳಿನ ಕಲ್ಲಂಗಡಿ ಹಣ್ಣು ಎಲ್ಲಾ ವಯೋಮಾನದವರಿಗೂ ಅತ್ಯಂತ ಪ್ರಿಯ. ಬೇಸಿಗೆಯ ಹಣ್ಣೆಂದೇ ಖ್ಯಾತಿ ಇರುವ ಮತ್ತು ಹಲವು ಗಾತ್ರ, ತೂಕಗಳಲ್ಲಿ ಸಿಗುವ ಕಲ್ಲಂಗಡಿ ಹಣ್ಣಿಗೆ ಬೇಸಿಗೆಯಲ್ಲಿ ಭಾರಿ ಬೇಡಿಕೆ ಇರುತ್ತದೆ. ಬೀದಿಬದಿಯ ಅಂಗಡಿ, ಸುಸಜ್ಜಿತ ಮಾಲ್, ಇ–ಕಾಮರ್ಸ್ ಮಳಿಗೆಗಳಲ್ಲಿ ಲಭ್ಯವಿರುವ ಕಲ್ಲಂಗಡಿ, ರಾಜ್ಯ– ದೇಶಗಳ ಗಡಿ ದಾಟಿ ಜನರ ಹೊಟ್ಟೆಯನ್ನು ತಣ್ಣಗಿರಿಸಿದೆ.

ಸಿಪ್ಪೆ ಇರುವ ಯಾವುದೇ ಹಣ್ಣನ್ನು ತಿಂದರೂ ತಿರುಳು ತಿಂದ ತಕ್ಷಣ ಸಿಪ್ಪೆಯನ್ನು ಬಿಸಾಕುವುದು ರೂಢಿ. ಕಲ್ಲಂಗಡಿಯ ವಿಷಯದಲ್ಲಿಯೂ ನಾವು ಹಾಗೇ ಮಾಡುತ್ತೇವೆ. ನೀರಿನ ಅಂಶವುಳ್ಳ ಮೃದುವಾದ ತಿರುಳನ್ನು ಆವರಿಸಿರುವ ದಪ್ಪ ತೊಗಟೆಯು ಸಾಮಾನ್ಯವಾಗಿ ತಿಪ್ಪೆ ಸೇರುತ್ತದೆ, ಇಲ್ಲವೇ ದನ–ಕರುಗಳ ಆಹಾರವಾಗುತ್ತದೆ. ಹಲವಾರು ವಿಟಮಿನ್ ಮತ್ತು ಪೋಷಕಾಂಶಗಳನ್ನು ಹೊಂದಿರುವ ತೊಗಟೆಯ ಮಹತ್ವ ತಿಳಿಯದ ಬಹುಪಾಲು ಜನ ಅದನ್ನು ಕಸವೆಂದೇ ಭಾವಿಸಿ ಬೀದಿಪಾಲು ಮಾಡುತ್ತಾರೆ. ತೊಗಟೆಯಲ್ಲಿ ಹಣ್ಣಿನ ತಿರುಳಿನಷ್ಟೇ ಪೌಷ್ಟಿಕಾಂಶಗಳಿವೆ ಎಂದು ಗೊತ್ತಿರುವ ಕೆಲವರು ಸಿಪ್ಪೆಯಿಂದ ಬಗೆಬಗೆಯ ಆಹಾರ ತಯಾರಿಸಿ, ಸೇವಿಸಿ ಆರೋಗ್ಯ ವೃದ್ಧಿಸಿಕೊಳ್ಳುತ್ತಾರೆ.

ದೂರದ ದಕ್ಷಿಣ ಆಫ್ರಿಕಾದ ನೆಲದಿಂದ ಬಂದ ಹಣ್ಣಿದು ಎಂದು ದಾಖಲೆಗಳಲ್ಲಿ ಇದೆಯಾದರೂ ಮೂಲದ ಕುರಿತು ಹಲವಾರು ತಕರಾರುಗಳಿವೆ. 5,000 ವರ್ಷಗಳಷ್ಟು ಹಳೆಯ ಕಲ್ಲಂಗಡಿಯ ಬೀಜಗಳು ದೊರಕಿದ್ದರ ಬಗ್ಗೆ ಪುರಾತತ್ವ ಇಲಾಖೆಯ ಬಳಿ ದಾಖಲೆಗಳಿವೆ. 1773ರಲ್ಲಿ ಹಣ್ಣಿನ ವಂಶವಾಹಿಯನ್ನು ಶೋಧಿಸಿದ ಸ್ವೀಡನ್ನಿನ ವಿಜ್ಞಾನಿ ಕಾರ್ಲ್ ಪೀಟರ್, ಆಫ್ರಿಕಾದ ಕೇಪ್ ಟೌನ್ ಭಾಗದಲ್ಲಿ ಬೆಳೆಯುವ ಕಲ್ಲಂಗಡಿ ಹಣ್ಣಿಗೂ ಮತ್ತು ವಿಶ್ವದ ಇತರ ಭಾಗಗಳಲ್ಲಿ ಬೆಳೆಯುವ ಹಣ್ಣಿಗೂ ವ್ಯತ್ಯಾಸವಿದೆ ಎಂದು ಗುರುತಿಸಿದ್ದಾರೆ. ಈಜಿಪ್ಟಿನ ಪಿರಮಿಡ್‌ನಲ್ಲಿಯೂ ಟ್ರೇನಲ್ಲಿ ಇರಿಸಲಾದ 4,000 ವರ್ಷ ಹಳೆಯದಾದ ಕಲ್ಲಂಗಡಿ ಹಣ್ಣಿನ ಚಿತ್ರ ಲಭ್ಯವಾಗಿದೆ.

ಹಣ್ಣಿನ ಸಿಪ್ಪೆಯಿಂದ ಪಲ್ಯ, ಉಪ್ಪಿನಕಾಯಿ, ರಸಾಯನ, ಪಾನ್ ಕೇಕ್, ಚಟ್ನಿ, ಚಿಪ್ಸ್, ಗೊಜ್ಜು... ಹೀಗೆ ಹಲವು ಖಾದ್ಯಗಳನ್ನು ತಯಾರಿಸಿ ತಿನ್ನುವ ಪರಿಪಾಟ ಗ್ರಾಮೀಣ ಭಾಗದ ಅನೇಕ ಮನೆಗಳಲ್ಲಿದೆ. ತಯಾರಿಸಿದ ಖಾದ್ಯದ ಕುರಿತು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರದರ್ಶಿಸುತ್ತಿರುವ ನಗರಗಳ ಹಲವಾರು ಗೃಹಿಣಿಯರು ತೊಗಟೆಯಿಂದ ಏನೆಲ್ಲ ಉಪಯೋಗಗಳಿವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಸಿಪ್ಪೆಯನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ, ರುಬ್ಬಿ ದೋಸೆ ಮಾಡಿ ತಿನ್ನುವುದೆಂದರೆ ನಮ್ಮ ಕಾರವಾರದ ಕಡಲ ತೀರದ ಜನರಿಗೆ ಹಬ್ಬದ ಹೋಳಿಗೆ ತಿಂದಷ್ಟೇ ಖುಷಿಯಾಗುತ್ತದೆ. ತೆಂಗಿನಕಾಯಿ ಚಟ್ನಿಯ ಜೊತೆ ಸೇವಿಸಿದರೆ ದೋಸೆಯ ರುಚಿ ಇಮ್ಮಡಿಯಾಗುತ್ತದೆ ಎಂಬ ಮಾತು ಮಲೆನಾಡಿನ ಮನೆಗಳಲ್ಲಿ ಸರ್ವಸಾಮಾನ್ಯವಾಗಿದೆ. ಸಿಪ್ಪೆಯನ್ನು ಒಣಗಿಸಿ, ಅದರಿಂದ ಹಿಟ್ಟು ತಯಾರಿಸಿ ಬಿಸ್ಕತ್ತು ಮತ್ತು ಕೇಕ್ ತಯಾರಿಸಿದವರಿದ್ದಾರೆ.

ಕೊಯಮತ್ತೂರಿನ ಅಶ್ವಲಿಂಗಮ್ ಇನ್‌ಸ್ಟಿಟ್ಯೂಟ್ ಆಫ್ ಹೋಮ್ ಸೈನ್ಸ್ ಆ್ಯಂಡ್ ಹೈಯರ್ ಎಜುಕೇಷನ್ ಫಾರ್ ವಿಮೆನ್ ಸಂಸ್ಥೆಯ ಸಂಶೋಧಕರು ಕಲ್ಲಂಗಡಿಯ ಸಿಪ್ಪೆಯನ್ನು ಲೇಹ್ಯವನ್ನಾಗಿ ಪರಿವರ್ತಿಸಿ ಅದನ್ನು ಕಡಲೆಕಾಳು, ಹೆಸರುಕಾಳು ಹಾಗೂ ಸೋಯಾಬೀನ್ ಹಿಟ್ಟಿಗೆ ಮಿಶ್ರಣ ಮಾಡಿ ಉಪ್ಪು, ಕರಿಮೆಣಸು ಸೇರಿಸಿ ರುಚಿಕರವಾದ ಚಿಪ್ಸ್ ತಯಾರಿಸುವುದನ್ನು ತೋರಿಸಿದ್ದಾರೆ.

ಕಲ್ಲಂಗಡಿ ಸಿಪ್ಪೆಯ ಭಾಗವು ಹೆಚ್ಚಿನ ನಾರಿನಂಶ ಮತ್ತು ಪ್ರೋಟೀನ್‌ನಿಂದ ಕೂಡಿದೆ. ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿಯವರು ತಿರುಳಿಗಿಂತ ಬೀಜ ಮತ್ತು ಸಿಪ್ಪೆಯಲ್ಲಿ ಆಸ್ಕಾರ್ಬಿಕ್ ಆಮ್ಲ, ಕರೋಟಿನಾಯ್ಡ್ ವಿಟಮಿನ್‌ಗಳು ಮತ್ತು ಪೊಟ್ಯಾಶಿಯಂ ಮಿನರಲ್‌ಗಳು ಹೆಚ್ಚಿನ ಪ್ರಮಾಣದಲ್ಲಿವೆ ಎಂದು ಹೇಳಿದ್ದಾರೆ. ತಿರುಳಿನಲ್ಲಿ 1,500 ಫೈಟೋಕೆಮಿಕಲ್, ಯೋಗ್ಯ ಪ್ರಮಾಣದ ಆ್ಯಂಟಿ ಆಕ್ಸಿಡೆಂಟ್ (ಉತ್ಕರ್ಷಣ ನಿರೋಧಕ), ದೇಹದ ಅಂಗಾಂಶಗಳನ್ನು ರಿಪೇರಿ ಮಾಡುವ ಪ್ರೋಟೀನ್ ಅಲ್ಲದ ವಿವಿಧ ಅಮೈನೋ ಆಮ್ಲಗಳು ಇರುತ್ತವೆ. ಸಿಪ್ಪೆಯಲ್ಲಿ ಹೇರಳವಾಗಿ ದೊರಕುವ ಲೈಕೋಪೀನ್ ಅಂಶವು ಕಣ್ಣು ಮತ್ತು ಹೃದಯದ ಆರೋಗ್ಯ ಕಾಪಾಡುತ್ತದೆ. ಹೆಚ್ಚಿನ ಪ್ರಮಾಣದ ಪೊಟ್ಯಾಶಿಯಂ ರಕ್ತದೊತ್ತಡ ನಿಯಂತ್ರಿಸಿದರೆ, ಮೆಗ್ನೀಷಿಯಂ ಅಂಶ ನಿದ್ರಾಹೀನತೆಯನ್ನು ಕಡಿಮೆ ಮಾಡುತ್ತದೆ.

ಆಂಧ್ರಪ್ರದೇಶದ ಸಂಶೋಧಕರು ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಕರೆಂಟ್ ಮೈಕ್ರೊಬಯಾಲಜಿ ಆ್ಯಂಡ್ ಅಪ್ಲೈಡ್ ಸೈನ್ಸ್ ಪತ್ರಿಕೆಯಲ್ಲಿ ಕಲ್ಲಂಗಡಿಯ ಸಿಪ್ಪೆಯಲ್ಲಿ ಕಬ್ಬಿಣ, ಮ್ಯಾಂಗನೀಸ್, ರಂಜಕ, ಕ್ಯಾಲ್ಸಿಯಂ, ಸೋಡಿಯಂ, ತಾಮ್ರ, ಸತುವಿನ ಅಂಶ ಹೇರಳವಾಗಿದ್ದು ಅದರಲ್ಲಿ ವಿಟಮಿನ್ ಎ, ಬಿ 6 ಮತ್ತು ಸಿ ಇವುಗಳ ದೊಡ್ಡ ಭಂಡಾರವೇ ಇದೆ ಎಂದು ಪ್ರಬಂಧ ಮಂಡಿಸಿದ್ದಾರೆ. ಮನುಷ್ಯ ದೇಹದ ರಕ್ತನಾಳಗಳನ್ನು ಅಗಲವಾಗಿಸಿ ರಕ್ತವನ್ನು ಸರಾಗವಾಗಿ ಹರಿಯುವಂತೆ ಮಾಡುವ ಎಲ್ ಸಿಟ್ರುಲಿನ್ ಎಂಬ ಅಮೈನೋ ಆಮ್ಲವು ಸಿಪ್ಪೆಯಲ್ಲಿರುತ್ತದೆ. ಇದರ ಇರುವಿಕೆಯಿಂದ ರಕ್ತನಾಳವು ಅಗಲವಾದಾಗ ಹೃದಯದಿಂದ ಹೊರಕ್ಕೆ ಮತ್ತು ಹೃದಯಕ್ಕೆ ರಕ್ತ ಸರಾಗವಾಗಿ ಹರಿದು ಮನುಷ್ಯನ ರಕ್ತದೊತ್ತಡ ಹತೋಟಿಯಲ್ಲಿ ಇರುತ್ತದೆ ಮತ್ತು ರಕ್ತಕ್ಕೆ ಹೆಚ್ಚಿನ ಆಮ್ಲಜನಕ ಪೂರೈಕೆಯಾಗುತ್ತದೆ ಎಂಬ ವರದಿಗಳಿವೆ. ಇಷ್ಟೆಲ್ಲಾ ಉಪಯೋಗಗಳಿರುವಾಗ ಸಿಪ್ಪೆಯನ್ನು ಸರಾಗವಾಗಿ ತಿಪ್ಪೆಗೆ ಎಸೆಯುವ ಮುನ್ನ ಮತ್ತೊಮ್ಮೆ ಯೋಚಿಸಿರಿ.

ವಾಚಕರ ವಾಣಿ

ಜನರ ವಿಶ್ವಾಸ ಉಳಿಸಿಕೊಳ್ಳಲಿ

'ಮತದ ಮೌಲ್ಯ ಹೆಚ್ಚಿಸಿದ ನಡೆ' (ದಿನದ ಟ್ವೀಟ್, ಪ್ರ.ವಾ., ಮೇ 8) ಓದಿದ ಬಳಿಕ ನಮ್ಮ ಮಹಿಳಾ ಮತದಾರರ ಬದ್ಧತೆ ಬಗ್ಗೆ ಹೆಮ್ಮೆಯೆನಿಸಿತು. ಪತಿ ತೀರಿಕೊಂಡಿದ್ದಾರೆ. ಅಂತ್ಯಕ್ರಿಯೆ ನೆರವೇರಿಸಬೇಕಾಗಿದೆ. ಅಂತಹ ದುಃಖದ ಸಂದರ್ಭದಲ್ಲಿಯೂ ಕಲಾವತಿ ಅವರು ಮತಗಟ್ಟೆಗೆ ತೆರಳಿ ಮತ ಚಲಾಯಿಸಿರುವುದು ಸಾಮಾನ್ಯ ಸಂಗತಿಯಲ್ಲ. ಪ್ರಜಾಪ್ರಭುತ್ವದ ಉಳಿವು ಇಂತಹ ಮತದಾರರಿಂದಲೇ ಸಾಧ್ಯ. ಹೀಗೆಯೇ ಅನೇಕರು ಅನಾರೋಗ್ಯದ ನಡುವೆಯೂ ಬಹುದೂರದಿಂದ ಬಂದು ಮತದಾನ ಮಾಡಿದ್ದಾರೆ. ಚುನಾವಣೆಯಲ್ಲಿ ಆಯ್ಕೆಯಾಗುವವರು, ಇಂತಹ ಮತಗಳ ಮೌಲ್ಯ ಹೆಚ್ಚಿಸುವಂತಹ ಕೆಲಸ ಮಾಡಬೇಕು. ಜನರ ನಂಬಿಕೆಗೆ ಭಂಗ ಬರದಂತೆ ನಡೆದುಕೊಳ್ಳಬೇಕು. ಒಳ್ಳೆಯ ಆಡಳಿತ ನೀಡಲು ಸಹಕರಿಸಬೇಕು. ಅಭಿವೃದ್ಧಿ ಕೆಲಸಗಳಿಗೆ ಹೆಗಲು ಕೊಡಬೇಕು. ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯಬೇಕು.

ವೀಣಾ ಎಸ್.ಗೌಡರ, ಗದಗ

ಲಿಂಗಸೂಕ್ಷ್ಮತೆ ರೂಢಿಸಿಕೊಳ್ಳಬೇಕು

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ಕುರಿತ ಕೆಲವು ವರದಿಗಳಲ್ಲಿ ಅಶ್ಲೀಲ ಪೆನ್‌ಡ್ರೈವ್, ಅಶ್ಲೀಲ ವಿಡಿಯೊ ಪ್ರಕರಣ ಎಂಬಂಥ ಪದಗಳ ಬಳಕೆಯಾಗಿದೆ. ಇದರಲ್ಲಿ ಅಶ್ಲೀಲ ಯಾವುದು? ಪೆನ್‌ಡ್ರೈವ್‌ನಲ್ಲಿ ಅಶ್ಲೀಲ ವಿಡಿಯೊಗಳಿವೆಯೋ ಅಥವಾ ಲೈಂಗಿಕ ಶೋಷಣೆಯ ವಿಡಿಯೊಗಳಿವೆಯೋ? ಅಶ್ಲೀಲ ಎಂದು ಯಾವ ಮಾನದಂಡದಿಂದ ಪರಿಗಣಿಸಲಾಗಿದೆ? 'ಅಶ್ಲೀಲ' ಎಂಬ ಪದ ಬಳಸಿ ಸಂತ್ರಸ್ತ ಹೆಣ್ಣುಮಕ್ಕಳ ಆತ್ಮಗೌರವಕ್ಕೆ, ಘನತೆಗೆ ಧಕ್ಕೆ ತರಲಾಗಿದೆ. ಸಮಾಜದ ಬಲಿಪಶುವನ್ನು ಅವಮಾನಿಸುವ ಗಂಡು ಮನಃಸ್ಥಿತಿಯ ದ್ಯೋತಕ ಇದು. ಕೆಲವು ರಾಜಕಾರಣಿಗಳೂ ಅಶ್ಲೀಲ ಎಂಬ ಪದವನ್ನು ಬಳಸುತ್ತಿದ್ದಾರೆ. ಲಿಂಗಸೂಕ್ಷ್ಮತೆ ಇಲ್ಲದ ಇಂತಹ ನಡೆ ಸರಿಯಲ್ಲ. ಶೋಷಣೆಗೆ ಒಳಗಾದ ಹೆಣ್ಣೇ ತಲೆತಗ್ಗಿಸಿ ಬಾಳುವಂತಹ ಸ್ಥಿತಿ ಬದಲಾಗಬೇಕು.

ಸಬೀನಾ ಎ., ಮೈಸೂರು

ಬರ ಪರಿಹಾರ ಕೆಲಸಕ್ಕೆ ವೇಗ ತುಂಬಿ

ಲೋಕಸಭಾ ಚುನಾವಣೆಗೆ ಮತದಾನ ರಾಜ್ಯದಲ್ಲಿ ಎರಡು ಹಂತಗಳಲ್ಲಿ ಪೂರ್ಣಗೊಂಡಿದೆ. ರಾಜಕಾರಣದ ಕೆಸರೆರಚಾಟದಲ್ಲೇ ಮುಳುಗಿದ್ದ ಜನಪ್ರತಿನಿಧಿಗಳು ಇನ್ನಾದರೂ ಜನರ ಬವಣೆ ನಿವಾರಣೆಯತ್ತ ದೃಷ್ಟಿ ಹಾಯಿಸಬೇಕು. ರಾಜ್ಯದಲ್ಲಿ ಬರ ತೀವ್ರವಾಗಿದೆ. ಸುಡುವ ಬಿಸಿಲು, ಅಸಹನೀಯ ಸೆಕೆ ಜನರನ್ನು ಹೈರಾಣಾಗಿಸಿದೆ. ವಾರದಿಂದ ರಾಜ್ಯದಲ್ಲಿ ಅಲ್ಲಲ್ಲಿ ಮಳೆಯಾದ ಕಾರಣ ವಾತಾವರಣ ತುಸು ತಂಪಾಗಿದೆ. ಕುಡಿಯುವ ನೀರಿನ ಕೊರತೆ ಎಲ್ಲೆಡೆಯೂ ತೀವ್ರ ಸ್ವರೂಪ ಪಡೆದಿದೆ. ಜಾನುವಾರುಗಳಿಗೆ ನೀರಿನ ಕೊರತೆ ಜೊತೆ ಮೇವಿನ ಅಲಭ್ಯತೆಯೂ ಸಂಕಟ ತಂದೊಡ್ಡಿದೆ.

ಆಡಳಿತಕ್ಕೆ ಚುರುಕು ಮುಟ್ಟಿಸುವ ಕೆಲಸ ತುರ್ತಾಗಿ ಆಗಬೇಕಿದೆ. ಇಲ್ಲಿಯವರೆಗೂ ಚುನಾವಣಾ ಕೆಲಸದಲ್ಲಿ ತೊಡಗಿದ್ದ ಅಧಿಕಾರಿಗಳು ಜನರ ಸಮಸ್ಯೆಗಳ ನಿವಾರಣೆಗೆ ಆಸ್ಥೆ ವಹಿಸಬೇಕು. ಶಾಸಕರು ಸ್ಥಳಕ್ಕೆ ಭೇಟಿ ಕೊಟ್ಟು ವಸ್ತುಸ್ಥಿತಿ ಅರಿಯಬೇಕು. ತೀವ್ರತೆಗೆ ತಕ್ಕಂತೆ ಸರ್ಕಾರದಿಂದ ಸ್ಪಂದನ ದೊರೆಯಬೇಕು. ಬರ ಪರಿಹಾರ ಕೆಲಸಗಳಿಗೆ ವೇಗ ತುಂಬಬೇಕು.

ಶಿವಪ್ರಸಾದ ಅರಳಿಕಟ್ಟೆ, ಕಲಬುರಗಿ

ಪಿತ್ರೋಡಾ ಮಾತು ಮತ್ತು ಕಾಂಗ್ರೆಸ್ಸಿನ ಪುಕ್ಕಲುತನ

ಭಾರತದ ಟೆಲಿಕಾಂ ಕ್ರಾಂತಿಯ ರೂವಾರಿ, ತಂತ್ರಜ್ಞಾನ ದಾರ್ಶನಿಕ ಮತ್ತು ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ (ಸತ್ಯನಾರಾಯಣ ಗಂಗಾರಾಂ ಪಿತ್ರೋಡಾ) ಅವರು ಭಾರತದಲ್ಲಿ ಇರುವ ವೈವಿಧ್ಯತೆ ಕುರಿತು ಕೆಲವು ಮಾತುಗಳನ್ನು ಆಡಿದ್ದಾರಷ್ಟೆ. ದುರಂತವೆಂದರೆ, ಬಹುಮಟ್ಟಿಗೆ ಸತ್ಯವೂ ವಸ್ತುನಿಷ್ಠವೂ ಆಗಿರುವ ಈ ಮಾತುಗಳಿಗೆ ವಿವಾದದ ಬಣ್ಣ ಬಳಿಯುವ ಕೆಲಸ ನಡೆಯುತ್ತಿದೆ. ಜೊತೆಗೆ, ಕಾಂಗ್ರೆಸ್ ಪಕ್ಷವು ಈ ಹೇಳಿಕೆಯಿಂದ ತರಾತುರಿಯಲ್ಲಿ ಅಂತರ ಕಾಯ್ದುಕೊಂಡಿದೆ. ಇದು ನಿಜಕ್ಕೂ ಆ ಪಕ್ಷದ ಪುಕ್ಕಲುತನವಲ್ಲದೆ ಬೇರೇನಲ್ಲ! ಅದರಲ್ಲೂ ಟೆಲಿಕಾಂ ಕ್ರಾಂತಿಯ ದಿನಗಳಲ್ಲಿ ಪಿತ್ರೋಡಾ ಅವರ ನಂಬಿಕಸ್ಥ ಬಂಟನಾಗಿ ಅವರೊಂದಿಗೆ ದುಡಿದ ಜಯರಾಂ ರಮೇಶ್ ಅವರೇ ಇಂತಹ ನಿಲುವನ್ನು 'ಎಕ್ಸ್' ವೇದಿಕೆಯಲ್ಲಿ ಹಂಚಿಕೊಂಡಿರುವುದು ವ್ಯಂಗ್ಯವೇ ಸೈ!

ಪಿತ್ರೋಡಾ ಅವರ ರಾಜಕೀಯ ನಿಲುವುಗಳೇನೇ ಇರಲಿ, ಅವರೊಬ್ಬ ನಿರ್ಭೀತ ಚಿಂತಕ ಎನ್ನುವುದರಲ್ಲಿ ಎರಡು ಮಾತಿಲ್ಲ. ವಾಸ್ತವವಾಗಿ ಡಿಜಿಟಲ್ ಇಂಡಿಯಾ ತರಹದ ಉಪಕ್ರಮಗಳೆಲ್ಲ ಮೂಲತಃ ಅವರ ಚಿಂತನೆಗಳೇ ಆಗಿವೆ. ಕೆಲದಿನಗಳ ಹಿಂದೆ ಅವರು ಉತ್ತರಾಧಿಕಾರ ತೆರಿಗೆ ಕುರಿತು ಆಡಿದ ಮಾತುಗಳೂ ವಾಸ್ತವ ನೆಲೆಗಟ್ಟಿನಲ್ಲೇ ಇದ್ದವು. ಹಂತಹಂತವಾಗಿ ಕ್ಯಾಪಿಟಲಿಸ್ಟ್ ದೇಶವಾಗುತ್ತಿರುವ ಭಾರತದಲ್ಲಿ, ಈ ತರಹದ ತೆರಿಗೆ ಇಂದಲ್ಲದಿದ್ದರೆ ನಾಳೆಯಾದರೂ ನಿಜವಾಗುತ್ತದೆ. ಹೀಗೆ ಧೈರ್ಯವಾಗಿ ಮಾತನಾಡುವವರು ನಿಜಕ್ಕೂ ನಮ್ಮ ಸಾರ್ವಜನಿಕ ವ್ಯವಸ್ಥೆಯಲ್ಲಿ ಇರಬೇಕು. ಇಂಥವರು ಆಡುವ ಮಾತುಗಳ ಬಗ್ಗೆ ರಾಜಕೀಯ, ವೋಟು ಇವುಗಳನ್ನೆಲ್ಲ ಮೀರಿದ ಚರ್ಚೆ ನಡೆಯಬೇಕು. ಆದರೆ, ಅವರು ಪ್ರತಿನಿಧಿಸುವ ಪಕ್ಷವೇ ಹೆದರುತ್ತಿರುವುದು ವಿಪರ್ಯಾಸ. ಹೀಗಾದರೆ, ನಮ್ಮದು ಬರೀ ಆಷಾಢಭೂತಿಗಳ ದೇಶವಾಗುತ್ತದಷ್ಟೆ.

ಬಿ.ಎಸ್. ಜಯಪ್ರಕಾಶ ನಾರಾಯಣ, ಬೆಂಗಳೂರು

ಹೊಣೆ ಅರಿತು ವರ್ತಿಸಬೇಕು

ಗ್ರಾಹಕ ಉತ್ಪನ್ನಗಳಿಗೆ ತಮ್ಮ ಅನುಮೋದನೆ ನೀಡುವಾಗ ಜನಪ್ರಿಯ ವ್ಯಕ್ತಿಗಳು ಜವಾಬ್ದಾರಿಯಿಂದ ವರ್ತಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಸರಿಯಾಗಿದೆ. ವರ್ಚಸ್ಸುಳ್ಳ ವ್ಯಕ್ತಿಗಳು ಜಾಹೀರಾತಿನಲ್ಲಿ ಯಾವುದೇ ಉತ್ಪನ್ನವನ್ನು ಅನುಮೋದಿಸಿದರೆ ಅದು ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರುತ್ತದೆ. ಮುಗ್ಧ ಗ್ರಾಹಕರು ಗುಣಮಟ್ಟದ ಬಗ್ಗೆ ತಲೆಕೆಡಿಸಿಕೊಳ್ಳದೆ, ಜಾಹೀರಾತಿನ ಸೆಳೆತಕ್ಕೆ ಒಳಗಾಗಿ ಖರೀದಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ ಜನಪ್ರಿಯ ವ್ಯಕ್ತಿಗಳು ಈ ವಿಚಾರದಲ್ಲಿ ಹೆಚ್ಚಿನ ಹೊಣೆಗಾರಿಕೆಯಿಂದ ವರ್ತಿಸಬೇಕಾದುದು ಅಗತ್ಯ. ತಪ್ಪುದಾರಿಗೆ ಎಳೆಯುವ ಜಾಹೀರಾತುಗಳಿಗೆ ಕಡಿವಾಣ ಹಾಕುವ ಕೆಲಸ ತ್ವರಿತವಾಗಿ ಆಗಬೇಕು. ಇಲ್ಲವಾದಲ್ಲಿ ಅಮಾಯಕ ಗ್ರಾಹಕರು ವಂಚನೆಗೆ ಒಳಗಾಗುತ್ತಲೇ ಇರುತ್ತಾರೆ.

ಅಂಬಿಕಾ ಕೆ.ಬಿ., ಬಾಗೇಪಲ್ಲಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುಟುಂಬವೊಂದರ ಮನೆವಾರ್ತೆ ವೆಚ್ಚ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ. ಆಹಾರ, ಇಂಧನ, ವೈದ್ಯಕೀಯ, ಶೈಕ್ಷಣಿಕ ಮತ್ತಿತರ ವೆಚ್ಚಗಳು ಏರಿಕೆಯಾಗುತ್ತಲೇ ಇವೆ. 2020–21ನೇ ಆರ್ಥಿಕ ವರ್ಷದ ನಂತರದ ವರ್ಷಗಳಲ್ಲಿ ಈ ವೆಚ್ಚವು ಭಾರಿ ಪ್ರಮಾಣದ ಏರಿಕೆ ದಾಖಲಿಸಿದೆ. ಕುಟುಂಬವೊಂದರ ವೆಚ್ಚ ಏರಿಕೆಯಾದುದರ ಪರಿಣಾಮವಾಗಿ, ಅದರ ಉಳಿತಾಯ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕೇಂದ್ರ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಈಚೆಗೆ ಬಿಡುಗಡೆ ಮಾಡಿರುವ ವರದಿಯಲ್ಲಿನ ದತ್ತಾಂಶಗಳು ಹೇಳುವ ಮಾತಿದು. ಒಟ್ಟಾರೆಯಾಗಿ ದೈನಂದಿನ ಜೀವನದ ವೆಚ್ಚ ಏರಿಕೆಯಾಗುತ್ತಿರುವುದರಿಂದ ಜನರ ಉಳಿತಾಯದ ಸಾಮರ್ಥ್ಯ ಕುಸಿಯುತ್ತಿದೆ ಮತ್ತು ಅವರ ಈವರೆಗಿನ ಉಳಿತಾಯವೂ ಕರಗುತ್ತಿದೆ

ಉಳಿತಾಯವ ಕರಗಿಸುತ್ತಿದೆ ಮನೆವಾರ್ತೆಯ ವೆಚ್ಚ ಹೆಚ್ಚಳ

• ಜಯಸಿಂಹ ಆರ್.

ದೇಶದ ಜನರು ದೈನಂದಿನ ಜೀವನದ ವೆಚ್ಚ ಏರಿಕೆಯಾಗುತ್ತಿದೆ ಮತ್ತು ಇದರಿಂದ ಕುಟುಂಬ ನಿರ್ವಹಣೆಯ ವೆಚ್ಚ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಇದರಿಂದ ಜನರ ಮೇಲಿನ ಆರ್ಥಿಕ ಹೊರೆ ಹೆಚ್ಚುತ್ತಿದೆ ಎಂಬುದು ಹೊಸ ವಿಚಾರವೇನಲ್ಲ. ದಿನಬಳಕೆಯ ವಸ್ತು-ಪದಾರ್ಥಗಳ ಬೆಲೆ ಏರಿಕೆ, ಹಣದುಬ್ಬರ ಇದನ್ನೇ ಹೇಳುತ್ತವೆ. ಸರ್ಕಾರದ್ದೇ ವರದಿಯ ಪ್ರಕಾರ ದೇಶದ ಪ್ರತಿ ಕುಟುಂಬವೊಂದು ಜೀವನ ನಿರ್ವಹಿಸಲು ಮಾಡಲೇಬೇಕಾದ ಅತ್ಯಗತ್ಯದ ಖರ್ಚಿನ ಮೊತ್ತವು 2020–21ರಿಂದ 2022–23ರ ನಡುವೆ ಶೇ 19ರಷ್ಟು ಏರಿಕೆಯಾಗಿದೆ ಎಂದು 'ರಾಷ್ಟ್ರೀಯ ಲೆಕ್ಕಪತ್ರ ಸಾಂಖ್ಯಿಕ ವರದಿ–2024'ಯ ಅಂಕಿಸಂಖ್ಯೆಗಳು ಹೇಳುತ್ತವೆ. ಅಂದರೆ ಕೇಂದ್ರ ಸರ್ಕಾರವೂ ಈಗ ಇದನ್ನು ಅಧಿಕೃತವಾಗಿ ಒಪ್ಪಿಕೊಂಡಂತಾಗಿದೆ. ಏರಿಕೆಯಾಗುತ್ತಿರುವ ವೆಚ್ಚವನ್ನು ಸರಿದೂಗಿಸಲು ಜನರ ಆದಾಯ ಸಾಲುತ್ತಿಲ್ಲ ಎಂಬುದನ್ನೂ ಈ ವರದಿಯ ದತ್ತಾಂಶಗಳು ಹೇಳುತ್ತವೆ.

ಕುಟುಂಬ ನಿರ್ವಹಣೆಗೆ ಹೆಚ್ಚು ವೆಚ್ಚವಾಗುತ್ತಿರುವ ಕಾರಣ ಜನರ ಉಳಿತಾಯದ ಸಾಮರ್ಥ್ಯ ಕುಸಿಯುತ್ತಿದೆ. 2018–19ರಲ್ಲಿ ದೇಶದ ಎಲ್ಲಾ ಜನರು ಬ್ಯಾಂಕ್ ಠೇವಣಿ, ಅಂಚೆಕಚೇರಿ ಠೇವಣಿ, ಚಿಟ್‌ಫಂಡ್‌ಗಳು, ಸಣ್ಣ ಉಳಿತಾಯ, ಹೂಡಿಕೆ, ಚಿನ್ನದ ರೂಪದಲ್ಲಿ ₹14.92 ಲಕ್ಷ ಕೋಟಿಯಷ್ಟು ಉಳಿತಾಯ ಮಾಡಿದ್ದರು. 2020–21ರಲ್ಲಿ ಇಂತಹ ಉಳಿತಾಯದ ಒಟ್ಟು ಮೊತ್ತವು ₹23.29 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಆದರೆ ವೆಚ್ಚ ಏರಿಕೆಯ ಪರಿಣಾಮದಿಂದ ಇಂತಹ ಉಳಿತಾಯದ ಮೊತ್ತ 2022–23ರಲ್ಲಿ ₹14.16 ಲಕ್ಷ ಕೋಟಿಗೆ ಇಳಿಕೆಯಾಗಿದೆ. ದೇಶದ ಜನರ ಉಳಿತಾಯವು 2018–19ರಲ್ಲಿ ಇದ್ದ ಉಳಿತಾಯಕ್ಕಿಂತ ಕಡಿಮೆ ಮೊತ್ತಕ್ಕೆ ಕುಸಿದಿದೆ ಎಂಬುದು ಗಮನಾರ್ಹ. ಅಂದರೆ ದೇಶದ ಜನರ ಉಳಿತಾಯದ ಸಾಮರ್ಥ್ಯ ಮಾತ್ರ ಕಡಿಮೆಯಾಗುತ್ತಿಲ್ಲ, ಬದಲಿಗೆ ಅವರಲ್ಲಿ ಈಗಾಗಲೇ ಇದ್ದ ಉಳಿತಾಯದ ಹಣವೂ ವೆಚ್ಚವಾಗುತ್ತಿದೆ. ಜನರು ವೆಚ್ಚವನ್ನು ಭರಿಸಲು ಉಳಿತಾಯದ ಹಣವನ್ನು ಬಳಕೆ ಮಾಡುತ್ತಿದ್ದಾರೆ ಎಂಬುದರತ್ತಲೂ ಈ ಅಂಕಿಅಂಶಗಳು ಗಮನ ಸೆಳೆಯುತ್ತವೆ.

ಇನ್ನೊಂದೆಡೆ ದೇಶದ ಜನರ ಸಾಲವೂ ಏರಿಕೆಯಾಗುತ್ತಿದೆ. ವೆಚ್ಚ ಏರಿಕೆಯನ್ನು ಸರಿದೂಗಿಸುವ ಉದ್ದೇಶದಿಂದಲೇ ಜನರು ಸಾಲ ಮಾಡುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ. ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಜನರು ಪಡೆದುಕೊಂಡ ಸಾಲದ ಪ್ರಮಾಣವು 2018–19ರಿಂದ 2022–23ರ ನಡುವೆ ಶೇ 115ರಷ್ಟು ಏರಿಕೆಯಾಗಿದೆ. ಒಟ್ಟು ಅರ್ಥವೇನೆಂದರೆ, ಜನರ ಬಳಿಯಲ್ಲಿ ಹಣ ಉಳಿಯುತ್ತಿಲ್ಲ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ.

₹60,231 2018–19ರಲ್ಲಿ ನಾಲ್ಕು ಜನರ ಕುಟುಂಬವೊಂದು ಆಹಾರ ಪದಾರ್ಥಕ್ಕಾಗಿ ಮಾಡಿದ ವೆಚ್ಚ

₹74,142 2022–23ರಲ್ಲಿ ನಾಲ್ಕು ಜನರ ಕುಟುಂಬವೊಂದು ಆಹಾರ ಪದಾರ್ಥಕ್ಕಾಗಿ ಮಾಡಿದ ವೆಚ್ಚ

ಮನೆ ವೆಚ್ಚ ಭಾರಿ ಏರಿಕೆ

19.65% 2020–21ನೇ ಸಾಲಿಗೆ ಹೋಲಿಸಿದರೆ 2022–23ರಲ್ಲಿ ಪ್ರತಿ ಕುಟುಂಬದ ಮನೆವಾರ್ತೆ ವೆಚ್ಚದಲ್ಲಿ ಆದ ಏರಿಕೆ ಪ್ರಮಾಣ





ಹೆಚ್ಚುತ್ತಿದೆ ದೇಶದ ಜನರ ಸಾಲದ ಹೊರೆ

ಈಚಿನ ವರ್ಷಗಳಲ್ಲಿ ದೇಶದ ಜನರ ಸಾಲದ ಹೊರೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಎಂಬುದನ್ನು ಸರ್ಕಾರದ ದತ್ತಾಂಶಗಳು ಹೇಳುತ್ತವೆ. ಇದು ಸರ್ಕಾರಗಳು ಜನರ ಮೇಲೆ ಹೊರಿಸಿರುವ ತಲಾ ಸಾಲವಲ್ಲ. ಬದಲಿಗೆ ದೇಶದ ಎಲ್ಲಾ ಜನರು ತೆಗೆದುಕೊಂಡಿರುವ ಗೃಹ ಸಾಲ, ಅಡಮಾನ ಸಾಲ, ವೈಯಕ್ತಿಕ ಸಾಲ ಮತ್ತಿತರ ಸಾಲಗಳ ಮೊತ್ತವನ್ನು ಇದು ಒಳಗೊಂಡಿದೆ



101.9% 2018–19ಕ್ಕೆ ಹೋಲಿಸಿದರೆ 2022–23ರದಲ್ಲಿ ದೇಶದ ಜನರ ಒಟ್ಟು ಸಾಲದಲ್ಲಿ ಆದ ಏರಿಕೆ ಪ್ರಮಾಣ

ಬರಿದಾಗುತ್ತಿದೆ ಉಳಿತಾಯ

39.2% 2020–21ನೇ ಸಾಲಿಗೆ ಹೋಲಿಸಿದರೆ 2022–23ರಲ್ಲಿ ಪ್ರತಿ ಕುಟುಂಬದ ವಾರ್ಷಿಕ ಉಳಿತಾಯದಲ್ಲಿ ಆದ ಇಳಿಕೆ ಪ್ರಮಾಣ





ಬ್ಯಾಂಕ್‌ಗಳಿಂದ ಪಡೆದ ಸಾಲ ಶೇ 105ರಷ್ಟು ಹೆಚ್ಚಳ



ಇದು ಗೃಹ ಸಾಲ, ಅಡಮಾನ ಸಾಲ, ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್ ಸಾಲಗಳನ್ನು ಒಳಗೊಂಡಿದೆ. ಈ ಸಾಲವು ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ

ಬ್ಯಾಂಕೇತರ ಸಾಲ ಶೇ110ರಷ್ಟು ಏರಿಕೆ

ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಜನರು ಪಡೆದುಕೊಂಡ ಸಾಲದ ಮೊತ್ತವು ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. ವಾಹನ ಸಾಲ, ಗೃಹೋಪಯೋಗಿ ವಸ್ತುಗಳ ಮೇಲಿನ ಸಾಲ, ಶೈಕ್ಷಣಿಕ ಸಾಲಗಳನ್ನೂ ಇದು ಒಳಗೊಂಡಿದೆ. ಆ್ಯಪ್ ಮೂಲಕ ನೀಡಲಾಗುವ ಸಾಲವನ್ನೂ ಈ ದತ್ತಾಂಶ ಒಳಗೊಂಡಿದೆ.

ಇಂತಹ ಸಾಲದ ಮೊತ್ತ ಏರಿಕೆಯಾಗುತ್ತಲೇ ಇರುವುದು, ತಮ್ಮ ಮತ್ತು ತಮ್ಮ ಕುಟುಂಬದ ಅಗತ್ಯ ವೆಚ್ಚ ಭರಿಸಲು ಜನರಲ್ಲಿ ಹಣದ ಕೊರತೆ ಇರುವುದನ್ನು ತೋರಿಸುತ್ತದೆ.

ಆಧಾರ: ಕೇಂದ್ರ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ 'ರಾಷ್ಟ್ರೀಯ ಲೆಕ್ಕಪತ್ರ ಸಾಂಖ್ಯಿಕ ವರದಿ–2024'

ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ



ಸಿನಿ ಬಿಟ್ಸ್

ಮುಂದೆ ಹೋದ 'ಛೂ ಮಂತರ್'

ಶರಣ್

ಶರಣ್ ಅಭಿನಯದ 'ಛೂ ಮಂತರ್' ಮೇ 10ಕ್ಕೆ ತೆರೆಗೆ ಬರಬೇಕಿತ್ತು. ಚುನಾವಣೆ, ಐಪಿಎಲ್ ಕಾವು ಕಡಿಮೆಯಾಗದೇ ಇರುವುದರಿಂದ ಚಿತ್ರ ಬಿಡುಗಡೆ ಸ್ವಲ್ಪ ವಿಳಂಬವಾಗಲಿದೆ ಎಂದು ಚಿತ್ರತಂಡ ಹೇಳಿದೆ.

ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ಮಾನಸ ತರುಣ್ ಹಾಗೂ ತರುಣ್ ಶಿವಪ್ಪ ನಿರ್ಮಿಸಿರುವ ಚಿತ್ರಕ್ಕೆ 'ಕರ್ವ' ಖ್ಯಾತಿಯ ನವನೀತ್ ನಿರ್ದೇಶನವಿದೆ.

'ಚಿತ್ರವನ್ನು ವೀಕ್ಷಿಸಿರುವ ತೆಲುಗು, ತಮಿಳು ಹಾಗೂ ಹಿಂದಿ ಭಾಷೆಗಳ ವಿತರಕರು, ಸರಿಯಾದ ಸಮಯ ನೋಡಿಕೊಂಡು ಚಿತ್ರ ಬಿಡುಗಡೆ ಮಾಡುವಂತೆ ಸಲಹೆ ನೀಡಿದ್ದಾರೆ. ಇದೊಂದು ವಿಭಿನ್ನ ಹಾರರ್ ಚಿತ್ರವಾಗಿದ್ದು, ಎಲ್ಲಾ ಭಾಷೆಗಳ ಜನರು ನೋಡುವ ಕಥಾಹಂದರವನ್ನು ಹೊಂದಿದೆ. ಈಗ ದೇಶಾದ್ಯಂತ ಚುನಾವಣೆ ಕೂಡ ನಡೆಯುತ್ತಿದೆ. ಹಾಗಾಗಿ, ನಮ್ಮ ಚಿತ್ರವನ್ನು ಮೇ 10 ರಂದು ಬಿಡುಗಡೆ ಮಾಡುತ್ತಿಲ್ಲ. ಮುಂದಿನ ದಿನಾಂಕವನ್ನು ಸದ್ಯದಲ್ಲೇ ತಿಳಿಸುತ್ತವೆ' ಎಂದು ನಿರ್ಮಾಪಕ ತರುಣ್ ಶಿವಪ್ಪ ತಿಳಿಸಿದ್ದಾರೆ.

ಚಿಕ್ಕಣ್ಣ, ಮೇಘನಾ ಗಾಂವ್ಕರ್, ಅದಿತಿ ಪ್ರಭುದೇವ, ಪ್ರಭು ಮುಂಡ್ಕರ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ. ಅನುಪ್ ಕಟ್ಟುಕರನ್ ಛಾಯಾಚಿತ್ರಗ್ರಹಣ ಹಾಗೂ ಚಂದನ್ ಶೆಟ್ಟಿ ಅವರ ಸಂಗೀತ ನಿರ್ದೇಶನವಿರುವ ಚಿತ್ರಕ್ಕೆ ಅವಿನಾಶ್ ಬಸುತ್ಕರ್ ಹಿನ್ನೆಲೆ ಸಂಗೀತ ನೀಡಿದ್ದಾರೆ.


ಸಂತೋಷ್ ಬಾಲರಾಜ್, ರಂಜನಿ ರಾಘವನ್

ಶೀಘ್ರದಲ್ಲಿ 'ಸತ್ಯಂ' ತೆರೆಗೆ

'ಗಣಪ' ಖ್ಯಾತಿಯ ಸಂತೋಷ್ ಬಾಲರಾಜ್, ರಂಜನಿ ರಾಘವನ್ ಜೋಡಿಯಾಗಿ ನಟಿಸಿರುವ 'ಸತ್ಯಂ' ಚಿತ್ರ ಶೀಘ್ರದಲ್ಲಿ ತೆರೆಗೆ ಬರಲು ಸಿದ್ಧವಾಗಿದೆ. ಅಶೋಕ್ ಕಡಬ ನಿರ್ದೇಶನದ ಚಿತ್ರಕ್ಕೆ ಮಹಾಂತೇಶ್ ವಿ.ಕೆ. ಬಂಡವಾಳ ಹೂಡಿದ್ದಾರೆ.

'ಇತ್ತೀಚೆಗಷ್ಟೇ ಈ ಚಿತ್ರವನ್ನು ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಸರ್ಟಿಫಿಕೇಟ್ ನೀಡಿದೆ. ಯಾವುದೇ ಕಟ್, ಮ್ಯೂಟ್ ಇಲ್ಲದೆ ಈ ಚಿತ್ರ ಸೆನ್ಸಾರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆ. ಮಾಸ್ ಚಿತ್ರವಾದರೂ ತುಳುನಾಡಿನ ದೈವಾರಾಧನೆಯ ಬಗ್ಗೆ ಒಂದು ಎಳೆ ಈ ಚಿತ್ರದಲ್ಲಿದೆ. ಹಾಗಂತ ಕಾಂತಾರದ ನಕಲಲ್ಲ. ಅದಕ್ಕೂ ಮುನ್ನವೇ ಚಿತ್ರೀಕರಣಗೊಂಡಿತ್ತು. ಐಪಿಎಲ್ ನಂತರ ಚಿತ್ರ ತೆರೆಗೆ ಬರಲಿದೆ' ಎನ್ನುತ್ತಾರೆ ನಿರ್ದೇಶಕರು.

ಕೆಜಿಎಫ್ ಖ್ಯಾತಿಯ ರವಿ ಬಸ್ರೂರು ಸಂಗೀತ, ಸಿನಿಟೆಕ್ ಸೂರಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ತೆಲುಗು ನಟ ಸುಮನ್, ಸೈಯಾಜಿ ಶಿಂಧೆ, ಪವಿತ್ರಾ ಲೋಕೇಶ್, ಅವಿನಾಶ್, ವಿನಯಾ ಪ್ರಸಾದ್, ಮುಖ್ಯಮಂತ್ರಿ ಚಂದ್ರು, ಎಂ.ಎನ್. ಲಕ್ಷ್ಮಿದೇವಿ ಮುಂತಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಛಲವೊಂದಿದ್ದರೆ ಗೆಲುವು ನಿಶ್ಚಿತ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಹುಟ್ಟು ಕುರುಡನಾಗಿ ಆತ ಹುಟ್ಟಿದ್ದು ಆಂಧ್ರದ ಒಂದು ಸಾಧಾರಣ ಕುಟುಂಬದಲ್ಲಿ. ದಿನವೂ ನಾಲ್ಕು ಕಿಲೋಮೀಟರ್ ನಡೆದುಕೊಂಡೇ ಶಾಲೆಗೆ ಹೋಗಬೇಕು. ಕಣ್ಣಿಲ್ಲದ ಕಾರಣ ಶಾಲೆಯಲ್ಲಿ ಏಕಾಂಗಿ. ನಂತರ ಹೈದರಾಬಾದಿನ ವಿಶೇಷ ಶಾಲೆಗೆ ಸೇರಿಕೊಂಡ ಮೇಲೆ ಓದಿನಲ್ಲಿ ಮಾತ್ರವಲ್ಲ, ಚೆಸ್ ಮತ್ತು ಕ್ರಿಕೆಟ್‌ನಲ್ಲೂ ಭಾರತ ತಂಡವನ್ನು ಪ್ರತಿನಿಧಿಸಿ ಸರ್ವಾಂಗೀಣ ಪ್ರಗತಿ ತೋರಿದ.

ಹತ್ತನೇ ತರಗತಿಯಲ್ಲಿ ತೊಂಬತ್ತು ಶೇಕಡಾ ಅಂಕ ಗಳಿಸಿದರೂ ವಿಜ್ಞಾನ ವಿಭಾಗಕ್ಕೆ ಸೇರಿಸಿಕೊಳ್ಳಲು ಯಾವ ಕಾಲೇಜೂ ಒಪ್ಪಲಿಲ್ಲ. ಕೋರ್ಟ್ ಮೊರೆ ಹೋದ ಆತ ಆರು ತಿಂಗಳ ನಂತರ ತನ್ನ ಪರವಾಗಿ ಬಂದ ತೀರ್ಪಿನಿಂದ ಕಾಲೇಜು ಸೇರಿಕೊಂಡ. ಹನ್ನೆರಡನೇ ತರಗತಿಯಲ್ಲಿ 98 ಶೇಕಡಾ ಅಂಕಗಳಿಸಿ ಮೊದಲ ಸ್ಥಾನ ಪಡೆದ.

ಐಐಟಿಯಲ್ಲಿ ಎಂಜಿನಿಯರಿಂಗ್ ಓದಬೇಕೆಂದರೆ ಕುರುಡುತನದ ಕಾರಣದಿಂದ ಪ್ರವೇಶಪರೀಕ್ಷೆಯ ಪ್ರವೇಶಪತ್ರವೇ ನಿರಾಕರಿಸಲ್ಪಟ್ಟಿತು. ಆದರೆ ಅವರ ಅರ್ಜಿಯನ್ನು ಮನ್ನಿಸಿದ ಎಂಐಟಿ, ಸ್ಟ್ಯಾನ್‌ಫೋರ್ಡ್, ಬರ್ಕ್‌ಲಿ ಸೇರಿದಂತೆ ಅಮೆರಿಕದ ನಾಲ್ಕು ಪ್ರತಿಷ್ಠಿತ ವಿದ್ಯಾಸಂಸ್ಥೆಗಳು ಪ್ರವೇಶ ನೀಡಿದವು. ಎಂಐಟಿಯ ಮೊದಲ ಅಂತಾರಾಷ್ಟ್ರೀಯ ಅಂಧ ವಿದ್ಯಾರ್ಥಿ ಅವರು. ಓದುತ್ತಿರುವಾಗಲೇ ದೊಡ್ಡಮೊತ್ತದ ಸಂಬಳವಿರುವ ಕೆಲಸದ ಆಫರ್‌ಗಳು ಬಂದವು. ಆದರೆ ಅವರಿಗೋ ತಾನು ಅಂಗವೈಕಲ್ಯದಿಂದ ಎದುರಿಸಿದ ಸಮಸ್ಯೆಗಳಿಂದ ಇತರರು ನರಳದಂತೆ ಪರಿಹಾರ ಕಂಡು ಹಿಡಿದು ಭಾರತದಲ್ಲಿಯೇ ಏನಾದರೂ ಮಾಡಬೇಕೆಂಬ ಛಲ. ತನ್ನಂತೆಯೇ ದೈಹಿಕ ಸಮಸ್ಯೆ ಇರುವವರಿಗಾಗಿ ಅವರು ಹಲವಾರು ಯೋಜನೆಗಳನ್ನು ಶುರುಮಾಡಿದರು. ಬ್ರೈಲ್ ಲಿಪಿಯ ಮುದ್ರಣಾಲಯ ಪ್ರಾರಂಭಿಸಿದರು.

ಹೈದರಾಬಾದಿನಲ್ಲಿ ಬೊಲಂಟ್ ಇಂಡಸ್ಟ್ರೀಸ್ ಸ್ಥಾಪಿಸಿ ಪರಿಸರ ಸ್ನೇಹಿ ಉತ್ಪನ್ನಗಳನ್ನು ತಯಾರಿಸಲು ಒತ್ತು ಕೊಟ್ಟರು. ದೈಹಿಕ ಸಮಸ್ಯೆ ಇರುವವರಿಗೇ ಉದ್ಯೋಗ ನೀಡಿದರು. 2017ರಲ್ಲಿ ಕಂಪನಿ ನೂರೈವತ್ತು ಕೋಟಿ ರೂಪಾಯಿ ವ್ಯವಹಾರ ನಡೆಸಿತು. ಅದೇ ವರ್ಷ ಫೋರ್ಬ್ಸ್ ನಿಯತಕಾಲಿಕ ಗುರುತಿಸಿದ ಮೂವತ್ತು ವರ್ಷದೊಳಗಿನ ಮೂವತ್ತು ಮಂದಿ ಏಷ್ಯಾದ ಯುವ ಉದ್ಯಮಿಗಳಲ್ಲಿ ಇವರೂ ಒಬ್ಬರು.

ಈ ಅಸಾಮಾನ್ಯ ವ್ಯಕ್ತಿಯ ಹೆಸರು ಶ್ರೀಕಾಂತ್ ಬೊಲ್ಲಾ. ಬದುಕಿನಲ್ಲಿ ಹುಟ್ಟಿನಿಂದಲೇ ಸವಾಲುಗಳು ಇರಬಹುದು, ಯಾವುದೋ ಘಟ್ಟದಲ್ಲಿ ಬೇಕಾದರೂ ಬರಬಹುದು. ಧೃತಿಗೆಡದೇ ಅವುಗಳನ್ನು ನಿಭಾಯಿಸಿಕೊಂಡು ಹೇಗೆ ಮುಂದುವರಿಯಬಹುದು ಎನ್ನುವುದಕ್ಕೆ ಶ್ರೀಕಾಂತ್ ಅತ್ಯುತ್ತಮ ಉದಾಹರಣೆ. ಜಗತ್ತಿಗೆ ಒಳ್ಳೆಯದನ್ನು ಮಾಡ ಹೊರಟಾಗ ನಮಗೂ ಒಳ್ಳೆಯದೇ ಆಗುತ್ತದೆ ಎನ್ನುವ ಇವರ ಬಗ್ಗೆ 'ಶ್ರೀಕಾಂತ್' ಎಂಬ ಹೆಸರಿನ ಸಿನಿಮಾ ಕೂಡ ನಿರ್ಮಾಣವಾಗುತ್ತಿದ್ದು ಕಳೆದ ವಾರವಷ್ಟೇ ಟ್ರೇಲರ್ ಬಿಡುಗಡೆಯಾಗಿದೆ. ನಟ ರಾಜ್‌ಕುಮಾರ್ ರಾವ್ ಇವರ ಪಾತ್ರ ನಿರ್ವಹಿಸುತ್ತಿದ್ದಾರೆ. ನಿಜ, ದೃಷ್ಟಿ ಇಲ್ಲದವರು ವಿಕಲಚೇತನರಲ್ಲ, ದೃಷ್ಟಿ ಇದ್ದರೂ ದೂರದೃಷ್ಟಿ ಇಲ್ಲದವರೇ ವಿಕಲಚೇತನರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪ್ರತಿಪದ್ ಗಂ. 6-22 ನಂತರ ದ್ವಿತೀಯ ಗಂ. 28-18 ನಕ್ಷತ್ರ: ಕೃತ್ತಿಕಾ ಗಂ. 11-56 ಯೋಗ: ಶೋಭನ ಗಂ. 14-41, ಮೇಷ ಮಾಸದ 27 ನೇ ದಿನ, ಮಳೆನಕ್ಷತ್ರ: ಭರಣಿ 4.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-10 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 29 ಶವ್ವಾಲ್, ದಿನ ವಿಶೇಷ : ಅಸೆಷನ್ ದಿನ - ಹೋಲಿ ಗುರುವಾರ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 3, 7

ಮೇಷ: ಸಂಖ್ಯಾಶಾಸ್ತ್ರಜ್ಞರಿಗೆ ಬಂದ ಉತ್ತಮ ಅವಕಾಶಗಳನ್ನು ಬಿಟ್ಟು ಇಚ್ಛೆಯ ಸಂಸ್ಥೆಯ ಕೆಲಸವನ್ನು ನಿರೀಕ್ಷಿಸುವುದರಲ್ಲಿ ಹುರುಳಿಲ್ಲವೆಂದು ಕಾಣುತ್ತದೆ. ಮಗನ ಮುಜುಗರದ ಸಂಗತಿಗಳು ತಲೆನೋವಾಗಬಹುದು.

ವೃಷಭ: ಐಶ್ವರ್ಯವು ಅನಿರೀಕ್ಷಿತವಾಗಿ ಬಂದಾಗ ದುಂದುವೆಚ್ಚ ಮಾಡದೆ ಬುದ್ಧಿವಂತಿಕೆಯನ್ನು ಬಳಸಿ ಸದುಪಯೋಗ ಮಾಡಿ. ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳುವ ಸನ್ನಿವೇಶಗಳು ಎದುರಾಗಲಿದೆ.

ಮಿಥುನ: ಮನೆಯ ಸಮೀಪದ ಸ್ಥಳದಲ್ಲಿ ನಡೆಯುವ ಕಾರ್ಯಕ್ರಮಾದಿಗಳ ವ್ಯವಸ್ಥೆಯ ಜವಾಬ್ದಾರಿ ನಿಮ್ಮದಾಗಬಹುದು. ತೆರಿಗೆ ಅಧಿಕಾರಿಗಳಿಗೆ ಮಧ್ಯಾಹ್ನದ ನಂತರದ ಸಮಯದಲ್ಲಿ ಕೆಲಸಗಳ ಒತ್ತಡ ಕಡಿಮೆಯಾಗಲಿದೆ.

ಕರ್ಕಾಟಕ: ಕುಟುಂಬದ ಅಭಿವೃದ್ಧಿಗೆ ಅಂತಃಕಲಹ, ಹಿತಶತ್ರುಗಳ ಬಾಧೆಯು ಅನುಭವಕ್ಕೆ ಬರಲಿದೆ. ರೈತರು ಉತ್ತಮ ತಳಿಯ ಬೆಳೆಯಿಂದ ಹೆಚ್ಚಿನ ಸಂತೋಷ ಹೊಂದುವರು. ಮಕ್ಕಳ ಪರೀಕ್ಷೆಯು ಸಮಸ್ಯೆಯಾಗದಿರಲಿ.

ಸಿಂಹ: ವೈದ್ಯರು ವೃತ್ತಿಯಲ್ಲಿ ಮುಖ್ಯವಾಗಿ ಈ ದಿನ ಹೆಚ್ಚಿನ ಜಾಗ್ರತೆ ವಹಿಸುವುದು ಒಳ್ಳೆಯದು. ಉತ್ಸವಾದಿಗಳಲ್ಲಿ ಭಾಗವಹಿಸುವ ಮೂಲಕ ನಿಮ್ಮ ಮನಸ್ಸಿಗೆ ಒಂದು ರೀತಿಯ ದಿವ್ಯ ಅನುಭೂತಿಯು ದೊರೆಯುತ್ತದೆ.

ಕನ್ಯಾ: ಹಿರಿಯರ ಬಳಿಯಲ್ಲಿ ಅನವಶ್ಯಕ ವಿವಾದ, ಗೊಂದಲಗಳಿಗೆ ಅವಕಾಶ ನೀಡಬೇಡಿ. ವಿದೇಶದಿಂದ ಹೆಚ್ಚಿನ ಶಿಕ್ಷಣಕ್ಕೆಂದು ತೆರಳಿದ ಮಗನ ಆಗಮನವಾಗುವುದು. ಸ್ಪರ್ಧಾ ಮನೋಭಾವ ತೀವ್ರಗೊಳ್ಳುವುದು.

ತುಲಾ: ಪುರಾತತ್ವ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಕಾರ್ಯ ನಿಮಿತ್ತ ದೂರದ ಊರಿನ ಪ್ರಯಾಣ ಬೆಳೆಸಬೇಕಾಗುವುದು. ಅನಗತ್ಯ ಅಲೆದಾಟಗಳನ್ನು ತಪ್ಪಿಸುವ ಪ್ರಯತ್ನ ಮಾಡಿ.

ವೃಶ್ಚಿಕ: ಷೇರು ಖರೀದಿ ಅಥವಾ ನಿವೇಶನಗಳಿಗೆ ಮುಂಗಡ ಪಾವತಿ ಮಾಡುವ ಮುನ್ನ ಹತ್ತು ಬಾರಿ ಆಲೋಚಿಸಿ. ನೀರಿಗೆ ಸಂಬಂಧಪಟ್ಟ ಅಪಾಯಗಳು ಸಂಭವಿಸುವ ಸಾಧ್ಯತೆ ಇರುವುದು.

ಧನು: ಅತಿಯಾದರೆ ಅಮೃತವು ವಿಷ ಎಂಬಂತೆ ನಿಮ್ಮ ಮಕ್ಕಳ ಮೇಲಿನ ಅತಿಯಾದ ಪ್ರೀತಿ ನಿಮಗೆ ಮಾರಕವಾಗಿ ಪರಿಣಮಿಸಬಹುದು. ಸೌಹಾರ್ದಯುತ ಸಂಬಂಧ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಮಕರ: ರಾತ್ರಿ ಅನಿವಾರ್ಯ ಕಾರಣಗಳಿಂದ ಆದ ನಿದ್ರಾಹೀನತೆ ಕೆಲಸದ ಸಮಯದಲ್ಲಿ ಬಹಳವಾಗಿ ಕಾಡುವ ಸಂಭವವಿದೆ. ಯಾವ ಪರಿಸ್ಥಿತಿಯಲ್ಲಿಯೂ ಧೈರ್ಯಗೆಡುವುದು ಸರಿಯಲ್ಲ. ಲೋಭಿಗಳಂತೆ ವರ್ತಿಸಬೇಡಿ.

ಕುಂಭ: ತಹಶೀಲ್ದಾರರಿಂದ ಆಗಬೇಕಾದ ಕೆಲಸಗಳು ಸರಿಯಾಗಿ ಆಗುವ ಸಾಧ್ಯತೆಗಳು ಕಂಡುಬರುತ್ತವೆ. ಗುಪ್ತ ಸಂಕೇತಗಳು ಬಹಿರಂಗಗೊಳ್ಳಲಿದೆ. ಸೃಜನಶೀಲತೆಗೆ ಮನ್ನಣೆ ದೊರಕುವುದು.

ಮೀನ: ಗುಣಮಟ್ಟವನ್ನು ನೋಡಿ ಖರೀದಿಸಿದ ಜಮೀನು ಈಗ ಕೈ ಕೊಡುವ ಸಾಧ್ಯತೆ ಇದೆ. ಮಧ್ಯಮ ಮಟ್ಟದ ಜೀವನಕ್ಕೆ ಹಣಕಾಸಿನ ತೊಂದರೆ ಕಾಣುವುದಿಲ್ಲ. ತೀರ್ಮಾನಗಳು ಭಾಗಶಃ ಸರಿಯಾಗಿರುವುದು.

ಪದಬಂಧ 5675

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಿರುಗಿದ್ದಾಗ ವರನಿಗೆ ಕೇಳಿಸಿದ ಧ್ವನಿ (2)
3.ಪ್ರಯಾಸದಿಂದಾದ ಹೆರಿಗೆ (3)
6.ವಿಷಯಾಸಕ್ತ ಇಲ್ಲಿದ್ದಾನೆ (3)
8.ತೀಡಿ ತೀಡಿ ಮಾಡಿದ ಸುಧಾರಣೆ (4)
10.ವರ ನೀಡಿರುವ ವಿಸ್ತಾರವಾದ ಹೇಳಿಕೆ (3)
11.ಮರದ ಪಾದರಕ್ಷೆ (3)
12.ಕಲ್ಲಿನ ಆಯುಧಗಳು ಬಳಕೆಯಲ್ಲಿದ್ದ ಕಾಲ (4)
15.ಜ್ಯೋತಿಷ್ಯದ ಹನ್ನೆರಡು ರಾಶಿಗಳಲ್ಲಿ ಇದೊಂದು (3)
17.ಭಾಸ್ಕರನಿದ್ದಗಲೇ ಚೋರ ಕಾಣುತ್ತಿದ್ದನಲ್ಲಾ? (3)
18.ಜನನಿ ನುಡಿದಿರುವ ಸತ್ಯ (2)

ಮೇಲಿಂದ ಕೆಳಕ್ಕೆ

2.ವರನ ನಡುವೆ ನುಸುಳಿ ತೋರಿದ ಬೆಡಗು (3)
3.ಪ್ರತಿಯಲ್ಲಿ ತೋರಿದ ಚಿಹ್ನೆ (3)
4.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
5.ತಾಪತ್ರಯದಲ್ಲೇ ಉಷ್ಣತೆ ಇದೆ! (2)
7.ತಾರ ನುಡಿಸಿದ ತಂತಿ ವಾದ್ಯ (3)
9.ಕೊನೆಗೆ ತಾಪವಿದ್ದರೂ ತೋರಿದ ಬಾಹ್ಯ ಸೌಂದರ್ಯ! (3)
10.ಬೇರೆ ದೇಶದಿಂದ ಬಂದವನು (3)
11.ನೇಯುವ ಸಾಧನ (3)
13.ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು (2)
14.ಅಗಣಿತ ಸಂಖ್ಯೆಗಳಿರುವ ಲೆಕ್ಕ ಶಾಸ್ತ್ರ (3)
15.ದ್ವೇಷ ಹೀಗೆ ಬಂದಿದೆ (3)
16.ರಜವಿದ್ದಾಗಿನ ಇರುಳು (3)



5674ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದ್ಯಮಾನ 4.ಅಧರ 5.ವ್ಯವಧಾನ 6.ಒಮ್ಮತ 8.ನಕ್ತಂಚರ 9.ವಸ್ತುಕೋಶ 11.ಟಗರು 14.ಹನುಮಂತ 16.ಗಳ್ಳಿಹ 17.ಮಹಾದ್ವಾರ

ಮೇಲಿಂದ ಕೆಳಕ್ಕೆ: 1.ವಿರಕ್ತ 2.ನವ್ಯ 3.ದಿನಪ 4.ಅನುಮಾನ 6.ಒರಟ 7.ತವರು 10.ಶಯ್ಯಾಗೃಹ 12.ಮಹಲು 13.ನಗರ 15.ತಮ

ಸುಡೊಕು 6060

	7			3		1		6
4		9						
	1		7		2		5	4
		3	5		6	4		
	4			2			6	7
		5	1		7	3		
	8		6		5	2		3
2		6						
	3	4		7		6	1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6059 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಪ್ರಜ್ವಲ್ ಪ್ರಕರಣ; ಬಿಜೆಪಿ ಹೊಣೆಯಲ್ಲ

• ಸುಮಿತ್ ಪಾಂಡೆ



ಲೋಕಸಭಾ ಚುನಾವಣೆಯ ಪ್ರಚಾರದ ನಡುವೆ ಕೇಂದ್ರದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನ ಇಲ್ಲಿದೆ. ಜೆಡಿಎಸ್–ಬಿಜೆಪಿ ಮೈತ್ರಿ, ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ, ಸಂವಿಧಾನ ಬದಲಾವಣೆ ಗುಲ್ಲು, ತನಿಖಾ ಸಂಸ್ಥೆಗಳ ದುರುಪಯೋಗ ಆರೋಪ ಮತ್ತಿತರ ವಿಷಯಗಳ ಕುರಿತು ಅವರು ಮುಕ್ತವಾಗಿ ಮಾತನಾಡಿದ್ದಾರೆ

ಪ್ರಜಾವಾಣಿ ಸಂದರ್ಶನ
ರಾಜನಾಥ್ ಸಿಂಗ್

• ಯಾವೆಲ್ಲ ವಿಷಯಗಳನ್ನು ಮುಂದಿಟ್ಟುಕೊಂಡು ಬಿಜೆಪಿಯು ಮೂರನೇ ಅವಧಿಗೆ ಜನಾದೇಶ ಕೋರುತ್ತಿದೆ?

ಅಂತರರಾಷ್ಟ್ರೀಯ ಸಮುದಾಯದಲ್ಲಿ ಭಾರತದ ಸ್ಥಾನಮಾನ ಬೆಳೆದಿದೆ. ಭಾರತವು ಅಭಿವೃದ್ಧಿ ಹೊಂದಿದ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂಬ ವಿಶ್ವಾಸ ಜನರಿಗೆ ಇದೆ. ದೇಶ ಪ್ರಗತಿಯ ಹಾದಿಯಲ್ಲಿದೆ ಎಂದು ಜನರು ಭಾವಿಸಿದ್ದಾರೆ.

• ಮೊದಲ ಎರಡು ಹಂತದ ಮತದಾನದ ಬಳಿಕ ಬಿಜೆಪಿಯು ತನ್ನ ಸಾಧನೆಗಿಂತ ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಹೆಚ್ಚು ಮಾತನಾಡುತ್ತಿದೆಯಲ್ಲ?

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸ್ಪಷ್ಟತೆ ಇಲ್ಲ. ಪಿತ್ರಾರ್ಜಿತ ಆಸ್ತಿಗೆ ತೆರಿಗೆ ವಿಧಿಸುವ ಬಗ್ಗೆ ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ ಸಲಹೆ ನೀಡಿದ್ದಾರೆ. ಈ ಸಲಹೆಯನ್ನು ಕಾರ್ಯಗತಗೊಳಿಸಿದರೆ ದಕ್ಷಿಣ ಅಮೆರಿಕದ ಕೆಲವು ರಾಷ್ಟ್ರಗಳಲ್ಲಿ ಸಂಭವಿಸಿದಂತೆ ದೊಡ್ಡ ಆರ್ಥಿಕ ಹಿಂಜರಿತ ಉಂಟಾಗಲಿದೆ. ಕಾಂಗ್ರೆಸ್ ಧರ್ಮಾಧಾರಿತ ಮೀಸಲಾತಿಯನ್ನು ಪರಿಚಯಿಸುವ ದಟ್ಟವಾದ ಸಾಧ್ಯತೆ ಇದೆ. ತುಷ್ಟೀಕರಣ ನೀತಿ ಅನುಸರಿಸುವುದನ್ನು ಕಾಂಗ್ರೆಸ್ ಮುಂದುವರಿಸಿದೆ. ಅದನ್ನು ಬಯಲಿಗೆ ಎಳೆಯುವುದು ಅವಶ್ಯಕ.

• ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣವು ಕರ್ನಾಟಕದಲ್ಲಿ ಬಿಜೆಪಿಯ ನಿರೀಕ್ಷೆಗಳ ಮೇಲೆ ಪರಿಣಾಮ ಬೀರುತ್ತದೆಯೇ?

ಈ ಪ್ರಕರಣವು ಬಿಜೆಪಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ಇದನ್ನು ಜೆಡಿಎಸ್ ನಿಭಾಯಿಸಬೇಕು.

• ಲೋಕಸಭಾ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಬಿಜೆಪಿಯ ಕೆಲವು ನಾಯಕರು 'ಸಂವಿಧಾನ ಬದಲಾವಣೆ' ಕುರಿತು ಹೇಳಿಕೆಗಳನ್ನು ನೀಡಿದ್ದಾರೆ. ಇದು ಪಕ್ಷದ ಚುನಾವಣಾ ಪ್ರಚಾರದ ಮೇಲೆ ಪರಿಣಾಮ ಬೀರಿದೆಯೇ?

ಸಂವಿಧಾನವನ್ನು ನಾವು ಏಕೆ ಬದಲಾಯಿಸಬೇಕು? ಭಾರತದ ಪ್ರಜಾಪ್ರಭುತ್ವವು ವಿಶ್ವದಲ್ಲೇ ಅತ್ಯುತ್ತಮವಾದದ್ದು. ಪ್ರತಿಪಕ್ಷಗಳು ಈ ವಿಷಯವನ್ನು ಮುಂದಿಟ್ಟುಕೊಂಡು ಜನರಲ್ಲಿ ಭಯ ಹುಟ್ಟಿಸಲು ಯತ್ನಿಸುತ್ತಿವೆ.

• ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಮೀಸಲಾತಿ ಕೊನೆಗೊಳ್ಳಲಿದೆ ಎಂದು ವಿರೋಧ ಪಕ್ಷಗಳ ಮುಖಂಡರು ಹೇಳುತ್ತಿದ್ದಾರಲ್ಲ?

ಮೀಸಲಾತಿಯನ್ನು ರದ್ದುಗೊಳಿಸುವ ಪ್ರಶ್ನೆಯೇ ಇಲ್ಲ. ಇದು ಪ್ರತಿಪಕ್ಷಗಳ ವೈಚಾರಿಕ ದಿವಾಳಿತನವನ್ನು ತೋರಿಸುತ್ತದೆ.

• ಬಿಜೆಪಿ ತನ್ನ ಕೇಂದ್ರ ನಾಯಕರನ್ನು ರಾಜ್ಯ ರಾಜಕಾರಣಕ್ಕೆ ಕಳುಹಿಸುತ್ತಿದೆ. ಅದೇ ರೀತಿ, ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ ಸಿಂಗ್ ಚೌಹಾಣ್, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್ ಮತ್ತಿತರರನ್ನು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಕರೆಸಿಕೊಳ್ಳಲು ಯೋಜಿಸಿದೆ. ಇದರ ಹಿಂದಿನ ಚಿಂತನೆ ಏನು?

ರಾಜ್ಯ ನಾಯಕತ್ವವು ಅಭಿವೃದ್ಧಿ ಹೊಂದಿದ ಸಂದರ್ಭದಲ್ಲಿ ಕೇಂದ್ರಕ್ಕೆ ಬರಬೇಕು. ಇಲ್ಲದಿದ್ದರೆ ಕೇಂದ್ರದಲ್ಲಿ ನಿರ್ವಾತ ಸೃಷ್ಟಿಯಾಗುತ್ತದೆ. ಹೊಸ ನಾಯಕತ್ವವು ವಿಕಸನಗೊಳ್ಳಬೇಕು. ಇದೊಂದು ನಿರಂತರ ಪ್ರಕ್ರಿಯೆ. ಯಾವುದೇ ರಾಜಕೀಯ ಪಕ್ಷ ಸದೃಢವಾಗಲು ಇಂತಹ ಪ್ರಕ್ರಿಯೆ ನಡೆಯಬೇಕು. ಇದರಿಂದ ಯಾರಿಗೂ ಅವಮಾನ ಆಗುತ್ತಿಲ್ಲ. ರಾಜ್ಯದ ನಾಯಕರು ರಾಷ್ಟ್ರ ನಾಯಕರಾದರೆ ತಪ್ಪೇನು? ಯಾವುದೇ ದೊಡ್ಡ ರಾಜಕೀಯ ಪಕ್ಷದಲ್ಲಿ ಇದು ನಿರಂತರ ಪ್ರಕ್ರಿಯೆ.

• ನಿಮ್ಮ ಪಕ್ಷವು ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿದೆಯಲ್ಲ?

ಒಂದು ವೇಳೆ ಮಿತ್ರ ಪಕ್ಷ ಏನಾದರೂ ತಪ್ಪು ಮಾಡಿದರೆ ಬಿಜೆಪಿ ಹೇಗೆ ಹೊಣೆಯಾಗುತ್ತದೆ? ಅವರದ್ದು ಪ್ರತ್ಯೇಕ ರಾಜಕೀಯ ಪಕ್ಷ. ಚುನಾವಣೆಯಲ್ಲಿ ಮತ ವಿಭಜನೆ (ಕಾಂಗ್ರೆಸ್ಸೇತರ ಮತಗಳು) ಕಡಿಮೆ ಮಾಡುವ ಉದ್ದೇಶದಿಂದ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಳ್ಳಲಾಗಿದೆ.

• ವಿರೋಧ ಪಕ್ಷಗಳ ನಾಯಕರಿಗೆ ಕಿರುಕುಳ ನೀಡಲು ಬಿಜೆಪಿಯು ಕೇಂದ್ರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಆರೋಪ ಇದೆಯಲ್ಲ?

ಇದೊಂದು ಆಧಾರರಹಿತ ಆರೋಪ. ತನಿಖಾ ಸಂಸ್ಥೆಗಳು ತಮ್ಮ ಕೆಲಸವನ್ನು ಮಾಡುತ್ತಿವೆ. ತಮಗೆ ಅನ್ಯಾಯವಾಗುತ್ತಿದೆ ಎಂದು ಯಾರಾದರೂ ಭಾವಿಸಿದರೆ ಅವರು ನ್ಯಾಯಾಲಯದ ಮೊರೆಹೋಗಬಹುದು. ಈ ವಿಷಯದಲ್ಲಿ ಸರ್ಕಾರವನ್ನು ಎಳೆದು ತರುತ್ತಿರುವುದು ಏಕೆ?

• ನೀವು ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಬಿಜೆಪಿ ಮೊದಲ ಬಾರಿಗೆ ಸರ್ಕಾರ ರಚಿಸಿತ್ತು. ಕರ್ನಾಟಕದಲ್ಲಿ ಭಿನ್ನಾಭಿಪ್ರಾಯಗಳನ್ನು ನಿಯಂತ್ರಿಸಲು ಬಿಜೆಪಿ ಏಕೆ ವಿಫಲವಾಗಿದೆ?

ರಾಜಕೀಯ ಪಕ್ಷಗಳು ಬೆಳೆಯುವ ಸಂದರ್ಭದಲ್ಲಿ ಇವೆಲ್ಲ ಸಂಭವಿಸುತ್ತವೆ. ಕೆಲವರು ಪಕ್ಷ ತೊರೆದಿದ್ದರೂ ಆಮೇಲೆ ಮರಳಿದ್ದಾರೆ.

• ಬಿ.ಎಸ್.ಯಡಿಯೂರಪ್ಪ ಅವರ ಕುಟುಂಬ ರಾಜಕಾರಣದ ವಿರುದ್ಧ ಕೆ.ಎಸ್. ಈಶ್ವರಪ್ಪ ಬಂಡಾಯವೆದ್ದು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಇದು ಸ್ವಜನ ಪಕ್ಷಪಾತ ಹಾಗೂ ಕುಟುಂಬ ರಾಜಕಾರಣದ ಬಗ್ಗೆ ಬಿಜೆಪಿಯ ನಿಲುವನ್ನು ದುರ್ಬಲಗೊಳಿಸುವುದಿಲ್ಲವೇ?

ಕಾಂಗ್ರೆಸ್ ಪಕ್ಷ ಹಾಗೂ ಸಮಾಜವಾದಿ ಪಕ್ಷದಲ್ಲಿರುವಂತೆ ಒಂದು ಕುಟುಂಬವು ಪಕ್ಷವನ್ನು ನಿಯಂತ್ರಿಸಬಾರದು. ನಮ್ಮ ಪಕ್ಷದ ಮೇಲೆ ಯಾವುದೇ ಕುಟುಂಬದ ಶಾಶ್ವತ ಹಿಡಿತ ಸಾಧ್ಯವಿಲ್ಲ. ಒಂದು ಕುಟುಂಬದ ಎರಡನೇ, ಮೂರನೇ, ನಾಲ್ಕನೇ ಸದಸ್ಯರು ಸಕ್ರಿಯರಾಗಿದ್ದರೆ, ಅವರು ತಮ್ಮ ಕಾರ್ಯದಲ್ಲಿ ಮುಂದುವರಿಯಬಹುದು. ಕರ್ನಾಟಕದಲ್ಲಿ ಬಿಜೆಪಿಯ ಬೆಳವಣಿಗೆಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಪಾತ್ರ ಮಹತ್ವದ್ದು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಉತ್ತಮ ಕೆಲಸ ಮಾಡುತ್ತಿದ್ದಾರೆ.

• ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಪರಾರಿಯಾಗಲು ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಇದು ನಿಜವೇ?

ಈ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಯಾವುದಾದರೂ ಪುರಾವೆ ನೀಡಲು ಸಿದ್ಧವಿದೆಯಾ? ನಮ್ಮ ಸರ್ಕಾರ ಈ ಕೆಲಸ ಮಾಡಿಲ್ಲ.

• ಉತ್ತರಪ್ರದೇಶದ ಕೈಸರ್‌ಗಂಜ್ ಕ್ಷೇತ್ರದಲ್ಲಿ ಹಾಲಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೆ ಪಕ್ಷ ಟಿಕೆಟ್ ನಿರಾಕರಿಸಿದೆ. ಇದಕ್ಕೆ ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕಾರಣವೇ?

ಬ್ರಿಜ್‌ಭೂಷಣ್ ಸಿಂಗ್ ದೀರ್ಘಕಾಲದಿಂದ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಈ ಸಲ ಅವರ ಪುತ್ರನಿಗೆ ಅವಕಾಶ ನೀಡಲಾಗಿದೆ. ಅದನ್ನು ಬೇರೆ ಯಾವುದೇ ದೃಷ್ಟಿಕೋನದಿಂದ ನೋಡಬಾರದು.

ಅಂಬಾನಿ,ಅದಾನಿ ಜತೆ ಸಖ್ಯ: ಮೋದಿ–ರಾಹುಲ್ ಜಟಾಪಟಿ

ಒಂದನೇ ಪುಟದಿಂದ...

'ಖಂಡಿತವಾಗಿಯೂ ಏನೋ ಅನುಮಾನಾಸ್ಪದವಾದದ್ದು ನಡೆದಿದೆ. ಐದು ವರ್ಷಗಳ ಕಾಲ ನೀವು ಅಂಬಾನಿ–ಅದಾನಿ ಅವರನ್ನು ನಿಂದಿಸಿದಿರಿ, ರಾತ್ರೋರಾತ್ರಿ ಸುಮ್ಮನಾದಿರಿ. ಅದರ ಅರ್ಥ ನೀವು 'ಚೋರ್ ಕಿ ಮಾಲ್' (ಕಳ್ಳಮಾಲು) ಅನ್ನು ಪಡೆದಿದ್ದೀರಿ. ಕಪ್ಪುಹಣದ ಎಷ್ಟು ಮೂಟೆಗಳನ್ನು ನೀವು ಪಡೆದಿದ್ದೀರಿ ಎಂದು ನೀವು ದೇಶಕ್ಕೆ ಉತ್ತರಿಸಬೇಕಿದೆ' ಎಂದು ಕೆಣಕಿದರು.

'ಮೂರನೇ ಹಂತದ ಚುನಾವಣೆಯು ಕಾಂಗ್ರೆಸ್ ಮತ್ತು 'ಇಂಡಿ' ಕೂಟದ ಮೂರನೇ 'ಫ್ಯೂಸ್' ಅನ್ನು ಕಿತ್ತು ಎಸೆದಿದೆ' ಎಂದು ಲೇವಡಿ ಮಾಡಿದರು.

'ಕುಟುಂಬ ಮೊದಲು ಬಿಆರ್‌ಎಸ್ ಮಂತ್ರ': ಕಾಂಗ್ರೆಸ್ ಮತ್ತು ಕೆ.ಚಂದ್ರಶೇಖರ್ ರಾವ್ ಅವರ ಬಿಆರ್‌ಎಸ್ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ಮೋದಿ, 'ದೇಶ ಮೊದಲು' ಎನ್ನುವುದು ಬಿಜೆಪಿ ನೀತಿಯಾದರೆ, ಅವುಗಳದ್ದು 'ಕುಟುಂಬ ಮೊದಲು' ಎನ್ನುವ ತತ್ವ. ಇಬ್ಬರ ಪಕ್ಷಗಳಲ್ಲೂ ಭ್ರಷ್ಟಾಚಾರ ಎನ್ನುವುದು ಸಾಮಾನ್ಯ ಅಂಶವಾಗಿದೆ' ಎಂದು ಟೀಕಿಸಿದರು.

ತೆಲಂಗಾಣದ ವಾರಂಗಲ್‌ನಲ್ಲಿ ಲೋಕಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಗದೆಯನ್ನು ಎತ್ತಿ ಹಿಡಿದರು
–ಪಿಟಿಐ ಚಿತ್ರ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಬಗ್ಗೆ ಪ್ರತಿಕ್ರಿಯಿಸಿದ ಮೋದಿ, 'ಡಬಲ್ ಆರ್' (ಆರ್‌ಆರ್) ತೆರಿಗೆಯ ಬಗ್ಗೆ ದೆಹಲಿವರೆಗೂ ಮಾತುಗಳು ಕೇಳಿಬರುತ್ತಿವೆ ಎಂದು ವ್ಯಂಗ್ಯವಾಗಿ ನುಡಿದರು. ಉಳಿದ ನಾಲ್ಕು ಹಂತಗಳ ಚುನಾವಣೆಯಲ್ಲಿ ಬಿಜೆಪಿ ಮತ್ತು ಎನ್‌ಡಿಎ ಗೆಲುವಿನೆಡೆಗೆ ಮುನ್ನಡೆಯಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ರಾಹುಲ್ ಪ್ರತಿದಿನವೂ ಅವರ ಹೆಸರು ಪ್ರಸ್ತಾಪಿಸುತ್ತಿದ್ದಾರೆ'

ರಾಯ್‌ಬರೇಲಿ (ಪಿಟಿಐ): ಬಿಜೆಪಿಯು ಉದ್ಯಮಿಗಳೊಂದಿಗೆ ನಂಟು ಹೊಂದಿದ್ದು, ಅವರ ₹16 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಬುಧವಾರ ಆರೋಪಿಸಿದರು. ರಾಹುಲ್ ಗಾಂಧಿ ಕುರಿತು ಬಿಜೆಪಿಯು ಸುಳ್ಳುಗಳನ್ನು ಹಬ್ಬಿಸುತ್ತಿದೆ ಎಂದು ಅವರು ಹೇಳಿದರು.

ಮೋದಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕಾ, 'ಇಂದು ಅವರು (ಮೋದಿ) ರಾಹುಲ್ ಗಾಂಧಿ ಅಂಬಾನಿ–ಅದಾನಿ ಹೆಸರು ಪ್ರಸ್ತಾಪಿಸುತ್ತಿಲ್ಲ ಎಂದಿದ್ದಾರೆ. ರಾಹುಲ್ ಪ್ರತಿದಿನವೂ ಅವರ ಹೆಸರು ಪ್ರಸ್ತಾಪಿಸುತ್ತಿದ್ದಾರೆ. ಅವರ ಸತ್ಯ ಏನು ಎನ್ನುವುದನ್ನು ಅವರು ನಿಮ್ಮ ಮುಂದೆ ಪ್ರತಿದಿನವೂ ಇಡುತ್ತಿದ್ದಾರೆ' ಎಂದು ನುಡಿದರು.

ರಾಯ್‌ಬರೇಲಿಯಲ್ಲಿ ರಾಹುಲ್ ಪರ ಪ್ರಚಾರ ಮಾಡಿದ ಅವರು, 'ಬಿಜೆಪಿಯು ಉದ್ಯಮಿಗಳೊಂದಿಗೆ ನಂಟು ಹೊಂದಿದೆ ಎಂದು ನಾವು ಪ್ರತಿದಿನ ಹೇಳುತ್ತಿದ್ದೇವೆ. ಅತಿ ಶ್ರೀಮಂತರ ₹16 ಲಕ್ಷ ಕೋಟಿ ಸಾಲವನ್ನು ಮೋದಿ ಮನ್ನಾ ಮಾಡಿದರು. ಅದು ಯಾರ ಹಣ? ಅದು ಮೋದಿಜಿ ಅವರ ಹಣವಲ್ಲ, ಅದು ದೇಶದ ಹಣ' ಎಂದು ತಿಳಿಸಿದರು.

'ಬಿಜೆಪಿ ನಾಯಕರು ಹಣದುಬ್ಬರ, ನಿರುದ್ಯೋಗದ ಬಗ್ಗೆ ಮಾತನಾಡುವುದಿಲ್ಲ. ಅವರು ಇಲ್ಲಿಗೆ ಬರುತ್ತಾರೆ, ಧರ್ಮ, ಜಾತಿ, ದೇವಸ್ಥಾನ, ಮಸೀದಿಗಳ ಬಗ್ಗೆ ಮಾತನಾಡುತ್ತಾರೆ. ಆದರೆ, ನಿಮ್ಮ ನಿಜವಾದ ಸಮಸ್ಯೆಗಳ ಬಗ್ಗೆ ಮಾತನಾಡುವುದಿಲ್ಲ' ಎಂದು ಹೇಳಿದರು.

'ರಾಹುಲ್ ಅವರನ್ನು ಆಯ್ಕೆ ಮಾಡಿದರೆ, ರಾಯ್‌ಬರೇಲಿಗೆ ಇಬ್ಬರು ಸಂಸದರು ಸಿಗುತ್ತಾರೆ. ಒಬ್ಬರು ರಾಹುಲ್, ಇನ್ನೊಬ್ಬರು ನಾನು. ನಾವು ನಿಮ್ಮ ಸಮಸ್ಯೆಗಳನ್ನು ಪರಿಹರಿಸಲು ಸದಾ ನಿಮ್ಮೊಂದಿಗಿರುತ್ತೇವೆ' ಎಂದು ಭರವಸೆ ನೀಡಿದರು.

ರಾಹುಲ್ ಬಗ್ಗೆ ಮಾತನಾಡಿದ ಪ್ರಿಯಾಂಕಾ, 'ಅವರು ಎಷ್ಟು ಕಷ್ಟಪಟ್ಟರು ಎನ್ನುವುದು ನಿಮಗೆ ಗೊತ್ತಿದೆ. ಅವರ ಬಗ್ಗೆ ಇಡೀ ಬಿಜೆಪಿ ವ್ಯವಸ್ಥೆ ಸಾಧ್ಯವಾದ ರೀತಿಯಲ್ಲೆಲ್ಲ ಸುಳ್ಳುಗಳನ್ನು ಹಬ್ಬಿಸುತ್ತಿದೆ. ಅವರ ವಿರುದ್ಧ ಎಷ್ಟು ದಾಳಿಗಳನ್ನು ಮಾಡಿದರು? ಅವರನ್ನು ಸಂಸತ್ತಿನಿಂದ ಉಚ್ಚಾಟಿಸಲಾಯಿತು. ಅವರ ಮನೆಯಿಂದ ಅವರನ್ನು ಹೊರಗೆ ತಳ್ಳಲಾಯಿತು. ಆದರೂ ರಾಹುಲ್‌ಜಿ ಮಣಿಯಲಿಲ್ಲ. ಅದು ಅವರ ಗುಣ. ಅನ್ಯಾಯ ನಡೆಯುತ್ತಿರುವುದನ್ನು ನೋಡಿದರೆ, ನ್ಯಾಯಕ್ಕಾಗಿ ಹೋರಾಡುತ್ತಾರೆ ಮತ್ತು ಅದರಿಂದ ಹಿಂದೆ ಸರಿಯುವುದಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ನಾಯಕರು ಮೂರನೇ ಹಂತದ ನಂತರ ಗೆಲುವಿನ ಸ್ಥಾನಗಳಿಗಾಗಿ ಭೂತಗನ್ನಡಿ ಹಾಕಿ ಹುಡುಕುತ್ತಿದ್ದಾರೆ. ನಾಲ್ಕನೇ ಹಂತದಲ್ಲಿ ಅವರು 'ಸೂಕ್ಷ್ಮದರ್ಶಕ'ದ (ಮೈಕ್ರೋಸ್ಕೋಪ್) ಮೂಲಕ ಹುಡುಕಬೇಕು
ನರೇಂದ್ರ ಮೋದಿ, ಪ್ರಧಾನಿ

ಪ್ರಧಾನಿ ಮೋದಿ ಅವರ ಕುರ್ಚಿ ಅಲುಗಾಡುತ್ತಿದ್ದು, ಇಂದು ಅವರು ತಮ್ಮ ಸ್ನೇಹಿತರ ವಿರುದ್ಧವೇ ದಾಳಿ ಮಾಡುತ್ತಿದ್ದಾರೆ ಮತ್ತು ಇದು ಚುನಾವಣಾ ಫಲಿತಾಂಶದ ನಿಜವಾದ ದಿಕ್ಕನ್ನು ತೋರಿಸುತ್ತಿದೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಚುನಾವಣೆಯ ಉಬ್ಬರ–ಇಳಿತ ಎಷ್ಟು 'ಹಿಂಸಾತ್ಮಕ'ವಾಗಿ ಬದಲಾಗಿದೆ ಎಂದರೆ, 'ಹಮ್ ದೋ ಹಮಾರೆ ದೋ'; 'ಪಪ್ಪ'ನೇ ತನ್ನ ಮಕ್ಕಳ ವಿರುದ್ಧ ತಿರುಗಿಬಿದ್ದಿದ್ದಾನೆ
ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ

ಮೂರು ಹಂತಗಳ ಚುನಾವಣೆಯ ನಂತರ ಮೋದಿ ಕ್ಷೋಭೆಗೊಂಡಿದ್ದಾರೆ. ತಮ್ಮ 'ಸ್ನೇಹಿತ'ರಿಂದ ₹8,200 ಕೋಟಿ ಸಂಗ್ರಹಿಸಿದ ಪ್ರಧಾನಿ ಮೋದಿ, ಚುನಾವಣೆಯಲ್ಲಿ ಸೋಲುತ್ತಿರುವ ಗಳಿಗೆಯಲ್ಲಿ ಅವರ ವಿರುದ್ಧ ತಿರುಗಿಬಿದ್ದಿದ್ದಾರೆ
ಪವನ್ ಖೇರಾ, ಕಾಂಗ್ರೆಸ್ ಮುಖಂಡ

ಇಬ್ಬರು ಉದ್ಯಮಿಗಳ ವಿರುದ್ಧ ಪ್ರಧಾನಿ ಭ್ರಷ್ಟಾಚಾರದ ಗಂಭೀರ ಆರೋಪ ಮಾಡುತ್ತಿದ್ದಾರೆ. ಸಿಬಿಐ, ಇ.ಡಿ, ಆದಾಯ ತೆರಿಗೆ ಅಧಿಕಾರಿಗಳು ಎಂದು ಅವರ ಮೇಲೆ ದಾಳಿ ನಡೆಸಲಿದ್ದಾರೆ?
ಸುಪ್ರಿಯಾ ಶ್ರೀನೇತ್, ಕಾಂಗ್ರೆಸ್ ನಾಯಕಿ

ರಾಯ್‌ಬರೇಲಿಯಲ್ಲಿ ಸೋತರೆ ರಾಹುಲ್ ಇಟಲಿಗೆ: ಅಮಿತ್ ಶಾ



ಲಖೀಂಪುರ ಖೀರಿ (ಪಿಟಿಐ): 'ರಾಹುಲ್ ಗಾಂಧಿಯವರು ಪಾಕಿಸ್ತಾನದ ಕಾರ್ಯಸೂಚಿಯನ್ನು ಬೆಂಬಲಿಸುತ್ತಿದ್ದಾರೆ. ರಾಯ್‌ಬರೇಲಿಯಲ್ಲಿ ಸೋತ ಬಳಿಕ ಅವರು ಇಟಲಿಯಲ್ಲಿ ವಾಸ ಮಾಡಲಿದ್ದಾರೆ, ಅವರಿಗೆ ಉಳಿದಿರುವುದು ಅದೊಂದೇ ಸ್ಥಳ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಾಗ್ದಾಳಿ ನಡೆಸಿದರು.

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅಮಿತ್ ಶಾ ಅವರು 'ತಮ್ಮ ಮತಬ್ಯಾಂಕ್ ಬಗ್ಗೆ ಭಯಗೊಂಡಿದ್ದ ವಿರೋಧ ಪಕ್ಷಗಳ ನಾಯಕರು ರಾಮಮಂದಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗಿಯಾಗಿಲ್ಲ. ಒಂದು ವೇಳೆ ಅವರು ಅಧಿಕಾರಕ್ಕೆ ಬಂದರೆ ರಾಮಮಂದಿರಕ್ಕೆ ಬೀಗ ಹಾಕಿ, ಬಾಬ್ರಿ ಮಸೀದಿಯನ್ನು ತೆರೆಯುತ್ತಾರೆ' ಎಂದರು.

'ನಾವು ಕೇವಲ ರಾಮಮಂದಿರ ನಿರ್ಮಿಸಿಲ್ಲ, ಔರಂಗಜೇಬನಿಂದ ನಾಶಗೊಂಡಿದ್ದ ಕಾಶಿಯಲ್ಲಿ ವಿಶ್ವನಾಥ ಕಾರಿಡಾರ್ ಅನ್ನು ಮೋದಿಯವರು ನಿರ್ಮಿಸಿದ್ದಾರೆ. ಶ್ರೀ ರಾಮನ ಕಾರ್ಯದಿಂದ ದೂರ ಉಳಿದವರನ್ನು ಉತ್ತರಪ್ರದೇಶದ ಜನ ಬೆಂಬಲಿಸುವುದಿಲ್ಲ' ಎಂದರು.

'ವಿರೋಧ ಪಕ್ಷಗಳು ಚುನಾವಣೆಯಲ್ಲಿ ಗೆದ್ದರೆ, ಪಾಕಿಸ್ತಾನದಲ್ಲಿ ಪಟಾಕಿ ಸಿಡಿಯಲಿದೆ' ಎಂದರು.

'ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದರೆ, ಮುಸ್ಲಿಮರಿಗೆ ಶೇಕಡ 5ರಷ್ಟು ಮೀಸಲಾತಿ ನೀಡುತ್ತದೆ. ಒಬಿಸಿ ಮೀಸಲಾತಿಯಲ್ಲಿ ಕಡಿತವಾಗುತ್ತದೆ. ಆಂಧ್ರಪ್ರದೇಶದಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಲಾಗಿದೆ, ಇದಕ್ಕಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವನ್ನು ಕಡಿಮೆಗೊಳಿಸಲಾಗಿದೆ. ಬಿಜೆಪಿಗೆ ಬಹುಮತ ಬಂದರೆ ಮುಸ್ಲಿಮರಿಗೆ ನೀಡಿರುವ ಅಸಾಂವಿಧಾನಿಕ ಮೀಸಲಾತಿಯನ್ನು ರದ್ದುಗೊಳಿಸಿ, ಹಿಂದುಳಿದ ವರ್ಗಗಳಿಗೆ ನೀಡುತ್ತೇವೆ' ಎಂದರು.

'ಚುನಾವಣೆ ನ್ಯಾಯಸಮ್ಮತವಾಗಿದ್ದರೆ ಬಿಜೆಪಿ ಅಧಿಕಾರ ಉಳಿಯಲ್ಲ'

ಹರ್ದೋಯ್ (ಉತ್ತರ ಪ್ರದೇಶ): ಲೋಕಸಭೆ ಚುನಾವಣೆಯು ಮುಕ್ತವಾಗಿ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ನಡೆದರೆ ಬಿಜೆಪಿಗೆ ಕೇಂದ್ರದಲ್ಲಿ ಅಧಿಕಾರ ಉಳಿಸಿಕೊಳ್ಳುವುದು ಕಷ್ಟವಾಗಲಿದೆ ಎಂದು ಬಿಎಸ್‌ಪಿ (ಬಹುಜನ ಸಮಾಜವಾದಿ ಪಕ್ಷ) ಅಧ್ಯಕ್ಷೆ ಮಾಯಾವತಿ ಅವರು ಬುಧವಾರ ಆರೋಪಿಸಿದರು.

ಉತ್ತರ ಪ್ರದೇಶದ ಹರ್ದೋಯ್‌ನಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಮಾಯಾವತಿ, 'ಈ ಬಾರಿ ಬಿಜೆಪಿಯ ನಾಟಕ ಮತ್ತು ಮಾತುಗಳು ಕೆಲಸ ಮಾಡುತ್ತಿಲ್ಲ. ಏಕೆಂದರೆ ಬಿಜೆಪಿಯು ತಾನು ಜನರಿಗೆ ನೀಡಿದ ಭರವಸೆಗಳಲ್ಲಿ ನಾಲ್ಕನೇ ಒಂದು ಭಾಗದಷ್ಟೂ ಈಡೇರಿಸಿಲ್ಲ ಎಂದು ಜನರು ಅರ್ಥ ಮಾಡಿಕೊಂಡಿದ್ದಾರೆ. ಜನರು ಬಿಜೆಪಿಯ ಪೊಳ್ಳು ಭರವಸೆಗಳನ್ನು ನೋಡಿದ್ದಾರೆ' ಎಂದು ಕಿಡಿಕಾರಿದರು.

ಪ್ರಚಾರ

ಸಿಪಿಎಂ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಸಲೀಂ ಅವರು ಪಶ್ಚಿಮ ಬಂಗಾಳದ ಕೃಷ್ಣನಗರ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯ ಪರವಾಗಿ ಪ್ರಚಾರ ನಡೆಸಿದರು
–ಪಿಟಿಐ ಚಿತ್ರ

5ನೇ ಹಂತ: 695 ಮಂದಿ ಕಣದಲ್ಲಿ

ನವದೆಹಲಿ (ಪಿಟಿಐ): 5ನೇ ಹಂತದಲ್ಲಿ 8 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 49 ಲೋಕಸಭಾ ಕ್ಷೇತ್ರಗಳಿಗೆ ಮೇ 20ರಂದು ಚುನಾವಣೆ ನಡೆಯಲಿದ್ದು, 695 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ ಎಂದು ಕೇಂದ್ರ ಚುನಾವಣಾ ಆಯೋಗ ಬುಧವಾರ ಮಾಹಿತಿ ನೀಡಿದೆ.

ಒಟ್ಟು 1,586 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 749 ಅಂಗೀಕಾರವಾಗಿವೆ ಎಂದು ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ 512 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಈ ಪೈಕಿ 301 ಅಭ್ಯರ್ಥಿಗಳ ನಾಮಪತ್ರಗಳು ಅಂಗೀಕಾರವಾಗಿವೆ. ಉತ್ತರ ಪ್ರದೇಶದಲ್ಲಿ 466 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಈ ಪೈಕಿ 147 ನಾಮಪತ್ರಗಳು ಅಂಗೀಕಾರವಾಗಿವೆ ಎಂದು ತಿಳಿಸಿದೆ.

ಅಖಿಲೇಶ್ ಭೇಟಿ ನೀಡಿದ ದೇಗುಲ ಶುದ್ಧೀಕರಿಸಿದ ಬಿಜೆಪಿ ಕಾರ್ಯಕರ್ತರು

'ಬಿಜೆಪಿಯನ್ನು ಜನರು ತೊಳೆಯಲಿದ್ದಾರೆ'

ಕನೌಜ್ (ಪಿಟಿಐ): ಚುನಾವಣಾ ಪ್ರಚಾರದ ವೇಳೆ ಭೇಟಿ ನೀಡಿದ್ದ ದೇಗುಲವನ್ನು ಬಿಜೆಪಿ ಕಾರ್ಯಕರ್ತರು ತೊಳೆದಿರುವುದಕ್ಕೆ ಪ್ರತಿಕ್ರಿಯಿಸಿರುವ ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್, ಜನರು ಮತದಾನ ಮಾಡುವ ಮೂಲಕ ಮತ್ತೆಂದೂ ಅಧಿಕಾರಕ್ಕೆ ಬರದಂತೆ ಬಿಜೆಪಿಯನ್ನೇ ತೊಳೆಯಲಿದ್ದಾರೆ ಎಂದು ಹೇಳಿದರು.

ಅಖಿಲೇಶ್ ಅವರು ಸಿದ್ಧ ಬಾಬಾ ಗೌರಿಶಂಕರ ಮಹಾದೇವ ದೇವಾಲಯಕ್ಕೆ ಈಚೆಗೆ ಭೇಟಿ ನೀಡಿದ್ದರು. ಬಳಿಕ ಬಿಜೆಪಿ ಕಾರ್ಯಕರ್ತರು ಗಂಗಾ ಜಲ ಬಳಸಿ ದೇಗುಲವನ್ನು ಸ್ವಚ್ಛಗೊಳಿಸಿದ್ದರು.

ಹಿಂದುಳಿದವರು, ದಲಿತರು ಹಾಗೂ ಆದಿವಾಸಿಗಳು (ಪಿಡಿಎ) ಈ ಬಾರಿ ಬಿಜೆಪಿಯನ್ನು ತೊಳೆಯಲಿದ್ದಾರೆ. ಚುನಾವಣೆಯಲ್ಲಿ ಸೋಲು ಸನ್ನಿಹಿತವಾಗಿರುವುದಕ್ಕೆ ಬಿಜೆಪಿಯವರು ಇಂತಹ ಸಣ್ಣತನ ಪ್ರದರ್ಶಿಸುತ್ತಿದ್ದಾರೆ ಎಂದು ಅಖಿಲೇಶ್ ತಿಳಿಸಿದರು.

ಅಖಿಲೇಶ್ ಯಾದವ್

ಅಖಿಲೇಶ್ ಅವರು ಭೇಟಿ ನೀಡಿದ್ದ ವೇಳೆ ಆಚಾರ್ಯ ಪಂಡಿತ್ ಕರುಣಾ ಶಂಕರ್ ಅವರು ಪೂಜೆ ನೆರವೇರಿಸಿದರು. ದೇವಾಲಯದ ಅರ್ಚಕ ಮಥುರಾ ಪ್ರಸಾದ್ ಅವರು ಮಂತ್ರ ಪಠಿಸಿದ್ದರು. ಅಖಿಲೇಶ್ ಅವರು ತೆರಳಿದ ಬಳಿಕ ಬಿಜೆಪಿ ನಗರ ಘಟಕ ಅಧ್ಯಕ್ಷ ಶಿವೇಂದ್ರ ಕುಮಾರ್ ಮತ್ತು ಕಾರ್ಯಕರ್ತರು ದೇವಾಲಯಕ್ಕೆ ಘೋಷವಾಕ್ಯ ಕೂಗುತ್ತಾ ಬಂದು ಸ್ವಚ್ಛಗೊಳಿಸಿದರು ಎಂದು ಸಮಾಜವಾದಿ ಪಕ್ಷದ ಕಾರ್ಯಕರ್ತರೊಬ್ಬರು ತಿಳಿಸಿದರು.

'ಅಖಿಲೇಶ್ ಅವರು ಕೆಲವು ಮುಸ್ಲಿಂ ಯುವಕರು ಮತ್ತು ಸನಾತನಿಗಳಲ್ಲದವರ ಜೊತೆಗೆ ದೇಗುಲ ಪ್ರವೇಶಿಸಿದ್ದರು. ಅಲ್ಲದೆ ಪಾದರಕ್ಷೆಗಳನ್ನು ಧರಿಸಿಯೇ ದೇವಾಲಯದ ಒಳಗೆ ಬಂದಿದ್ದರು. ಇದರಿಂದ ದೇಗುಲ ಅಶುದ್ಧವಾಗಿತ್ತು. ಈ ಕಾರಣಕ್ಕೆ ಸ್ವಚ್ಛಗೊಳಿಸಿದ್ದೇವೆ' ಎಂದು ಶಿವೇಂದ್ರ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

'ದೇವಾಲಯವನ್ನು ಸ್ವಚ್ಛಗೊಳಿಸಿರುವುದಲ್ಲಿ ಸಮಿತಿಯ ಪಾತ್ರವಿಲ್ಲ' ಎಂದು ದೇವಾಲಯ ಸಮಿತಿಯ ಅಧ್ಯಕ್ಷ ರಾಜೇಶ್ ಶ್ರೀವಾಸ್ತವ ಹೇಳಿದರು.

ಚುಟುಕು

ಪ್ರಧಾನಿಯ ಮಾದಿಗ ಒಳಮೀಸಲಾತಿ ಭರವಸೆ ಸುಳ್ಳೇ: ಕಾಂಗ್ರೆಸ್ ಪ್ರಶ್ನೆ

ನವದೆಹಲಿ (ಪಿಟಿಐ): ಮಾದಿಗ ಸಮುದಾಯಕ್ಕೆ ಒಳಮೀಸಲಾತಿಯ ಭರವಸೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಜಾತಿ ಸಮೀಕ್ಷೆಯ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಲಿ ಎಂದು ಕಾಂಗ್ರೆಸ್ ಬುಧವಾರ ಆಗ್ರಹಿಸಿದೆ.

ಪ್ರಧಾನಿಯ ಇತರ 'ಜುಮ್ಲಾ'ಗಳಂತೆ ಈ ಭರವಸೆಯೂ ಒಂದು ಸುಳ್ಳೇ ಎಂದು ಪಕ್ಷ ಪ್ರಶ್ನಿಸಿದೆ.

ತೆಲಂಗಾಣದಲ್ಲಿ ಮೋದಿ ಚುನಾವಣಾ ಪ್ರಚಾರ ಕೈಗೊಂಡಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಪ್ರಧಾನಿ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

'ತೆಲಂಗಾಣದಲ್ಲಿರುವ ಮೋದಿ ಅವರಿಗೆ ಇಂದಿನ ಪ್ರಶ್ನೆಗಳು: ಕಾಜೀಪೇಟೆಯಲ್ಲಿ ರೈಲು ಕೋಚ್ ಕಾರ್ಖಾನೆ ಎಲ್ಲಿ? ಬಯ್ಯಾರಾಂ ಉಕ್ಕಿನ ಘಟಕ ಮತ್ತು ಐಟಿಐಆರ್ ಸಾಕಾರಗೊಳಿಸುವಲ್ಲಿ ಮೋದಿ ಅವರು ವಿಫಲವಾಗಿದ್ದೇಕೆ? ಜಾತಿ ಸಮೀಕ್ಷೆ ನಡೆಸದೇ ಮಾದಿಗರಿಗೆ ಒಳಮೀಸಲಾತಿ ನೀಡುತ್ತೇವೆ ಎನ್ನುವುದು ಒಂದು 'ಜುಮ್ಲಾ' ಹೌದೆ?' ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ. 'ಕಾಂಗ್ರೆಸ್ 'ನ್ಯಾಯ ಪತ್ರ'ವು ರಾಷ್ಟ್ರೀಯ ಮಟ್ಟದಲ್ಲಿ ಜಾತಿ ಸಮೀಕ್ಷೆ ನಡೆಸಲು ಬದ್ಧವಾಗಿದ್ದು, ತೆಲಂಗಾಣದ ಕಾಂಗ್ರೆಸ್ ಸರ್ಕಾರವು ಈಗಾಗಲೇ ರಾಜ್ಯ ಮಟ್ಟದ ಸಮೀಕ್ಷೆಗೆ ಸಿದ್ಧತೆ ಆರಂಭಿಸಿದೆ' ಎಂದು ತಿಳಿಸಿದ್ದಾರೆ.

ಪ್ರಧಾನಿಗೆ ಆಂಧ್ರಪ್ರದೇಶಕ್ಕೆ ಬರುವ ಅರ್ಹತೆಯಿಲ್ಲ: ಶರ್ಮಿಳಾ

ಕಡಪ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 10 ವರ್ಷಗಳಿಂದ ಆಂಧ್ರಪ್ರದೇಶಕ್ಕೆ ಮೋಸ ಮಾಡಿರುವುದರಿಂದ ರಾಜ್ಯಕ್ಕೆ ಬರಲು ಅವರಿಗೆ ಅರ್ಹತೆ ಇಲ್ಲ ಎಂದು ಆಂಧ್ರಪ್ರದೇಶದ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಬುಧವಾರ ಹೇಳಿದ್ದಾರೆ.

'ಆಂಧ್ರಪ್ರದೇಶದಲ್ಲಿ ಲೋಕಸಭಾ ಚುನಾವಣೆ ಮತ್ತು ವಿಧಾನಸಭಾ ಚುನಾವಣೆ ಒಟ್ಟಿಗೆ ನಡೆಯುತ್ತಿರುವುದರಿಂದ ಪ್ರಧಾನಿ ಆಂಧ್ರದ ಬಗ್ಗೆ 'ಮೊಸಳೆ ಕಣ್ಣೀರು' ಸುರಿಸುತ್ತಿದ್ದಾರೆ' ಎಂದು ಟೀಕಿಸಿದ ಅವರು, 'ನೀವು ಮೊದಲು ರಾಜ್ಯದ ಜನರ ಕ್ಷಮೆ ಕೇಳಿ' ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ರೇಡಿಯೊ ಪ್ರದರ್ಶಿಸಿದ ಅವರು, 'ರಾಜ್ಯದ ಜನರ 'ಮನ್ ಕಿ ಬಾತ್' ಕೇಳಿಸಿಕೊಳ್ಳಲು ನಾನು ಇದನ್ನು ಕೊಡುಗೆಯನ್ನಾಗಿ ನೀಡುತ್ತಿದ್ದೇನೆ' ಎಂದು ಹೇಳಿದರು.

ಎಂಥಾ ಮಾತು!

ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆಯಾದ ಕೂಡಲೇ 'ಇಂಡಿಯಾ' ಒಕ್ಕೂಟವು ನಾಶವಾಗಲಿದೆ. ಗೋವಾದಲ್ಲಿ ಇಂಡಿಯಾ ಒಕ್ಕೂಟದ ಜೊತೆಗಿರುವ ಕೆಲವು ಪ್ರಾದೇಶಿಕ ಪಕ್ಷಗಳು ಫಲಿತಾಂಶ ಬಂದ ಬಳಿಕ ಕಾಂಗ್ರೆಸ್ ಜೊತೆಗೆ ವಿಲೀನವಾಗಬಹುದು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜೈಲಿನಲ್ಲಿರುವುದರಿಂದ ಎಎಪಿಗೆ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಲು ಸಾಧ್ಯವಾಗದು
ಪ್ರಮೋದ್ ಸಾವಂತ್, ಗೋವಾ ಮುಖ್ಯಮಂತ್ರಿ

ಪ್ರಧಾನಿ ನರೇಂದ್ರ ಮೋದಿ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ದ್ವೇಷ ಹರಡುತ್ತಿದ್ದಾರೆ. ಇದು ಭಾರತದ ಪ್ರಧಾನಿಗೆ ಯೋಗ್ಯವಾದ ಕೆಲಸವಲ್ಲ. ದೇಶದಿಂದ ಹೊರಗೆ ಹೋದಾಗ ಅವರು ಹಿಂದೂಗಳು, ಸಿಖ್ಖರು, ಮುಸ್ಲಿಮರು, ಬೌದ್ಧರು ಎಲ್ಲರ ಪ್ರಧಾನ ಮಂತ್ರಿ. ಆದರೆ, ಇಲ್ಲಿ ಮತ ಯಾಚನೆ ಮಾಡುವಾಗ ಅವರು ನಮ್ಮನ್ನು ವಿಭಜಿಸಲು ಯತ್ನಿಸುತ್ತಿದ್ದಾರೆ. ಇದು ಗಾಂಧಿಯವರ ಅಥವಾ ನೆಹರೂ ಅವರ ಭಾರತವಲ್ಲ. ಇದು ಮೋದಿಯ ಭಾರತ. ಇಲ್ಲಿ ಮುಸ್ಲಿಮರು, ಹಿಂದೂಗಳು, ಸಿಖ್ಖರನ್ನು ಪ್ರತ್ಯೇಕ ಎಂದು ಪರಿಗಣಿಸಲಾಗುತ್ತದೆ. ನಾವು ಇದನ್ನು ಒಪ್ಪಿಕೊಳ್ಳುವುದಿಲ್ಲ
ಫಾರೂಕ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ

ಕ್ಷೇತ್ರ ಮಹಾತ್ಮೆ

ಪಂಜಾಬ್‌ನ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಪಟಿಯಾಲ ಲೋಕಸಭಾ ಕ್ಷೇತ್ರದಲ್ಲಿ ಕಲಿಗಳ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ. ಕಳೆದ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಇಲ್ಲಿ ಗೆದ್ದಿದ್ದ ಪರ್ನೀತ್ ಕೌರ್ ಅವರನ್ನು ಬಿಜೆಪಿಯು ಕಣಕ್ಕಿಳಿಸಿದರೆ, ಕಾಂಗ್ರೆಸ್ ಪಕ್ಷವು ಧರ್ಮವೀರ ಗಾಂಧಿ ಅವರನ್ನು ಅಖಾಡಕ್ಕಿಳಿಸಿದೆ. ಇವರಿಬ್ಬರಿಗೆ ಪೈಪೋಟಿ ನೀಡಲು ಎಎಪಿಯು ಬಲ್‌ಬೀರ್ ಸಿಂಗ್ ಅವರನ್ನು ಸ್ಪರ್ಧಿಯಾಗಿಸಿದೆ. ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಕೂಡ ನರಿಂದರ್ ಕುಮಾರ್ ಶರ್ಮಾ ಅವರನ್ನು ಅಭ್ಯರ್ಥಿಯಾಗಿಸಿದೆ.

2019ರ ಚುನಾವಣೆಯಲ್ಲಿ ಪರ್ನೀತ್ ಕೌರ್ ಅವರು, 1,62,718 ಮತಗಳ ಅಂತರದಿಂದ ಎಸ್‌ಎಡಿಯ ಸುರ್ಜಿತ್ ಸಿಂಗ್ ರಖ್ರಾ ಅವರನ್ನು ಪರಾಭವಗೊಳಿಸಿದ್ದರು. ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ಪತ್ನಿ ಪರ್ನೀತ್ ಕೌರ್ ಅವರು ಪಟಿಯಾಲ ರಾಜಮನೆತನದ ಸದಸ್ಯೆಯೂ ಹೌದು. ಸ್ಥಳೀಯವಾಗಿಯೂ ಅವರು ಪ್ರಭಾವಿ ನಾಯಕಿಯಾಗಿದ್ದಾರೆ. ಎಂಎಸ್‌ಪಿಗೆ ಕಾನೂನು ಖಾತರಿ ನೀಡಬೇಕೆಂದು ಆಗ್ರಹಿಸಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರ ಕೆಂಗಣ್ಣಿಗೆ ಗುರಿಯಾಗಿರುವ ಪರ್ನೀತ್ ಅವರು ಚುನಾವಣಾ ಪ್ರಚಾರದ ವೇಳೆ ರೈತರ ವಿರೋಧವನ್ನು ಎದುರಿಸುತ್ತಿದ್ದಾರೆ. ಧರ್ಮವೀರ ಗಾಂಧಿ ಅವರು 2014ರಲ್ಲಿ ಈ ಕ್ಷೇತ್ರದಿಂದ ಎಎಪಿಯಿಂದ ಸ್ಪರ್ಧಿಸಿ ಗೆದ್ದಿದ್ದರು. 2016ರಲ್ಲಿ ಅವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. ಈ ಬಾರಿ ಘಟಾನುಘಟಿ ನಾಯಕರು ಕಣದಲ್ಲಿರುವುದರಿಂದ ಕ್ಷೇತ್ರದ ಮತದಾರರು ಯಾರ ಪರ ನಿಲ್ಲುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಹಿಸಾರ್ (ಹರಿಯಾಣ)

ರಣಜೀತ್ ಸಿಂಗ್ ಚೌಟಾಲ
(ಬಿಜೆಪಿ)

ಹರಿಯಾಣದ ಹಿಸಾರ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ರಣಜೀತ್ ಸಿಂಗ್ ಚೌಟಾಲ ಅವರನ್ನು ಸ್ಪರ್ಧೆಗಿಳಿಸಿದೆ. ಉದ್ಯಮಿ ಹಾಗೂ ರಾಜಕಾರಣಿಯಾಗಿರುವ ರಣಜೀತ್ ಅವರು ಈ ಹಿಂದೆ ಶಾಸಕರಾಗಿದ್ದರು. ವಿಧಾನ ಪರಿಷತ್ ಸದಸ್ಯರಾಗಿಯೂ ಆಯ್ಕೆಯಾಗಿದ್ದರು. ಐಎನ್‌ಎಲ್‌ಡಿ ಮತ್ತು ಕಾಂಗ್ರೆಸ್‌ನಲ್ಲಿ ಹಲವು ಕಾಲ ಇದ್ದ ಅವರು ಅನಂತರ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿಯ ಬ್ರಿಜೇಂದ್ರ ಸಿಂಗ್ ಅವರು 3,14,068 ಮತಗಳ ಅಂತರದಿಂದ 'ಜನನಾಯಕ ಜನತಾ ಪಕ್ಷ'ದ (ಜೆಜೆಪಿ) ದುಷ್ಯಂತ ಚೌಟಾಲ ಅವರನ್ನು ಪರಾಭವಗೊಳಿಸಿದ್ದರು. ವಿವಿಧ ಬೇಡಿಕೆಗಳನ್ನು ಮುಂದಿರಿಸಿಕೊಂಡು ರೈತರು ನಡೆಸಿರುವ ಪ್ರತಿಭಟನೆಯು ಈ ಬಾರಿ ಚುನಾವಣೆಯ ಮೇಲೂ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

V/S

ನೈನಾ ಚೌಟಾಲ
(ಜೆಜೆಪಿ)

ಹಿಸಾರ್ ಕ್ಷೇತ್ರದಿಂದ ಜೆಜೆಪಿಯು ಈ ಬಾರಿ ಶಾಸಕಿ ನೈನಾ ಚೌಟಾಲ ಅವರನ್ನು ಅಖಾಡಕ್ಕಿಳಿಸಿದೆ. ನೈನಾ ಅವರು ಜೆಜೆಪಿ ಮುಖ್ಯಸ್ಥ ಅಜಯ್ ಸಿಂಗ್ ಚೌಟಾಲ ಅವರ ಪತ್ನಿ ಹಾಗೂ ಹರಿಯಾಣದ ಮಾಜಿ ಉಪ ಮುಖ್ಯಮಂತ್ರಿ ದುಷ್ಯಂತ ಚೌಟಾಲ ಅವರ ತಾಯಿಯಾಗಿದ್ದಾರೆ. ನೈನಾ ಅವರು, ರೈತರ ಸಮಸ್ಯೆಗಳನ್ನು ಪರಿಹರಿಸುವ ಭರವಸೆಯನ್ನು ನೀಡಿ ಮತ ಯಾಚಿಸುತ್ತಿದ್ದಾರೆ. ಈ ಹಿಂದೆ ವಿಧಾನಸಭಾ ಚುನಾವಣೆಗಾಗಿ ಜೆಜೆಪಿಯು ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಿತ್ತು. ಮನೋಹರ್ ಲಾಲ್ ಖಟ್ಟರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಈ ಮೈತ್ರಿಯೂ ಕೊನೆಗೊಂಡಿತ್ತು. ಈ ಬಾರಿ ಹಿಸಾರ್ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷವು ಜೈಪ್ರಕಾಶ್ ಅವರನ್ನು ಹಾಗೂ ಐಎನ್‌ಎಲ್‌ಡಿ ಸುನೈನಾ ಚೌಟಾಲ ಅವರನ್ನು ಕಣಕ್ಕಿಳಿಸಿದೆ.

ಗಂಭೀರ ಅಡ್ಡ ಪರಿಣಾಮದ ಬಗ್ಗೆ ಒಪ್ಪಿಕೊಂಡ ಕೆಲವೇ ದಿನಗಳಲ್ಲಿ ತೀರ್ಮಾನ

ಕೋವಿಡ್ ಲಸಿಕೆ ಹಿಂಪಡೆದ ಆಸ್ಟ್ರಾಜೆನೆಕಾ

ಮುಖ್ಯಾಂಶಗಳು

- ಜಾಗತಿಕವಾಗಿ ಹಿಂದಕ್ಕೆ ಪಡೆಯುವ ಪ್ರಕ್ರಿಯೆ ಆರಂಭ
- ಭಾರತದಲ್ಲಿ 220 ಕೋಟಿ ಡೋಸ್‌ಗಿಂತ ಹೆಚ್ಚು ಕೋವಿಡ್ ಲಸಿಕೆ ವಿತರಣೆ
- ಐರೋಪ್ಯ ಒಕ್ಕೂಟದಲ್ಲಿ ವ್ಯಾಕ್ಸ್‌ಜೆವ್ರಿಯಾ ಲಸಿಕೆಯ ಬಳಕೆಗೆ ಮಾನ್ಯತೆ ಇಲ್ಲ

ಲಂಡನ್/ನವದೆಹಲಿ (ಪಿಟಿಐ): ಬ್ರಿಟನ್ ಮೂಲದ ಔಷಧ ತಯಾರಿಕಾ ಕಂಪನಿ ಆಸ್ಟ್ರಾಜೆನೆಕಾ ತಾನು ತಯಾರಿಸುವ ಕೋವಿಡ್ ಲಸಿಕೆಗಳನ್ನು ಜಾಗತಿಕವಾಗಿ ಹಿಂದಕ್ಕೆ ಪಡೆಯುವ ಪ್ರಕ್ರಿಯೆ ಆರಂಭಿಸಿದೆ. ಈ ಕಂಪನಿಯು ಭಾರತದಲ್ಲಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಹಯೋಗದಲ್ಲಿ ತಯಾರಿಸಿದ ಲಸಿಕೆಯನ್ನು 'ಕೋವಿಶೀಲ್ಡ್' ಹೆಸರಿನಲ್ಲಿ ನೀಡಲಾಗಿತ್ತು.

ತಾನು ಸಿದ್ಧಪಡಿಸಿದ ಕೋವಿಡ್ ಲಸಿಕೆ ಪಡೆದುಕೊಂಡವರಲ್ಲಿ, ಅಪರೂಪದ ಪ್ರಕರಣಗಳಲ್ಲಿ ರಕ್ತದ ಹೆಪ್ಪುಗಟ್ಟುವಿಕೆ ಹಾಗೂ ಪ್ಲೇಟ್‌ಲೆಟ್ ಇಳಿಕೆಯ ಅಡ್ಡಪರಿಣಾಮ ಉಂಟಾಗಬಹುದು ಎಂದು ಒಪ್ಪಿಕೊಂಡ ಕೆಲವೇ ದಿನಗಳಲ್ಲಿ ಕಂಪನಿಯು ಈ ಕ್ರಮಕ್ಕೆ ಮುಂದಾಗಿದೆ.

ಪರಿಷ್ಕರಣೆ ಕಂಡಿರುವ ಲಸಿಕೆಗಳು ಹೇರಳ ಪ್ರಮಾಣದಲ್ಲಿ ಲಭ್ಯವಿರುವ ಕಾರಣಕ್ಕೆ ತನ್ನ ಲಸಿಕೆಗಳನ್ನು ಹಿಂದಕ್ಕೆ ಪಡೆಯಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ. ಆಸ್ಟ್ರಾಜೆನೆಕಾ ಕಂಪನಿಯು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಜೊತೆಗೂಡಿ ಕೋವಿಡ್ ತಡೆ ಲಸಿಕೆ ಅಭಿವೃದ್ಧಿಪಡಿಸಿತ್ತು. ಈ ಲಸಿಕೆಗಳನ್ನು ಯುರೋಪಿನಲ್ಲಿ ವ್ಯಾಕ್ಸ್‌ಜೆವ್ರಿಯಾ ಹೆಸರಿನಲ್ಲಿ, ಭಾರತದಲ್ಲಿ ಕೋವಿಶೀಲ್ಡ್ ಹೆಸರಿನಲ್ಲಿ ಮಾರಾಟ ಮಾಡಲಾಗಿತ್ತು.

27 ಸದಸ್ಯ ರಾಷ್ಟ್ರಗಳ ಐರೋಪ್ಯ ಒಕ್ಕೂಟದಲ್ಲಿ ವ್ಯಾಕ್ಸ್‌ಜೆವ್ರಿಯಾ ಲಸಿಕೆಯ ಬಳಕೆಗೆ ಮಾನ್ಯತೆ ಇಲ್ಲ ಎಂದು ಐರೋಪ್ಯ ಔಷಧಗಳ ಸಂಸ್ಥೆ ಮಂಗಳವಾರ ಖಚಿತಪಡಿಸಿದೆ.

'ಜಾಗತಿಕವಾಗಿ ನಾವು ಔಷಧ ನಿಯಂತ್ರಣ ಪ್ರಾಧಿಕಾರಗಳ ಜೊತೆಗೂಡಿ, ಲಸಿಕೆಗೆ ಮುಂದೆ ವಾಣಿಜ್ಯ ಬೇಡಿಕೆ ಬರುವುದಿಲ್ಲ ಎಂದು ಗುರುತಿಸಿರುವ ಕಡೆಗಳಲ್ಲಿ ವ್ಯಾಕ್ಸ್‌ಜೆವ್ರಿಯಾ ಮಾರಾಟದ ಮಾನ್ಯತೆಯನ್ನು ಹಿಂಪಡೆಯುವ ಪ್ರಕ್ರಿಯೆ ಆರಂಭಿಸಲಿದ್ದೇವೆ' ಎಂದು ಕಂಪನಿ ಹೇಳಿರುವುದಾಗಿ 'ದಿ ಡೈಲಿ ಟೆಲಿಗ್ರಾಫ್' ವರದಿ ಮಾಡಿದೆ.

ಇದಕ್ಕೂ ಮೊದಲು, ತಾನು ಸಿದ್ಧಪಡಿಸಿದ ಕೋವಿಡ್ ಲಸಿಕೆಗಳು ಅಪರೂಪದ ಪ್ರಕರಣಗಳಲ್ಲಿ ಟಿಟಿಎಸ್ ಅಡ್ಡಪರಿಣಾಮ ಬೀರಬಲ್ಲವು ಎಂಬುದನ್ನು ಆಸ್ಟ್ರಾಜೆನೆಕಾ ಕಂಪನಿಯು ಒಪ್ಪಿಕೊಂಡಿದೆ ಎಂದು ಜಾಗತಿಕ ಮಟ್ಟದಲ್ಲಿ ವಿವಿಧ ಮಾಧ್ಯಮಗಳು ವರದಿ ಮಾಡಿದ್ದವು.

ಭಾರತದಲ್ಲಿ 220 ಕೋಟಿ ಡೋಸ್‌ಗಿಂತ ಹೆಚ್ಚು ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ. ಈ ಪೈಕಿ ಕೋವಿಶೀಲ್ಡ್ ಲಸಿಕೆಗಳ ಸಂಖ್ಯೆಯೇ ಹೆಚ್ಚು. 'ಕೋವಿಡ್‌ಗೆ ಹಲವು ಬಗೆಯ ಲಸಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹೀಗಾಗಿ ಪರಿಷ್ಕೃತ ಲಸಿಕೆಗಳು ಹೇರಳವಾಗಿ ಲಭ್ಯವಿವೆ. ಇದರ ಪರಿಣಾಮವಾಗಿ ವ್ಯಾಕ್ಸ್‌ಜೆವ್ರಿಯಾ ಲಸಿಕೆಗೆ ಬೇಡಿಕೆ ತಗ್ಗಿದೆ. ಈ ಲಸಿಕೆಯನ್ನು ಈಗ ತಯಾರಿಸಲಾಗುತ್ತಿಲ್ಲ, ಪೂರೈಕೆ ಮಾಡುತ್ತಿಲ್ಲ' ಎಂದು ಕಂಪನಿ ತಿಳಿಸಿದೆ.

ಜಾಗತಿಕ ಸಾಂಕ್ರಾಮಿಕವನ್ನು ಕೊನೆಗಾಣಿಸುವಲ್ಲಿ ವ್ಯಾಕ್ಸ್‌ಜೆವ್ರಿಯಾ ಲಸಿಕೆಯು ವಹಿಸಿದ ಪಾತ್ರದ ಬಗ್ಗೆ ತನಗೆ ಬಹಳ ಹೆಮ್ಮೆ ಇದೆ ಎಂದು ಕಂಪನಿ ಹೇಳಿದೆ. 'ಸ್ವತಂತ್ರವಾದ ಅಂದಾಜುಗಳ ಪ್ರಕಾರ ಮೊದಲ ವರ್ಷದಲ್ಲಿಯೇ 65 ಲಕ್ಷಕ್ಕೂ ಹೆಚ್ಚು ಜನರ ಪ್ರಾಣ ಉಳಿಸಲಾಗಿದೆ' ಎಂದು ಕಂಪನಿ ತಿಳಿಸಿದೆ.

ಇವಿಎಂ ತಿರುಚಲು ₹2.5 ಕೋಟಿ ಕೇಳಿದ್ದ ಯೋಧನ ಬಂಧನ

ಛತ್ರಪತಿ ಸಂಭಾಜಿನಗರ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳನ್ನು ತಿರುಚಲು ಶಿವಸೇನಾ (ಉದ್ಧವ್ ಬಣ) ನಾಯಕ ಅಂಬಾದಾಸ್ ದಾನವೆ ಅವರ ಬಳಿ ₹2.5 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ಯೋಧರೊಬ್ಬರನ್ನು ಪೊಲೀಸರು ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿ ಬಂಧಿಸಿದ್ದಾರೆ.

ವಿಧಾನಪರಿಷತ್‌ನ ವಿರೋಧ ಪಕ್ಷಗಳ ನಾಯಕ ದಾನವೆ ಅವರು ಈ ಸಂಬಂಧ ಮಾರುತಿ ಧಕನೆ (42) ವಿರುದ್ಧ ದೂರು ದಾಖಲಿಸಿದ್ದಾರೆ.

ಆರೋಪಿಗೆ ಇವಿಎಂ ಬಗ್ಗೆ ಏನೇನೂ ತಿಳಿದಿಲ್ಲ. ಆದರೆ ಸಾಲ ತೀರಿಸಲು ಇಂಥ ಉಪಾಯ ಹೂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ ಮಂಗಳವಾರ ಸಂಜೆ ನಾಲ್ಕು ಗಂಟೆ ಸುಮಾರಿಗೆ ದಾನವೆ ಅವರ ತಮ್ಮ ರಾಜೇಂದ್ರ ದಾನವೆ ಅವರನ್ನು ಹೋಟೆಲ್‌ವೊಂದರಲ್ಲಿ ಭೇಟಿಯಾಗಿದ್ದ. ಮಾತುಕತೆ ಬಳಿಕ ₹1.5 ಕೋಟಿಗೆ ಒಪ್ಪಂದವಾಗಿತ್ತು' ಎಂದು ತಿಳಿಸಿದ್ದಾರೆ

'ಅಂಬಾದಾಸ್ ದಾನವೆ ಅವರು ನೀಡಿದ ಮಾಹಿತಿ ಆಧಾರದ ಮೇಲೆ ಪೊಲೀಸರು ಸಾಮಾನ್ಯರಂತೆ ವೇಷ ಧರಿಸಿ ಸ್ಥಳಕ್ಕೆ ತೆರಳಿದ್ದರು. ಆರೋಪಿಯು ₹1 ಲಕ್ಷವನ್ನು ಟೋಕನ್ ಹಣವಾಗಿ ಪಡೆಯುತ್ತಿರುವಾಗಲೇ ಬಂಧಿಸಿದರು' ಎಂದು ಹೇಳಿದರು. ಆರೋಪಿ ಮಹಾರಾಷ್ಟ್ರದ ಅಹ್ಮದ್ ನಗರ ಜಿಲ್ಲೆಯ ನಿವಾಸಿ ಎಂದು ತಿಳಿಸಿದರು.

'ಮೂರು ತಿಂಗಳ ಅವಧಿ ಕಡ್ಡಾಯವಲ್ಲ'

ನವದೆಹಲಿ: ಕಾನೂನಿನ ಜೊತೆ ಸಂಘರ್ಷಕ್ಕೆ ಗುರಿಯಾಗಿರುವ ಮಗುವನ್ನು ಬಾಲಕ ಎಂದು ಪರಿಗಣಿಸಬೇಕೋ, ವಯಸ್ಕ ಎಂದು ಪರಿಗಣಿಸಬೇಕೋ ಎಂಬ ಬಗ್ಗೆ ಪ್ರಾಥಮಿಕ ಪರಿಶೀಲನೆ ನಡೆಸಲು ನೀಡಿರುವ ಮೂರು ತಿಂಗಳ ಅವಧಿಯು 'ಕಡ್ಡಾಯ'ವೇನೂ ಅಲ್ಲ, ಅದು 'ನಿರ್ದೇಶನದ' ಸ್ವರೂಪದಲ್ಲಷ್ಟೇ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಲಿಖಿತ ಕಾರಣ ದಾಖಲಿಸಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅಥವಾ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಈ ಅವಧಿಯನ್ನು ವಿಸ್ತರಿಸಲು ಅವಕಾಶ ಇದೆ ಎಂದು ವಿಭಾಗೀಯ ಪೀಠವು ಹೇಳಿದೆ.

ನ್ಯಾಯಾಲಯ, ನ್ಯಾಯಮಂಡಳಿ, ಮಂಡಳಿ ಮತ್ತು ಅರೆನ್ಯಾಯಿಕ ಪ್ರಾಧಿಕಾರಗಳು ಹೊರಡಿಸುವ ಆದೇಶದಲ್ಲಿ, ಅದಕ್ಕೆ ಸಹಿ ಮಾಡುವ ಅಧ್ಯಕ್ಷರ ಅಥವಾ ಸದಸ್ಯರ ಹೆಸರನ್ನು ಉಲ್ಲೇಖಿಸಬೇಕು ಎಂದು ಕೋರ್ಟ್ ಸೂಚಿಸಿದೆ. ಗುರುತಿನ ಸಂಖ್ಯೆ ನೀಡಿದ್ದಲ್ಲಿ, ಅದನ್ನು ಕೂಡ ಉಲ್ಲೇಖಿಸಬಹುದು ಎಂದು ಹೇಳಿದೆ.

ಮದ್ರಾಸ್ ಐಐಟಿಗೆ ₹513 ಕೋಟಿ ದೇಣಿಗೆ

ನವದೆಹಲಿ (ಪಿಟಿಐ): ಮದ್ರಾಸ್ ಐಐಟಿ 2023–24ನೇ ಸಾಲಿನಲ್ಲಿ ಹಳೆಯ ವಿದ್ಯಾರ್ಥಿಗಳು, ಕೈಗಾರಿಕೆಗಳು ಮತ್ತು ದಾನಿಗಳಿಂದ ₹513 ಕೋಟಿ ದೇಣಿಗೆ ಪಡೆದಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದರು.

ಜೊತೆಗೆ ಹಳೆಯ ವಿದ್ಯಾರ್ಥಿಗಳು ಮತ್ತು ಕೈಗಾರಿಕೋದ್ಯಮಿಗಳು ಇನ್ನೂ ₹717 ಕೋಟಿ ನೀಡುವುದಾಗಿ ವಾಗ್ದಾನ ಮಾಡಿದ್ದಾರೆ ಎಂದೂ ತಿಳಿಸಿದ್ದಾರೆ.

ಸತತ ಎರಡನೇ ಬಾರಿಗೆ ಐಐಟಿಯು ಆರ್ಥಿಕ ವರ್ಷವೊಂದರಲ್ಲಿ ದಾಖಲೆಯ ದೇಣಿಗೆ ಪಡೆದಿದೆ.

ಮೈಬಣ್ಣದ ವಿಚಾರ ಮುಂದಿಟ್ಟುಕೊಂಡು ರಾಜಕೀಯ: ಮೋದಿ ಕಿಡಿ

ಕಾಂಗ್ರೆಸ್ ಮೇಲೆ ಮುಗಿಬಿದ್ದ ಬಿಜೆಪಿ

ನವದೆಹಲಿ/ಹೈದರಾಬಾದ್ (ಪಿಟಿಐ): ಭಾರತದ ವೈವಿಧ್ಯತೆ ಕುರಿತು ವಿವರಿಸಲು ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ ನೀಡಿರುವ ಹೇಳಿಕೆಗಳ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟದ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಬಿಜೆಪಿ ನಾಯಕರು ಕೂಡ ಕಾಂಗ್ರೆಸ್ ಗುರಿಯಾಗಿಸಿ ಮೋದಿ ನಡೆಸಿರುವ ವಾಗ್ದಾಳಿಗೆ ದನಿಗೂಡಿಸಿದ್ದಾರೆ.

ತೆಲಂಗಾಣದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಧಾನಿ ಮೋದಿ, 'ಶೆಹಜಾದಾ(-ರಾಹುಲ್ ಗಾಂಧಿ) ಅವರ ಅಮೆರಿಕ ಮೂಲದ ತತ್ವಜ್ಞಾನಿ ಮತ್ತು 'ಮಾವ', ಭಾರತೀಯರ ಕುರಿತು ಜನಾಂಗೀಯ ತಾರತಮ್ಯದ ನೀಡಿರುವ ಹೇಳಿಕೆಯಿಂದ ನಾನು ವ್ಯಗ್ರನಾಗಿರುವೆ' ಎಂದು ಹೇಳಿದರು.

'ಯಾರಾದರೂ ನನ್ನನ್ನು ಬೈದರೆ ನಾನು ಸಹಿಸಿಕೊಳ್ಳುತ್ತೇವೆ. ಆದರೆ, ಈ ದಿನ ನನಗೆ ಬಹಳ ಕೋಪ ಬಂದಿದೆ. 'ಶೆಹಜಾದಾ'ನ ತತ್ವಜ್ಞಾನಿ ನೀಡಿರುವ ಮೂದಲಿಕೆ ಮಾತುಗಳೇ ನನ್ನ ಈ ಕೋಪಕ್ಕೆ ಕಾರಣ' ಎಂದರು.

'ನಮ್ಮ ದೇಶದ ಜನರ ಸಾಮರ್ಥ್ಯಗಳನ್ನು ಅವರ ಚರ್ಮದ ಬಣ್ಣದ ಮೇಲೆ ನಿರ್ಧರಿಸಲು ಸಾಧ್ಯವೇ? ಚರ್ಮದ ಬಣ್ಣದ ವಿಚಾರವನ್ನು ಮುಂದಿಟ್ಟುಕೊಂಡು ಇಂತಹ ರಾಜಕಾರಣ ಮಾಡಲು ಶೆಹಜಾದಾಗೆ ಅಧಿಕಾರ ನೀಡಿದ್ದು ಯಾರು' ಎಂದು ಕೋಪದಿಂದ ಪ್ರಶ್ನಿಸಿದರು.

2ನೇ ಬಾರಿ ಅಂತರ ಕಾಯ್ದುಕೊಂಡ ಕಾಂಗ್ರೆಸ್: ಸ್ಯಾಮ್ ಪಿತ್ರೋಡಾ ಅವರ ಹೇಳಿಕೆಗಳು ರಾಜಕೀಯ ಬಿರುಗಾಳಿ ಎಬ್ಬಿಸಿದ ಬೆನ್ನಲ್ಲೇ, ಕಾಂಗ್ರೆಸ್ ಪಕ್ಷ ಅವರ ಹೇಳಿಕೆಗಳಿಂದ ಸಂಪೂರ್ಣವಾಗಿ ಅಂತರ ಕಾಯ್ದುಕೊಂಡಿರುವುದಾಗಿ ಹೇಳಿದೆ. ತಿಂಗಳ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ಪಿತ್ರೋಡಾ ಅವರ ಹೇಳಿಕೆಗಳಿಂದ ಎರಡನೇ ಬಾರಿ ಅಂತರಕಾಯ್ದುಕೊಂಡಂತಾಗಿದೆ.

'ಭಾರತದ ವೈವಿಧ್ಯವನ್ನು ಬಣ್ಣಿಸುವುದಕ್ಕಾಗಿ ಪಿತ್ರೋಡಾ ಅವರು ಮಾಡಿರುವ ಹೋಲಿಕೆಗಳು ಸ್ವೀಕಾರಾರ್ಹವಲ್ಲ ಹಾಗೂ ಅತ್ಯಂತ ದುರದೃಷ್ಟಕರ. ಪಿತ್ರೋಡಾ ಅವರ ಹೋಲಿಕೆಗಳಿಗೂ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧ ಇಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ, ಬಾಲಾಕೋಟ್ ಸರ್ಜಿಕಲ್ ದಾಳಿ ಮತ್ತು ಸಂಪತ್ತಿನ ಮೇಲೆ ತೆರಿಗೆ ಕುರಿತ ಪಿತ್ರೋಡಾ ಅವರ ಹೇಳಿಕೆಗಳು ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ತಂದಿಟ್ಟಿದ್ದವು.

1984ರ ಸಿಖ್ ವಿರೋಧಿ ಗಲಭೆಗಳ ಕುರಿತು ಅವರು ನೀಡಿದ್ದ 'ಹುವಾ ತೋ ಹುವಾ' ಹೇಳಿಕೆ ಸಹ ಭಾರಿ ವಿವಾದ ಸೃಷ್ಟಿಸಿತ್ತು.

ಮೈತ್ರಿ ಕಡಿದುಕೊಳ್ಳುವಿರಾ?: ಡಿಎಂಕೆಗೆ ಮೋದಿ ಸವಾಲು

ರಾಜಂಪೇಟೆ(ಆಂಧ್ರಪ್ರದೇಶ) (ಪಿಟಿಐ): 'ಸ್ಯಾಮ ಪಿತ್ರೋಡಾ ಹೇಳಿಕೆಯು ಕಾಂಗ್ರೆಸ್‌ನ ವಿಭಜಕ ಮನಸ್ಥಿತಿಯನ್ನು ತೋರಿಸಿದೆ' ಎಂದು ಟೀಕಿಸಿರುವ ಪ್ರಧಾನಿ ನರೇಂದ್ರ ಮೋದಿ, 'ತಮಿಳು ಸಂಸ್ಕೃತಿ ಮತ್ತು ಗೌರವದ ಕಾರಣದಿಂದಾಗಿ ಡಿಎಂಕೆ ಪಕ್ಷವು ಕಾಂಗ್ರೆಸ್ ಜೊತೆಗಿನ ಮೈತ್ರಿಯನ್ನು ಕಡಿದುಕೊಳ್ಳುವುದೇ' ಎಂದು ಬುಧವಾರ ಸವಾಲು ಹಾಕಿದ್ದಾರೆ.

ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ತಮಿಳುನಾಡು ಮುಖ್ಯಮಂತ್ರಿ ತಮಿಳು ಸಂಸ್ಕೃತಿ ಬಗ್ಗೆ ಮಾತನಾಡುತ್ತಾರೆ. ಈಗ, ದಕ್ಷಿಣ ಭಾರತೀಯರ ಕುರಿತು ಗಂಭೀರ ಆರೋಪ ಮಾಡಲಾಗಿದೆ. ಹೀಗಾಗಿ ಕಾಂಗ್ರೆಸ್ ಜತೆಗಿನ ಮೈತ್ರಿಯನ್ನು ಡಿಎಂಕೆ ಕಡಿದುಕೊಳ್ಳುವುದೇ? ಅವರಿಗೆ ಆ ಧೈರ್ಯ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

'ಕಾಂಗ್ರೆಸ್ ಪಕ್ಷ ಈ ನೆಲದ ಮೂಲದಿಂದೊಗಿನ ತನ್ನ ಸಂಬಂಧವನ್ನು ಕಡಿದುಕೊಂಡಿದೆ. ಅಧಿಕಾರಕ್ಕಾಗಿ ದೇಶವನ್ನು ವಿಭಜಿಸಲು ಮುಂದಾಗಿರುವ ಈ ರಾಷ್ಟ್ರೀಯ ಪಕ್ಷಕ್ಕೆ ಏನಾಗಿದೆ ಎಂದು ನನಗೆ ಅಚ್ಚರಿಯಾಗುತ್ತಿದೆ' ಎಂದು ಕುಟುಕಿದ್ದಾರೆ.

'ಗಾಂಧಿ ಕುಟುಂಬದ ಆಪ್ತ ಹಾಗೂ ಶೆಹಜಾದಾಗೆ ಸಲಹೆಗಾರನಾಗಿರುವ ವ್ಯಕ್ತಿ, ಕಾಂಗ್ರೆಸ್ ಪಕ್ಷದ ವಿಭಜಕ ಮನಸ್ಥಿತಿಯನ್ನು ಹೊರಹಾಕಿದ್ದಾರೆ' ಎಂದು ಪಿತ್ರೋಡಾ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ.

'ಭಾರತದ ಈಶಾನ್ಯದಲ್ಲಿರುವವರು ಚೀನಿಯರಂತೆ ಕಾಣುತ್ತಾರೆ ಎಂಬ ಕಾಂಗ್ರೆಸ್‌ನ ಮಾತನ್ನು ದೇಶ ಒಪ್ಪಲು ಸಾಧ್ಯವೇ? ದಕ್ಷಿಣದಲ್ಲಿರುವವರು ಆಫ್ರಿಕಾದವರಂತೆ ಕಾಣುತ್ತಾರೆ ಎಂಬ ಕಾಂಗ್ರೆಸ್ ಮಾತನ್ನು ಅವರು (ದಕ್ಷಿಣ ಭಾರತೀಯರು) ಒಪ್ಪುತ್ತಾರೆಯೇ' ಎಂದೂ ಪ್ರಶ್ನಿಸಿದರು.

'ದಕ್ಷಿಣ ಭಾರತೀಯರ ಕುರಿತ ಇಂತಹ ಆಪಾದನೆಗಳನ್ನು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣದ ಎ.ರೇವಂತ ರೆಡ್ಡಿ ಒಪ್ಪುತ್ತಾರೆಯೇ' ಎಂದು ಕೇಳಿದರು. 'ಪಶ್ಚಿಮ ಭಾಗದ ಜನರು ಅರಬ್ಬರಂತೆ ಕಾಣಿಸುತ್ತಾರೆ ಎಂಬ ಮಾತನ್ನು ಮಹಾರಾಷ್ಟ್ರ ಜನರು ಒಪ್ಪುತ್ತಾರೆಯೇ?' ಎಂದು ಪರೋಕ್ಷವಾಗಿ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಉದ್ದೇಶಿಸಿ ಹೇಳಿದರು.

> ರಾಹುಲ್ ಗಾಂಧಿ ಸಲಹೆಗಾರರಿಗೆ ಮಾತ್ರ ನಾವು ಆಫ್ರಿಕಾದವರು, ಚೀನೀಯರು, ಅರಬ್ಬರು ಹಾಗೂ ಬಿಳಿಯರಂತೆ ಕಾಣುತ್ತೇವೆ. ನಿಮ್ಮ ಮನಸ್ಥಿತಿ ಹಾಗೂ ದೃಷ್ಟಿಕೋನ ಬಹಿರಂಗಪಡಿಸಿದ್ದಕ್ಕೆ ಧನ್ಯವಾದಗಳು
>
> **ನಿರ್ಮಲಾ ಸೀತಾರಾಮನ್**, ಕೇಂದ್ರ ಹಣಕಾಸು ಸಚಿವೆ

> ಈಶಾನ್ಯ ರಾಜ್ಯಗಳ ಜನರ ಕುರಿತು ಸ್ಯಾಮ್ ಪಿತ್ರೋಡಾ ಆಡಿರುವ ಜನಾಂಗೀಯ ದ್ವೇಷದ ಮಾತುಗಳನ್ನು ಖಂಡಿಸುತ್ತೇನೆ. ಕಾಂಗ್ರೆಸ್ ಯಾವಾಗಲೂ ಒಡೆದು ಆಳುವ ನೀತಿ ಭಾರತವನ್ನು ವಿಭಜಿಸಲು ಯತ್ನಿಸುತ್ತಲೇ ಇದೆ
>
> **ಎನ್.ಬೀರೇನ್ ಸಿಂಗ್,** ಮಣಿಪುರ ಮುಖ್ಯಮಂತ್ರಿ

ಪಿತ್ರೋಡಾ ಮಾತಿಗೆ ಪ್ರಧಾನಿ ಕಿಡಿ

ಒಂದನೇ ಪುಟದಿಂದ...

ಪಿತ್ರೋಡಾ ಅವರ ಹೇಳಿಕೆಯಿಂದ ಕಾಂಗ್ರೆಸ್ ಸಂಪೂರ್ಣವಾಗಿ ಅಂತರ ಕಾಯ್ದುಕೊಂಡಿದೆ.

ಈ ಹೇಳಿಕೆ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ. 'ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ, ಅವರ ಚರ್ಮದ ಬಣ್ಣ ಕಪ್ಪು ಎಂಬ ಕಾರಣಕ್ಕೆ ಅವರನ್ನು ಸೋಲಿಸಲು ಕಾಂಗ್ರೆಸ್ ಪಕ್ಷ ಮುಂದಾಗಿತ್ತು ಎಂಬುದು ನನಗೆ ಈಗ ಅರ್ಥವಾಗುತ್ತಿದೆ' ಎಂದು ಹೇಳಿದ್ದಾರೆ.

ಪಿತ್ರೋಡಾ ಹೇಳಿದ್ದೇನು?

ನಿಯತಕಾಲಿಕೆಯ ಪಾಡ್‌ಕಾಸ್ಟ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ, 'ನಮಗೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಸಂದಿವೆ. ಕೆಲ ಸಣ್ಣ–ಪುಟ್ಟ ಘರ್ಷಣೆಗಳನ್ನು ಹೊರತುಪಡಿಸಿದರೆ, ನಾವು (ಭಾರತೀಯರು) ಸಂತಸದ ವಾತಾವರಣದಲ್ಲಿ ಬದುಕುತ್ತಿದ್ದೇವೆ' ಎಂದು ಪಿತ್ರೋಡಾ ಹೇಳಿದ್ದಾರೆ.

'ವಿವಿಧ ಭಾಷೆ ಮತ್ತು ಧರ್ಮಗಳು, ಬೇರೆಬೇರೆ ಆಚರಣೆಗಳು, ಆಹಾರದಲ್ಲಿ ವೈವಿಧ್ಯವನ್ನು ನಾವು ಗೌರವಿಸುತ್ತೇವೆ' ಎಂದೂ ಪಿತ್ರೋಡಾ ಅವರು ಹೇಳಿದ್ದಾರೆ.

'ಒಬ್ಬ ಗುಜರಾತಿಯಾಗಿ ನಾನು ದೋಸೆಯನ್ನು ಇಷ್ಟಪಡುತ್ತೇನೆ. ನನಗೆ ಇಡ್ಲಿಯೂ ಇಷ್ಟ. ಅದು ನನ್ನ ಆಹಾರ. ಅದು ಈಗ ದಕ್ಷಿಣ ಭಾರತೀಯರ ಆಹಾರವಾಗಿ ಉಳಿದಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಅಭಿಪ್ರಾಯ ಹೊಂದಲು ಅವಕಾಶ ಇದೆ ಹಾಗೂ ಪ್ರತಿಯೊಬ್ಬರೂ ಒಂದಿನಿತಾದರೂ ರಾಜಿ ಆಗುತ್ತಾರೆ. ಅಂತಹ ಭಾರತದಲ್ಲಿ ನಾನು ನಂಬಿಕೆ ಹೊಂದಿದ್ದೇನೆ' ಎಂದೂ ಹೇಳಿದ್ದಾರೆ.

'ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಭ್ರಾತೃತ್ವ ಹಾಸುಹೊಕ್ಕಾಗಿರುವ ಭಾರತವೇ ನನ್ನ ದೇಶ. ಇಂತಹ ಕಲ್ಪನೆಯ ಭಾರತಕ್ಕೆ ರಾಮ ಮಂದಿರ ಮತ್ತು ರಾಮ ನವಮಿ ಎಂಬ ಸಂಗತಿಗಳು ಸವಾಲು ಒಡ್ಡುತ್ತವೆ. ಪ್ರಧಾನಿ ಯಾವಾಗಲೂ ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಅವರು ಒಬ್ಬ ರಾಷ್ಟ್ರೀಯ ನಾಯಕರಾಗಿ ಮಾತನಾಡದೇ ಒಬ್ಬ ಬಿಜೆಪಿ ಮುಖಂಡನಂತೆ ಮಾತನಾಡುತ್ತಾರೆ' ಎಂದು ಪಿತ್ರೋಡಾ ಹೇಳಿದ್ದಾರೆ.

'ರಾಮ ಮಂದಿರ, ದೇವರು, ಇತಿಹಾಸ, ಪರಂಪರೆ, ಭಗವಾನ್ ಹನುಮಾನ್, ಬಜರಂಗ ದಳದಂತಹ ವಿಷಯಗಳನ್ನು ಕೇಂದ್ರೀಕರಿಸಿ ಅಭಿಪ್ರಾಯಗಳನ್ನು ನಿರ್ಮಿಸಲಾಗುತ್ತಿದೆ. ಅವರ ಇಂತಹ ಅಭಿಪ್ರಾಯಗಳನ್ನು ನಾನು ಗೌರವಿಸುತ್ತೇನೆ' ಎಂದೂ ಹೇಳಿದ್ದಾರೆ.

'ನಮ್ಮ ಹಿರಿಯರು ಬ್ರಿಟಿಷರ ವಿರುದ್ಧ ಹೋರಾಡಿದ್ದು, ಜಾತ್ಯತೀತ ದೇಶವನ್ನು ನಿರ್ಮಿಸುವುದಕ್ಕಾಗಿಯೇ ಹೊರತು ಹಿಂದೂ ರಾಷ್ಟ್ರ ನಿರ್ಮಾಣ ಮಾಡುವುದಕ್ಕಾಗಿ ಅಲ್ಲ ಎಂಬುದಾಗಿ ಹೇಳುವ ಮತ್ತೊಂದು ಗುಂಪು ಇದೆ. ಧರ್ಮದ ಆಧಾರದಲ್ಲಿಯೇ ರಾಷ್ಟ್ರ ರಚನೆಯಾಗಬೇಕು ಎಂದು ಪಾಕಿಸ್ತಾನ ನಿರ್ಧರಿಸಿತು. ಈಗ, ಆ ರಾಷ್ಟ್ರದ ಗತಿ ಏನಾಗಿದೆ? ಭಾರತ ಇಡೀ ವಿಶ್ವದಲ್ಲಿಯೇ ಉತ್ತಮ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ನಿದರ್ಶನವಾಗಿ ನಿಂತಿದೆ' ಎಂದು ಪಿತ್ರೋಡಾ ಹೇಳಿದ್ದಾರೆ.

'ಕಾರಣ ಇಲ್ಲದೆ ಗುತ್ತಿಗೆ ರದ್ದುಮಾಡುವಂತಿಲ್ಲ'

ನವದೆಹಲಿ (ಪಿಟಿಐ): ವ್ಯಕ್ತಿಗಳಿಗೆ, ಖಾಸಗಿ ಸಂಸ್ಥೆಗಳಿಗೆ ವಹಿಸುವ ಗುತ್ತಿಗೆಗಳನ್ನು ಕಾರಣ ನೀಡದೆಯೇ ರದ್ದುಪಡಿಸುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ಕಲ್ಕತ್ತ ಹೈಕೋರ್ಟ್‌ನ ಆದೇಶವೊಂದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ಕುರಿತ ತೀರ್ಪನ್ನು ಕೋರ್ಟ್ ಕಾಯ್ದಿರಿಸಿದೆ.

ಗುತ್ತಿಗೆಯೊಂದನ್ನು ಪಡೆದ ನಂತರ ಅದಕ್ಕಾಗಿ ಹೂಡಿಕೆ ಮಾಡುವ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಅದರಿಂದ ಒಂದಿಷ್ಟು ಲಾಭ ಮಾಡಿಕೊಳ್ಳಬಹುದು ಎಂಬ ಸಕಾರಣದ ನಿರೀಕ್ಷೆ ಹೊಂದಿರುತ್ತಾರೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಹೇಳಿದೆ.

'ಕಾರಣ ನೀಡದೆಯೇ ಒಂದು ಗುತ್ತಿಗೆಯನ್ನು ರದ್ದು ಮಾಡುವುದು ಹೇಗೆ? ಗುತ್ತಿಗೆಯನ್ನು ಪಡೆದ ನಂತರ ಅದನ್ನು ಕಾರ್ಯರೂಪಕ್ಕೆ ತರಲು ವ್ಯಕ್ತಿಯು ಹೂಡಿಕೆ ಮಾಡಿರುತ್ತಾನೆ' ಎಂದು ಸಿಜೆಐ ಚಂದ್ರಚೂಡ್ ಹೇಳಿದರು. ಪೀಠದ ಎದುರು ಇದ್ದ ಪ್ರಕರಣವನ್ನು ಉಲ್ಲೇಖಿಸಿ ಅವರು, ಈ ಪ್ರಕರಣದಲ್ಲಿ ಗುತ್ತಿಗೆ ರದ್ದು ಮಾಡಿದ್ದಕ್ಕೆ ಯಾವ ಕಾರಣವನ್ನೂ ನೀಡಿರಲಿಲ್ಲ ಎಂದು ಹೇಳಿದರು.

ಸುಬೋಧ್ ಕುಮಾರ್ ಸಿಂಗ್ ರಾಥೋರ್ ಎನ್ನುವವರಿಗೆ ಸೇರಿದ ಕಂಪನಿಗೆ ನೀಡಿದ್ದ ಗುತ್ತಿಗೆಯನ್ನು ರದ್ದುಮಾಡಿದ ಕ್ರಮವನ್ನು ಏಕಸದಸ್ಯ ಪೀಠವೊಂದು ಎತ್ತಿಹಿಡಿದಿತ್ತು. ಇದನ್ನು ಹೈಕೋರ್ಟ್‌ನ ವಿಭಾಗೀಯ ಪೀಠವು 2023ರ ಮೇ 25ರಂದು ಮಾನ್ಯ ಮಾಡಿತ್ತು. ಈ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಗಜ ಸವಾರಿ

ಅಸ್ಸಾಂನ ಕಾಮರೂಪ ಜಿಲ್ಲೆಯ ಗ್ರಾಮವೊಂದರಲ್ಲಿ ಕಾಡಾನೆಗಳ ಹಿಂಡೊಂದು ರಸ್ತೆ ದಾಟಿದವು – ಪಿಟಿಐ ಚಿತ್ರ

ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣ

ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು: ನಾಳೆ ಆದೇಶ

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡುವುದಕ್ಕೆ ಸಂಬಂಧಿಸಿದ ಆದೇಶವನ್ನು ಶುಕ್ರವಾರ (ಮೇ 10) ಪ್ರಕಟಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಜಾರಿ ನಿರ್ದೇಶನಾಲಯವು (ಇ.ಡಿ) ತಮ್ಮನ್ನು ಬಂಧಿಸಿರುವ ಕ್ರಮ ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠ ನಡೆಸಿದೆ.

'ಮಧ್ಯಂತರ ಜಾಮೀನಿಗೆ ಸಂಬಂಧಿಸಿದ ಮಧ್ಯಂತರ ಆದೇಶವನ್ನು ನಾವು ಶುಕ್ರವಾರ ನೀಡಲಿದ್ದೇವೆ. ಬಂಧನವನ್ನು ಪ್ರಶ್ನಿಸಿರುವ ಪ್ರಮುಖ ಅರ್ಜಿಯನ್ನು ಕೂಡ ಅದೇ ದಿನ ಕೈಗೆತ್ತಿಕೊಳ್ಳಲಾಗುತ್ತದೆ' ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು.

ಖನ್ನಾ ಅವರು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಬೇಲಾ ಎಂ. ತ್ರಿವೇದಿ ಅವರು ಇದ್ದ ಇನ್ನೊಂದು ಪೀಠದಲ್ಲಿ ಇದ್ದರು. ಕೇಜ್ರಿವಾಲ್ ಅವರ ಅರ್ಜಿಯ ಕುರಿತು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಸ್ಪಷ್ಟನೆ ಕೋರಿದಾಗ, ನ್ಯಾಯಮೂರ್ತಿ ಖನ್ನಾ ಈ ಮಾತು ಹೇಳಿದರು.

ಕೇಜ್ರಿವಾಲ್ ಅವರು ಈಗ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ಅವರನ್ನು ತಿಹಾರ್ ಜೈಲಿನಲ್ಲಿ ಇರಿಸಲಾಗಿದೆ.

ಎರಡು ಭಾಗಗಳಾಗಿ ವಿಂಗಡಣೆ: ಬಂಧನವನ್ನು ಪ್ರಶ್ನಿಸಿ ಕೇಜ್ರಿವಾಲ್ ಅವರು ಸಲ್ಲಿಸಿರುವ ಅರ್ಜಿಯನ್ನು ಪೀಠವು ಎರಡು ಭಾಗಗಳಾಗಿ ವಿಂಗಡಿಸಿಕೊಂಡಿದೆ. ಅವರ ಮುಖ್ಯ ಅರ್ಜಿಯು ಇ.ಡಿ. ತಮ್ಮನ್ನು ಬಂಧಿಸಿದ ಕ್ರಮವನ್ನು ಪ್ರಶ್ನಿಸಿದೆ. ತಮ್ಮ ಬಂಧನವನ್ನು ಅಕ್ರಮ ಎಂದು ಘೋಷಿಸುವಂತೆ ಅವರು ಅದರಲ್ಲಿ ಕೋರಿದ್ದಾರೆ.

ಎರಡನೇ ಭಾಗದಲ್ಲಿ ಕೇಜ್ರಿವಾಲ್ ಅವರು, ಲೋಕಸಭಾ ಚುನಾವಣೆ ನಡೆಯುತ್ತಿರುವ ಕಾರಣ ಮಧ್ಯಂತರ ಜಾಮೀನು ನೀಡಬೇಕು ಎಂದು ಕೋರಿದ್ದಾರೆ. ಮಧ್ಯಂತರ ಜಾಮೀನು ನೀಡುವುದಕ್ಕೆ ಸಂಬಂಧಿಸಿದ ಆದೇಶವನ್ನು ಪೀಠವು ಕಾಯ್ದಿರಿಸಿದೆ.

ಸೌಲಭ್ಯ ನೀಡುವಂತೆ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜೈಲಿನಿಂದ ಸರ್ಕಾರ ನಡೆಸಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂಬ ಕೋರಿಕೆ ಇದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ. ಅಲ್ಲದೆ, ಈ ಅರ್ಜಿ ಸಲ್ಲಿಸಿದ್ದ ವಕೀಲರೊಬ್ಬರಿಗೆ ₹1 ಲಕ್ಷ ದಂಡ ವಿಧಿಸಿದೆ.

ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ ಅವರು ಕೇಜ್ರಿವಾಲ್ ರಾಜೀನಾಮೆಗೆ ಅನಗತ್ಯವಾಗಿ ಒತ್ತಾಯಿಸಬಾರದು ಎಂಬ ಸೂಚನೆ ನೀಡಬೇಕು ಎನ್ನುವ ಕೋರಿಕೆಯೂ ಈ ಅರ್ಜಿಯಲ್ಲಿತ್ತು.

ಕೇಜ್ರಿವಾಲ್ ಅವರು ತಮ್ಮ ಬಂಧನವನ್ನು ಪ್ರಶ್ನಿಸಿ ಈಗಾಗಲೇ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಹೀಗಾಗಿ, ನ್ಯಾಯಾಂಗ ಬಂಧನದಲ್ಲಿ ಇರುವಾಗ ಯಾವುದೇ ಸೌಲಭ್ಯ ಒದಗಿಸುವ ವಿಚಾರವಾಗಿ ಆದೇಶ ನೀಡುವ ಅಗತ್ಯ ಇಲ್ಲ ಎಂದು ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ಹೇಳಿತು.

ಮಾಧ್ಯಮಗಳಿಗೆ ಸೆನ್ಸಾರ್ ವಿಧಿಸಲು ಹಾಗೂ ರಾಜಕೀಯ ವಿರೋಧಿಗಳು ಹೇಳಿಕೆ ನೀಡುವುದನ್ನು ತಡೆಯಲು ಕೋರ್ಟ್‌ನಿಂದ ಸಾಧ್ಯವಿಲ್ಲ ಎಂದು ಪೀಠ ಸ್ಪಷ್ಟಪಡಿಸಿತು. ಜೈಲಿನಿಂದ ಸರ್ಕಾರವನ್ನು ನಡೆಸುವುದು ಸಾಧ್ಯವಿಲ್ಲದ ಕೆಲಸವಾದರೂ, ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡರೆ ಅದು ಸಾಧ್ಯವಾಗುತ್ತದೆ ಎಂದು ಅರ್ಜಿದಾರರು ಹೇಳಿದ್ದರು.

ಜೈಲಿನಲ್ಲಿ ಇರುವ ಕೇಜ್ರಿವಾಲ್ ಅವರಿಗೆ ವಿಡಿಯೊ ಕಾನ್ಫರೆನ್ಸ್ ಸೌಲಭ್ಯ ಒದಗಿಸಬೇಕು ಎಂದು ಅವರು ಕೋರಿದ್ದರು. ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂದು ಮಾಧ್ಯಮಗಳು ವೈಭವೀಕರಿಸುವ ಬಗೆಯಲ್ಲಿ ಹೆಡ್‌ಲೈನ್ ನೀಡದಂತೆ ಸೂಚಿಸಬೇಕು ಎಂದು ಕೂಡ ಕೋರಿದ್ದರು.

ಸಿಸೋಡಿಯಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಹಾಗೂ ಎಎಪಿ ನಾಯಕ ಮನಿಶ್ ಸಿಸೋಡಿಯಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ದೆಹಲಿ ಹೈಕೋರ್ಟ್ ಮೇ 21ರವರೆಗೆ ವಿಸ್ತರಿಸಿದೆ.

ಸಿಸೋಡಿಯಾ ಅವರ ನ್ಯಾಯಾಂಗ ಬಂಧನ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ವಿಚಾರಣೆ ನಡೆಯಿತು. ಸಿಸೋಡಿಯಾ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾದರು. ಈ ವೇಳೆ ನ್ಯಾಯಾಧೀಶರಾದ ಕಾವೇರಿ ಬವೇಜಾ, ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿ ಆದೇಶ ಹೊರಡಿಸಿದರು.

ಅಬಕಾರಿ ನೀತಿ ಹಗರಣದ ಆರೋಪದಡಿ ಸಿಸೋಡಿಯಾ ಅವರನ್ನು ಕಳೆದ ವರ್ಷ ಮಾರ್ಚ್ 9ರಂದು ಜಾರಿ ನಿರ್ದೇಶನಾಲಯ(ಇ.ಡಿ) ಬಂಧಿಸಿತ್ತು. ಬಳಿಕ ಇದೇ ಪ್ರಕರಣದ ತನಿಖೆಯ ಭಾಗವಾಗಿ ಸಿಬಿಐ ಅವರನ್ನು ಬಂಧಿಸಿದೆ.

'ಬ್ಯಾಂಕ್ ನೌಕರರ ವಿಶೇಷ ಸೌಲಭ್ಯಕ್ಕೆ ತೆರಿಗೆ ಅನ್ವಯ'

ನವದೆಹಲಿ: ಬ್ಯಾಂಕ್ ನೌಕರರು ಪಡೆಯುವ ಬಡ್ಡಿರಹಿತ ಸಾಲ ಸೌಲಭ್ಯ ಅಥವಾ ರಿಯಾಯಿತಿ ದರದ ಸಾಲಸೌಲಭ್ಯವು ವಿಶೇಷವಾದ ಒಂದು ಸವಲತ್ತು ಇದ್ದಂತೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಸವಲತ್ತುಗಳಿಗೆ ಆದಾಯ ತೆರಿಗೆ ಕಾಯ್ದೆಯ ಅಡಿ ತೆರಿಗೆ ಅನ್ವಯವಾಗುತ್ತದೆ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇದ್ದ ವಿಭಾಗೀಯ ಪೀಠವು, ಎಸ್‌ಬಿಐ ನಿಗದಿ ಮಾಡಿರುವ ಬಡ್ಡಿ ದರವನ್ನು ಮಾನದಂಡ ಎಂದು ಪರಿಗಣಿಸಿರುವುದರಲ್ಲಿ ಯಾವುದೇ ತಪ್ಪು ಇಲ್ಲ ಎಂದು ಸಾರಿದೆ.

'ವಾಣಿಜ್ಯ ಮತ್ತು ತೆರಿಗೆ ಕಾನೂನುಗಳು ತೀರಾ ಸೂಕ್ಷ್ಮವಾಗಿ, ಸಂಕೀರ್ಣವಾಗಿ ಇರುತ್ತವೆ. ದುರ್ಬಳಕೆಯ ಸಾಧ್ಯತೆಗಳನ್ನು ತಡೆಯುವ ಹಾಗೂ ನಿಶ್ಚಿತತೆಯನ್ನು ಹೆಚ್ಚುಮಾಡುವ ಶಾಸನಗಳ ವಿಚಾರದಲ್ಲಿ ಮಧ್ಯಪ್ರವೇಶ ಮಾಡಲು ಈ ನ್ಯಾಯಾಲಯ ಬಯಸುವುದಿಲ್ಲ' ಎಂದು ಪೀಠ ಹೇಳಿದೆ.

ಸಂಕೀರ್ಣ ಸಮಸ್ಯೆಯೊಂದನ್ನು ಒಂದೇ ಒಂದು ಸೂತ್ರದ ಮೂಲಕ ಬಗೆಹರಿಸಲಾಗಿದೆ. ಇದಕ್ಕೆ ನ್ಯಾಯಾಂಗ ಸಮ್ಮತಿ ಸೂಚಿಸಬೇಕಾಗುತ್ತದೆ ಎಂದು ಕೂಡ ಹೇಳಿದೆ. ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಅರ್ಜಿಯನ್ನು ಪೀಠವು ತಿರಸ್ಕರಿಸಿದೆ.

ವಿಶೇಷ ಸೌಲಭ್ಯಗಳನ್ನು ಲೆಕ್ಕಹಾಕಲು ಒಂದೇ ಮಾನದಂಡವನ್ನು ನಿಗದಿ ಮಾಡುವ ಮೂಲಕ ನಿಯಮವು ಅನಗತ್ಯ ವ್ಯಾಜ್ಯಗಳನ್ನು ನಿಯಂತ್ರಿಸುವ ಕೆಲಸ ಮಾಡಿದೆ ಎಂದು ಕೋರ್ಟ್ ಹೇಳಿದೆ.

ನಿಯಮಗಳ ಅನ್ವಯ ಬ್ಯಾಂಕ್‌ಗಳು ತಮ್ಮ ನೌಕರರಿಗೆ ಒದಗಿಸುವ ಬಡ್ಡಿರಹಿತ ಸಾಲ ಸೌಲಭ್ಯ ಅಥವಾ ರಿಯಾಯಿತಿ ಬಡ್ಡಿ ದರದ ಸಾಲ ಸೌಲಭ್ಯವನ್ನು ವಿಶೇಷ ಸೌಲಭ್ಯ ಎಂದು ಪರಿಗಣಿಸಿ, ಅವು ವಿಧಿಸುವ ಬಡ್ಡಿ ದರವು ಎಸ್‌ಬಿಐ ನಿಗದಿ ಮಾಡಿರುವ ಸಾಲದ ಬಡ್ಡಿ ದರಕ್ಕಿಂತ ಕಡಿಮೆ ಇದ್ದರೆ ಅವುಗಳಿಗೆ ತೆರಿಗೆ ವಿಧಿಸಬೇಕಾಗುತ್ತದೆ.

'ಲಿವ್–ಇನ್ ಎಂಬುದು ಎರವಲು ಸಂಬಂಧ'

ಬಿಲಾಸಪುರ (ಪಿಟಿಐ): ಲಿವ್–ಇನ್ ಸಂಬಂಧಗಳು 'ಎರವಲು ಪಡೆದವು', ಇವು ಭಾರತೀಯ ನಂಬಿಕೆಗಳಿಗೆ ವಿರುದ್ಧವಾಗಿವೆ ಎಂದು ಹೇಳಿರುವ ಛತ್ತೀಸಗಢ ಹೈಕೋರ್ಟ್, ಈಗ ಮದುವೆ ಎಂಬ ಪದ್ಧತಿಯು ಜನರನ್ನು ಈ ಹಿಂದಿನಷ್ಟು ಪ್ರಮಾಣದಲ್ಲಿ ಪ್ರಭಾವಿಸುತ್ತಿಲ್ಲ ಎಂದು ಹೇಳಿದೆ.

36 ವರ್ಷ ವಯಸ್ಸಿನ ಮಹಿಳೆಯೊಬ್ಬರ ಜೊತೆಗಿನ ಲಿವ್–ಇನ್ ಸಂಬಂಧದಲ್ಲಿ ಜನಿಸಿದ ಮಗುವನ್ನು ತನ್ನ ಸುಪರ್ದಿಗೆ ನೀಡಬೇಕು ಎಂದು ಕೋರಿ ಪುರುಷನೊಬ್ಬ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಗೌತಮ್ ಭಾದುರಿ ಮತ್ತು ಸಂಜಯ್ ಎಸ್. ಅಗರ್ವಾಲ್ ಅವರು ಇದ್ದ ಪೀಠವು ಈ ಮಾತು ಹೇಳಿದೆ. ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಲಾಗಿದೆ.

'ಸಮಾಜದ ಕೆಲವು ಗುಂಪುಗಳಲ್ಲಿ ಇರುವ ಲಿವ್–ಇನ್ ಸಂಬಂಧವು ಭಾರತೀಯ ಸಂಸ್ಕೃತಿಯಲ್ಲಿ ಈಗಲೂ ಒಂದು ಕಳಂಕ ಎಂದೇ ಪರಿಗಣಿತವಾಗಿದೆ' ಎಂದು ಪೀಠವು ಹೇಳಿದೆ. ಅರ್ಜಿಯನ್ನು ವಜಾಗೊಳಿಸಿದ ಆದೇಶವನ್ನು ಏಪ್ರಿಲ್ 30ರಂದು ನೀಡಲಾಗಿದೆ.

ದಾಂತೇವಾಡ ಜಿಲ್ಲೆಯ ಅಬ್ದುಲ್ ಹಮೀದ್ ಸಿದ್ದಿಕಿ ಎನ್ನುವವರು ತಾವು ಬೇರೊಂದು ಧರ್ಮದ ಮಹಿಳೆಯೊಬ್ಬರ ಜೊತೆ ಲಿವ್–ಇನ್ ಸಂಬಂಧ ಹೊಂದಿದ್ದಾಗಿ, ಆ ಮಹಿಳೆಯು ಮಗುವಿಗೆ ಜನ್ಮ ನೀಡಿದ್ದಾಗಿ ತಿಳಿಸಿದ್ದರು. ಮಗುವನ್ನು ತಮ್ಮ ಸುಪರ್ದಿಗೆ ನೀಡಬೇಕು ಎಂದು ಸಿದ್ದಿಕಿ ಸಲ್ಲಿಸಿದ್ದ ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯವು ತಿರಸ್ಕರಿಸಿದ ನಂತರ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಆಕೆಯ ಮತವನ್ನು ಬದಲಾಯಿಸದೆಯೇ ತಾನು ಆಕೆಯನ್ನು 2021ರಲ್ಲಿ ಮದುವೆ ಆಗಿದ್ದಾಗಿ ಸಿದ್ದಿಕಿ ತಿಳಿಸಿದ್ದರು. 2021ರಲ್ಲಿ ಮಗು ಜನಿಸಿತು. ಆದರೆ 2023ರಲ್ಲಿ ತಾಯಿ ಮತ್ತು ಮಗು ಕಾಣೆಯಾದರು. ಆಗ ಸಿದ್ದಿಕಿ ಅವರು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು.

ತಾನು ತನ್ನ ತಾಯಿಯ ಜೊತೆ ವಾಸಿಸುತ್ತಿರುವುದಾಗಿ ಆ ಮಹಿಳೆ ಹೈಕೋರ್ಟ್‌ಗೆ ತಿಳಿಸಿದ್ದರು. ಸಿದ್ದಿಕಿ ಅವರಿಗೆ ಅದಾಗಲೇ ಮದುವೆ ಆಗಿ ಮೂವರು ಮಕ್ಕಳಿದ್ದರು.

'ಪಶ್ಚಿಮ ದೇಶಗಳ ಸಾಂಸ್ಕೃತಿಕ ಪ್ರಭಾವದ ಕಾರಣದಿಂದಾಗಿ, ಮದುವೆ ಎನ್ನುವ ಆಚರಣೆಯು ಈ ಹಿಂದೆ ಜನರ ಮೇಲೆ ಹೊಂದಿದ್ದ ಪ್ರಭಾವವು ಈಗ ಉಳಿದಿಲ್ಲ. ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇದು ಗೋಚರಿಸುತ್ತದೆ. ಈ ಪರಿವರ್ತನೆ ಹಾಗೂ ವೈವಾಹಿಕ ಹೊಣೆಗಾರಿಕೆಗಳ ವಿಚಾರವಾಗಿ ಉದಾಸೀನ ಧೋರಣೆಯು ಲಿವ್–ಇನ್ ಸಂಬಂಧಗಳಿಗೆ ಬಹುಶಃ ಜನ್ಮನೀಡಿರಬಹುದು' ಎಂದು ಪೀಠ ವಿವರಿಸಿದೆ.

ಆದರೆ, ಇಂತಹ ಸಂಬಂಧಗಳಲ್ಲಿ ಇರುವ ಮಹಿಳೆಯರನ್ನು ರಕ್ಷಿಸುವುದು ಬಹಳ ಮುಖ್ಯವಾಗುತ್ತದೆ. ಏಕೆಂದರೆ, ಲಿವ್–ಇನ್ ಸಂಬಂಧಗಳ ಸಂಗಾತಿಯಿಂದ ಹಿಂಸೆಗೆ ಗುರಿಯಾಗುವವರೂ ಅವರೇ ಎಂದು ಅದು ಹೇಳಿದೆ.

ನಯಾಬ್ ಸಿಂಗ್ ಸೈನಿ ಸರ್ಕಾರ ಅಲ್ಪಮತಕ್ಕೆ ಕುಸಿತ • ರಾಷ್ಟ್ರಪತಿ ಆಳ್ವಿಕೆಗೆ ಒತ್ತಾಯ

ಹರಿಯಾಣ ಸರ್ಕಾರ ವಜಾಕ್ಕೆ ಕಾಂಗ್ರೆಸ್ ಆಗ್ರಹ



ನಯಾಬ್ ಸಿಂಗ್ ಸೈನಿ

ಚಂಡೀಗಢ (ಪಿಟಿಐ): ಹರಿಯಾಣದ ಬಿಜೆಪಿ ಸರ್ಕಾರಕ್ಕೆ ಮೂವರು ಪಕ್ಷೇತರ ಶಾಸಕರು ಬೆಂಬಲ ಹಿಂಪಡೆದಿದ್ದರಿಂದ ನಯಾಬ್ ಸಿಂಗ್ ಸೈನಿ ಸರ್ಕಾರ ಅಲ್ಪಮತಕ್ಕೆ ಕುಸಿದಿದ್ದು, ಅದನ್ನು ಕೂಡಲೇ ವಜಾಗೊಳಿಸಬೇಕು ಎಂದು ಕಾಂಗ್ರೆಸ್ ರಾಜ್ಯಪಾಲರನ್ನು ಆಗ್ರಹಿಸಿದೆ.

ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಮತ್ತು ಹೊಸದಾಗಿ ಚುನಾವಣೆ ಘೋಷಿಸಲು ಒತ್ತಾಯಿಸಿ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರಿಗೆ ಪತ್ರ ಬರೆಯುವುದಾಗಿ ಹರಿಯಾಣದ ಕಾಂಗ್ರೆಸ್ ಘಟಕ ತಿಳಿಸಿದೆ. ಅಲ್ಲದೆ, ಇದೇ ರೀತಿ ಜನನಾಯಕ ಜನತಾ ಪಕ್ಷ (ಜೆಜೆಪಿ), ಐಎನ್‌ಎಲ್‌ಡಿಯ ಅಭಯ್ ಸಿಂಗ್ ಚೌತಾಲಾ ಮತ್ತು ಪಕ್ಷೇತರ ಶಾಸಕ ಬಲರಾಜ್ ಕುಂದು ಅವರೂ ರಾಜ್ಯಪಾಲರಿಗೆ ಪತ್ರ ಬರೆಯಬೇಕು ಎಂದು ಕಾಂಗ್ರೆಸ್ ಕೇಳಿಕೊಂಡಿದೆ.

'ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದಿರುವ ಮೂವರು ಪಕ್ಷೇತರರು ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ್ದಾರೆ ಎಂಬುದನ್ನು ನಾವು ರಾಜ್ಯಪಾಲರಿಗೆ ಪತ್ರ ಮುಖೇನ ತಿಳಿಸಲಿದ್ದೇವೆ' ಎಂದು ಹರಿಯಾಣ ಕಾಂಗ್ರೆಸ್ ಮುಖ್ಯಸ್ಥ ಉದಯ್ ಭಾನ್ ತಿಳಿಸಿದ್ದಾರೆ.

ಈ ಹಿಂದೆ ರಾಜ್ಯದಲ್ಲಿ ಬಿಜೆಪಿಯ ಮಿತ್ರ ಪಕ್ಷವಾಗಿದ್ದ ಜೆಜೆಪಿ ಸಹ ರಾಜ್ಯಪಾಲರಿಗೆ ಪತ್ರ ಬರೆದು, ತಾವು ಸರ್ಕಾರವನ್ನು ಬೆಂಬಲಿಸುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಬಿ. ಬಾತ್ರಾ ಹೇಳಿದ್ದಾರೆ.

ಜೆಜೆಪಿ ನಾಯಕ ದಿಗ್ವಿಜಯ್ ಸಿಂಗ್ ಚೌತಾಲಾ ಅವರು, ಸೈನಿ ಸರ್ಕಾರವು ಜನರ ವಿಶ್ವಾಸವನ್ನು ಕಳೆದುಕೊಂಡಿದ್ದು, ಅದನ್ನು ಪತನಗೊಳಿಸಲು ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ ಅವರು ಪ್ರಕ್ರಿಯೆ ಪ್ರಾರಂಭಿಸಬೇಕು ಎಂದಿದ್ದಾರೆ. ಈ ಕಾರ್ಯಕ್ಕೆ ಕಾಂಗ್ರೆಸ್‌ಗೆ ಜೆಜೆಪಿಯ ಬೆಂಬಲ ಇದೆ ಎಂದಿದ್ದಾರೆ.

ಸರ್ಕಾರಕ್ಕೆ ತೊಂದರೆ ಇಲ್ಲ: 'ಹರಿಯಾಣದ ಬಿಜೆಪಿ ಸರ್ಕಾರಕ್ಕೆ ಯಾವುದೇ ತೊಂದರೆಯಿಲ್ಲ, ಅದು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದೆ' ಎಂದು ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಬುಧವಾರ ಹೇಳಿದ್ದಾರೆ.

ಮೂವರು ಪಕ್ಷೇತರ ಶಾಸಕರು ಬಿಜೆಪಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂಪಡೆದ ಒಂದು ದಿನದ ಬಳಿಕ ಅವರ ಪ್ರತಿಕ್ರಿಯಿಸಿದ್ದಾರೆ.

'ರಾಜ್ಯ ಸರ್ಕಾರವು ಸಂಕಷ್ಟದಲ್ಲಿದೆ ಎಂದು ಗೊಂದಲ ಸೃಷ್ಟಿಸಲು ಕಾಂಗ್ರೆಸ್ ಯತ್ನಿಸುತ್ತಿದೆ' ಎಂದು ಆರೋಪಿಸಿದ ಅವರು, ತಮ್ಮ ಸರ್ಕಾರಕ್ಕೆ ಯಾವುದೇ ತೊಂದರೆ ಇಲ್ಲ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಇಡೀ ದೇಶವು ಕಾಂಗ್ರೆಸ್‌ನ ಇತಿಹಾಸವನ್ನು ನೋಡಿದೆ. ಲೋಕಸಭೆ ಅಥವಾ ರಾಜ್ಯದಲ್ಲಿ ಬಹುಮತ ಕೊರತೆ ಇದ್ದಾಗ ಅವರು ಹೇಗೆ ನಡೆದುಕೊಂಡಿದ್ದಾರೆ ಎಂಬುದು ಗೊತ್ತಿದೆ' ಎಂದು ಅವರು ಹೇಳಿದ್ದಾರೆ.

ಪ್ರಸ್ತುತ 88 ಸದಸ್ಯರ ಬಲ ಹೊಂದಿರುವ ವಿಧಾನಸಭೆಯಲ್ಲಿ ಇಬ್ಬರು ಪಕ್ಷೇತರ ಶಾಸಕರ ಬೆಂಬಲವನ್ನು ಸರ್ಕಾರ ಹೊಂದಿದೆ. ಆದರೆ ಬಹುಮತಕ್ಕೆ ಇಬ್ಬರು ಶಾಸಕರ ಕೊರತೆಯಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,302
ಇಂದಿನ ಅಂತ್ಯ	22,302
	೦
ದಿನದ ಗರಿಷ್ಠ	22,268

ವಿನಿಮಯ ದರ

$ ಡಾಲರ್	83.52
£ ಪೌಂಡ್	104.30
€ ಯುರೊ	89.78
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹72
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1510 (1510)
ಸೋಯಾ (ರಿಫೈನ್ಡ್)	₹920 (920)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹894 (898)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-9100
ಕೆ.ಆರ್.ಪೇಟೆ	₹9550-9550
ಮಧುಗಿರಿ	₹7500-9000
ತಿಪಟೂರು	₹8300-8800

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹177
ಆರ್‌ಎಸ್‌ಎಸ್-5 ₹170
ಗುಡ್ ಲಾಟ್ ₹159
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹315-501
ದ್ವಿತಳಿ (ಬಿ.ವಿ) ₹333-632

ಎಲ್ ಆ್ಯಂಡ್ ಟಿ ಕಂಪನಿ ಟಿವಿಎಸ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಮತ್ತು ನಿರ್ಮಾಣ ಕಂಪನಿ ಲಾರ್ಸೆನ್ ಆ್ಯಂಡ್ ಟೊಬ್ರೊ, 2023–24ನೇ ಹಣಕಾಸು ವರ್ಷದಲ್ಲಿ ₹4,396 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ಅವಧಿಯಲ್ಲಿ ₹3,986 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 10ರಷ್ಟು ಏರಿಕೆಯಾಗಿದೆ. ವರಮಾನವು ₹59,076 ಕೋಟಿಯಿಂದ ₹68,120 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

ಈ ಆರ್ಥಿಕ ವರ್ಷದಲ್ಲಿ ₹3 ಲಕ್ಷ ಕೋಟಿ ಬಂಡವಾಳ ಒಳಹರಿವು ಮತ್ತು ₹4.75 ಲಕ್ಷ ಕೋಟಿ ಮೌಲ್ಯದ ಆರ್ಡರ್‌ಗಳನ್ನು ಸ್ವೀಕರಿಸಲಾಗಿದೆ. ಪ್ರತಿ ಈಕ್ವಿಟಿ ಷೇರಿಗೆ ₹28 ಲಾಭಾಂಶ ನೀಡಲು ಮಂಡಳಿಯು ಶಿಫಾರಸು ಮಾಡಿದೆ ಎಂದು ಕಂಪನಿ ತಿಳಿಸಿದೆ.

ಟಿವಿಎಸ್ ಲಾಭ ಹೆಚ್ಚಳ: ಟಿವಿಎಸ್ ಮೋಟರ್ ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ₹387 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 15ರಷ್ಟು ಏರಿಕೆಯಾಗಿದೆ. ವಾಹನಗಳ ಮಾರಾಟದ ಹೆಚ್ಚಳದಿಂದಾಗಿ ಲಾಭ ಹೆಚ್ಚಳವಾಗಿದೆ ಎಂದು ಕಂಪನಿ ತಿಳಿಸಿದೆ.

ವರಮಾನವು ₹8,031 ಕೋಟಿಯಿಂದ ₹10,042 ಕೋಟಿಗೆ ಏರಿಕೆಯಾಗಿದೆ. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಶೇ 22ರಷ್ಟು ಏರಿಕೆಯಾಗಿದ್ದು, ₹10.63 ಲಕ್ಷ ವಾಹನಗಳು ಮಾರಾಟವಾಗಿವೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ಕಂಪನಿಯ ₹41.91 ಲಕ್ಷ ವಾಹನಗಳು ಮಾರಾಟವಾಗಿವೆ. ಹಿಂದಿನ ಇದೇ ಅವಧಿಗೆ ಹೋಲಿಸಿದರೆ ಮಾರಾಟದಲ್ಲಿ ಶೇ 14ರಷ್ಟು ಏರಿಕೆ ಕಂಡಿದೆ. ಲಾಭವು ₹1,329 ಕೋಟಿಯಿಂದ ₹1,686 ಕೋಟಿಗೆ ಹೆಚ್ಚಳವಾಗಿದೆ. ವರಮಾನವು ₹31,974 ಕೋಟಿಯಿಂದ ₹39,145 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನಿಂದ ವರದಿ ಕೇಳಿದ ವಿಮಾನಯಾನ ಸಚಿವಾಲಯ

90 ವಿಮಾನ ಸಂಚಾರ ರದ್ದು

ನವದೆಹಲಿ/ ಕೊಚ್ಚಿ (ಪಿಟಿಐ): ಕ್ಯಾಬಿನ್ ಸಿಬ್ಬಂದಿ ಏಕಾಏಕಿ ಅನಾರೋಗ್ಯದ ರಜೆ ಹಾಕಿರುವುದರಿಂದ ಟಾಟಾ ಸಮೂಹದ ಒಡೆತನಕ್ಕೆ ಸೇರಿದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯ 90ಕ್ಕೂ ಹೆಚ್ಚು ವಿಮಾನಗಳ ಸಂಚಾರ ರದ್ದಾಗಿದೆ.

ಮಂಗಳವಾರ ರಾತ್ರಿಯಿಂದಲೇ ಕೊಚ್ಚಿ, ಕ್ಯಾಲಿಕಟ್, ನವದೆಹಲಿ ಮತ್ತು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಹಲವು ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿದೆ. ಇದರಿಂದ ಅಂತರ ರಾಷ್ಟ್ರೀಯ ಹಾಗೂ ದೇಶೀಯ ಮಾರ್ಗದಲ್ಲಿ ವಿವಿಧೆಡೆಗೆ ತೆರಳಬೇಕಿದ್ದ ಸಾವಿರಾರು ಪ್ರಯಾಣಿಕರಿಗೆ ತೊಂದರೆಯಾಗಿದೆ.

ವಿಮಾನ ಸಂಚಾರ ದಿಢೀರ್ ರದ್ದಾದ ಬಗ್ಗೆ ಕೊಚ್ಚಿ ಮತ್ತು ಕಣ್ಣೂರು ವಿಮಾನ ನಿಲ್ದಾಣಗಳಲ್ಲಿ ಗಲ್ಫ್ ದೇಶಗಳಿಗೆ ತೆರಬೇಕಿದ್ದ ಪ್ರಯಾಣಿಕರು ಪ್ರತಿಭಟನೆ ನಡೆಸಿದರು. ತಿರುವನಂತಪುರಂ ಹಾಗೂ ಕೋಯಿಕ್ಕೋಡ್ ವಿಮಾನ ನಿಲ್ದಾಣಗಳಲ್ಲೂ ಇದೇ ಪರಿಸ್ಥಿತಿ ಕಂಡುಬಂದಿತು.

ಆಡಳಿತ ಮಂಡಳಿಯ ಅವ್ಯವಸ್ಥೆ ಖಂಡಿಸಿ 200ಕ್ಕೂ ಹೆಚ್ಚು ಹಿರಿಯ ಸಿಬ್ಬಂದಿ ರಜೆ ಹಾಕಿದ್ದಾರೆ ಎಂದು ಹೇಳಲಾಗಿದೆ.

ಭದ್ರತಾ ತಪಾಸಣೆ ಪ್ರಕ್ರಿಯೆ ಮುಗಿದ ಬಳಿಕ ವಿಮಾನ ಹಾರಾಟ ರದ್ದಾದ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಹಲವು ಪ್ರಯಾಣಿಕರು ದೂರಿದ್ದಾರೆ.

> ಕ್ಯಾಬಿನ್ ಸಿಬ್ಬಂದಿಯ ಕೊರತೆಯಿಂದಾಗಿ ಮುಂದಿನ ಕೆಲವು ದಿನಗಳವರೆಗೆ ವಿಮಾನ ಸೇವೆಯಲ್ಲಿ ವ್ಯತ್ಯಯವಾಗಲಿದೆ
>
> **ಅಲೋಕೆ ಸಿಂಗ್,** ಸಿಇಒ, ಏರ್ ಇಂಡಿಯಾ ಎಕ್ಸ್‌ಪ್ರೆಸ್

‘ನಾನು ಮೇ 9ರಂದು ಶಾರ್ಜಾದಲ್ಲಿ ಮತ್ತೆ ಕೆಲಸಕ್ಕೆ ಸೇರಬೇಕಿದೆ. ಆದರೆ, 10ರಂದು ಕೊಚ್ಚಿಯಿಂದ ಶಾರ್ಜಾಕ್ಕೆ ವಿಮಾನ ಸಂಚರಿಸಲಿದೆ ಎಂದು ಕಂಪನಿ ಹೇಳಿದೆ. ಇದರಿಂದ ನಾನು ಕೆಲಸ ಕಳೆದುಕೊಳ್ಳುವಂತಾಗಿದೆ’ ಎಂದು ಮಹಿಳೆಯೊಬ್ಬರು ಅಳಲು ತೋಡಿಕೊಂಡಿದ್ದಾರೆ.

‘ಕೊನೆಯ ಕ್ಷಣದಲ್ಲಿ ಕೆಲವು ಸಿಬ್ಬಂದಿ ಮಂಗಳವಾರ ರಾತ್ರಿಯಿಂದ ರಜೆಯ ಮೇಲೆ ತೆರಳಿದ್ದಾರೆ. ಹಾಗಾಗಿ, ವಿಮಾನ ಸೇವೆಯಲ್ಲಿ ವ್ಯತ್ಯಯವಾಗಿದೆ’ ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ.

‘ಸಿಬ್ಬಂದಿ ಎದುರಿಸುತ್ತಿರುವ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದ್ದು, ಪ್ರಯಾಣಿಕರಿಗೆ ಆಗಿರುವ ತೊಂದರೆ ತಪ್ಪಿಸಲು ಕಂಪನಿಯ ತಂಡವು ಕಾರ್ಯನಿರತವಾಗಿದೆ. ಪ್ರಯಾಣಿಕರಿಗೆ ಆಗಿರುವ ವಿಳಂಬಕ್ಕೆ ಕ್ಷಮೆಯಾಚಿಸುತ್ತೇವೆ. ಪ್ರಯಾಣಿಕರಿಗೆ ಟಿಕೆಟ್ ಹಣವನ್ನು ವಾಪಸ್ ನೀಡಲಾಗುವುದು ಅಥವಾ ಪರ್ಯಾಯ ದಿನಾಂಕವನ್ನು ನಿಗದಿ ಪಡಿಸಲಾಗುವುದು’ ಎಂದು ಹೇಳಿದ್ದಾರೆ.

ವರದಿ ಕೇಳಿದ ಕೇಂದ್ರ: ವಿಮಾನ ಸೇವೆ ವ್ಯತ್ಯಯದ ಬಗ್ಗೆ ವರದಿ ಸಲ್ಲಿಸುವಂತೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು, ಕಂಪನಿಗೆ ಸೂಚಿಸಿದೆ.

ಅಲ್ಲದೆ, ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ (ಡಿಜಿಸಿಎ) ಮಾರ್ಗಸೂಚಿ ಅನ್ವಯ ತೊಂದರೆಗೆ ಸಿಲುಕಿರುವ ಪ್ರಯಾಣಿಕರಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದು ಸೂಚಿಸಿದೆ.

ಎಐಎಕ್ಸ್ ಕನೆಕ್ಟ್ ವಿಲೀನಕ್ಕೆ ವಿರೋಧ

ಟಾಟಾ ಸಮೂಹವು ಎಐಎಕ್ಸ್ ಕನೆಕ್ಟ್‌ನಲ್ಲಿ (ಏರ್‌ಏಷ್ಯಾ ಇಂಡಿಯಾ ಏರ್‌ಲೈನ್ಸ್) ಹೆಚ್ಚಿನ ಷೇರುಗಳನ್ನು ಹೊಂದಿದೆ. ನಷ್ಟದಲ್ಲಿರುವ ಈ ಏರ್‌ಲೈನ್ಸ್ ಅನ್ನು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಜೊತೆಗೆ ವಿಲೀನಕ್ಕೆ ಮುಂದಾಗಿದೆ. ಇದಕ್ಕೆ ಸಿಬ್ಬಂದಿ ಅಸಮಾಧಾನಗೊಂಡಿದ್ದಾರೆ ಎಂದು ಹೇಳಲಾಗಿದೆ.

ವೇತನ ತಾರತಮ್ಯ ಖಂಡಿಸಿ ವಿಸ್ತಾರಾ ಏರ್‌ಲೈನ್ಸ್‌ನ ಪೈಲಟ್‌ಗಳು ಪ್ರತಿಭಟನೆ ನಡೆಸಿದ ಒಂದು ತಿಂಗಳ ಬಳಿಕ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಿಬ್ಬಂದಿ ಕೂಡ ಪ್ರತಿಭಟನೆಗೆ ಇಳಿದಿದ್ದಾರೆ.

‘ಆಡಳಿತ ಮಂಡಳಿಯ ಕೆಟ್ಟ ನಿರ್ವಹಣೆಯು ಸಿಬ್ಬಂದಿಯ ಮಾನಸಿಕ ಸ್ಥೈರ್ಯವನ್ನು ಕುಗ್ಗಿಸಲಿದೆ’ ಎಂದು ಸುಮಾರು 300 ಸಿಬ್ಬಂದಿಯನ್ನು ಒಳಗೊಂಡಿರುವ ಏರ್ ಇಂಡಿಯಾ ಎಕ್ಸ್‌ಪ್ರೆಸ್ ನೌಕರರ ಒಕ್ಕೂಟ ಹೇಳಿದೆ.

ಬೇಸಿಗೆ ಅವಧಿಯಲ್ಲಿ ಈ ಕಂಪನಿಯ 360ಕ್ಕೂ ಹೆಚ್ಚು ವಿಮಾನಗಳು ಕಾರ್ಯಾಚರಣೆ ನಡೆಸುತ್ತಿವೆ.

ಸುದ್ದಿ 2 ನಿಮಿಷ

ಕೆನರಾ ಬ್ಯಾಂಕ್‌ಗೆ ₹3,757 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹3,757 ಕೋಟಿ ಲಾಭಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹3,175 ಕೋಟಿ ಲಾಭಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 18ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಮಾಹಿತಿ ನೀಡಿದೆ.

ಕೊನೆಯ ತ್ರೈಮಾಸಿಕದಲ್ಲಿ ವರಮಾನವು ₹28,685 ಕೋಟಿಯಿಂದ ₹34,025 ಕೋಟಿಗೆ ಹೆಚ್ಚಳವಾಗಿದೆ. ಬಡ್ಡಿ ವರಮಾನವು ₹23,910 ಕೋಟಿಯಿಂದ ₹28,807 ಕೋಟಿಗೆ ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 5.35ರಿಂದ ಶೇ 4.23ಕ್ಕೆ ಕುಗ್ಗಿದೆ. ನಿವ್ವಳ ಎನ್‌ಪಿಎ ಶೇ 1.73ರಿಂದ ಶೇ 1.27ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದೆ.

ಭವಿಷ್ಯದಲ್ಲಿ ಎದುರಾಗ ಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹2,399 ಕೋಟಿಯಿಂದ ₹2,280 ಕೋಟಿಗೆ ತಗ್ಗಿದೆ. ಬಂಡವಾಳ ಪರ್ಯಾಪ್ತತಾ ಅನುಪಾತ (ಸಿಆರ್‌ಎಆರ್) ಶೇ 16.68ರಿಂದ ಶೇ 16.28ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದೆ.

ಲಾಭಾಂಶ: ₹10 ಮುಖಬೆಲೆಯ ಪ್ರತಿ ಷೇರಿಗೆ ₹16.10 ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ. ವಾರ್ಷಿಕ ಸಭೆಯಲ್ಲಿ ಇದಕ್ಕೆ ಅನುಮೋದನೆ ದೊರೆತ ಬಳಿಕ ವಿತರಿಸಲಾಗುತ್ತದೆ.

ಟಾಟಾ ಪವರ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಪವರ್ ಕಂಪನಿಯು, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹1,046 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹939 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ11ರಷ್ಟು ಏರಿಕೆಯಾಗಿದೆ. ವರಮಾನವು ₹13,325 ಕೋಟಿಯಿಂದ ₹16,463 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

2023-24ರ ಪೂರ್ಣ ಹಣಕಾಸು ವರ್ಷದಲ್ಲಿ ₹4,280 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹3,810 ಕೋಟಿ ಗಳಿಸಿತ್ತು. ವರಮಾನವು ₹56,547 ಕೋಟಿಯಿಂದ ₹63,272 ಕೋಟಿಗೆ ಏರಿಕೆಯಾಗಿದೆ. ಕಂಪನಿಯ ಮಾರುಕಟ್ಟೆ ಮೌಲ್ಯ ₹1.4 ಲಕ್ಷ ಕೋಟಿ ದಾಟಿದೆ ಎಂದು ತಿಳಿಸಿದೆ.

ಶೇ 200ರಷ್ಟು ಲಾಭಾಂಶ: ಲಾಭದಲ್ಲಿ ಏರಿಕೆಯಾಗಿರುವುದರಿಂದ ಕಂಪನಿಯು ಶೇ 200ರಷ್ಟು ಲಾಭಾಂಶ ಘೋಷಿಸಿದೆ.

₹1 ಬೆಲೆಯ ಪ್ರತಿ ಈಕ್ವಿಟಿ ಷೇರಿಗೆ ₹2 (ಶೇ 200ರಷ್ಟು) ಲಾಭಾಂಶ ನೀಡಲು ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೋಗ 8095555517

Teachers/ Professors

WANTED HEADMASTER and Teachers for Primary and High school all subjects @M.E.S Convent , Anjaneya badavane 9th cross, Davanagere. Contact 9880436414

Wanted

WORK FROM Home. ಮನೆಯಲ್ಲಿ ಕುಳಿತು 10,000 - 20,000 ದುಡಿಯಬಹುದು. ವಯೋಮಿತಿಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಪ್ರವಾಸ

Travel

19.06.2024 09.07.2024 18.09.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 07.06.2024 06.07.2024 ನೇಪಾಳ 9 ದಿನಗಳು. 07.06.2024 ಅಸ್ಸಾಂ,ಮೇಘಾಲಯ 9 ದಿನಗಳು. 13.10.2024 24.11.202407.12.2024 ರಾಜಸ್ತಾನ 10 ದಿನಗಳು. 17.10.2024 26.11.202410.12.2024 ಗುಜರಾತ ಓಂಕಾರೇಶ್ವರ ಉಜ್ಜಯಿನಿ 8/12 ದಿನಗಳು. 5.10.2024 04.11.2024 07.12. 2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. 17.10.2024 26.11.202410.12.2024 ಮಧ್ಯಪ್ರದೇಶ 9 ದಿನಗಳು. ರೈಲಿನಲ್ಲಿ ಪ್ರಯಾಣಿಸುವವರು 120 ದಿನಗಳ ಮುಂಚಿತವಾಗಿ ತಮ್ಮ ಸೀಟುಗಳನ್ನು ಕಾಯ್ದಿರಿಸಬೇಕು. ಇದಲ್ಲದೇ ಫಾಮಿಲಿ ಪ್ರವಾಸಿಗಳಿಗೆ ವಿಚಾರಿಸಿರಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ದಿನಗಳು ಈಶಾನ್ಯರಾಜ್ಯಗಳ (ಸೆವೆನ್-ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 20.05.2024 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಸಹಿತ 4ವಿಮಾನಗಳಲ್ಲಿ (ಕೆಲವೇ ಸೀಟುಗಳು ಲಭ್ಯತೆ), 26.06.2024,15.07.2024 6/12ದಿನಗಳು ಅಮರನಾಥಯಾತ್ರಾ ಸಹಿತ ಲೇ-ಲಡಾಕ್,20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ, 09.09.2024,21.09.2024 12ದಿನಗಳು ಚಾರ್-ದಾಮ್ ಯಾತ್ರಾ ವಿಶೇಷ, 24.05.2024,20.06.2024, 6ದಿನಗಳು ಭೂತಾನ್ ರಾಷ್ಟ್ರ ಪ್ರವಾಸ.9743351212, 9206979202, 8792319181

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ್, ವೈಷ್ಣೋದೇವಿ, ಕಾಶ್ಮೀರ,ಕುರುಕ್ಷೇತ್ರ ಆಗ್ರ,ದೆಹಲಿ ಇತ್ಯಾದಿ 28000/ ಮೇ,ಜುನ್ ನಲ್ಲಿ 5/8ದಿನಗಳು ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ವೈವಾಹಿಕ

Brides Wanted

Second Marriage

ಬೇಕಾಗಿದ್ದಾರೆ ಮಕ್ಕಳಿಲ್ಲದ ವಿಧವಾ ಹೆಣ್ಣುಬೇಕಾಗಿದೆ. ಅನಾಥ/ 40ವರ್ಷ ವಯೋಮಿತಿ. ಲಿಂಗಾಯಿತರಿಗೆ ಆದ್ಯತೆ: ಆಸಕ್ತಿಯಿದ್ದಲ್ಲಿ ಆದಾರ್‌ಕಾರ್ಡ್ ಗುರುತಿನ ಚೀಟಿಯೊಂದಿಗೆ ನೇರಸಂಪರ್ಕಿಸಿ. 9448175385

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

2022ರಲ್ಲಿ ವಿದೇಶಗಳಿಂದ ₹9.26 ಲಕ್ಷ ಕೋಟಿ ರವಾನೆ

ಹಣದ ಒಳಹರಿವು: ಭಾರತ ಮುಂಚೂಣಿ

ವಿಶ್ವಸಂಸ್ಥೆ (ಪಿಟಿಐ): ವಿದೇಶಗಳಲ್ಲಿ ದುಡಿಯುತ್ತಿರುವವರು ತಾಯ್ನಾಡಿಗೆ ರವಾನಿಸುವ ಹಣದ ಪ್ರಯೋಜನ ಪಡೆಯುವಲ್ಲಿ ಭಾರತವು ಅಗ್ರಸ್ಥಾನದಲ್ಲಿದ್ದು, ಮೆಕ್ಸಿಕೊ, ಚೀನಾ, ಫಿಲಿಪ್ಪೀನ್ಸ್ ಮತ್ತು ಫ್ರಾನ್ಸ್ ನಂತರದ ಸ್ಥಾನದಲ್ಲಿವೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

2022ರಲ್ಲಿ ಭಾರತಕ್ಕೆ ವಿವಿಧ ದೇಶಗಳಿಂದ ರವಾನೆಯಾಗಿರುವ ಹಣದ ಒಟ್ಟು ಮೌಲ್ಯವು ₹9.26 ಲಕ್ಷ ಕೋಟಿ ಆಗಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ 2024ರ ವರದಿ (ಐಒಎಂ) ತಿಳಿಸಿದೆ.

ಪಾಕಿಸ್ತಾನ ಆರು ಮತ್ತು ಬಾಂಗ್ಲಾದೇಶ ಎಂಟನೇ ಸ್ಥಾನದಲ್ಲಿದೆ. ಈ ಎರಡು ದೇಶಗಳಿಗೆ ಕ್ರಮವಾಗಿ ₹2.50 ಲಕ್ಷ ಕೋಟಿ ಹಾಗೂ ₹1.79 ಲಕ್ಷ ಕೋಟಿ ರವಾನೆಯಾಗಿದೆ. ದಕ್ಷಿಣ ಏಷ್ಯಾ ಭಾಗದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯುತ್ತಿವೆ. ಈ ದೇಶಗಳ ವಲಸಿಗರ ಸಂಖ್ಯೆಯೂ ಹೆಚ್ಚಿದೆ ಎಂದು ವರದಿ ತಿಳಿಸಿದೆ.

ವಲಸಿಗ ನೌಕರರು ರವಾನಿಸುವ ಹಣವು ಆಯಾ ದೇಶಗಳಲ್ಲಿ ವಾಸಿಸುವ ಆ ನೌಕರರ ಹಲವು ಕುಟುಂಬಸ್ಥರಿಗೆ ಜೀವನಾಧಾರ ವಾಗಿದೆ. ಆದರೆ, ವಲಸಿಗರು ಕೆಲಸದ ಸ್ಥಳಗಳಲ್ಲಿ ಆರ್ಥಿಕ ಶೋಷಣೆ, ಸಾಲದ ಹೊರೆ, ವಲಸೆ ವೆಚ್ಚ, ಪರಕೀಯರಿಂದ ದ್ವೇಷ ಹಾಗೂ ತಾರತಮ್ಯ ಎದುರಿಸುತ್ತಿದ್ದಾರೆ ಎಂದು ತಿಳಿಸಿದೆ.

ಇಡೀ ವಿಶ್ವದಲ್ಲಿ ಗಲ್ಫ್ ರಾಷ್ಟ್ರಗಳು ವಲಸೆ ನೌಕರರಿಗೆ ಉದ್ಯೋಗದ ಪ್ರಮುಖ ನೆಲೆಗಳಾಗಿವೆ. ಯುಎಇನ ಒಟ್ಟು ಜನಸಂಖ್ಯೆಯಲ್ಲಿ ಶೇ 88ರಷ್ಟು ವಲಸಿಗರಿದ್ದರೆ, ಕುವೈತ್‌ನಲ್ಲಿ ಶೇ 73 ಹಾಗೂ ಕತಾರ್‌ನಲ್ಲಿ ಶೇ 77ರಷ್ಟು ಇದ್ದಾರೆ ಎಂದು ಹೇಳಿದೆ.

ಭಾರತದ ಒಟ್ಟು ಜನಸಂಖ್ಯೆಯ ಶೇ 1.3ರಷ್ಟು (1.80 ಕೋಟಿ) ಜನರು ಕೆಲಸಕ್ಕಾಗಿ ವಿದೇಶಗಳಿಗೆ ವಲಸೆ ಹೋಗಿದ್ದಾರೆ. ಯುಎಇ, ಅಮೆರಿಕ ಮತ್ತು ಸೌದಿ ಅರೇಬಿಯಾದಲ್ಲಿ ನೆಲೆಸಿದ್ದಾರೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

8-5-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1520)
ಒಂದು ವಾರದ ಡೆಲಿವರಿ	1515 (1515)
ಸೋಯಾ ಕಚ್ಚಾ	865 (865)
ಪಾಮ್ ವಾರದ ಡೆಲಿವರಿ	892 (896)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹71,250 (71,450)

ಬೆಳ್ಳಿ ಕೆ.ಜಿ ₹81,500 (81,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಾಗೃತಿ ವಿಶ್ವ ಥಲಸ್ಸೆಮಿಯಾ ದಿನದ ಅಂಗವಾಗಿ ಈ ಮಾರಣಾಂತಿಕ ರೋಗದ ವಿರುದ್ಧ ಜಾಗೃತಿ ಮೂಡಿಸಲು ನವದೆಹಲಿಯ ಇಂಡಿಯಾ ಗೇಟ್ ಬುಧವಾರ ಕೆಂಪು ಬಣ್ಣದ ಬೆಳಕಿನಿಂದ ಮಿಂದೆದ್ದಿತು –ಪಿಟಿಐ ಚಿತ್ರ

ಆ್ಯಂಡ್ರಾಯ್ಡ್ ಬಳಕೆದಾರರಿಗೆ ಗೂಗಲ್ ವಾಲೆಟ್ ಲಭ್ಯ

ನವದೆಹಲಿ (ಪಿಟಿಐ): ಗೂಗಲ್ ಕಂಪನಿಯು ಭಾರತದಲ್ಲಿ ಆ್ಯಂಡ್ರಾಯ್ಡ್ ಬಳಕೆದಾರರಿಗೆ ‘ಗೂಗಲ್ ವಾಲೆಟ್ ಆ್ಯಪ್’ ಅನ್ನು ಪರಿಚಯಿಸಿದೆ.

ಬೋರ್ಡಿಂಗ್ ಪಾಸ್, ಲಾಯಲ್ಟಿ ಕಾರ್ಡ್, ಇವೆಂಟ್ ಟಿಕೆಟ್, ಸಾರ್ವಜನಿಕ ಸಾರಿಗೆ ಟಿಕೆಟ್ ಸೇರಿ ಡಿಜಿಟಲ್ ಕಾರ್ಡ್‌ಗಳನ್ನು ಇದರಲ್ಲಿ ಸುರಕ್ಷಿತವಾಗಿ ಸ್ಟೋರ್ ಮಾಡಬಹುದಾಗಿದೆ. ಬಳಕೆದಾರರು ಪ್ಲೇ ಸ್ಟೋರ್‌ನಿಂದ ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ಕಂಪನಿಯು ತಿಳಿಸಿದೆ.

ಭಾರತದಲ್ಲಿ ಬುಧವಾರದಿಂದಲೇ ಇದು ಬಳಕೆದಾರರ ಸೇವೆಗೆ ಲಭ್ಯವಿದೆ. ಗೂಗಲ್ ಪೇಗೆ ಪೂರಕವಾಗಿ ಈ ವಾಲೆಟ್ ಸೇವೆ ಒದಗಿಸಲಾಗಿದೆ ಎಂದು ತಿಳಿಸಿದೆ.

ಈ ಹೊಸ ಸೇವೆಗಾಗಿ ಏರ್ ಇಂಡಿಯಾ, ಇಂಡಿಗೊ, ಫ್ಲಿಪ್‌ಕಾರ್ಟ್, ಪೈನ್ ಲ್ಯಾಬ್ಸ್, ಕೊಚ್ಚಿ ಮೆಟ್ರೊ, ಪಿವಿಆರ್ ಮತ್ತು ಐನಾಕ್ಸ್ ಸೇರಿ 20 ಸಂಸ್ಥೆಗಳ ಜೊತೆಗೆ ಪಾಲುದಾರಿಕೆ ಮಾಡಿ ಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಸ್ಥೆಗಳೊಂದಿಗೆ ಪಾಲುದಾರಿಕೆಯನ್ನು ವಿಸ್ತರಿಸಲಾಗುವುದು ಎಂದು ತಿಳಿಸಿದೆ.

‘ಗೂಗಲ್ ಪೇ ಆ್ಯಪ್ ಅನ್ನು ಹಿಂಪಡೆಯುವುದಿಲ್ಲ. ಇದು ಪ್ರೈಮರಿ ಪೇಮೆಂಟ್ ಆ್ಯಪ್ ಆಗಿ ಮುಂದುವರಿಯಲಿದೆ. ಪಾವತಿರಹಿತ ಬಳಕೆಗಾಗಿ ಗೂಗಲ್ ವಾಲೆಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ’ ಎಂದು ಗೂಗಲ್ ಆ್ಯಂಡ್ರಾಯ್ಡ್‌ನ ಭಾರತದ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ರಾಮ್ ಪಾಪಟ್ಲಾ ತಿಳಿಸಿದ್ದಾರೆ.

‘ಮುಂದಿನ ದಿನಗಳಲ್ಲಿ ಕಂಪನಿಯು ಹಣ ಪಾವತಿ ಹಾಗೂ ಪಾವತಿರಹಿತ ಸೇವೆಗೆ ಒಂದೇ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಿದೆ. ಗೂಗಲ್ ವಾಲೆಟ್‌ನಲ್ಲಿ ಬಳಕೆದಾರರ ಸುರಕ್ಷತೆ ಹಾಗೂ ಖಾಸಗಿತನದ ರಕ್ಷಣೆಗೂ ಒತ್ತು ನೀಡಲಾಗಿದೆ’ ಎಂದು ಹೇಳಿದ್ದಾರೆ.

ಸಿನಿಮಾ/ಇವೆಂಟ್ ಟಿಕೆಟ್, ಬೋರ್ಡಿಂಗ್ ಪಾಸ್, ಮೆಟ್ರೊ ಟಿಕೆಟ್, ಕಚೇರಿ/ಕಾರ್ಪೊರೇಟ್ ಬ್ಯಾಡ್ಜ್ ಹಾಗೂ ಡಿಜಿಟಲೀಕರಣಗೊಂಡ ದಾಖಲೆಗಳನ್ನು ಗೂಗಲ್ ವಾಲೆಟ್‌ನಲ್ಲಿ ಸ್ಟೋರ್ ಮಾಡಬಹುದಾಗಿದೆ. ಬೋರ್ಡಿಂಗ್ ಪಾಸ್, ಲಾಯಲ್ಟಿ ಕಾರ್ಡ್, ಇವೆಂಟ್ ಟಿಕೆಟ್, ಗಿಫ್ಟ್ ಕಾರ್ಡ್‌ಗಳನ್ನು ಪ್ರತಿದಿನವೂ ಸುರಕ್ಷಿತವಾಗಿ ಸ್ಟೋರ್ ಮಾಡಬಹುದಾಗಿದೆ ಎಂದು ಕಂಪನಿ ತಿಳಿಸಿದೆ. ಸದ್ಯ ವಿಶ್ವದ 80ಕ್ಕೂ ಹೆಚ್ಚು ದೇಶಗಳಲ್ಲಿ ಗೂಗಲ್ ವಾಲೆಟ್ ಸೇವೆ ಲಭ್ಯವಿದೆ.

ಮಾರುಕಟ್ಟೆ ಧಾರಣೆ

(ಅಡಿಕೆ) ಬಂಟ್ವಾಳ	
ಕೋಕ	18000-28500
ಹೊಸತು	28500-37500
ಹಳತು	37500-46500
ಕುಮಟ	
ಬೆಟ್ಟೆ	38099-40099
ಚಿಪ್ಪು	26859-29599
ಕೋಕ	13189-25019
ಫ್ಯಾಕ್ಟರಿ	11509-20829
ಹಳೆಚಾಲಿ	38169-39999
ಹೊಸಚಾಲಿ	33999-37419
ಪುತ್ತೂರು	
ಹೊಸತು	26500-37500
ಸಾಗರ	
ಬಿಳಿಗೋಟು	27699-27809
ಚಾಲಿ	34199-34611
ಕೆಂಪುಗೋಟು	32899-34699
ರಾಶಿ	41899-51389
ಸಿಪ್ಪೆಗೋಟು	19739-19739
ಶಿವಮೊಗ್ಗ	
ಬೆಟ್ಟೆ	45500-54519
ಗೊರಬಲು	19550-34599
ರಾಶಿ	32829-52869
ಸರಕು	55029-72140
ಸಿದ್ದಾಪುರ	
ಬಿಳಿಗೋಟು	26819-31600
ಚಾಲಿ	34299-37129
ಕೋಕ	25619-29689
ಕೆಂಪುಗೋಟು	27700-29669
ರಾಶಿ	42899-48609
ತಟ್ಟಿಬೆಟ್ಟೆ	36382-48409
ಶಿರಸಿ	
ಬೆಟ್ಟೆ	31300-41709
ಬಿಳಿಗೋಟು	20100-31400
ಚಾಲಿ	34225-38429
ಕೆಂಪುಗೋಟು	30000-33899

ರಷ್ಯಾದಲ್ಲಿ ಉದ್ಯೋಗದ ಭರವಸೆ ನೀಡಿ ವಂಚನೆ : ನಾಲ್ವರ ಬಂಧನ

ನವದೆಹಲಿ(ರಾಯಿಟರ್ಸ್): ಆಕರ್ಷಕ ವೇತನದ ಉದ್ಯೋಗದ ಆಮಿಷ ಒಡ್ಡಿ ಭಾರತದ ಯುವಕರನ್ನು ರಷ್ಯಾಕ್ಕೆ ಕರೆದೊಯ್ದು ಅಲ್ಲಿನ ಸೇನೆಗೆ ಸೇರ್ಪಡೆ ಗೊಳಿಸಿರುವ ಪ್ರಕರಣದ ಜೊತೆ ನಂಟಿರುವ ಮಾನವ ಕಳ್ಳಸಾಗಣೆಗೆ ಸಂಬಂಧಿಸಿ ಸಿಬಿಐ ಅಧಿಕಾರಿಗಳು ನಾಲ್ವರನ್ನು ಬಂಧಿಸಿದ್ದಾರೆ.

ಒಬ್ಬ ಭಾಷಾಂತರಕಾರ, ವಿಮಾನ ಟಿಕೆಟ್ ಕಾಯ್ದಿರಿಸಿ ವೀಸಾ ಪಡೆಯಲು ನೆರವು ನೀಡುತ್ತಿದ್ದ ವ್ಯಕ್ತಿ ಹಾಗೂ ಇಬ್ಬರು ನೇಮಕ ಮಾಡಿಕೊಳ್ಳುವವರು ಸೇರಿದಂತೆ ಕೇರಳ ಮತ್ತು ತಮಿಳುನಾಡಿನಲ್ಲಿ ಒಟ್ಟು ನಾಲ್ವರನ್ನು ಮಂಗಳವಾರ ಬಂಧಿಸಲಾಗಿದೆ ಎಂದು ಸಿಬಿಐ ಹೇಳಿದೆ.

‘ಮಾನವ ಕಳ್ಳಸಾಗಣೆಯ ಈ ಅಂತರರಾಷ್ಟ್ರೀಯ ಜಾಲದ ಭಾಗವಾಗಿರುವ ಇತರ ಆರೋಪಿಗಳ ವಿರುದ್ಧ ತನಿಖೆ ನಡೆಯುತ್ತಿದೆ’ ಎಂದೂ ತಿಳಿಸಿದೆ.

‘ಈ ವಿಷಯ ಕುರಿತು ರಷ್ಯಾ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಪ್ರಕರಣದ ಗಂಭೀರತೆಯನ್ನು ವಿವರಿಸಲಾಗಿದೆ’ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

‘ಈ ಬೆಳವಣಿಗೆ ಕುರಿತಂತೆ ರಷ್ಯಾ ಅಧಿಕಾರಿಗಳು ಸಂಸ್ಥೆಗೆ ಪ್ರತಿಕ್ರಿಯಿಸಿಲ್ಲ’ ಎಂದು ರಾಯಿಟರ್ಸ್ ಹೇಳಿದೆ.

ರಷ್ಯಾದಲ್ಲಿ ಉದ್ಯೋಗ ಆಮಿಷ ಒಡ್ಡಿ ವಂಚಿಸುತ್ತಿರುವ ಜಾಲದ ಕುರಿತು ಶ್ರೀಲಂಕಾ ಹಾಗೂ ನೇಪಾಳ ಸಹ ತಮ್ಮ ನಾಗರಿಕರಿಗೆ ಎಚ್ಚರಿಕೆ ನೀಡಿವೆ.

ಅಭ್ಯರ್ಥಿ ಆಯ್ಕೆ: ಟ್ರಂಪ್, ಬೈಡನ್‌ಗೆ ಜಯ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷೀಯ ಚುನಾವಣೆಯಲ್ಲಿ ತಮ್ಮ ತಮ್ಮ ಪಕ್ಷಗಳಿಂದ ಸ್ಪರ್ಧಿಸಲು ಆಯ್ಕೆಯಾಗಿದ್ದಾರೆ. ಬರುವ ನವೆಂಬರ್‌ನಲ್ಲಿ ಅಮೆರಿಕದ ಅಧ್ಯಕ್ಷೀಯ ಚುನಾವಣೆ ನಡೆಯಲಿದೆ.

ಜೋ ಬೈಡನ್ ಅವರು ಇಂಡಿಯಾನಾ ಡೆಮಾಕ್ರಟಿಕ್ ಮತ್ತು ಡೊನಾಲ್ಡ್ ಟ್ರಂಪ್ ಅವರು ರಿಪಬ್ಲಿಕನ್ ಪಕ್ಷದಿಂದ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ವಿದೇಶಿ ಕಾರ್ಮಿಕರಿಗೆ ಇಪಿಎಫ್‌ಇಪಿ ಯೋಜನೆ

ಇಪಿಎಫ್: ಕೇಂದ್ರದ ನಿರ್ಧಾರ ರದ್ದು

ಬೆಂಗಳೂರು: ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಮತ್ತು ಉದ್ಯೋಗಿಗಳ ಪಿಂಚಣಿ (ಇಪಿ) ಯೋಜನೆಯನ್ನು ಭಾರತದಲ್ಲಿರುವ ವಿದೇಶಿ ಕಾರ್ಮಿಕರಿಗೆ ವಿಸ್ತರಿಸಿ 2008ರಲ್ಲಿ ಕೇಂದ್ರ ಸರ್ಕಾರ ಕೈಗೊಂಡಿದ್ದ ನಿರ್ಧಾರವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ನಗರದ ‘ಸ್ಟೋನ್ ಹಿಲ್ ಪ್ರತಿಷ್ಠಾನ’ ಸೇರಿದಂತೆ 20ಕ್ಕೂ ಹೆಚ್ಚು ಅರ್ಜಿದಾರರ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ‘ಇದೊಂದು ಅಸಾಂವಿಧಾನಿಕ ಮತ್ತು ಸ್ವೇಚ್ಛೆಯ ಕ್ರಮ’ ಎಂದು ಸಾರಿದೆ.

‘ನಿರ್ದಿಷ್ಟ ಉದ್ಯೋಗಿಗಳಿಗೆ ರೂಪಿಸಲಾಗಿರುವ ಈ ಯೋಜನೆಯನ್ನು ಭಾರಿ ಹಣ ಸಂಪಾದಿಸುವ ಶ್ರೀಮಂತ ವಿದೇಶಿ ಉದ್ಯೋಗಿಗಳ ಅಗತ್ಯ ಪೂರೈಸಲು ಅನುಮತಿಸಲಾಗದು’ ಎಂದು ನ್ಯಾಯಪೀಠ ಹೇಳಿದೆ.

‘ಈ ಕುರಿತ ಕಾಯ್ದೆಯನ್ನು ಕಡಿಮೆ ವೇತನ ಪಡೆಯುವವರಿಗೆ ನಿವೃತ್ತಿಯ ಬಳಿಕ ಅನುಕೂಲವಾಗುವಂತೆ ರೂಪಿಸಲಾಗಿದೆಯೇ ವಿನಃ ತಿಂಗಳಿಗೆ ಲಕ್ಷಾಂತರ ರೂಪಾಯಿ ವೇತನ ಪಡೆಯುವವರಿಗಾಗಿ ಅಲ್ಲ’ ಎಂದು ನ್ಯಾಯಪೀಠ ವಿವರಿಸಿದೆ.

ಆಕ್ಷೇಪವೇನು?: ಅರ್ಜಿದಾರರು, 2008ರಲ್ಲಿ ಅಂತರರಾಷ್ಟ್ರೀಯ ಉದ್ಯೋಗಿಗಳಿಗೆ ವಿಸ್ತರಿಸಿದ್ದ ಇಪಿಎಫ್ ಯೋಜನೆಯ ಖಂಡಿಕೆ 83 ಮತ್ತು ಇಪಿ ಯೋಜನೆಯ ಖಂಡಿಕೆ 43ಎ ಅನ್ನು ಪ್ರಶ್ನಿಸಿದ್ದರು.

‘ಭಾರತದಲ್ಲಿ ವಿದೇಶಿ ಉದ್ಯೋಗಿಗಳು ನಿರ್ದಿಷ್ಟ ಕಾಲಾವಧಿಗೆ ಮಾತ್ರ ಕಾರ್ಯ ನಿರ್ವಹಿಸುತ್ತಾರೆ. ಅವರ ಭವಿಷ್ಯ ನಿಧಿಗೆ ಹಣ ಸಂದಾಯ ಮಾಡುವುದರಿಂದ ನಮಗೆ ಹಾನಿಯಾಗುತ್ತದೆ. ವಿದೇಶಿ ಕೆಲಸಗಾರರು ಪ್ರತ್ಯೇಕ ವರ್ಗಕ್ಕೆ ಸೇರುತ್ತಾರೆ’ ಎಂದು ಪ್ರತಿಪಾದಿಸಿದ್ದರು.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಹೆಡ್, ಅಭಿಷೇಕ್ ಸ್ಫೋಟಕ ಆಟ

ಲಖನೌಗೆ 'ಸನ್ ಸ್ಟ್ರೋಕ್', 10 ವಿಕೆಟ್ ಸೋಲು • ಹೈದರಾಬಾದ್‌ನಿಂದ ದಾಖಲೆ ವೇಗದ ಚೇಸ್

ಹೈದರಾಬಾದ್ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ದಾಳಿ ಲೆಕ್ಕಕ್ಕೇ ಇಲ್ಲ ಎನ್ನುವಂತೆ ಆಡಿದ ಸನ್‌ರೈಸರ್ಸ್ ಹೈದರಾಬಾದ್ ಆರಂಭ ಆಟಗಾರರಾದ ಟ್ರಾವಿಸ್ ಹೆಡ್ (ಔಟಾಗದೇ 89, 30 ಎಸೆತ) ಮತ್ತು ಅಭಿಷೇಕ್ ಶರ್ಮಾ (ಔಟಾಗದೇ 75, 28 ಎಸೆತ) ಅವರು ಸಿಕ್ಸರ್ ಮತ್ತು ಬೌಂಡರಿಗಳ ಸುರಿಮಳೆಗರೆದರು. ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಹೈದರಾಬಾದ್ ತಂಡ 166 ರನ್‌ಗಳ ಗುರಿಯನ್ನು ವಿಕೆಟ್ ಕಳೆದುಕೊಳ್ಳದೇ ಬರೇ 9.4 ಓವರುಗಳಲ್ಲಿ ತಲುಪಿತು.

ಉಪ್ಪಳದ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯ ಸಂಪೂರ್ಣ ಏಕಪಕ್ಷೀಯವಾಯಿತು. ಈ ಗೆಲುವಿನೊಡನೆ ಹೈದರಾಬಾದ್ ನಾಲ್ಕನೇ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಏರಿ ಪ್ಲೇ ಆಫ್ ಸ್ಥಾನದ ಅವಕಾಶವನ್ನು ಮತ್ತಷ್ಟು ಹೆಚ್ಚಿಸಿತು. ಎಲ್‌ಎಸ್‌ಜಿ ಆರನೇ ಸ್ಥಾನದಲ್ಲೇ ಉಳಿಯಿತು.

ಮೊದಲು ಬ್ಯಾಟ್ ಮಾಡಿದ ಲಖನೌ ಆಟ ಆರಂಭದಲ್ಲಿ ನೀರಸವಾಗಿತ್ತು. ಒಂದು ಹಂತದಲ್ಲಿ 11.2 ಓವರುಗಳಲ್ಲಿ 4 ವಿಕೆಟ್‌ಗೆ 66 ರನ್ ಗಳಿಸಿದ್ದ ತಂಡ ನಿಕೋಲಸ್ ಪೂರನ್ (ಔಟಾಗದೇ 48, 25ಎ, 4x6, 6x1) ಮತ್ತು ಆಯುಷ್ ಬಡೋನಿ (ಔಟಾಗದೇ 55, 30ಎ, 4x9) ಅವರ ನಡುವಣ ಮುರಿಯದ 99 ರನ್‌ಗಳ (55 ಎಸೆತ) ಐದನೇ ವಿಕೆಟ್ ಜೊತೆಯಾಟದಿಂದ 4 ವಿಕೆಟ್‌ಗೆ 164 ರನ್ ಗಳಿಸಲು ಸಾಧ್ಯವಾಯಿತು.

ಆರಂಭದಿಂದಲೇ ಆಕ್ರಮಣಕಾರಿಯಾಗಿ ಆಡಿದ ಹೈದರಾಬಾದ್ ತಂಡ ಪವರ್‌ಪ್ಲೇ ಮುಗಿಯುವಷ್ಟರಲ್ಲಿ ವಿಕೆಟ್ ನಷ್ಟವಿಲ್ಲದೇ 107 ರನ್ ಚಚ್ಚಿತು. ಈ ಮೂಲಕ ಹಾಲಿ ಐಪಿಎಲ್‌ನಲ್ಲಿ ಹೆಡ್ ಮತ್ತು ಅಭಿಷೇಕ್ ಪವರ್ ಪ್ಲೇ ಅವಧಿಯೊಳಗೆ ಎರಡನೇ ಬಾರಿ ಶತಕದ ಜೊತೆಯಾಟವಾಡಿದರು. ಅವರು ಯಾವುದೇ ಬೌಲರ್‌ಗಳಿಗೆ ರಿಯಾಯಿತಿ ತೋರಲಿಲ್ಲ. ಲಖನೌ ಬೌಲಿಂಗ್ ಆರಂಭಿಸಿದ್ದ ಕನ್ನಡಿಗ ಕೆ.ಗೌತಮ್ 2 ಓವರುಗಳಲ್ಲಿ 29 ರನ್ ನೀಡಿದ್ದೇ ಕಡಿಮೆ ಎನಿಸಿತು! ಸ್ಫೋಟಕ ಇನಿಂಗ್ಸ್ ಆಡಿದ ಹೆಡ್, ಎಂಟು ಸಿಕ್ಸರ್, ಎಂಟು ಬೌಂಡರಿ ಸಿಡಿಸಿದರು.

ತಾವೇನೂ ಕಡಿಮೆಯಿಲ್ಲ ಎಂಬಂತೆ ಅಭಿಷೇಕ್ ಎಂಟು ಬೌಂಡರಿ, ಅರ್ಧ ಡಜನ್ ಸಿಕ್ಸರ್ ಹೊಡೆದರು. ಹೆಡ್ ಮತ್ತು ಅಭಿಷೇಕ್ ಕ್ರಮವಾಗಿ 16 ಮತ್ತು 19 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಹೆಡ್ ಕೆಲವು ಅಮೋಘ ಇನಿಂಗ್ಸ್‌ಗಳ ಮೂಲಕ ಈ ಬಾರಿಯ ಲೀಗ್‌ನಲ್ಲಿ 533 ರನ್ ಗಳಿಸಿದಂತಾಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ (542) ಮತ್ತು ಚೆನ್ನೈ ಸೂಪರ್ ಕಿಂಗ್ಸ್‌ನ ಋತುರಾಜ್ ಗಾಯಕವಾಡ್ (541) ಮೊದಲೆರಡು ಸ್ಥಾನದಲ್ಲಿದ್ದಾರೆ.

ಸನ್‌ರೈಸರ್ಸ್ ತಂಡಕ್ಕೆ ತದ್ವಿರುದ್ಧ ಎಂಬಂತೆ ಲಖನೌ ತಂಡ ತೀರಾ ನಿಧಾನಗತಿಯ ಆರಂಭ ಮಾಡಿತ್ತು. ಭುವನೇಶ್ವರ ಕುಮಾರ್ (4-0-12-2) ಅವರು ಬಿಗಿ ದಾಳಿಯ ಮೂಲಕ ಎರಡು ವಿಕೆಟ್ ಪಡೆದು, ಹೈದರಾಬಾದ್‌ಗೆ ಮೇಲುಗೈ ಒದಗಿಸಿದರು. ಪವರ್ ಪ್ಲೇ ಮುಗಿದಾಗ ಲಖನೌ ಮೊತ್ತ 2 ವಿಕೆಟ್‌ಗೆ 27. ಕ್ವಿಂಟನ್ ಡಿಕಾಕ್ ಮತ್ತು ಮಾರ್ಕಸ್ ಸ್ಟೊಯಿನಿಸ್ ಅವರು ಭುವನೇಶ್ವರ ಬೌಲಿಂಗ್‌ನಲ್ಲಿ ನಿರ್ಗಮಿಸಿದರು. ಇದರ ಶ್ರೇಯಸ್ಸು ಉತ್ತಮ ಕ್ಯಾಚ್ ಪಡೆದ (ಕ್ರಮವಾಗಿ) ನಿತೀಶ್ ಕುಮಾರ್ ರೆಡ್ಡಿ ಮತ್ತು ಸನ್ವೀರ್ ಸಿಂಗ್ ಅವರಿಗೂ ಸಲ್ಲಬೇಕು.

ನಾಯಕ ಕೆ.ಎಲ್.ರಾಹುಲ್ (29) ಅವರ ಆಟ ಎಂದಿನಂತಿರಲಿಲ್ಲ. ತೆವಳುತ್ತ ಸಾಗಿದ ಅವರು ತಮ್ಮ ಮೊದಲ ಬೌಂಡರಿ ಗಳಿಸಿದ್ದೇ 10ನೇ ಓವರಿನಲ್ಲಿ. ಪ್ಯಾಟ್ ಕಮಿನ್ಸ್ ಬೌಲಿಂಗ್‌ನಲ್ಲಿ ಮಿಡ್ ಆಫ್ ಮೇಲಿಂದ ಅದನ್ನು ಗಳಿಸಿದರು. ಅದೇ ಓವರಿನಲ್ಲಿ ಟಿ.ನಟರಾಜನ್ ಅವರಿಗೆ ಬ್ಯಾಕ್‌ವರ್ಡ್ ಸ್ಕ್ವೇರ್‌ಲೆಗ್ ಬೌಂಡರಿ ಬಳಿ ಕ್ಯಾಚಿತ್ತರು.

ಹೊರಬಿದ್ದ ಮುಂಬೈ: ಲಖನೌ ವಿರುದ್ಧ ಹೈದರಾಬಾದ್ ತಂಡವು ಜಯ ಸಾಧಿಸುತ್ತಿದ್ದಂತೆ ಐಪಿಎಲ್‌ನ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಪ್ಲೇ ಆಫ್ ರೇಸ್‌ನಿಂದ ಅಧಿಕೃತವಾಗಿ ಹೊರಬಿತ್ತು.



ಎಎಫ್‌ಪಿ ಚಿತ್ರ

ಐಪಿಎಲ್: 10 ಓವರ್‌ನಲ್ಲಿ ದಾಖಲಾದ ಗರಿಷ್ಠ ಮೊತ್ತ

ರನ್	ತಂಡಗಳು	ವರ್ಷ
ವಿಕೆಟ್ ನಷ್ಟವಿಲ್ಲದೆ 167(9.4)	ಹೈದರಾಬಾದ್ (ಲಖನೌ ವಿರುದ್ಧ)	2024
4ಕ್ಕೆ 158	ಹೈದರಾಬಾದ್ (ಡೆಲ್ಲಿ ವಿರುದ್ಧ)	2024
2ಕ್ಕೆ 148	ಹೈದರಾಬಾದ್ (ಮುಂಬೈ ವಿರುದ್ಧ)	2024
2ಕ್ಕೆ 141	ಮುಂಬೈ (ಹೈದರಾಬಾದ್ ವಿರುದ್ಧ)	2024

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್
20 ಓವರ್‌ಗಳಲ್ಲಿ 4 ವಿಕೆಟ್‌ಗೆ 165
ರಾಹುಲ್ ಸಿ ನಟರಾಜನ್ ಬಿ ಕಮಿನ್ಸ್ 29, (33ಎ, 4X1, 6X1)
ಕ್ವಿಂಟನ್ ಸಿ ನಿತೀಶ್ ಬಿ ಕುಮಾರ್ 2 (5ಎ)
ಸ್ಟೊಯಿನಿಸ್ ಸಿ ಸನ್ವೀರ್ ಸಿಂಗ್ ಬಿ ಕುಮಾರ್ 3 (5ಎ)
ಕೃಣಾಲ್ ರನ್‌ಔಟ್ (ಕಮಿನ್ಸ್) 24 (21ಎ, 6X2)
ಪೂರನ್ ಔಟಾಗದೇ 48 (26ಎ, 4X6, 6X1)
ಬಡೋನಿ ಔಟಾಗದೇ 55 (30ಎ, 4X9)
ಇತರೆ: 4 (ಲೆಗ್‌ಬೈ1, ವೈಡ್3)
ವಿಕೆಟ್ ಪತನ: 1-13 (ಕ್ವಿಂಟನ್ ಡಿ ಕಾಕ್ 2.1), 2-21 (ಮಾರ್ಕಸ್ ಸ್ಟೊಯಿನಿಸ್, 4.2), 3-57 (ಕೆ. ಎಲ್. ರಾಹುಲ್, 9.6), 4-66 (ಕೃಣಾಲ್ ಪಾಂಡ್ಯ, 11.2)
ಬೌಲಿಂಗ್: ಭುವನೇಶ್ವರ ಕುಮಾರ್ 4-0-12-2, ಪ್ಯಾಟ್ ಕಮಿನ್ಸ್ 4-0-47-1, ಶಾಬಾಜ್ ಅಹಮದ್ 2-0-9-0, ವಿಜಯಕಾಂತ್ ವಿಯಸ್ಕಾಂತ್ 4-0-27-0, ಜಯದೇವ್ ಉನದ್ಕತ್ 2-0-19-0, ಟಿ.ನಟರಾಜನ್ 4-0-50-0
ಸನ್‌ರೈಸರ್ಸ್ ಹೈದರಾಬಾದ್: ವಿಕೆಟ್ ನಷ್ಟವಿಲ್ಲದೆ167 (9.4 ಓವರ್‌ಗಳಲ್ಲಿ)
ಅಭಿಷೇಕ್ ಔಟಾಗದೇ 75 (28ಎ, 4X8, 6X6)
ಟ್ರಾವಿಸ್ ಔಟಾಗದೇ 89 (30ಎ, 4X8, 6X8)
ಇತರೆ: 3 (ಲೆಗ್ ಬೈ1, ವೈಡ್ 2)
ಬೌಲಿಂಗ್: ಕೆ. ಗೌತಮ್ 2-0-29-0, ಯಶ್ ಠಾಕೂರ್ 2.4-0-47-0, ರವಿ ಬಿಷ್ಣೋಯಿ 2-0-34-0, ನವೀನ್ ಉಲ್ ಹಕ್ 2-0-37-0, ಆಯುಷ್ ಬಡೋನಿ 1-0-19-0
ಪಂದ್ಯದ ಆಟಗಾರ: ಟ್ರಾವಿಸ್ ಹೆಡ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	11	8	3	16	1.453
ರಾಜಸ್ಥಾನ ರಾಯಲ್ಸ್	11	8	3	16	0.476
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಚೆನ್ನೈ ಸೂಪರ್ ಕಿಂಗ್ಸ್	11	6	5	12	0.700
ಡೆಲ್ಲಿ ಕ್ಯಾಪಿಟಲ್ಸ್	12	6	6	12	-0.316
ಲಖನೌ ಸೂಪರ್ ಜೈಂಟ್ಸ್	12	6	6	12	-0.769
ಆರ್‌ಸಿಬಿ (ಬೆಂಗಳೂರು)	11	4	7	8	-0.049
ಪಂಜಾಬ್ ಕಿಂಗ್ಸ್	11	4	7	8	-0.187
ಮುಂಬೈ ಇಂಡಿಯನ್ಸ್	12	4	8	8	-0.212
ಗುಜರಾತ್ ಟೈಟನ್ಸ್	11	4	7	8	-1.320

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (542)
ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (18 ವಿಕೆಟ್)

ಪಂಜಾಬ್ ಕಿಂಗ್ಸ್ ವಿರುದ್ಧ ಪಂದ್ಯ ಇಂದು

ಆರ್‌ಸಿಬಿಗೆ ಸತತ ನಾಲ್ಕನೇ ಗೆಲುವು ಸಾಧಿಸುವ ಗುರಿ

ಧರ್ಮಶಾಲಾ (ಪಿಟಿಐ): ದಯನೀಯ ಸ್ಥಿತಿಯಿಂದ ಗೆಲುವಿನ ಹಳಿಗೆ ಮರಳಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು, ಏಳುಬೀಳುಗಳನ್ನು ಕಾಣುತ್ತಿರುವ ಪಂಜಾಬ್ ತಂಡವನ್ನು ಗುರುವಾರ ನಡೆಯುವ ಪಂದ್ಯದಲ್ಲಿ ಎದುರಿಸಲಿದೆ. ಫಫ್ ಡುಪ್ಲೆಸಿ ಬಳಗ ನಿರಂತರ ನಾಲ್ಕನೇ ಗೆಲುವಿನ ಯತ್ನದಲ್ಲಿದೆ.

ಇತ್ತೀಚಿನ ಗೆಲುವುಗಳಿಂದ ಆರ್‌ಸಿಬಿ ತಂಡದ ಮನೋಸ್ಥೈರ್ಯ ಹೆಚ್ಚಾಗಿದ್ದು, ಕೊನೆಯ (ಹತ್ತನೇ) ಸ್ಥಾನದಿಂದ ಏಳನೇ ಸ್ಥಾನಕ್ಕೆ ಏರಿದೆ. 11 ಪಂದ್ಯಗಳನ್ನು ಆಡಿ ಎಂಟು ಪಾಯಿಂಟ್ಸ್ ಅಷ್ಟೇ ಗಳಿಸಿದೆ. ಎಲ್ಲ ಗೆದ್ದರೂ ಪ್ಲೇ ಆಫ್ ಸಾಧ್ಯತೆ ತೀರಾ ಕಮ್ಮಿ. ಉಳಿದ ಮೂರೂ ಪಂದ್ಯ ಗೆದ್ದು, ಇತರ ಪಂದ್ಯಗಳ ಫಲಿತಾಂಶ ತಾನು ಅಂದುಕೊಂಡ ಹಾಗೆ ಬರಲಿ ಎಂದು ಹಾರೈಸಬೇಕಷ್ಟೇ. ಪಂಜಾಬ್ ಕಿಂಗ್ಸ್ ಸಹ 11 ಪಂದ್ಯಗಳಿಂದ ಎಂಟು ಪಾಯಿಂಟ್ಸ್ ಪಡೆದಿದೆ. ಈ ಪಂದ್ಯದ ನಂತರ ಒಬ್ಬರಷ್ಟೇ 14 ಪಾಯಿಂಟ್ಸ್ ತಲುಪಲು ಸಾಧ್ಯ. ಸೋತ ತಂಡಕ್ಕೆ ಅಧಿಕೃತವಾಗಿ ಪ್ಲೇಆಫ್ ಬಾಗಿಲು ಮುಚ್ಚಲಿದೆ.

ಸತತ ಮೂರು ಪಂದ್ಯಗಳನ್ನು ಗೆದ್ದ ಉಮೇದಿನಲ್ಲಿರುವ ಆರ್‌ಸಿಬಿ, ಆತಿಥೇಯರಿಗಿಂತ ಹೆಚ್ಚು ವಿಶ್ವಾಸದಲ್ಲಿದೆ. ಆರ್‌ಸಿಬಿ ತನ್ನ ಈ ಆವೃತ್ತಿಯ ಮೊದಲ ಜಯವನ್ನು ಇದೇ ತಂಡದ ವಿರುದ್ಧ ಬೆಂಗಳೂರಿನಲ್ಲಿ ಗಳಿಸಿತ್ತು.

ವಿರಾಟ್ ಕೊಹ್ಲಿ ಈ ಬಾರಿಯೂ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಮೊದಲ ಕೆಲವು ಪಂದ್ಯಗಳಲ್ಲಿ ಫ್ಲಾಪ್ ಆಗಿದ್ದ ಫಫ್ ಡುಪ್ಲೆಸಿ ಕೂಡ ಲಯಕ್ಕೆ ಮರಳಿದಂತಿದೆ. ವಿಲ್ ಜಾಕ್ಸ್, ಗುಜರಾತ್ ಟೈಟನ್ಸ್ ವಿರುದ್ಧ ಅಬ್ಬರಿಸಿದ್ದರು. ದಿನೇಶ್ ಕಾರ್ತಿಕ್ ಫಿನಿಷರ್ ಪಾತ್ರ ನಿಭಾಯಿಸುತ್ತಿದ್ದಾರೆ. ಕ್ಯಾಮರಾನ್ ಗ್ರೀನ್ ಕೂಡ ವಿಕೆಟ್ ಪಡೆಯಲು ಆರಂಭಿಸಿದ್ದಾರೆ. ಬೌಲಿಂಗ್ ಕೂಡ ಮೊದಲಿನಷ್ಟು ದುರ್ಬಲವಾಗಿ ಕಾಣುತ್ತಿಲ್ಲ. ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿರುವ ಮೊಹಮ್ಮದ್ ಸಿರಾಜ್ ಕೊನೆಗೂ ಲಯ ಕಂಡುಕೊಂಡಿದ್ದಾರೆ. ಯಶ್ ದಯಾಳ್ ಮತ್ತು ವೈಶಾಖ ವಿಜಯಕುಮಾರ್ ಕೂಡ ಮೊದಲಿನಷ್ಟು ರನ್ ನೀಡುತ್ತಿಲ್ಲ. ಪಿಬಿಕೆಎಸ್ ಮೂರು ದಿನಗಳ ಹಿಂದೆ ತವರಿನಲ್ಲೇ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋತಿದ್ದು ಅದರ ವಿಶ್ವಾಸಕ್ಕೆ ಪೆಟ್ಟು ನೀಡಿದೆ. ಬೌಲರ್‌ಗಳು ಉತ್ತಮ ಪ್ರದರ್ಶನ ನೀಡಿದರೂ, ಬ್ಯಾಟರ್‌ಗಳು ಕೈಕೊಟ್ಟಿದ್ದರು.

ಪಂಜಾಬ್ ಈ ಋತುವಿನುದ್ದಕ್ಕೂ ಏಳುಬೀಳಿನ ಆಟವಾಡಿದೆ. ಈಡನ್‌ಗಾರ್ಡನ್‌ನಲ್ಲಿ ದಾಖಲೆ ಮೊತ್ತ ಚೇಸ್ ಮಾಡಿ ಕೆಕೆಆರ್ ತಂಡಕ್ಕೆ ಸೋಲಿನ ರುಚಿ ತೋರಿಸಿದ್ದ ಪಂಜಾಬ್, ಸಿಎಸ್‌ಕೆ ತಂಡವನ್ನೂ ಚೆಪಾಕ್‌ನಲ್ಲೇ ಸದೆಬಡಿದಿತ್ತು. ಆದರೆ ತವರಿನಲ್ಲಿ ಅದೇ ತಂಡದೆದುರು ಮುಗ್ಗರಿಸಿತು. ಈಗ ತವರಿನ ಕೊನೆಯ ಪಂದ್ಯವನ್ನು ಗೆಲುವಿನೊಡನೆ ಮುಗಿಸುವ ಗುರಿಯಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ಸ್ಯಾಮ್ ಕರನ್
—ಎಎಫ್‌ಪಿ ಚಿತ್ರ

ಫಫ್ ಡುಪ್ಲೆಸಿ —ಪಿಟಿಐ ಚಿತ್ರ

ಮುಖಾಮುಖಿ ಪಂದ್ಯಗಳು 32



ಸಂಜು ಸ್ಯಾಮ್ಸನ್‌ಗೆ ಪಂದ್ಯ ಶುಲ್ಕದ ಶೇ 30 ದಂಡ

ನವದೆಹಲಿ (ಪಿಟಿಐ): ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ದೆಹಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯದ ಸಂದರ್ಭದಲ್ಲಿ ಐಪಿಎಲ್ ನೀತಿ ಸಂಹಿತೆ ಉಲ್ಲಂಘನೆ ಮಾಡಿದ್ದಕ್ಕೆ ರಾಜಸ್ಥಾನ್ ರಾಯಲ್ಸ್ ನಾಯಕ ಸಂಜು ಸ್ಯಾಮ್ಸನ್ ಅವರಿಗೆ ಪಂದ್ಯ ಶುಲ್ಕದ ಶೇ 30ರಷ್ಟನ್ನು ದಂಡವಾಗಿ ವಿಧಿಸಲಾಗಿದೆ.

ಮಂಗಳವಾರ ನಡೆದ ಈ ಪಂದ್ಯದಲ್ಲಿ ಸಂಜು 86 ರನ್ ಮಾಡಿದ್ದರು. ಅವರು ನಿರ್ದಿಷ್ಟವಾಗಿ ಯಾವ ನಿಯಮ ಉಲ್ಲಂಘನೆ ಮಾಡಿದ್ದಾರೆಂದು ಸ್ಪಷ್ಟಪಡಿಸಿಲ್ಲ. ಆದರೆ 16ನೇ ಓವರಿನಲ್ಲಿ ಶಾಯಿ ಹೋಪ್ ಬೌಂಡರಿ ಬಳಿ ಪಡೆದ ಕ್ಯಾಚಿಗೆ ಸಂಬಂಧಿಸಿ ಅವರು ಅಂಪೈರ್ ಜೊತೆ ವಾದಿಸಿದ್ದಕ್ಕೆ ದಂಡ ವಿಧಿಸಲಾಗಿದೆ ಎನ್ನಲಾಗುತ್ತಿದೆ. ಚೆಂಡನ್ನು ಲಾಂಗ್‌ಆನ್‌ನಲ್ಲಿ ಕ್ಯಾಚ್ ಪಡೆದ ವೇಳೆ ಸೀಮಾರೇಖೆಗೆ ಕಾಲು ತಾಗಿಸದಿರುವುದನ್ನು ಮರುಪರಿಶೀಲಿಸಿದ ನಂತರ ಮೂರನೇ ಅಂಪೈರ್ ಔಟ್ ನೀಡಿದ್ದರು. ಈ ಬಗ್ಗೆ ಸಂಜು ಅವರಿಗೆ ಸಮಾಧಾನ ಇರಲಿಲ್ಲ. ಪೆವಿಲಿಯನ್‌ನತ್ತ ಹೆಜ್ಜೆ ಹಾಕುತ್ತಿದ್ದ ಅವರು ಮರಳಿ ಆನ್‌ಫೀಲ್ಡ್ ಅಂಪೈರ್‌ಗಳ ಜೊತೆ ಮಾತನಾಡಿದ್ದರು.

ಉಕ್ರೇನ್ ವಿದ್ಯುತ್ ವ್ಯವಸ್ಥೆ ಗುರಿಯಾಗಿಸಿ ರಷ್ಯಾ ದಾಳಿ

ಕೀವ್ (ಎಪಿ): ಉಕ್ರೇನ್ ನಾದ್ಯಂತ ವಿದ್ಯುತ್ ವ್ಯವಸ್ಥೆಯನ್ನು ಗುರಿಯಾಗಿಸಿಕೊಂಡು ರಷ್ಯಾ ಬುಧವಾರ ವಾಯುದಾಳಿ ನಡೆಸಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಏಳು ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. 50ಕ್ಕೂ ಹೆಚ್ಚು ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ದಾಳಿಗೆ ಬಳಸಿಕೊಳ್ಳಲಾಗಿದೆ. ದಾಳಿಯಿಂದ ಕೆರ್ಸಾನ್ ನಗರದ ರೈಲು ನಿಲ್ದಾಣ ಮತ್ತು ರೈಲ್ವೆ ಹಳಿಗೆ ಹಾನಿಯಾಗಿದೆ. ರಾಜಧಾನಿ ಕೀವ್ ಬಳಿಯಿರುವ ಬ್ರೊವರಿ ಪಟ್ಟಣದಲ್ಲಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷಿಪಣಿ ದಾಳಿಯಲ್ಲಿ ಕೀವ್ ಪ್ರದೇಶದ ಗ್ರಾಮವೊಂದರ ಮನೆಗಳಿಗೆ ಹಾನಿಯಾಗಿದೆ —ಎಎಫ್‌ಪಿ ಚಿತ್ರ

ಈ ಕುರಿತು ಝೆಲೆನ್‌ಸ್ಕಿ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. 'ಎರಡನೇ ಮಹಾಯುದ್ಧದಲ್ಲಿ ನಾಝಿ ಸಿದ್ಧಾಂತದ ವಿರುದ್ಧ ಗೆಲುವು ಸಾಧಿಸಿದ ಸ್ಮರಣಾ ದಿನದಂದೇ ನಾಝಿ ಪುಟಿನ್ ದೊಡ್ಡ ಮಟ್ಟದಲ್ಲಿ ಕ್ಷಿಪಣಿ ದಾಳಿ ನಡೆಸಿದ್ದಾರೆ. ಯಾರು ಏನೆಂಬುದನ್ನು ಇಡೀ ಜಗತ್ತು ಸ್ಪಷ್ಟವಾಗಿ ತಿಳಿಯಬೇಕಿದೆ. ನಾಝಿವಾದಕ್ಕೆ ಮತ್ತೊಂದು ಅವಕಾಶ ನೀಡಬಾರದು' ಎಂದು ಹೇಳಿದ್ದಾರೆ.

ಲಿವ್, ಝಪೋರಿಝ್ಝಿಯಾ, ವಿನ್ನಿಟ್‌ಶಿಯಾ, ಕಿರೊವೊಹ್ರಾದ್, ಸೇರಿ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಗ್ರಿಡ್‌ಗಳಿಗೆ ಹಾನಿಯಾಗಿದೆ ಎಂದು ಉಕ್ರೇನ್‌ನ ರಾಷ್ಟ್ರಮಟ್ಟದ ವಿದ್ಯುತ್ ಪೂರೈಕೆದಾರ ಸಂಸ್ಥೆ ಉಕ್ರೇನರ್ಗೊ ಹೇಳಿದೆ.

ಉಕ್ರೇನ್‌ನ ಇಂಧನ ವ್ಯವಸ್ಥೆ ಮೇಲೆ ರಷ್ಯಾ ನಿರಂತರವಾಗಿ ದಾಳಿ ನಡೆಸುತ್ತ ಬಂದಿದೆ. ಏಪ್ರಿಲ್ 27ರಿಂದ ಇಲ್ಲಿಯವರೆಗೆ ಇಂಥ ಎರಡು ದಾಳಿಗಳನ್ನು ಅದು ನಡೆಸಿದೆ.

ಗಾಜಾ ಸಂಪರ್ಕ: ಗಡಿ ತೆರವು

ಜೆರುಸಲೇಂ (ಎಪಿ): ಗಾಜಾಗೆ ಸಂಪರ್ಕ ಕಲ್ಪಿಸುವ ಕೆರೆಮ್ ಶಾಲೋಮ್ ಗಡಿಯನ್ನು ಪುನಃ ತೆರೆಯಲಾಗಿದೆ ಎಂದು ಇಸ್ರೇಲ್ ಸೇನೆ ಬುಧವಾರ ತಿಳಿಸಿದೆ.

ಮಾನವೀಯ ನೆರವಿಗೆ ಪ್ರಮುಖ ಟರ್ಮಿನಲ್ ಆಗಿರುವ ಈ ಗಡಿ ಭಾಗದಲ್ಲಿ ಮೂರು ದಿನಗಳ ಹಿಂದೆ ಹಮಾಸ್ ನಡೆಸಿದ ರಾಕೆಟ್ ದಾಳಿಯಿಂದ ನಾಲ್ವರು ಇಸ್ರೇಲ್ ಸೈನಿಕರು ಮೃತರಾಗಿದ್ದರು. ಆ ಬಳಿಕ ಇಸ್ರೇಲ್ ಈ ಗಡಿಯನ್ನು ಮುಚ್ಚಿತ್ತು.

ಗಾಜಾ ಪಟ್ಟಿಯಲ್ಲಿ ಈಜಿಪ್ಟ್‌ಗೆ ಹೊಂದಿಕೊಂಡಿರುವ ರಫಾ ಗಡಿಯನ್ನು ಇಸ್ರೇಲ್ ಟ್ಯಾಂಕ್ ಬ್ರಿಗೇಡ್ ಪಡೆ ಮಂಗಳವಾರ ತನ್ನ ವಶಕ್ಕೆ ಪಡೆದುಕೊಂಡಿದ್ದು, ಆ ಮಾರ್ಗವನ್ನು ಮುಚ್ಚಲಾಗಿದೆ. ಈ ಭಾಗದಲ್ಲಿ ರಾತ್ರಿಯಿಡೀ ಆಗಾಗ ಸ್ಫೋಟಗಳಾಗಿವೆ ಮತ್ತು ಗುಂಡಿನ ಸದ್ದು ಕೇಳಿಸಿದೆ. ಬುಧವಾರ ಮುಂಜಾನೆ ಸಹ ಎರಡು ದೊಡ್ಡ ಸ್ಫೋಟಗಳ ಸದ್ದು ಕೇಳಿಸಿದೆ.

ವೈದ್ಯಕೀಯ ಚಿಕಿತ್ಸೆಗಾಗಿ ತೆರಳಬೇಕಿದ್ದ ಕನಿಷ್ಠ 46 ರೋಗಿಗಳು ಸಿಕ್ಕಿಹಾಕಿಕೊಂಡಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ಇಸ್ರೇಲ್ ತನ್ನ ಮಿತ್ರರಾಷ್ಟ್ರ ಅಮೆರಿಕದ ಒತ್ತಾಸೆಯ ಮೇರೆಗೆ ಉತ್ತರ ಭಾಗದಲ್ಲಿ ಗಡಿಯನ್ನು ತೆರೆದಿದೆ.

ಇತ್ತೀಚಿನ ವಾರಗಳಲ್ಲಿ ವಿಶ್ವಸಂಸ್ಥೆಯ ಏಜೆನ್ಸಿಗಳು ಮತ್ತು ನೆರವು ಗುಂಪುಗಳು ಈ ಭಾಗದಲ್ಲಿ ಮಾನವೀಯ ಸಹಾಯವನ್ನು ಹೆಚ್ಚಿಸಿವೆ. ಆದರೆ, ಪ್ರಮುಖ ಗಡಿ ಮಾರ್ಗವಾದ ರಫಾವನ್ನು ಮುಚ್ಚಿರುವುದರಿಂದ ಟ್ರಕ್‌ಗಳು ಮತ್ತು ಇಂಧನ ಸಾಗಾಟ ಕಷ್ಟಕರವಾಗಿದ್ದು, ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಮೂಲಗಳು ತಿಳಿಸಿವೆ.

ರೋಗಿಗಳಿಗೆ ಅಗತ್ಯ ಇರುವ ವೈದ್ಯಕೀಯ ಪರಿಕರಗಳು ಇನ್ನೂ ಗಾಜಾ ತಲುಪಿಲ್ಲ ಎಂದು ವಿಶ್ವಸಂಸ್ಥೆ ಪ್ರತಿಕ್ರಿಯಿಸಿದೆ.

ಭಾರತದಲ್ಲಿ ಮಾಲ್ದೀವ್ಸ್ ಸಚಿವ

ಮಾಲೆ (ಪಿಟಿಐ): ಮಾಲ್ದೀವ್ಸ್‌ನ ವಿದೇಶಾಂಗ ಸಚಿವ ಮೂಸಾ ಜಮೀರ್ ಅವರು ಬುಧವಾರದಿಂದ ಮೂರು ದಿನಗಳ ಭಾರತ ಪ್ರವಾಸ ಕೈಗೊಂಡಿದ್ದಾರೆ. ಈ ಅವಧಿಯಲ್ಲಿ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರನ್ನು ಭೇಟಿಯಾಗಲಿದ್ದು, ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಮಾತುಕತೆ ನಡೆಸಲಿದ್ದಾರೆ.

ಮಾಲ್ದೀವ್ಸ್ ಮತ್ತು ಭಾರತದ ನಡುವಿನ ದೀರ್ಘಾಕಾಲದ ಪಾಲುದಾರಿಕೆ ಬಲಗೊಳಿಸುವ ಮತ್ತು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಚೀನಾ ಪರ ಒಲವುಳ್ಳ ಅಲ್ಲಿನ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರು ಅಧಿಕಾರ ವಹಿಸಿಕೊಂಡು ಆರು ತಿಂಗಳಾಗಿದ್ದು, ಈ ಅವಧಿಯಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ಹಳಸಿದೆ. ಈ ಸಂದರ್ಭದಲ್ಲಿ ಮಾಲ್ದೀವ್ಸ್‌ನ ಉನ್ನತ ಮಟ್ಟದ ಅಧಿಕಾರಿ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ವಿದೇಶಾಂಗ ಸಚಿವ ಜಮೀರ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಭಾರತಕ್ಕೆ ನೀಡುತ್ತಿರುವ ಮೊದಲ ಅಧಿಕೃತ ಭೇಟಿ ಇದಾಗಿದೆ.

'ಭಾರತ– ಸಿಂಗಪುರ ಜಂಟಿ ಸಮರಾಭ್ಯಾಸಕ್ಕೆ ನಿರ್ಧಾರ'

ಸಿಂಗಪುರ (ಪಿಟಿಐ): ಭಾರತೀಯ ನೌಕಾಪಡೆಯು ಸಿಂಗಪುರ ನೌಕಾಪಡೆಯೊಂದಿಗೆ ವಿಶಾಖಪಟ್ಟಣದಲ್ಲಿ ಜಂಟಿ ಸಮರಾಭ್ಯಾಸ ನಡೆಸಲಿದೆ.

ಜಂಟಿ ನೌಕಾ ಸಮರಾಭ್ಯಾಸ ನಡೆಸುವ ಮೂಲಕ ಪರಸ್ಪರ ದೇಶಗಳ ಕಾರ್ಯಾಚರಣೆಯ ತತ್ವವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಸಿಂಗಪುರ ಜೊತೆಗಿನ ಕಾರ್ಯಾಚರಣೆ ವಿಸ್ತರಿಸುವ ನಡೆಯೂ ಇದಾಗಿದೆ ಎಂದು ಪೂರ್ವ ಕಮಾಂಡಿಂಗ್‌ನ ಫ್ಲಾಗ್ ಆಫೀಸರ್ ರಾಜೇಶ್ ಧನಖಡ್ ತಿಳಿಸಿದ್ದಾರೆ.

ಮಂಗಳವಾರ ಚಾಂಗಿ ನೌಕಾನೆಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಐಎನ್‌ಎಸ್ ಶಕ್ತಿ' ಹಡಗಿನಲ್ಲಿ ಸಿಂಗಪುರ ರಕ್ಷಣಾ ವಲಯದ 150 ಜನ ಅತಿಥಿಗಳು, ರಾಜತಾಂತ್ರಿಕ ನಿಯೋಗಗಳ ಮುಖ್ಯಸ್ಥರು ಮತ್ತು ಭಾರತೀಯ ವಲಸೆಗಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಿಂಗಪುರ– ಭಾರತ ಜಂಟಿ ನೌಕಾ ಸಮರಾಭ್ಯಾಸ ನಡೆಸಲು ಹೊರಟಿರುವುದು ಇದು 31ನೇ ಬಾರಿ. ಈ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ವಿಶಾಖಪಟ್ಟಣದಲ್ಲಿ ಈ ಸಮರಾಭ್ಯಾಸ ನಡೆಯಲಿದೆ ಎಂದು ತಿಳಿಸಿದರು.

ಮತ್ತೊಬ್ಬ ಸಂಸದೆ ಪಕ್ಷಾಂತರ: ರಿಷಿ ಸುನಕ್‌ಗೆ ಪೆಟ್ಟು

ಲಂಡನ್ (ಎಪಿ): ಕನ್ಸರ್ವೇಟಿವ್ ಪಕ್ಷದ ಮತ್ತೊಬ್ಬ ಸಂಸದೆ ಲೇಬರ್ ಪಕ್ಷಕ್ಕೆ ಪಕ್ಷಾಂತರವಾಗಿದ್ದು, ಪ್ರಧಾನಿ ರಿಷಿ ಸುನಕ್ ನೇತೃತ್ವದ ಬ್ರಿಟನ್ ಸರ್ಕಾರಕ್ಕೆ ಮತ್ತಷ್ಟು ಪೆಟ್ಟು ಬಿದ್ದಂತಾಗಿದೆ.

'ರಿಷಿ ಸುನಕ್ ಅವರ ಅಸ್ತವ್ಯಸ್ತಗೊಂಡಿರುವ ಸರ್ಕಾರದ ಹುಸಿ ಭರವಸೆಗಳಿಂದ ದೂರ ಹೋಗುತ್ತಿದ್ದೇವೆ' ಎಂದು ಪಕ್ಷಾಂತರಗೊಂಡಿರುವ ಸಂಸದೆ ನತಾಲಿಯೆ ಎಲ್ಫಿಕೆ ಅವರು ತಿಳಿಸಿದ್ದಾರೆ.

ಕನ್ಸರ್ವೇಟಿವ್ ಪಕ್ಷದ ಎಲ್ಫಿಕೆ ಅವರು ಲೇಬರ್ ಪಕ್ಷದ ಕಡು ಟೀಕಕಾರರಲ್ಲಿ ಒಬ್ಬರಾಗಿದ್ದು, ಅವರ ಪಕ್ಷಾಂತರ ಆಶ್ಚರ್ಯ ಉಂಟುಮಾಡಿದೆ.

ಭಯೋತ್ಪಾದನೆ ನಿಗ್ರಹ ಭಾರತದಿಂದ ₹4 ಕೋಟಿ

ವಿಶ್ವಸಂಸ್ಥೆ (ಪಿಟಿಐ): ಭಾರತವು ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ಟ್ರಸ್ಟ್ ನಿಧಿಗೆ (ಸಿಟಿಟಿಎಫ್) ₹4.18 ಕೋಟಿ (5 ಲಕ್ಷ ಡಾಲರ್) ಕೊಡುಗೆ ನೀಡಿದೆ.

ವಿಶ್ವಸಂಸ್ಥೆಯ ಭಾರತದ ಶಾಶ್ವತ ಪ್ರತಿನಿಧಿ ರುಚಿರಾ ಕಂಬೋಜ್ ಅವರು ಮಂಗಳವಾರ ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ಕಚೇರಿಯ (ಯುಎನ್‌ಒಸಿಟಿ) ಉಪ ಪ್ರಧಾನ ಕಾರ್ಯದರ್ಶಿ ವ್ಲಾದಿಮಿರ್ ವೊರೊಂಕೊವ್ ಅವರಿಗೆ ನಿಧಿಯನ್ನು ಹಸ್ತಾಂತರಿಸಿದರು. ಭಯೋತ್ಪಾದನೆಯ ಬೆದರಿಕೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಮತ್ತು ಇದಕ್ಕಾಗಿ ಸದಸ್ಯ ರಾಷ್ಟ್ರಗಳ ಸಾಮರ್ಥ್ಯ ವೃದ್ಧಿಸಲು ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ಕಚೇರಿ ಕೈಗೊಂಡಿರುವ ಕಾರ್ಯಗಳನ್ನು ಭಾರತ ಈ ಮೂಲಕ ಬೆಂಬಲಿಸಿದೆ ಎಂದು ಭಾರತದ ಕಾಯಂ ಮಿಷನ್ ಪ್ರಕಟಣೆಯಲ್ಲಿ ತಿಳಿಸಿದೆ.

2022ರಲ್ಲಿ ದೆಹಲಿಯಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ಜರುಗಿದ್ದ ಭಯೋತ್ಪಾದನಾ ನಿಗ್ರಹ ಸಮಿತಿಯ ವಿಶೇಷ ಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು, ವಿಶ್ವಾಸ ನಿಧಿಗೆ ಕೊಡುಗೆ ನೀಡುವುದಾಗಿ ಘೋಷಿಸಿದ್ದರು.

ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣ

ಆರೋಪಿಗಳು ಕೋರ್ಟ್‌ಗೆ ಹಾಜರು

ಒಟ್ಟಾವ (ಪಿಟಿಐ): ಖಾಲಿಸ್ತಾನ ಪರ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಆರೋಪಿಗಳಾದ ಮೂವರು ಭಾರತೀಯರನ್ನು ಕೆನಡಾದ ನ್ಯಾಯಾಲಯವೊಂದಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಮಂಗಳವಾರ ಹಾಜರುಪಡಿಸಲಾಯಿತು.

ಎಡ್ಮಂಟನ್ ನಿವಾಸಿಗಳಾದ ಕರಣ್ ಬ್ರಾರ್ (22), ಕಮಲ್‌ಪ್ರೀತ್ ಸಿಂಗ್ (22) ಮತ್ತು ಕರಣ್‌ಪ್ರೀತ್ ಸಿಂಗ್ (28) ಅವರನ್ನು ಕಳೆದ ಶುಕ್ರವಾರ ಬಂಧಿಸಲಾಗಿತ್ತು ಮತ್ತು ಅವರ ವಿರುದ್ಧ ಕೊಲೆ ಮತ್ತು ಕೊಲೆಗೆ ಸಂಚು ಆರೋಪ ಹೊರಿಸಲಾಗಿತ್ತು.

ನಾರ್ತ್ ಫ್ರಾಸ್ಟರ್ ಪ್ರಿ ಟ್ರಯಲ್ ಸೆಂಟರ್ ಕಾರಾಗೃಹದಿಂದಲೇ ಅವರನ್ನು ಪ್ರತ್ಯೇಕವಾಗಿ ಸರ್ರೆ ಪ್ರಾವಿನ್‌ಶಿಯಲ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ಬಳಿಕ ವಕೀಲರ ಜೊತೆ ಸಮಾಲೋಚನೆ ನಡೆಸಲು ಅವಕಾಶ ನೀಡಿದ ನ್ಯಾಯಾಲಯವು, ಮುಂದಿನ ವಿಚಾರಣೆಯನ್ನು ಮೇ 21ಕ್ಕೆ ನಿಗದಿಪಡಿಸಿತು ಎಂದು ಕೆನಡಾದ 'ವ್ಯಾಂಕೊವರ್ ಸನ್' ಸುದ್ದಿಪತ್ರಿಕೆ ವರದಿ ಮಾಡಿದೆ.

ಆರೋಪಿಗಳ ವಕೀಲರು ಜಾಮೀನು ಅರ್ಜಿ ಸಲ್ಲಿಸುವುದು ಈ ಪ್ರಕರಣದ ಮುಂದಿನ ಹಂತವಾಗಲಿದೆ. ಸಾರ್ವಜನಿಕ ಸುರಕ್ಷತೆ ದೃಷ್ಟಿಯಿಂದ ಜಾಮೀನು ದೊರಕುವುದು ಅಷ್ಟು ಸುಲಭವಿಲ್ಲ ಎಂದು ವಕೀಲರೊಬ್ಬರು ತಿಳಿಸಿದರು.

ಕರಣ್ ಬ್ರಾರ್ | ಕಮಲ್‌ಪ್ರೀತ್ ಸಿಂಗ್ | ಕರಣ್‌ಪ್ರೀತ್ ಸಿಂಗ್

'ಟ್ರಂಪ್ ಬಳಿ ಹಣ ಕೇಳಿಲ್ಲ'

ನ್ಯೂಯಾರ್ಕ್ (ಎಪಿ): ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ವಿರುದ್ಧ ಹೇಳಿಕೆ ನೀಡದಂತೆ ನೀಲಿಚಿತ್ರ ನಟಿ ಸ್ಟಾರ್ಮಿ ಡೇನಿಯೆಲ್ಸ್ ಅವರಿಗೆ ಹಣ ನೀಡಿದ್ದ ಆರೋಪ ಕುರಿತ 'ಹಷ್ ಮನಿ' ಪ್ರಕರಣದ ವಿಚಾರಣೆ ಮಂಗಳವಾರ ನಡೆಯಿತು.

ವಿಚಾರಣೆ ವೇಳೆ ತಾವು ಟ್ರಂಪ್ ಅವರನ್ನು ದ್ವೇಷಿಸುತ್ತಿರುವುದಾಗಿ ನೀಲಿಚಿತ್ರ ನಟಿ ಸ್ಟಾರ್ಮಿ ಡೇನಿಯೆಲ್ಸ್ ಪುನರುಚ್ಚರಿಸಿದರು. ಅಲ್ಲದೇ, 'ಊಟಕ್ಕೆಂದು ನಾನು ಟ್ರಂಪ್ ಅವರನ್ನು ಭೇಟಿಯಾದಾಗ ಅವರು ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿದರು. ನಾನು ಅವರಿಗೆ ಎಂದಿಗೂ ಹಣಕ್ಕಾಗಿ ಬೇಡಿಕೆ ಇಟ್ಟಿಲ್ಲ. ನನ್ನ ಬದುಕಿನ ವಾಸ್ತವವನ್ನು ಜನರಿಗೆ ಸಾರಬೇಕಿತ್ತು. ಅದಕ್ಕಾಗಿಯಷ್ಟೆ ಅವರ ಭೇಟಿಗೆ ಮತ್ತೆ ಯತ್ನಿಸಿದ್ದೆ' ಎಂದು ತಮ್ಮ ವಿರುದ್ಧದ ಎಲ್ಲ ಆರೋಪಗಳನ್ನೂ ನಿರಾಕರಿಸಿದರು.

ಟ್ರಂಪ್ ತಮಗೆ ಪರಿಚಿತರಾದ ಸಂದರ್ಭವನ್ನು ಅವರು ವಿಚಾರಣೆಯ ಸಂದರ್ಭದಲ್ಲಿ ವಿವರವಾಗಿ ಬಿಚ್ಚಿಟ್ಟರು.

ವಿಚಾರಣೆ ಮುಂದೂಡಿಕೆ (ವಾಷಿಂಗ್ಟನ್ ವರದಿ): ಡೊನಾಲ್ಡ್ ಟ್ರಂಪ್ ಅವರು ಅಮೆರಿಕ ಅಧ್ಯಕ್ಷ ಗಾದಿಯಿಂದ ಇಳಿದ ಮೇಲೆ ವರ್ಗೀಕೃತ ದಾಖಲೆಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದರು. ಅವುಗಳ ನಿರ್ವಹಣೆಗೆ ಮತ್ತು ಸರ್ಕಾರ ಅವನ್ನು ವಾಪಸ್ ಪಡೆಯಲು ನಡೆಸಿದ ಪ್ರಯತ್ನಗಳಿಗೆ ಅಡ್ಡಿಪಡಿಸಿದ್ದರು ಎಂಬ ಆರೋಪ ಅವರ ಮೇಲಿದೆ. ಈ ಪ್ರಕರಣದ ವಿಚಾರಣೆಯನ್ನು ಫ್ಲಾರಿಡಾದ ಫೆಡರಲ್ ನ್ಯಾಯಾಧೀಶರು ಮುಂದೂಡಿದ್ದಾರೆ. ಮೇ 20ರಂದು ನಡೆಯಬೇಕಿದ್ದ ವಿಚಾರಣೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದಾರೆ.

ಭುವನೇಶ್ವರದ ಫೆಡರೇಷನ್ ಕಪ್‌ನಲ್ಲಿ ನೀರಜ್ ಚೋಪ್ರಾ ಸ್ಪರ್ಧೆ

3 ವರ್ಷಗಳ ನಂತರ ತವರಿನಲ್ಲಿ ಕಣಕ್ಕೆ

ನವದೆಹಲಿ (ಪಿಟಿಐ): ಒಲಿಂಪಿಕ್ ಮತ್ತು ವಿಶ್ವ ಜಾವೆಲಿನ್ ಥ್ರೋ ಚಾಂಪಿಯನ್ ನೀರಜ್ ಚೋಪ್ರಾ ಮೂರು ವರ್ಷಗಳಲ್ಲಿ ಇದೇ ಮೊದಲ ಬಾರಿ ತವರಿನಲ್ಲಿ ಸ್ಪರ್ಧಾಕಣಕ್ಕೆ ಇಳಿಯಲಿದ್ದಾರೆ. ಭುವನೇಶ್ವರದಲ್ಲಿ ಇದೇ 12 ರಿಂದ 15ರವರೆಗೆ ನಡೆಯಲಿರುವ ರಾಷ್ಟ್ರೀಯ ಫೆಡರೇಷನ್ ಕಪ್ ಕೂಟದಲ್ಲಿ ಭಾಗವಹಿಸುವುದನ್ನು ಅವರು ಖಚಿತಪಡಿಸಿದ್ದಾರೆ.

ಮೇ 10ರಂದು ದೋಹಾದಲ್ಲಿ ಪ್ರತಿಷ್ಠಿತ ಡೈಮಂಡ್ ಲೀಗ್‌ನ ಮೊದಲ ಲೆಗ್‌ನಲ್ಲಿ ಭಾಗವಹಿಸಿದ ನಂತರ, 26 ವರ್ಷದ ಸೂಪರ್ ಸ್ಟಾರ್ ಅಥ್ಲೀಟ್ ಅವರು ತವರಿಗೆ ಮರಳುವ ನಿರೀಕ್ಷೆಯಿದೆ.

'ಪ್ರವೇಶ ಪಟ್ಟಿಯ ಪ್ರಕಾರ ನೀರಜ್ ಚೋಪ್ರಾ ಮತ್ತು ಕಿಶೋರ್ ಕುಮಾರ್ ಜೇನಾ ಅವರು ಮೇ 12ರಂದು ಭುವನೇಶ್ವರದಲ್ಲಿ ನಡೆಯುವ ಅಥ್ಲೆಟಿಕ್ಸ್ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾ ಟ್ವೀಟ್‌ನಲ್ಲಿ ತಿಳಿಸಿದೆ.

ನೀರಜ್ ಚೋಪ್ರಾ –ಎಎಫ್‌ಪಿ ಚಿತ್ರ

ಚೋಪ್ರಾ ಅವರ ಕೋಚ್ ಕ್ಲಾಸ್ ಬಾರ್ಟೊನೀಟ್ಜ್ ಅವರೂ ಭುವನೇಶ್ವರದ ಫೆಡರೇಷನ್ ಕಪ್‌ನಲ್ಲಿ ಚೋಪ್ರಾ ಪಾಲ್ಗೊಳ್ಳುವಿಕೆಯನ್ನು ಪಿಟಿಐಗೆ ಖಚಿತಪಡಿಸಿದ್ದಾರೆ.

ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದ 28 ವರ್ಷದ ಕಿಶೋರ್ ಜೇನಾ ಅವರೂ ದೋಹಾದ ಡೈಮಂಡ್ ಲೀಗ್‌ನಲ್ಲಿ ಭಾಗವಹಿಸಲಿದ್ದಾರೆ. ಹಾಂಗ್‌ಝೌ ಕೂಟದಲ್ಲಿ ನೀರಜ್ ಚಿನ್ನ ಗೆದ್ದಿದ್ದರು.

ಚೋಪ್ರಾ 2021ರ ಮಾರ್ಚ್ 17ರಂದು ಕೊನೆಯ ಬಾರಿ ದೇಶಿ ಟೂರ್ನಿಯಲ್ಲಿ– ಫೆಡರೇಷನ್ ಕಪ್ ಅಥ್ಲೆಟಿಕ್ ಕೂಟದಲ್ಲಿ– ಪಾಲ್ಗೊಂಡಿದ್ದರು. ಆಗ ಅವರು ಜಾವೆಲಿನ್‌ಅನ್ನು 87.80 ಮೀ. ದೂರ ಎಸೆದು ಚಿನ್ನ ಗೆದ್ದಿದ್ದರು.

ನಂತರ ಅವರು 2021ರಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ, 2022ರಲ್ಲಿ ಡೈಮಂಡ್ ಲೀಗ್ ಚಾಂಪಿಯನ್, 2023ರಲ್ಲಿ ವಿಶ್ವ ಚಾಂಪಿಯನ್ ಮತ್ತು ಏಷ್ಯನ್ ಗೇಮ್ಸ್ ಚಾಂಪಿಯನ್ ಆಗಿ ಸಾಧನೆಯ ಶಿಖರವನ್ನೇರಿದ್ದಾರೆ. ಆದರೆ ಚೋಪ್ರಾ ಅವರಿಗೆ 90 ಮೀ. ಗುರಿಯನ್ನು ತಲುಪಲು ಇನ್ನೂ ಆಗಿಲ್ಲ. ಅವರ ಈವರೆಗಿನ ವೈಯಕ್ತಿಕ ಶ್ರೇಷ್ಠ ಎಸೆತ 89.94 ಮೀ. ಆಗಿದೆ.

ಸಂಕ್ಷಿಪ್ತ ಸುದ್ದಿ

ನಾರ್ತಾಂಪ್ಟನ್‌ಶೈರ್‌ಗೆ ಸಿದ್ಧಾರ್ಥ್ ಕೌಲ್

ನಾರ್ತಾಂಪ್ಟನ್ (ಪಿಟಿಐ): ಭಾರತದ ವೇಗದ ಬೌಲರ್ ಸಿದ್ಧಾರ್ಥ್ ಕೌಲ್ ಅವರು ಇಂಗ್ಲಿಷ್ ಕೌಂಟಿ ತಂಡವಾದ ನಾರ್ತಾಂಪ್ಟನ್‌ಶೈರ್ ತಂಡಕ್ಕೆ ಆಡಲಿದ್ದಾರೆ. ಈ ತಂಡ ಕೌಂಟಿ ಚಾಂಪಿಯನ್‌ಷಿಪ್‌ನ ಎರಡನೇ ಡಿವಿಷನ್ ಪಂದ್ಯಗಳಲ್ಲಿ ಆಡಲಿದೆ.

33 ವರ್ಷದ ಸಿದ್ಧಾರ್ಥ್ ಅವರು ಕೌಂಟಿ ಚಾಂಪಿಯನ್‌ಷಿಪ್‌ನ ಐದನೇ ಸ್ಥಾನದಲ್ಲಿರುವ ನಾರ್ತಾಂಪ್ಟನ್‌ಶೈರ್ ತಂಡಕ್ಕೆ ಮೂರು ಪಂದ್ಯಗಳನ್ನು ಆಡಲಿದ್ದಾರೆ. ಇದೇ ಮೊದಲ ಬಾರಿಗೆ ಪಂಜಾಬ್‌ನ ಬೌಲರ್ ಕೌಂಟಿ ಸರ್ಕಿಟ್‌ನಲ್ಲಿ ಆಡುವ ಅವಕಾಶ ಪಡೆದಿದ್ದಾರೆ.

ಟಿ20: ಭಾರತಕ್ಕೆ ಕ್ಲೀನ್‌ಸ್ವೀಪ್ ಗುರಿ

ಸಿಲೆಟ್, ಬಾಂಗ್ಲಾದೇಶ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡ ಗುರುವಾರ ಇಲ್ಲಿ ನಡೆಯಲಿರುವ ಐದನೇ ಮತ್ತು ಅಂತಿಮ ಟಿ20 ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಸೋಲಿಸುವ ಮೂಲಕ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡುವ ಗುರಿ ಹೊಂದಿದೆ.

ಭಾರತ ತಂಡವು ಈಗಾಗಲೇ 4–0ಯಿಂದ ಮುನ್ನಡೆ ಪಡೆದಿದೆ. ಪ್ರತಿಕೂಲ ಹವಾಮಾನದಿಂದಾಗಿ ಎರಡು ಪಂದ್ಯಗಳಲ್ಲಿ ಓವರ್‌ಗಳನ್ನು ಕಡಿತಗೊಳಿಸಲಾಗಿತ್ತು.

ಪಂದ್ಯ ಆರಂಭ: ಮಧ್ಯಾಹ್ನ 3.30

12 ರನ್‌ಗೆ ಆಲೌಟ್ ಆದ ಮಂಗೋಲಿಯಾ

ಸಾನೊ (ಜಪಾನ್) (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ 7 ತಿಂಗಳ ನಂತರ, ಮಂಗೋಲಿಯಾ ತಂಡ ಬುಧವಾರ ಇಲ್ಲಿ ನಡೆದ ಆತಿಥೇಯ ಜಪಾನ್ ವಿರುದ್ಧದ ಟಿ20 ಪಂದ್ಯ ದಲ್ಲಿ 12 ರನ್‌ಗೆ ಆಲೌಟ್ ಆಯಿತು. ಚುಟುಕು ಕ್ರಿಕೆಟ್‌ನಲ್ಲಿ ಎರಡನೇ ತಂಡ ಗಳಿಸಿದ ಕನಿಷ್ಠ ಮೊತ್ತ ಇದು.

ಸಂಕ್ಷಿಪ್ತ ಸ್ಕೋರ್: ಜಪಾನ್ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 217 (ಸಬೌರೀಶ್ ರವಿಚಂದ್ರನ್ 69, ಜೊಲ್ಜಾವ್ಲಾನ್ ಶುರೆಂಟ್ಸೆಟ್ಸೆಗ್ 32ಕ್ಕೆ3, ಲುವ್ಸಾನ್ಜುಂಡುಯಿ ಎರ್ಡೆನೆಬುಲ್ಗಾನ್ 61ಕ್ಕೆ2). ಮಂಗೋಲಿಯಾ 8.2 ಓವರ್‌ಗಳಲ್ಲಿ 12 (ತುರ್ ಸುಮಯಾ 4, ಕಜುಮಾ ಕಟೋ-ಸ್ಟಾಫರ್ಡ್ 7ಕ್ಕೆ 5, ಅಬ್ದುಲ್ ಸಮದ್ 4ಕ್ಕೆ 2, ಮಕೊಟೊ ತನಿಯಾಮಾ 0ಕ್ಕೆ 2).

ತಮಿಳುನಾಡಿಗೆ ಮಣಿದ ಕರ್ನಾಟಕ

ಇಂದೋರ್: ಕರ್ನಾಟಕದ ಬಾಲಕಿಯರ ತಂಡವು ಇಲ್ಲಿ ನಡೆಯುತ್ತಿರುವ 74ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ತಮಿಳುನಾಡು ವಿರುದ್ಧ 58–92ರಿಂದ ಪರಾಭವಗೊಂಡಿತು. ತಮಿಳುನಾಡು ಪರ ಎಂ.ತೇಜಶ್ರೀ 13 ಅಂಕ ಗಳಿಸಿದರೆ, ಕರ್ನಾಟಕದ ಪರ ಎಂ.ಕೆ.ಯಶಸ್ವಿನಿ 14 ಅಂಕ ಗಳಿಸಿದರು.

ವಿಶ್ವಕಪ್: ಐರ್ಲೆಂಡ್‌ಗೆ ಪಾಲ್ ನಾಯಕ

ಡಬ್ಲಿನ್ (ಪಿಟಿಐ): ಅನುಭವಿ ಆರಂಭಿಕ ಆಟಗಾರ ಪಾಲ್ ಸ್ಟರ್ಲಿಂಗ್ ಅವರನ್ನು ಮುಂದಿನ ತಿಂಗಳು ನಡೆಯುವ ಟಿ20 ವಿಶ್ವಕಪ್‌ಗೆ ಐರ್ಲೆಂಡ್ ತಂಡದ ನಾಯಕರನ್ನಾಗಿ ಬುಧವಾರ ನೇಮಕ ಮಾಡಲಾಗಿದೆ.

ಸ್ಟರ್ಲಿಂಗ್ ಜತೆಗೆ ಆಂಡ್ರ್ಯೂ ಬಲ್ಬಿರ್ನಿ ಮತ್ತು ಜಾರ್ಜ್ ಡಾಕ್ರೆಲ್ ಅವರ ತಂಡದಲ್ಲಿ ಸ್ಥಾನ ಪಡೆದಿರುವ ಅನುಭವಿ ಆಟಗಾರರು. ಐರ್ಲೆಂಡ್ ಜೂನ್ 5 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ಎ ಗುಂಪಿನ ಪಂದ್ಯದಲ್ಲಿ ಭಾರತದ ವಿರುದ್ಧ ತನ್ನ ಅಭಿಯಾನ ಪ್ರಾರಂಭಿಸಲಿದೆ. ಪಾಕಿಸ್ತಾನ, ಕೆನಡಾ ಮತ್ತು ಆತಿಥೇಯ ಅಮೆರಿಕ ಈ ಗುಂಪಿನಲ್ಲಿರುವ ಇತರ ಮೂರು ತಂಡಗಳು.

ಪಾಲ್ ಸ್ಟಿರ್ಲಿಂಗ್

ಐರ್ಲೆಂಡ್ ತಂಡ: ಪಾಲ್ ಸ್ಟರ್ಲಿಂಗ್ (ನಾಯಕ), ಮಾರ್ಕ್ ಅಡೈರ್, ರಾಸ್ ಅಡೈರ್, ಆಂಡ್ರ್ಯೂ ಬಲ್ಬಿರ್ನಿ, ಕರ್ಟಿಸ್ ಕ್ಯಾಂಫರ್, ಗರೆಥ್ ಡೆಲಾನಿ, ಜಾರ್ಜ್ ಡಾಕ್ರೆಲ್, ಗ್ರಹಾಂ ಹ್ಯೂಮ್, ಜೋಶ್ ಲಿಟಲ್, ಬ್ಯಾರಿ ಮೆಕಾರ್ಥಿ, ನೀಲ್ ರಾಕ್ (ವಿಕೆಟ್ ಕೀಪರ್), ಹ್ಯಾರಿ ಟೆಕ್ಟರ್, ಲಾರ್ಕನ್ ಟಕರ್ (ವಿಕೆಟ್ ಕೀಪರ್), ಬೆನ್ ವೈಟ್ ಮತ್ತು ಕ್ರೇಗ್ ಯಂಗ್.

ಅಸ್ಸಾದ್ ವಾಲಾ: ಪಾಪುವಾ ನ್ಯೂಗಿನಿ ಸಹ 15 ಸದಸ್ಯರ ತಂಡವನ್ನು ಪ್ರಕಟಿಸಿದ್ದು, 36 ವರ್ಷದ ಅನುಭವಿ ಆಟಗಾರ ಅಸ್ಸಾದ್ ವಾಲಾ ನಾಯಕನಾಗಿ ಹಾಗೂ ಆಲ್‌ರೌಂಡರ್ ಸಿಜೆ ಅಮಿನಿ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ.

ಒಲಿಂಪಿಕ್ಸ್ ಜ್ಯೋತಿ ಸ್ವಾಗತಕ್ಕೆ ಕ್ಷಣಗಣನೆ

ಮಾರ್ಸೆ (ಫ್ರಾನ್ಸ್), (ಎಪಿ): ಒಲಿಂಪಿಕ್ ಜ್ಯೋತಿಯನ್ನು ತರುತ್ತಿರುವ ಆಕರ್ಷಕ ವ್ಯಾಪಾರಿ ಹಡಗು 'ಬೆಲೆಮ್' ಫ್ರಾನ್ಸ್‌ನ ಪ್ರಾಚೀನ ಬಂದರು ನಗರ ಮಾರ್ಸೆಯನ್ನು ತಲುಪಲು ಸಜ್ಜಾಗಿದೆ. ಒಲಿಂಪಿಕ್ ಜ್ಯೋತಿಯ ಸ್ವಾಗತಕ್ಕಾಗಿ ಭವ್ಯ ಸಮಾರಂಭಕ್ಕೆ ಕ್ಷಣಗಣನೆಯೂ ಆರಂಭವಾಗಿದೆ.

ಪ್ಯಾರಿಸ್ ಒಲಿಂಪಿಕ್ಸ್ ಸಂಘಟಕರು ಇದಕ್ಕಾಗಿ ಎಲ್ಲ ಸಿದ್ಧತೆ ನಡೆಸಿದ್ದಾರೆ. ಕಳೆದ ತಿಂಗಳು ಗ್ರೀಸ್‌ನ ಒಲಿಂಪಿಯಾದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಒಲಿಂಪಿಕ್ ಜ್ಯೋತಿ ಬೆಳಗಲಾಗಿತ್ತು. ಈಗ ಅದನ್ನು ಒಲಿಂಪಿಕ್ ಆತಿಥ್ಯ ವಹಿಸಿರುವ ಫ್ರಾನ್ಸ್‌ಗೆ ಅಧಿಕೃತವಾಗಿ ಹಸ್ತಾಂತರಿಸಲಾಗುವುದು. ಉಗ್ರರ ದಾಳಿಗೆ ಮುನ್ನೆಚ್ಚರಿಕೆಯಾಗಿ ಮಾರ್ಸೆಯಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ.

1896ರಲ್ಲಿ ಮೊದಲ ಬಾರಿ 'ಬೆಲೆಮ್' ಹಡಗು ಸಮುದ್ರ ಯಾನ ಕೈಗೊಂಡಿತ್ತು. ಈ ಬಾರಿ ಒಲಿಂಪಿಕ್ ಜ್ಯೋತಿಯೊಡನೆ ಗ್ರೀಸ್‌ನ ಅಥೆನ್ಸ್‌ನಿಂದ 12 ದಿನಗಳ ಹಿಂದೆ ಹೊರಟಿತ್ತು.